198697

UNIVERSAL
LIBRARY
OU_198697
UNIVERSAL
LIBRARY

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ

ವಾಗ್ಭೂಷಣಗ್ರಂಥಮಾಲೆಯ ೪೮ನೆಯ ಪುಸ್ತಕವು

---

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ

ಬಹುಮಾನ ಕೊಟ್ಟು ಬರಿಸಿದ

# ಶ್ರೀಸಮರ್ಥ

# ರಾಮದಾಸ ಸ್ವಾಮಿಗಳ

# ಚರಿತ್ರವು.

ಇದನ್ನು

ಗದಿಗೆಯ್ಯಾ ಹುಚ್ಚಯ್ಯಾ ಪೊನ್ನಾಪುರಮಠ,

ವಕೀಲ, ಧಾರವಾಡ.

ಇವರು ಬರೆದರು.

ಷೇ ೧೯೦೯.

---

ಈ ಗ್ರಂಥದ ಎಲ್ಲ ಬಾಧ್ಯತೆಗಳು ಸಂಘದ
ಅಧೀನಕ್ಕೊಳಪಟ್ಟಿರುವವು.

---

B.
2

ಬೆಲೆ ೧೦ ಆಣೆ.

ಧಾರವಾಡ.

ಕರ್ನಾಟಕ ಬುಕ್‌ಡಿಪೋ ಮುದ್ರಾಲಯದಲ್ಲಿ
ಮುದ್ರಿಸಲ್ಪಟ್ಟಿತು

# ಪ್ರಸ್ತಾವನೆ.

ದ್ರಾಕ್ಷಿ, ಅಂಜೀರು, ಕಿತ್ತಳಿ, ಮಾವು, ಬಾಳೆ ಮೊದಲಾದ ಮಧುರವಾದ ಫಲಗಳೂ ಷಡ್ರಸಯುಕ್ತವಾದ ಪಕ್ವಾನ್ನಗಳೂ ನಾಲಿಗೆಗೆ ಬೇಕಾದಷ್ಟು ರುಚಿಯನ್ನು ಕೊಟ್ಟಾಗ್ಯೂ ಅವುಗಳಿಂದ ಜಡದೇಹಕ್ಕೆ ಮಾತ್ರ ಪೌಷ್ಟಿಕತೆಯು ಉಂಟಾಗುತ್ತದಲ್ಲದೆ ಆತ್ಮೋನ್ನತಿಗೆ ಏನೂ ಸಹಾಯವಾಗುವದಿಲ್ಲ. ಇದಲ್ಲದೆ ಇವುಗಳನ್ನು ಸೇವಿಸುವದರಿಂದಾಗುವ ಆನಂದವು ಕೇವಲ ಕ್ಷಣಿಕವಾದದ್ದು. ಆದರೆ ಸಾಧುಸಜ್ಜನರ ಚರಿತ್ರಗಳನ್ನು ಓದುವದರಿಂದ ಅಥವಾ ಕೇಳುವದರಿಂದ ಕಾಮಕ್ರೋಧಾದಿ ಮನಸ್ಸಿನ ದುರ್ವ್ಯಾಪಾರಗಳು ಕಡಿಮೆಯಾಗಿ ಶ್ರೀಮತ್ಪರಮೇಶ್ವರನ ಪಾದಾರವಿಂದದಲ್ಲಿ ಭಕ್ತಿಯನ್ನಿಟ್ಟು ಸದಾಚರಣದಿಂದ ನಡೆಯುವ ಮನಸ್ಸು ಹುಟ್ಟುವದು. ಆದ್ದರಿಂದ ಮನಸ್ಸು ಯಾವಾಗಲು ಬ್ರಹ್ಮಾನಂದದಿಂದ ತುಂಬಿಕೊಂಡು ಮೋಕ್ಷಮಾರ್ಗದ ಕಡೆಗೆ ಎಳಿಸುವದು. ಅಂದಮೇಲೆ ಸಾಧುಸಜ್ಜನರ ಚರಿತ್ರಗಳ ಮಹಿಮೆಯನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ ಸರಿ! ಇಂಥ ಸಾಧುಸಜ್ಜನರಲ್ಲಿ ಅತ್ಯಂತ ಶ್ರೇಷ್ಠರೆನಿಸಿಕೊಂಡ ಶ್ರೀ ರಾಮದಾಸಸ್ವಾಮಿಗಳ ಚರಿತ್ರವನ್ನು ನಾನು ನನ್ನ ಅಲ್ಪಮತಿಗನುಸರಿಸಿ ಬರೆದು ನನ್ನ ಭಾಷಾಜನನಿಗೆ ಪ್ರೇಮಪೂರ್ವಕವಾಗಿ ಅರ್ಪಿಸಿರುತ್ತೇನೆ. ಇದರ ಮುದ್ರಣದ ಸ್ಥೂಲ ಪ್ರತಿಗಳನ್ನು ಓದುವ ಕಾಲಕ್ಕೆ ಹಲಕೆಲವು ದೋಷಗಳು ತಪ್ಪಿ ಉಳಿದದ್ದರಿಂದ ಅವುಗಳಲ್ಲಿ ಮಹತ್ವವಾದವುಗಳನ್ನು ಶುದ್ಧಿ ಪತ್ರಿಕೆಯೊಳಗೆ ಕೊಟ್ಟಿರುತ್ತೇನೆ. ಆ ಶುದ್ಧಿ ಪತ್ರಿಕೆಯನ್ನು ವಾಚಕರು ದಯಮಾಡಿ ಓದಿ ನೋಡಿ ಅದರಂತೆ ತಮ್ಮ ಪ್ರತಿಯನ್ನು ತಿದ್ದಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಧಾರವಾಡ,
ತಾರೀಖು ಮಾಹೆ ಮೇ
ಸನ್ನ ೧೯೦೯ ಇಸವಿ.

ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ,

ಗ್ರಂಥಕರ್ತ.

# ಶುದ್ಧಿಪತ್ರಿಕೆ.

| ಅಶುದ್ಧ. | ಶುದ್ಧ. | ಪುಟ. | ಪಂಗ್ತಿ. |
|---|---|---|---|
| ಸಂದಗಿಸಲಿಲ್ಲ | ಸಂವಿ ಹೋಗಲಿಲ್ಲ | ೧. | ೯ |
| ಭೂತ | ದಿವ್ಯ | ೨ | ೨೫, ೨೬ |
| ಸಾವಧಾನ | ಸುಮುಹೂರ್ತೇ ಸಾವಧಾನ | ೫ | ೬ |
| ಪ್ರದಕ್ಷಣಿ | ಪ್ರದಕ್ಷಿಣ | ೬ | ೨೬ |
| ಮುಗ್ದ | ಮುಗ್ಧ | ೭ | ೩೧ |
| ಪಶಾತಾಪ | ಪಶ್ಚಾತ್ತಾಪ | ೯ | ೨೫ |
| ಗುರುಪದೇಶ | ಗುರೂಪದೇಶ | ೧೦ | ೧೯ |
| ಮಂತ್ರವನು | ಮಂತ್ರವನ್ನು | ೧೨ | ೧೨ |
| ತೆಗೆದುಕೊಂಡಾಗೆ | ತೆಗೆದುಕೊಂಡಾಗ್ಗ | ೧೨ | ೩೨ |
| ಎಥಾಸ್ಥಿತವಾಗಿ | ಯಥಾಸ್ಥಿತವಾಗಿ | ೧೫ | ೩೧ |
| ,, | ,, | ೧೬ | ೧೯ |
| ಸೀವ್ಯತೆಯನು | ಸಾದ್ಯತೆಯನ್ನು | ೧೭ | ೨೯ |
| ಅಲ್ಲಿ | × × × × | ೧೯ | ೧೬ |
| ನಿಮ್ಮ, ನೀವೇ, ನೀವು, ನಿಮಗೆ | ನಿನ್ನ, ನೀನೇ, ನೀನು, ನಿನಗೆ | ೨೧ | ೫, ೮, ೯, ೧೨, ೧೫, ೧೬, ೧೭, ೧೮, ೨೧ |
| ಮಾಡುತ್ತೀರಿ | ಮಾಡುತ್ತೀ | ೨೧ | ೧೨ |
| ತರಬೇಡಿರಿ | ತರಬೇಡ | ೨೧ | ೧೯ |
| ನೀವು, ನಿಮಗೇನು, ನಿಮ್ಮ | ನೀನು, ನಿನಗೇನು, ನಿನ್ನ | ೨೨ | ೩, ೫, ೮, ೧೨, ೧೩, ೧೬ |
| ಕೊಡುತ್ತೀರೆಂಬುದು | ಕೊಡುತ್ತೀಯೆಂಬುದು | ೨೩ | ೪ |
| ಶಿವಭಕ್ತರಾಗಿ | ಶಿವಭಕ್ತನಾಗಿ | ೨೨ | ೧೩ |
| ಬಂದು | ಬಿಂದು | ೮೯ | ೨೭ |
| ಝುಡಪು | ಝುಡಪು | ೯೧ | ೨೪ |
| ವ್ಯನ | ವ್ಯಸನ | ೯೩ | ೧೪ |

| ಅಶುದ್ಧ. | ಶುದ್ಧ. | ಪುಟ. | ಪಂಕ್ತಿ. |
|---|---|---|---|
| ಎಲಿಯುನ್ನು | ಎಲಿಗಳನ್ನು | ೧೦೦ | ೩ |
| ಬಿರಗರವರು | ಬಿರಗಾದವರು | ೧೦೬ | ೨೫ |
| ಇವರಂತೆ | ಇದರಂತೆ | ೧೦೭ | ೧೪ |
| ಟೇಡಿಕೊಂಡರು | ಬೇಡಿಕೊಂಡರು | ೧೧೦ | ೩೦ |
| ಕೊಟ್ಟದ್ದಕ್ಕಾಗಿ | ಕೊಟ್ಟದ್ದಕ್ಕಾಗಿ | ೧೧೧ | ೭ |
| ಕಣ್ಣಿಳಗೆ | ಕಣ್ಣೊಳಗೆ | ೧೧೧ | ೮ |
| ಕರೆದುಕಂದರು | ಅವರನ್ನು ಕರೆದುಕೊಂಡು ಬಂದರು | ೧೧೨ | ೧೧ |
| ಜಗೆದುದ್ಧಾರ | ಜಗದುದ್ಧಾರ | ೧೨೧ | ೧ |
| ಹೋಗುವದದೆ | ಹೋಗುವದೇ | ೧೨೩ | ೧೩ |

### ಶ್ರೀಸಮರ್ಥ

# ರಾಮದಾಸ ಸ್ವಾಮಿಗಳ ಚರಿತ್ರೆ.

ಪೂರ್ವಕಾಲದಲ್ಲಿ ನಮ್ಮ ಭರತಖಂಡದೊಳಗೆ ಅಸಂಖ್ಯ ಸಾಧು ಸಜ್ಜನರು ಆಗಿ ಹೋದರು. ಅವರ ಚರಿತ್ರವನ್ನು ಓದಿದವರು ಅವರ ಅಗಾಧ ಜ್ಞಾನವನ್ನೂ ಭಕ್ತಿ ವೈರಾಗ್ಯಗಳನ್ನೂ ಅದ್ಭುತಕೃತ್ಯಗಳನ್ನೂ ನೋಡಿ ಬೆರಗಾಗದೆ ಇರರು. ಮಹಾರಾಷ್ಟ್ರ ದೇಶದೊಳಗೆ ಆಗಿ ಹೋದ ಸಾಧು ಸಜ್ಜನರಲ್ಲಿ ಜ್ಞಾನೇಶ್ವರ, ತುಕಾರಾಮ, ಏಕನಾಥ, ರಾಮದಾಸ ಇವರೇ ಮುಖ್ಯರು. ನಮ್ಮ ಚರಿತ್ರನಾಯಕರಾದ ಶ್ರೀ ರಾಮದಾಸ ಸ್ವಾಮಿಗಳು, ಮಹಾರಾಷ್ಟ್ರ ದೇಶದಲ್ಲಿ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಗುರುಗಳಾಗಿದ್ದರು. ಶ್ರೀಸಮರ್ಥರ ಅವತಾರವಾಗಿ ಇಂದಿಗೆ ೩೦೦ ವರ್ಷಗಳಿಗಿಂತ ಹೆಚ್ಚು ಕಾಲವು ಸಂದಣಿಸಲಿಲ್ಲ. ಸಾಧು ಸಜ್ಜನರಲ್ಲಿ ಯಾವಾಗಲು ಕಂಡು ಬರುವ ದಯಾಶೀಲತ್ವವೂ ವಿರಕ್ತಿಯೂ ಭಕ್ತಿಯೂ ಶ್ರೀಸಮರ್ಥರಲ್ಲಿ ಇದ್ದದ್ದಲ್ಲದೆ ಇವರು ತಮ್ಮ ಅತ್ಯಂತ ದೃಢನಿಶ್ಚಯದಿಂದಲೂ ಪ್ರಖರವಾದ ತಪೋಬಲದಿಂದಲೂ ಬಾಲಾಭ್ಯಾಸದಿಂದ ಸಂಪಾದಿಸಿದ್ದ ಮನೋನಿಗ್ರಹದಿಂದಲೂ ಬಹಳ ಲೋಕಪ್ರಿಯರಾಗಿದ್ದರು. ಆದ್ದರಿಂದ ಇವರ ಚರಿತ್ರವನ್ನು ಓದುವ ಲವಲವಿಕೆಯು ಸ್ವಾಭಾವಿಕವಾಗಿ ಎಲ್ಲರಲ್ಲಿಯೂ ಹುಟ್ಟುವದು. ಇದಕ್ಕೋಸ್ಕರ ನಾವು ಇವರ ಚರಿತ್ರವನ್ನು ಸಂಕ್ಷಿಪ್ತವಾಗಿ ಇಲ್ಲಿ ಬರಿಯಲಿಕ್ಕೆ ಯತ್ನಿಸುತ್ತೇವೆ:—

ಸಮರ್ಥರಜನ್ಮ—ಶ್ರೀಸಮರ್ಥ ರಾಮದಾಸ ಸ್ವಾಮಿಗಳ ಜನ್ಮವು ಹಿಂದೂ ಶಕೆ ೧೫೩೦ ರಲ್ಲಿ ಅಂದರೆ ಕ್ರಿಸ್ತಶಕೆಯು ಸನ್ನ ೧೬೦೮ ನೇ ಇಸ್ವಿಯಲ್ಲಿ ಪುಣೆ ಜಿಲ್ಹೆಗೆ ಸೇರಿದ ಜಾಂಬಳಗಾಂವ ಎಂಬ ಊರಲ್ಲಿ ಆಯಿತು. ಇವರ ಪೂರ್ವದ ಹೆಸರು ನಾರಾಯಣಬೋವಾ. ಇವರ ತಂದೆಯು ಜಾಂಬಳದ ಕುಲಕರ್ಣಿಯಾದ ಸೂರ್ಯಾಜಿಪಂತನು. ಇವರ ತಾಯಿಯ ಹೆಸರು ರಾಣೂಬಾಯಿ. ಇವರಿಗೆ ಗಂಗಾಧರಬೋವಾ ಎಂಬೊಬ್ಬ ಅಣ್ಣನಿದ್ದನು. ಅವನ ಭಗವದ್ಭಕ್ತಿಯನ್ನೂ ಸದ್ವರ್ತನವನ್ನೂ ನೋಡಿ ಎಲ್ಲರೂ ಅವನಿಗೆ ಶ್ರೇಷ್ಠನೆಂದು ಕರೆಯ ಹತ್ತಿದರು. ಅವನು ಶ್ರೀಸಮರ್ಥರಿಗಿಂತ ಎರಡೂವರೆ ವರ್ಷಕ್ಕೆ ಹಿರಿಯನಿದ್ದನು. ಸೂರ್ಯಾಜಿಪಂತನು ಶ್ರೀಸಮರ್ಥರು ಹುಟ್ಟಿದ ವರ್ಷ ಪ್ರತಿವರ್ಷದಂತೆ ಪುಣ್ಯತಿಥಿಯ ನಿಮಿತ್ತವಾಗಿ ಏಕನಾಥ ಮಹಾರಾಜರ ದರ್ಶನಕ್ಕೆ ಹೋದಾಗ ಅವರು ಸೂರ್ಯಾಜಿಪಂತನಿಗೆ ಬಹಳ ಸನ್ಮಾನಪೂರ್ವಕವಾಗಿ ಸ್ವಾಗತ ಮಾಡಿ ಶ್ರೀಸಮರ್ಥರನ್ನು ಕೈಯೊಳಗೆ ಎತ್ತಿಕೊಂ

ಡು ಪ್ರೇಮದಿಂದ ಚುಂಬನ ಕೊಟ್ಟು "ಸೂರ್ಯಾಜಿಪಂತರೇ, ನೀವು ಧನ್ಯರು! ನಿಮ್ಮ ವಂಶವೆಲ್ಲಾ ಧನ್ಯ! ನಿಮ್ಮ ಉಪಾಸನೆಗೂ ಭಕ್ತಿಗೂ ಎಣೆ ಇಲ್ಲ! ಅಂತೇ ನಿಮಗೆ ವಾಯುಪುತ್ರನ (ಮಾರುತಿಯು) ಅಂಶವಾದ ಈ ಪುತ್ರನು ಜನಿಸಿದನು. ಸಾಕ್ಷಾತ್ ಶಿವನು ಶಕಕರ್ತನಾದ ಅರಸನಾಗಿ ಹುಟ್ಟುವನು. ಅವನ ಕೈಯಿಂದ ನಿಮ್ಮ ಮಗನು ಭೂಭಾರವನ್ನು ಹರಣ ಮಾಡಿಸುವನು. ಇನ್ನು ನಾವು ನಮ್ಮ ಅವತಾರವನ್ನು ಸಮಾಪ್ತಿಗೊಳಿಸುವೆವು" ಎಂತ ಹೇಳಿದರು. ಏಕನಾಥ ಮಹಾರಾಜರು ಅವರೆಲ್ಲರನ್ನು ತಮ್ಮ ಪಂಙ್ತಿಯಲ್ಲಿಯೇ ಭೋಜನಕ್ಕೆ ಕುಳ್ಳಿರಿಸಿಕೊಂಡು ಅವರೆಲ್ಲರಿಗೆ ಬಹಳ ಸನ್ಮಾನ ಮಾಡಿದರು. ಪುಣ್ಯತಿಥಿಯ ಸಮಾರಂಭವು ಮುಗಿದ ಮೇಲೆ ಸಹ ಕೆಲವು ದಿವಸ ಅವರನ್ನು ಪ್ರೇಮದಿಂದ ತಮ್ಮ ಬಳಿಯಲ್ಲಿಟ್ಟುಕೊಂಡರು. ಮುಂದೆ ಅವರೆಲ್ಲರು ಏಕನಾಥ ಮಹಾರಾಜರ ಅಪ್ಪಣೆಯನ್ನು ಪಡೆದುಕೊಂಡು ತಮ್ಮೂರಿಗೆ ಹೊರಟು ಬರಲಿಕ್ಕೆ ಸನ್ನಿದ್ಧರಾಗಲು ಏಕನಾಥ ಮಹಾರಾಜರು ಶ್ರೀಸಮರ್ಥರ ಮಾತೋಶ್ರೀಯಾದ ರಾಣೂಬಾಯಿಗೆ ವಸ್ತ್ರಾಭರಣಗಳನ್ನು ಕೊಟ್ಟು "ನಮ್ಮ ಮೇಲೆ ನಿಮ್ಮ ಲೋಭವಿರಲಿ" ಎಂದು ಪ್ರಾರ್ಥನೆ ಮಾಡಿದರು. ಈ ಯಾವತ್ತೂ ಮಂಡಳಿಯು ತಮ್ಮೂರಿಗೆ ಹೊರಟು ಹೋದ ತರುವಾಯ ಏಕನಾಥ ಮಹಾರಾಜರು ಶಕೆ ೧೫೨೧ ಫಾಲ್ಗುಣ ಶುದ್ಧ ೧೬ನೇ ದಿವಸ ತಮ್ಮ ಅವತಾರವನ್ನು ಮುಗಿಸಿದರು.

ಬಾಲಲೀಲೆಯು—ಶ್ರೀಸಮರ್ಥರು ಯಾವಾಗಲೂ ನಗಿಮುಖದವರಿದ್ದರು. ಅಳುವದು ಇವರಿಗೆ ಎಂದೂ ಗೊತ್ತಿದ್ದಿಲ್ಲ. ಇವರು ಎರಡು ವರ್ಷದವರಿದ್ದಾಗಲೇ ಚನ್ನಾಗಿ ನಡಿದಾಡಲಿಕ್ಕೂ ಮಾತಾಡಲಿಕ್ಕೂ ಹತ್ತಿದರು. ದಿನದಿನಕ್ಕೆ ಇವರ ಮೋರೆಯ ಮೇಲಿನ ತೇಜಸ್ಸು ಪೌರ್ಣಿಮೆಯ ಚಂದ್ರನಂತೆ ಹೆಚ್ಚಾಗುತ್ತ ನಡೆಯಿತು. ಒಂದು ಕ್ಷಣ ಹೊತ್ತು ಸಹ ಒಂದೇ ಸ್ಥಳದಲ್ಲಿ ಕಾಲೂರಿ ನಿಲ್ಲುತ್ತಿದ್ದಿಲ್ಲ. ಕ್ಷಣಕ್ಷಣಕ್ಕೆ ಕುಣಿದಾಡುತ್ತಿದ್ದರು ಆಟಗಳನ್ನಾಡುವಾಗ್ಗೆ ಇವರಲ್ಲಿ ಮರ್ಕಟ ಚೇಷ್ಟೆಯು ವಿಶೇಷವಾಗಿತ್ತು. ಸಮರ್ಥರು ಚಿಕ್ಕಂದಿನಲ್ಲಿ ಬಹಳ ಹಾವಳಿ ಮಾಡುವದನ್ನು ಕಂಡು ಇವರ ತಾಯಿಯು ಇವರಿಗೆ "ನಾರಾಯಣಾ! ಈಗ ಭೂತ ಬರುವದು! ಒಳಗೆ ನಡಿ" ಎಂದು ಅಂಜಿಸಿದರೆ ಇವರು ಅವಳಿಗೆ "ಅವ್ವಾ! ಭೂತ ಹ್ಯಾಗೆ ಇರುವದೆಂಬದನ್ನು ನನಗೆ ತೋರಿಸು" ಎಂದು ಕೇಳುತ್ತಿದ್ದರು. ಮನೆಯಲ್ಲಿ ಹುಡುಗನ ಪುಂಡಾಟವು ಹೆಚ್ಚಾಯಿತೆಂದು ನೋಡಿ ಇವರ ತಂದೆ ತಾಯಿಗಳು ಇವರನ್ನು ೫ನೇ ವರ್ಷದಲ್ಲಿ ಸಾಲಿಗೆ ಕಳಿಸಿದರು. ಅಲ್ಲಿ ಇವರು ಒಂದೇ ವರ್ಷದಲ್ಲಿ ಗುರುವಿಗೆ ಬರುತ್ತಿದ್ದ ಎಲ್ಲ ವಿದ್ಯೆಯನ್ನು ಕಲಿತು ಬಿಟ್ಟರು! ಇಷ್ಟಾದರೂ ಅಹೋರಾತ್ರಿ ಊರೊಳಗಿನ ಹುಡುಗರನ್ನು ಕಟ್ಟಿಕೊಂಡು ಹಾವಳಿ ಮಾಡುತ್ತಿದ್ದ

ರು. ಮಂಗಗಳಂತೆ ಇವರು ಅತಿಶಯ ಎತ್ತರವಾದ ಗಿಡಗಳ ಮೇಲೆ ಏರಿ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಯ ಮೇಲೆ ಜಿಗಿದಾಡುತ್ತಿದ್ದರು. ಒಮ್ಮೊಮ್ಮೆ ನೆಲದ ಮೇಲೆ ಬೀಳುವಂತೆ ಗಿಡದ ಕೊಂಬೆಯನ್ನು ಹಿಡಕೊಂಡು ಜೋತಾಡುವಾಗ ಇವರ ಸಂಗಡಿಗರು "ನಾರಾಯಣನು ಬಿದ್ದನು" ಎಂದು ಆರ್ತಸ್ವರದಿಂದ ಕೂಗುವಷ್ಟರಲ್ಲಿ ಇವರು ಇನ್ನೊಂದು ಕೊಂಬೆಯನ್ನು ಹಿಡಿದುಕೊಂಡು ಎರಡನೇ ಗಿಡದ ಮೇಲೆ ಹೋಗಿ ಕೂಡುತ್ತಿದ್ದರು. ಇಲ್ಲವೆ ಎತ್ತರವಾದ ಗೋಡೆಯ ಮೇಲೆ ಹೋಗಿ ಎದ್ದು ನಿಂತಿರುತ್ತಿದ್ದರು. ನಾಲ್ಕೆಂಟು ಮೊಳ ಅಂತರವಿದ್ದರೂ ಒಂದು ಮನೆಯ ಕುಂಬಿಯ ಮೇಲಿಂದ ಇನ್ನೊಂದು ಮನೆಯ ಕುಂಬಿಗೆ ಜಿಗಿಯುತ್ತಿದ್ದರು. ಇವರು ೫ನೇ ವರ್ಷದವರಿರುವಾಗಲೇ ಇವರ ತಂದೆಯು ಇವರ ವೃತಬಂಧನವನ್ನು ಮಾಡಿಸಿದನು. ಇವರು ೭ನೇ ವರ್ಷದವರಿದ್ದಾಗ ಇವರ ತಂದೆಯಾದ ಸೂರ್ಯಾಜಿಪಂತನು ತೀರಿಕೊಂಡನು.

ಸಮರ್ಥರು ಅನುಗ್ರಹ ಪಡೆದುಕೊಂಡದ್ದು—ಉಭಯ ಅಣ್ಣ ತಮ್ಮಂದಿರೊಳಗೆ ವಿಶೇಷ ಪ್ರೇಮವಿತ್ತು. ಇವರಿಬ್ಬರೂ ತಮ್ಮ ತಂದೆಯು ತೀರಿಕೊಂಡ ದುಃಖವನ್ನು ಮರೆತು ತಮ್ಮ ಮಾತೋಶ್ರೀಯನ್ನು ಸಮಾಧಾನ ಪಡಿಸಿ ಬಹಳ ಹಿತದಿಂದ ಇರುತ್ತಿದ್ದರು. ಶ್ರೇಷ್ಠನ ಮನಸ್ಸಿನ ಒಳವು ಬಾಲ್ಯದಿಂದ ಭಗವದ್ಭಕ್ತಿಯ ಕಡೆಗೆ ಇದ್ದಂತೆ ಸಮರ್ಥರದು ಸಹಾ ಇತ್ತು. ಇದಲ್ಲದೆ ವೈರಾಗ್ಯವೃತ್ತಿಯು ಸಮರ್ಥರಲ್ಲಿ ಹೆಚ್ಚಾಗಿ ಕಂಡು ಬರುತ್ತಿತ್ತು. ಶ್ರೇಷ್ಠನು ದೊಡ್ಡ ಭಗವದ್ಭಕ್ತನಿದ್ದ ಕಾರಣ ಅವನ ಕಡೆಯಿಂದ ಉಪದೇಶವನ್ನು ತೆಗೆದುಕೊಂಡು ಅನುಗ್ರಹವನ್ನು ಪಡೆಯಲಿಕ್ಕೆ ಅನೇಕ ಜನರು ಬರುತ್ತಿದ್ದರು. ಶ್ರೇಷ್ಠನು ಯೋಗ್ಯರಾದ ಭಗವದ್ಭಕ್ತರಿಗೆ ಅನುಗ್ರಹವನ್ನು ಕೊಡುತ್ತಿದ್ದನು. ಇದನ್ನು ಕಂಡು ಸಮರ್ಥರು ಸಹಾ ಅಣ್ಣನನ್ನುದ್ದೇಶಿಸಿ ತಮಗೂ ಅನುಗ್ರಹವನ್ನು ಆಶೀರ್ವದಿಸಬೇಕೆಂದು ಅಂಗಲಾಚಿ ಬೇಡಿಕೊಂಡರು. ಆದರೆ ಸಮರ್ಥರು ಇನ್ನೂ ಚಿಕ್ಕವರಿದ್ದ ಕಾರಣ ಶ್ರೇಷ್ಠನಿಗೆ ಸಮರ್ಥರ ಮಾತು ಒಡಂಬಡಿಕೆಯಾಗಲಿಲ್ಲ. ಆಗ ಸಮರ್ಥರು ಇದಕ್ಕಾಗಿ ಚಿಂತೆ ಬಡುತ್ತ ಮನೆಯನ್ನು ಬಿಟ್ಟು ಯಾರಿಗೂ ಹೇಳಕೇಳದೆ ರಾತ್ರಿಯ ಹೊತ್ತಿನಲ್ಲಿ ಗಂಗಾತೀರದಲ್ಲಿರುವ ಪಂಚವಟಿಯ ಹನುಮಂತ ದೇವರ ಗುಡಿಗೆ ಹೋಗಿ ಹನುಮಂತ ದೇವರನ್ನು ಅಭಂಗಗಳಿಂದ ಸ್ತುತಿ ಮಾಡುತ್ತ ಆರಾಧನೆಯನ್ನು ಆರಂಭಿಸಿದರು. ಇವರು ಇನ್ನೂ ಸುಕುಮಾರರಿದ್ದ ಕಾರಣ ತಮ್ಮ ಭಕ್ತಿಗೆ ಮೆಚ್ಚಿ ದೇವರು ಬೇಗ ಪ್ರಸನ್ನನಾಗಲಿಲ್ಲವೆಂದು ವ್ಯಾಕುಲ ಪಟ್ಟು ದೇಗುಲದ ಸುತ್ತಲು ಪ್ರದಕ್ಷಿಣೆಯನ್ನು ಹಾಕುವ ದಾರಿಯಲ್ಲಿ ಹೋಗಿ ಕತ್ತಲೊಳಗೆ ಮಲಗಿದರು. ಇದನ್ನು ಕಂಡು ಮಾರುತಿರಾಯನು ಇವರು ಧ್ರುವನಂತೆ ತನಗೆ ಏಕನಿಷ್ಠೆಯಿಂದ ಆರಾಧನೆ

ಮಾಡುವದನ್ನು ಕಂಡು ಮೋದ ಪಟ್ಟು ಪ್ರಸನ್ನನಾದನು. ಆಗ ಸಮರ್ಥರು ತಮ್ಮ ಅಪೇಕ್ಷೆಯನ್ನು ಅವನಿಗೆ ತಿಳಿಸಲಾಗಿ ಅವನು ಇವರಿಗೆ ಶ್ರೀ ರಾಮಚಂದ್ರ ದೇವರ ದರ್ಶನವನ್ನು ಮಾಡಿಸಿದನು. ಬಳಿಕ ಶ್ರೀ ರಾಮಚಂದ್ರ ದೇವರು ಸಮರ್ಥರಿಗೆ ಶಕೆ ೧೫೩೮ ರಲ್ಲಿ "ಭೂಮಿಯ ಮೇಲೆ ಮ್ಲೇಂಛರ ಹಾವಳಿಯು ಹೆಚ್ಚಾಗಿರುವದರಿಂದ ನೀವು ವೈರಾಗ್ಯವೃತ್ತಿಯಿಂದ ಕೃಷ್ಣಾ ತಟಾಕದಲ್ಲಿದ್ದುಕೊಂಡು ಉಪಾಸನೆ ಮತ್ತು ಜ್ಞಾನಗಳನ್ನು ಹೆಚ್ಚಿಸಿ ಜಗದುದ್ಧಾರ ಮಾಡಬೇಕು„ ಎಂತ ಆಜ್ಞಾಪಿಸಿ ಅಂತರ್ಧಾನವನ್ನು ಹೊಂದಿದರು. ಇತ್ತ ಲಾಸಮರ್ಥರು ಒಮ್ಮಿಂದೊಮ್ಮೆ ಎಲ್ಲಿ ಹೋದರೆಂದು ಅವರ ತಾಯಿಯೂ ಅಣ್ಣನೂ ಶೋಧ ಮಾಡತೊಡಗಿದರು. ಎಲ್ಲಿಯೂ ಇವರ ಶೋಧವಾಗಲಿಲ್ಲ. ಸಮರ್ಥರ ತಾಯಿಯು ತನ್ನ ಪ್ರಿಯ ಬಾಲಕನು ತನ್ನನ್ನು ಅಗಲಿ ಹೋದನೆಂದು ಬಹಳವಾಗಿ ರೋದನ ಮಾಡಹತ್ತಿದಳು. ಆಗ ಇವರ ಅಣ್ಣನು ಇವರ ಶೋಧಾರ್ಥವಾಗಿ ಹೊರಟು ಮಾರುತಿಯ ದರ್ಶನ ತೆಗೆದುಕೊಂಡು ಮುಂದಕ್ಕೆ ಹೊರಡಬೇಕೆಂದು ಆಲೋಚಿಸಿ ಅಲ್ಲಿಗೆ ಬರುವಷ್ಟರಲ್ಲಿ ಸಮರ್ಥರನ್ನು ಕಂಡನು. ಆಗ ಸಮರ್ಥರ ಮೋರೆಯ ಮೇಲೆ ಮಿಂಚುತ್ತಿದ್ದ ದಿವ್ಯತೇಜಸನ್ನು ಕಂಡು ಇವರಿಗೆ ಭಗವತ್ಪ್ರಸಾದವಾಗಿರಬಹುದೆಂದು ತರ್ಕಿಸಿದನು. ಇಷ್ಟರಲ್ಲಿ ಸಮರ್ಥರು ಅಲ್ಲಿ ಸಂಭವಿಸಿದ ಯಾವತ್ತು ವೃತ್ತಾಂತವನ್ನು ಅವನಿಗೆ ವಿಶದವಾಗಿ ತಿಳಿಸಿದರು. ಬಳಿಕ ಇಬ್ಬರೂ ತಮ್ಮ ಮಾತೋಶ್ರೀಯ ಸಂದರ್ಶನಕ್ಕೆ ಹೊರಟು ಬಂದು ಪುತ್ರವಿರಹದಿಂದ ಬಳಲುತ್ತಿದ್ದ ದೇವಿಗೆ ಎಲ್ಲ ಸಂಗತಿಗಳನ್ನು ಶೃತಗೊಳಿಸಿ ಆನಂದ ಪಡಿಸಿದರು.

ಲಗ್ನಮಂಟಪದಿಂದ ಓಡಿ ಹೋದದ್ದು—ಸಮರ್ಥರ ತಾಯಿಯಾದ ರಾಣೂಬಾಯಿಯು ತನ್ನ ಉಭಯ ಮಕ್ಕಳ ಲಗ್ನವನ್ನು ಬೇಗನೆ ಮಾಡಿಬಿಡಬೇಕೆಂದು ಆಲೋಚಿಸಿ ಸಮರ್ಥರ ಮುಂದೆ ಲಗ್ನದ ಸುದ್ದಿಯನ್ನು ಮಾತಾಡಹತ್ತಿದ ಕೂಡಲೆ ಸಮರ್ಥರು ಖಿನ್ನವದನರಾಗಿ ಕೂಡ್ರುತ್ತಿದ್ದರು. ಒಮ್ಮೊಮ್ಮೆ ಇವರು ಲಗ್ನದ ಸುದ್ದಿಯನ್ನು ಕಿವಿಯಿಂದ ಕೇಳಿ ಸಿಟ್ಟಿಗೇಳುತ್ತಿದ್ದರು. ಒಂದು ಸಾರೆ ಸಿಟ್ಟಿಗೆದ್ದು ಅಡವಿಯಲ್ಲಿ ಓಡಿ ಹೋಗಿ ಗಿಡದ ಮೇಲೆ ಕೂತುಕೊಂಡಿದ್ದರು! ಆಗ ಯಾರಾದರೂ ನಡುವೆ ಸಮಾಧಾನ ಹೇಳಲಿಕ್ಕೆ ಹೋದರೆ ಇವರು ಅವರ ಮೇಲೆ ಕಲ್ಲೆಸೆಯುತ್ತಿದ್ದರು. ಶ್ರೇಷ್ಠನು ತಾನೇ ಹೋಗಿ ಸಮರ್ಥರನ್ನು ಒಡಂಬಡಿಸಿ ಮನೆಗೆ ಮರಳಿ ಕರೆದುಕೊಂಡು ಬಂದನು. ಒಂದು ಸಾರೆ ಇವರ ತಾಯಿಯು ತಾವು ಹೇಳಿದಂತೆ ಕೇಳಬೇಕೆಂದು ಇವರ ಕಡೆಯಿಂದ ವಚನ ತೆಗೆದುಕೊಂಡಳು. "ಲಗ್ನದ ಅಂತರ್ಪಟ ಹಿಡಿಯುವತನಕ ಗಟ್ಟಿ ಮನಸ್ಸು ಮಾಡಿ ಬಾಯಿಂದ ಒಲ್ಲೆನ್ನಬೇಡ„ ಎಂದು ಹೇಳಿದಳು. ಅದಕ್ಕೆ ಇವರು "ಯಾಕಾಗಲೊಲ್ಲದು„ ಎಂದು ಒಡಂಬಟ್ಟರು

ಆಗ ಇವರ ತಾಯಿಯೂ ತನ್ನ ಮಗನು ಲಗ್ನ ಮಾಡಿಕೊಳ್ಳುವದಕ್ಕೆ ಒಡಂಬಟ್ಟನೆಂದು ಆನಂದಬಟ್ಟು ತನ್ನ ತಮ್ಮನಾದ ಭಾವಜಿಗೋಸಾವಿ ಎಂಬವನ ಮಗಳನ್ನು ಇವರಿಗೆ ಲಗ್ನ ಮಾಡಬೇಕೆಂದು ನಿಶ್ಚಯಿಸಿದಳು. ಲಗ್ನಮುಹೂರ್ತವು ನಿರ್ಣೈಸಲ್ಪಟ್ಟು ಯಥಾವತ್ತು ಸಿದ್ಧತೆಯು ನಡೆಯಿತು. ಬೀಗಬಿಜ್ಜರು ಲಗ್ನಕ್ಕಾಗಿ ಬಂದರು. ಲಗ್ನವನ್ನು ಮಾಡಿಸುವದಕ್ಕಾಗಿ ಉಪಾಧ್ಯರು ಮಂಗಲಾಷ್ಟಕಗಳನ್ನು ಅನ್ನಲಿಕ್ಕೆ ಆರಂಭಿಸಿ "ಸಾ—ವ—ಧಾ—ನ" ವೆಂದು ಅನ್ನಲಿಕ್ಕೆ ತೊಡಗಿದ ಕೂಡಲೆ ತಾಯಿಗೆ ಕೊಟ್ಟ ವಚನದಿಂದ ತಾವು ಮುಕ್ತರಾದೆವೆಂದು ಮನಸ್ಸಿನಲ್ಲಿ ಅನ್ನುತ್ತಲೇ ಇವರು ಲಗ್ನಮಂಟಪದಿಂದ ಓಡಿ ಹೋದರು.

ತಪಶ್ಚರ್ಯ—ಸಮರ್ಥರು ಲಗ್ನಮಂಟಪದಿಂದ ಓಡಿಹೋಗಿ ಒಂದು ದೊಡ್ಡ ಅಶ್ವತ್ಥವೃಕ್ಷದ ಹೊದರಿನಲ್ಲಿ ಮೂರು ದಿವಸಗಳ ವರೆಗೆ ಅಡಗಿಕೊಂಡು ಕುಳಿತಿದ್ದರು. ಮುಂದೆ ನಾಶಿಕ ಪಂಚವಟಿಗೆ ಹೋಗಿ ಶ್ರೀರಾಮಚಂದ್ರ ದೇವರ ದರ್ಶನ ತೆಗೆದುಕೊಂಡು ಟಾಕಳಿ ಎಂಬ ಊರಲ್ಲಿ ಒಂದು ಗವಿಯೊಳಗೆ ಅವಚಿಕೊಂಡು ಕುಳಿತು ಮಂತ್ರ ಪುರಶ್ಚರಣಕ್ಕೆ ಪ್ರಾರಂಭಿಸಿದರು. ಆಗ ಸಮರ್ಥರ ವಯಸ್ಸು ಹನ್ನೆರಡು ಮಿಕ್ಕಿದ್ದಿಲ್ಲ. ಇಂಥ ಚಿಕ್ಕ ವಯಸ್ಸಿನಲ್ಲಿ ಸಮರ್ಥರು ಪಂಚವಟಿಯೊಳಗೆ ಮಧುಕರಿಯನ್ನು ಬೇಡಿಕೊಂಡು ಬಂದು ಶ್ರೀರಾಮಚಂದ್ರ ದೇವರಿಗೆ ನೈವೇದ್ಯವನ್ನು ಸಮರ್ಪಿಸಿ ಭೋಜನವನ್ನು ಮಾಡುತ್ತಿದ್ದರು. ತಮ್ಮ ಎಲ್ಲ ವೇಳೆಯನ್ನು ಮಂತ್ರ ಪುರಶ್ಚರಣದಲ್ಲಿಯೂ ರಾಮಭಜನೆಯಲ್ಲಿಯೂ ಕಳೆಯುತ್ತಿದ್ದರು. ಅನ್ಯರಕೂಡ ಭಾಷಣಮಾಡುತ್ತಿದ್ದಿಲ್ಲ. ಅನ್ಯರ ಕಡೆಗೆ ಹೋಗುತ್ತಿದ್ದಿಲ್ಲ. ಪ್ರತಿನಿತ್ಯ ಪ್ರಾತಃಕಾಲದಲ್ಲಿ ಗಂಗೆಯಲ್ಲಿ ಸ್ನಾನಮಾಡಲಿಕ್ಕೆ ಹೋಗಿ ಮಧ್ಯಾಹ್ನದ ೨ ಗಂಟೆಯವರೆಗೆ ನಡಮುಟ ನೀರಲ್ಲಿ ನಿಂತು ಜಪಮಾಡುತ್ತಿದ್ದರು. ನೀರೊಳಗಿಂದ ಹೊರಗೆ ಬರುತ್ತಿದ್ದಿಲ್ಲ. ನೀರೊಳಗೆ ನಿಂತು ನಿಂತು ಅವರ ನಡದ ಕೆಳಭಾಗವೆಲ್ಲ ಬಿಳುಪಾಗಿತ್ತು. ಈ ಮೇರೆಗೆ ಮಧ್ಯಾಹ್ನಕಾಲದ ವರೆಗೆ ಜಪವನ್ನು ಮಾಡುವದಾದ ಬಳಿಕ ಇವರು ಮಧುಕರಿಯನ್ನು ಬೇಡಿಕೊಂಡು ಬಂದು ಭೋಜನ ಮಾಡುತ್ತಿದ್ದರು. ಭೋಜನವು ಮುಗಿದ ತರುವಾಯ ಮಧ್ಯಾಹ್ನದಲ್ಲಿ ರಾಮಭಜನವನ್ನು ಮಾಡುತ್ತಿದ್ದರು. ಈ ಪ್ರಕಾರ ಸಮರ್ಥರು ಪ್ರಖರವಾದ ತಪಶ್ಚರ್ಯವನ್ನು ನಡಿಸಿದಾಗ್ಗೆ, ಶ್ರೀರಾಮಚಂದ್ರ ದೇವರು ಇವರಿಗೆ ಪ್ರತ್ಯಕ್ಷನಾಗಿ "ಇಂಥ ಪ್ರಖರವಾದ ವ್ರತವನ್ನು ಮಾಡುವ ಕಾರಣವಿಲ್ಲ. ನೀವು ಇನ್ನು ಮುಂದೆ ಕೃಷ್ಣಾ ತೀರಕ್ಕೆ ಹೋಗಿ ಜಗದುದ್ಧಾರವನ್ನು ಮಾಡಬೇಕು" ಎಂಬದಾಗಿ ಹೇಳಿದರು. ಅದಕ್ಕೆ ಸಮರ್ಥರು ಒಡಂಬಟ್ಟು ಹಾಗೇ ಮಾಡುವೆವೆಂದು ವಿನಂತಿ ಮಾಡಿಕೊಂಡರು.

ಮೊದಲನೇ ಚಮತ್ಕಾರ—ಟಾಕಳಿ ಎಂಬ ಊರಿಂದ ಒಂದು ಹರದಾರಿ ದೂರಿರುವ ದಶಕಪಂಚಕ ಎಂಬ ಊರಲ್ಲಿಯ ಒಬ್ಬ ಶ್ರೀಮಂತ ಕುಲಕರ್ಣಿಯು ಪುತ್ರಸಂತಾನವಿಲ್ಲದೆ ಕ್ಷಯರೋಗದಿಂದ ಮರಣ ಹೊಂದಿದನು. ಆವನ ಮಹಾಪತಿವೃತೆಯಾದ ಚಿಕ್ಕಪ್ರಾಯದ ಹೆಂಡತಿಯು ತನ್ನ ಪತಿಯೊಂದಿಗೆ ಚಿತೆಯಲ್ಲಿಬಿದ್ದು ಪ್ರಾಣಕೊಡಬೇಕೆಂದು ನಿಶ್ಚಯಿಸಿ ಪ್ರೇತದ ಸಂಗಡ ಹೊರಟಿದ್ದಳು. ಈ ಸಹಗಮನವು ಗಂಗಾತೀರದಲ್ಲಿ ಟಾಕಳಿ ಎಂಬಲ್ಲಿ ಆಗಬೇಕೆಂದು ನಿರ್ಣಯವಾಗಿತ್ತು. ಆದ್ದರಿಂದ ಮುಂದೆ ಪ್ರೇತವು ಹೊರಟಿರಲು ಹಿಂದಿಂದೆ ಸ್ವಲ್ಪ ಅಂತರದಲ್ಲಿ ಅವಳು ನಡೆದಿದ್ದಳು. ಇಷ್ಟರಲ್ಲಿ ಸಮರ್ಥರು ಗವಿಯಹತ್ತಿರ ಗಿಡದ ಕೆಳಗೆ ತಪಸ್ಸು ಮಾಡುತ್ತ ತದೇಕಧ್ಯಾನದಿಂದ ಕುಳಿತದ್ದನ್ನು ಆ ಮಹಾಪತಿವೃತೆಯು ಕಂಡು ಸಮರ್ಥರ ಬಳಿಗೆ ಹೋಗಿ ಅವರ ಕಾಲಿಗೆರಗಿದಳು. ಆಗ ಸಮರ್ಥರು ತಮ್ಮ ಕಣ್ಣು ತೆಗೆದು ಅವಳ ಕಡೆಗೆ ನೋಡಿ ಸ್ವಾಭಾವಿಕವಾಗಿ "ಅಷ್ಟಪುತ್ರಾ ಸೌಭಾಗ್ಯವತೀಭವ" ಎಂದು ಆಶೀರ್ವದಿಸಿದರು. ಆಗ ಆ ಸಾಧ್ವಿಯು ವಿನಯದಿಂದ ಕೈಜೋಡಿಸಿ—"ಸ್ವಾಮೀ, ಈ ತಮ್ಮ ಆಶೀರ್ವಾದದ ಫಲವು ಈ ಜನ್ಮದಲ್ಲೋ! ಮುಂದಿನ ಜನ್ಮದಲ್ಲೋ?" ಎಂದು ವಿಚಾರಿಸಿದಳು. ಆಗ ಸಮರ್ಥರು ಅವಳ ಹತ್ತಿರವಿದ್ದ ಜನರನ್ನು ಕರೆದು ಯಾವತ್ತು ವೃತ್ತಾಂತವನ್ನು ವಿಚಾರಿಸಲಾಗಿ ಅವಳ ಪತಿಯು ಸತ್ತ ವರ್ತಮಾನವು ಸಮರ್ಥರಿಗೆ ತಿಳಿಯಬಂತು. ತರುವಾಯ ಸಮರ್ಥರು ತಮ್ಮ ಆಶೀರ್ವಾದವು ಹುಸಿ ಹೋಗಬಾರದೆಂದು ಶ್ರೀರಾಮಚಂದ್ರ ದೇವರನ್ನು ಪ್ರಾರ್ಥಿಸಿ ಆ ಪ್ರೇತವನ್ನು ತಮ್ಮ ಬಳಿಗೆ ಕರೆಯಿಸಿ ತಮ್ಮ ಕೈಯಿಂದ ತೀರ್ಥವನ್ನು ಪ್ರೋಕ್ಷಿಸಿದರು. ಆಗ ಕುಲಕರ್ಣಿಯು ಜೀವಂತನಾಗಿ "ರಾಮ! ರಾಮ!" ಎಂದು ಅನ್ನುತ್ತ ಎದ್ದು ಕುಳಿತನು! ಈ ಕೌತುಕವನ್ನು ಕಂಡು ಅಲ್ಲಿಯ ಜನರು ಎಷ್ಟು ಆಶ್ಚರ್ಯಚಕಿತರಾದರೆಂಬದನ್ನು ವಾಚಕರೇ ಕಲ್ಪಿಸಲಿ! ಮುಂದೆ ಈ ಸಾಧ್ವಿಗೆ ಸಮರ್ಥರ ಆಶೀರ್ವಾದದಂತೆ ಮಕ್ಕಳು ಹುಟ್ಟಿದರು. ಇವರೊಳಗೆ ಮೊದಲನೇ ಮಗನನ್ನು ಅವಳು ಸಮರ್ಥರಿಗೆ ಅರ್ಪಿಸಿದಳು. ಅವನನ್ನು ಸಮರ್ಥರು ತಮ್ಮ ಹತ್ತಿರ ಇಟ್ಟುಕೊಂಡು ಅವನಿಗೆ ಉದ್ಧವ ಗೋಸಾವಿ ಎಂಬ ಹೆಸರಿಟ್ಟರು.

ಪೃಥ್ವಿಪ್ರದಕ್ಷಿಣ—ಸಮರ್ಥರು ಗಂಗಾತೀರದಲ್ಲಿ ೨ ತಪಗಳವರೆಗೆ ಪುರಶ್ಚರಣವನ್ನು ಸಮಾಪ್ತಮಾಡಿ, ಪೃಥ್ವಿಪ್ರದಕ್ಷಿಣೆಮಾಡಿ ಬರುವದಕ್ಕೆ ಶ್ರೀರಾಮಚಂದ್ರ ದೇವರ ಆಜ್ಞೆಯನ್ನು ಪಡೆದು ಮುಂಚೆ ಶ್ರೀ ಕಾಶೀಕ್ಷೇತ್ರಕ್ಕೆ ಹೋದರು. ಅಲ್ಲಿಂದ ಇವರು ಅಯೋಧ್ಯಾ, ದ್ವಾರಕಾ, ಹಿಮಾಲಯ, ಜಗನ್ನಾಥ, ರಾಮೇಶ್ವರ ಮತ್ತು ಲಂಕಾ ಈ ಸ್ಥಳಗಳಿಗೆ ಹೋದರು. ಅಲ್ಲಿಂದ ಇವರು ಆದಿರಂಗ, ಮಧ್ಯರಂಗ, ಅಂತರಂಗ, ಶ್ರೀಜನಾರ್ದನ, ದರ್ಶಸೇನ ಮುಂತಾದ ಕ್ಷೇತ್ರಗಳಿಗೆ

ಹೋಗಿ ಗೋಕರ್ಣ ಮಹಾಬಲೇಶ್ವರಕ್ಕೆ ಬಂದರು. ಅಲ್ಲಿ ಇವರು ಕೆಲವು ದಿವಸ ನಿಂತು ಶೇಷಾದಿ ಪರ್ವತಕ್ಕೆ ಹೋಗಿ ಶ್ರೀವೆಂಕಟೇಶ, ಶ್ರೀಶೈಲ್ಯಮಲ್ಲಿಕಾರ್ಜುನ, ಬಾಲನರಸಿಂಹ, ಪಾಲಕನರಸಿಂಹ, ರಾಜೋಟಿವೀರಭದ್ರ ಮತ್ತು ಪಂಚಮಹಾಲಿಂಗಗಳ ದರ್ಶನವನ್ನು ತೆಗೆದುಕೊಂಡು ಕಿಷ್ಕಿಂಧಾನಗರಕ್ಕೆ ಬಂದರು. ಅಲ್ಲಿಂದ ಇವರು ಪಂಪಾಸರೋವರ, ಋಷ್ಯಮೂಕ ಪರ್ವತ ಮುಂತಾದ ತೀರ್ಥಯಾತ್ರೆಗಳನ್ನು ಮುಗಿಸಿಕೊಂಡು ಶ್ರೀಕಾರ್ತಿಕಸ್ವಾಮಿಗೆ ಹೋದರು. ಆ ಮೇಲೆ ದಕ್ಷಿಣಕಾಶಿ ಎನಿಸಿಕೊಳ್ಳುವ ಶ್ರೀಕರವೀರ ಕ್ಷೇತ್ರಕ್ಕೆ ಬಂದರು. ಅಲ್ಲಿಂದ ಇವರು ಶ್ರೀಮಹಾಬಲೇಶ್ವರಕ್ಕೆ ಬಂದು ಶ್ರೀತ್ರಿಯಂಬಕೇಶ್ವರಕ್ಕೆ ಹೋಗಿ ಪೃಥ್ವಿಯ ಪ್ರದಕ್ಷಿಣವನ್ನು ಮುಗಿಸಿ ಮರಳಿ ಪಂಚವಟಿಗೆ ಬಂದರು.

**ಸಮರ್ಥರು ಮಾಡಿದ ಕೆಲವು ಚಮತ್ಕಾರಗಳು**—ಶ್ರೀಸಮರ್ಥರು ದಶಕಪಂಚಕದ ಕುಲಕರ್ಣಿಗೆ ಪುನಃ ಜೀವಕೊಟ್ಟ ಮೊದಲನೇ ಚಮತ್ಕಾರವನ್ನು ಮೇಲೆ ಹೇಳಿದ್ದೇವೆ. ಇವರು ಕಾಶಿಗೆ ಹೋಗಿ ಶ್ರೀವಿಶ್ವೇಶ್ವರನ ದರ್ಶನಕ್ಕಾಗಿ ದೇವಾಲಯದಲ್ಲಿ ಪ್ರವೇಶಿಸುತ್ತಿದ್ದಾಗ ಇವರ ಭಗವೀವಸ್ತ್ರಗಳನ್ನೂ ಜಟಾಭಾರವನ್ನೂ ನೋಡಿ ದೇವರ ಗರ್ಭಗುಡಿಯಲ್ಲಿ ರುದ್ರಾಭಿಷೇಕ ಮಾಡುತ್ತ ಕುಳಿತಿದ್ದ ಕೆಲವು ಬ್ರಾಹ್ಮಣರು ಇವರನ್ನು ಬ್ರಾಹ್ಮಣೇತರ ಜಾತಿಯ ಬೈರಾಗಿಯೆಂದು ತಿಳಿದು ಇವರಿಗೆ ಒಳಗೆ ಬರಕೂಡದೆಂದು ಪ್ರತಿಬಂಧ ಮಾಡಿದರು. ಆಗ ಇವರು “ಒಳ್ಳೇದು. ರಘುಪತಿಯ ಮನಸ್ಸಿಗೆ ಬಂದಂತೆ ಆಗಲಿ!” ಎಂದು ನುಡಿದು ಹೊರಗಿಂದಲೇ ದೇವರಿಗೂ ಅಲ್ಲಿ ಕೂತಿದ್ದ ಯಾವತ್ತು ಬ್ರಾಹ್ಮಣರಿಗೂ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ತಿರುಗಿದರು. ಇದರಿಂದ ಅಲ್ಲಿ ರುದ್ರಾಭಿಷೇಕ ಮಾಡುತ್ತ ಕುಳಿತಿದ್ದ ಬ್ರಾಹ್ಮಣರಿಗೆ ದೇವರ ಲಿಂಗವು ಕಾಣದಂತಾಯಿತು! ಈ ಚಮತ್ಕಾರವನ್ನು ನೋಡಿ ಆ ಎಲ್ಲ ಬ್ರಾಹ್ಮಣರಿಗೆ ತಾವು ಸತ್ಪುರುಷನ ಅವಮಾನ ಮಾಡಿದೆವೆಂದು ಬಹಳ ಪಶ್ಚಾತ್ತಾಪವುಂಟಾಗಿ ಅವರೊಳಗೆ ಕೆಲವು ಬ್ರಾಹ್ಮಣರು ಓಡಿ ಹೋಗಿ ಸಮರ್ಥರನ್ನು ತಿರುಗಿ ಕರಕೊಂಡು ಬಂದರು. ಆಗ ಅವರೆಲ್ಲರಿಗೆ ಶ್ರೀವಿಶ್ವೇಶ್ವರನ ಲಿಂಗವು ಪುನಃ ಕಾಣಿಸಹತ್ತಿತು! ಇದು ಸಮರ್ಥರು ಮಾಡಿದ ಎರಡನೇ ಕೌತುಕವು. ಒಂದು ಸಾರೆ ಕೋರೆಗಾಂವದ ಸಮೀಪದಲ್ಲಿರುವ ಶಾಹಪುರಲ್ಲಿ ಮತ್ತೊಂದು ಚಮತ್ಕಾರವು ಸಂಭವಿಸಿತು. ಶ್ರೀಸಮರ್ಥರು ಊರಲ್ಲಿ ಕೋರಾನ್ನ ಭಿಕ್ಷವನ್ನು ಬೇಡಿಕೊಂಡು ಬರುವದಕ್ಕೆ ತಮ್ಮ ನಿತ್ಯ ಸಾಂಪ್ರದಾಯದ ಪ್ರಕಾರ ಅಲ್ಲಿಯ ಕುಲಕರ್ಣಿಯ ಮನೆಯ ಬಾಗಿಲಿಗೆ ಹೋಗಿ “ಜಯಜಯ ರಘುವೀರ ಸಮರ್ಥ” ಎಂದು ಅಂದರು. ಈ ಶಬ್ದವು ಕಿವಿಗೆ ಬಿದ್ದ ಕೂಡಲೇ ಆ ಮನೆಯ ಹೆಂಗಸರೆಲ್ಲರು ಕವಕ್ಕನೆ ಸಮರ್ಥರ ಮೈಮೇಲೆ ಹೋಗಿ ‘ನಮ್ಮ ತುಂಬಿದ ಮನೆಯಲ್ಲಿ ಇಂಥ ಹುಚ್ಚುಚ್ಚಾರ ಮಾಡಬೇಡಿರಿ. ಬೇಕಾದರೆ ಮುಗ್ಧರಾಗಿ ಬಂದು ಭಿಕ್ಷೆಯನ್ನು ಹಾಕಿಸಿಕೊಳ್ಳಿರಿ’ ಎಂ

ದು ಸ್ಪಷ್ಟವಾಗಿ ಹೇಳಿದರು.'! ಅದನ್ನು ಸಮರ್ಥರು ಕೇಳಿಕೊಂಡು ಸುಮ್ಮನಿದ್ದರು. ಅವರ ಮನೆಗೆ ಇದೇ ಪ್ರಕಾರ ಭಿಕ್ಷಕ್ಕೆ ಹೋದಾಗ ಅವರ ಮನೆಯ ಹೆಂಗಸರೆಲ್ಲರು ಒಂದುದಿವಸ ಅಳುತ್ತ ಕೂತದ್ದನ್ನು ಸಮರ್ಥರು ಕಂಡರು. ಆಗ ಸಮರ್ಥರು ಅವರನ್ನು ವಿಚಾರಿಸಲಾಗಿ ಅವರು "ಮನೆಯ ಯಜಮಾನನಾದ ಬಾಜೀಪಂತ ಕುಲಕರ್ಣಿಯನ್ನು ಲೆಖ್ಖದಲ್ಲಿ ಏನೋ ಅಕ್ರಮ ಮಾಡಿದ್ದಕ್ಕಾಗಿ ಬಾದಶಹರು ವಿಜಾಪುರಕ್ಕೆ ಕರೆದೊಯ್ದಿದ್ದಾರೆ. ಈಗ ಒಂದು ತಿಂಗಳಾದರೂ ಅವರನ್ನು ತಿರಿಗಿ ಹೋಗಲಿಕ್ಕೆ ಬಿಟ್ಟಿರುವದಿಲ್ಲ' ಎಂದು ಹೇಳಿದರು. ಅದನ್ನು ಕೇಳಿ ಸಮರ್ಥರು ' ಇವತ್ತಿನಿಂದ ೧೧ ದಿವಸಗಳೊಳಗಾಗಿ ಬಾಜೀಪಂತನು ನಿಮ್ಮ ಮನೆಗೆ ಸುಖರೂಪವಾಗಿ ಬಂದರೆ ನೀವೆಲ್ಲರು ಕೂಡಿ ರಾಮರಾಮ ಎಂದು ಭಜನೆಯನ್ನು ಮಾಡುವಿರಾ? ' ಎಂದು ಪ್ರಶ್ನೆಮಾಡಿದರು. ಅವರೆಲ್ಲರು ಅದಕ್ಕೆ ಒಪ್ಪಿಕೊಂಡರು. ಆಗ ಸಮರ್ಥರು ಬಾಜೀಪಂತನ ಕುಟುಂಬದಿಂದ ಕಳಿಸಲ್ಪಟ್ಟಂಥಾ ದಾಸೋಪಂತನೆಂಬ ಕಾರಕೂನನ ವೇಷವನ್ನು ಹಾಕಿಕೊಂಡು ವಿಜಾಪುರದ ಬಾದಶಹರ ಕಡೆಗೆ ಹೋಗಿ ಯಾವತ್ತು ಲೆಖ್ಖವನ್ನು ಸಮಾಧಾನಕರವಾಗಿ ವಿವರಿಸಿ ಬಾಜೀಪಂತನನ್ನು ಮುಕ್ತಮಾಡಿಸಿದರು. ಸಮರ್ಥರು ಬಾಜೀಪಂತನ ಸಂಗಡ ಊರಿನ ಅಗಸೀಬಾಗಿಲದ ತನಕ ಬಂದು ಬಾಜೀಪಂತನ ಹಿಂಸೆ ಉಳಿದಂತೆ ಮಾಡಿ ಅದೃಶ್ಯರಾದರು. ಬಾಜೀಪಂತನು ತನ್ನ ಮನೆಗೆ ಬಂದು ' ನೀವು ಕಳಿಸಿದ್ದ ದಾಸೋಪಂತ ಕಾರಕೂನನು ಬಹಳ ಚತುರನು. ಅವನು ಬಂದದ್ದರಿಂದ ನನ್ನ ಬಿಡುಗಡೆಯಾಯಿತು ' ಎಂದು ಹೇಳಿದನು. ಮನೆಯ ಹೆಂಗಸರು ಇದನ್ನು ಕೇಳಿ " ನಾವು ಯಾರೂ ದಾಸೋಪಂತನೆಂಬ ಕಾರಕೂನನ್ನು ಕಳಿಸಿಲ್ಲ. ಆದರೆ ರಾಮದಾಸನೆಂಬ ಗೋಸಾವಿಯು ನೀವು ಹನ್ನೊಂದನೇ ದಿವಸ ತಿರಿಗಿ ಬರುವಿರೆಂದು ಹೇಳಿದ್ದನು. ಅದರಂತೆ ನೀವು ಹನ್ನೊಂದನೇ ದಿವಸ ತಿರಿಗಿ ಬಂದಿರಿ" ಎಂದು ತಿಳಿಸಿದರು. ಅವತ್ತಿನಿಂದ ಆ ಕುಲಕರ್ಣಿಯೂ ಕುಲಕರ್ಣಿಯ ಹೆಂಡತಿಯೂ ಸಮರ್ಥರ ಮೇಲೆ ಬಹಳ ಭಕ್ತಿಯನ್ನಿಟ್ಟು ಅವರ ದರ್ಶನವಾಗುವ ಮುಂಚೆ ಅನ್ನಗ್ರಹಣ ಮಾಡದೆ ಉಪೋಷಣೆಯಿಂದಿರಹತ್ತಿದರು. ಆ ಕುಲಕರ್ಣಿಯ ಹೆಂಡತಿ ಒಂದು ಸಾರೆ ಸಮರ್ಥರು ತಮ್ಮ ಮನೆಗೆ ಬಂದು, ದರ್ಶನ ಕೊಡದೆ ಇದ್ದದರಿಂದ ಅಡವಿಯಲ್ಲಿ ಕಲ್ಲು ಮುಳ್ಳು ತುಳಿಯುತ್ತ ಸಮರ್ಥರ ಶೋಧ ಮಾಡುತ್ತಾ ಮಾಡುತ್ತಾ ಚಂದ್ರಗಿರಿಯ ಹತ್ತರ ವಸಂತಗಡಕ್ಕೆ ಹೋಗಿದ್ದಳು. ಅಲ್ಲಿ ಸಮರ್ಥರು ಹುಲಿಕರಡಿಗಳ ಮಧ್ಯದಲ್ಲಿ ಕೂತಿದ್ದರು. ಆಗ ಆ ಮಹಾಸಾಧ್ವಿಯು ತನ್ನ ಜೀವಕ್ಕೆ ತಿಲಪ್ರಾಯವಾದರೂ ಹೆದರದೆ ಶ್ರೀಸಮರ್ಥರ ಮುಂದೆ ಹೋಗಿ ಅವರ ಪಾದದ ಮೇಲೆ ಅಡ್ಡಬಿದ್ದಳು. ಆಗ ಸಮರ್ಥರು " ನನ್ನ ದರ್ಶನಕ್ಕಾಗಿ ಇಷ್ಟೊಂದು ಪ್ರಾಣ ನಿಗ್ರಹವನ್ನು ಯಾಕೆಮಾಡಿದಿ?' ಎಂದು ನಕ್ಕು "ನಿನ್ನ ಉಪೋಷಣವನ್ನು ಇಲ್ಲಿ ಬಿಡು " ಎಂದು ಹೇಳಿದರು. ಅದಕ್ಕೆ ಅವಳು—"ಸ್ವಾಮಿ, ನನಗೆ

ಈ ಅಡವಿಯಲ್ಲಿ ಅಡಿಗೆಯ ಸಾಹಿತ್ಯಗಳು ಹ್ಯಾಗೆ ದೊರಕುವವು!" ಎಂದು ಕೇಳಿದಳು. ಆಗ ಸಮರ್ಥರು ತಮ್ಮ ಮಗ್ಗಲಿಗೆ ಒಂದು ಸ್ಥಳವನ್ನು ತೋರಿಸಿ "ಅಕೋ! ಅಲ್ಲಿ ಯಾವತ್ತು ಸಾಮುಗ್ರಿಗಳುಂಟು. ನೀನು ಬೇಕಾದ ಅಡಿಗೆಯನ್ನು ಮಾಡಿಕೋ" ಎಂದು ಹೇಳಿದರು. ಅವಳು ಅಲ್ಲಿ ಹೋಗಿ ನೋಡಲು ಸಕಲ ಸಾಹಿತ್ಯಗಳು ಸಿದ್ಧವಾಗಿದ್ದವು. ಆಗ ಆಕೆಯು ಅತ್ಯಂತ ಆನಂದ ಪಟ್ಟು ಪಾಕವನ್ನು ಸಿದ್ಧ ಮಾಡಿ ಸಮರ್ಥರಿಗೆ ನೈವೇದ್ಯವನ್ನು ಅರ್ಪಣಮಾಡಿದಳು. ತರುವಾಯ ಸಮರ್ಥರು ಅವಳನ್ನುದ್ದೇಶಿಸಿ-"ನೀನು ಸ್ವಲ್ಪ ಹೊತ್ತು ಬೆನ್ನು ತಿರುವಿ ಕುಳಿತುಕೋ" ಎಂದು ಹೇಳಿ ಮಾರುತಿಯ ರೂಪವನ್ನು ಧರಿಸಿ ಭೋಜನವನ್ನು ಮಾಡಿದರು!! ಮತ್ತೊಂದು ಸಾರೆ ಸಮರ್ಥರ ಮನಸ್ಸಿನಲ್ಲಿ ಚಾಫಳದೊಳಗೆ ಶ್ರೀರಘುಪತಿಯ ಮೂರ್ತಿಯನ್ನು ಸ್ಥಾಪನ ಮಾಡಬೇಕೆಂಬ ವಿಚಾರವು ಬಂತು. ಸಮರ್ಥರು ಅಂಗಾರಪುರದ ಅಡವಿಯಲ್ಲಿ ಸ್ನಾನ ಸಂಧ್ಯಾದಿಗಳನ್ನು ಮಾಡುವಾಗ್ಗೆ ಮಾನಸ ಪೂಜೆಯಲ್ಲಿ ಮಾರುತಿಯು ಬರುವ ಬದಲಾಗಿ ಶ್ರೀ ರಘುಪತಿಯು ಬಂದನು. ಆಗ ಸಮರ್ಥರು ಈವೊತ್ತು ಹೀಗ್ಯಾಕಾಯಿತೆಂದು ವಿಚಾರ ಮಾಡುವಷ್ಟರಲ್ಲಿ ಶ್ರೀ ರಾಮಚಂದ್ರ ದೇವರು ಅವರಿಗೆ ಪ್ರತ್ಯಕ್ಷನಾಗಿ "ನಿಮ್ಮ ಮುಂದೆ ಕಾಣುವ ಕುಂಡದಲ್ಲಿ ಮೂರ್ತಿಗಳುಂಟು. ಅವುಗಳನ್ನು ಹೊರಗೆ ತೆಗೆದು ಸ್ಥಾಪನ ಮಾಡಿರಿ" ಎಂದು ಆಜ್ಞೆಯನ್ನಿತ್ತರು. ಅದರಂತೆ ಸಮರ್ಥರು ಆ ಕುಂಡದಲ್ಲಿ ಹುಡಕಲಾಗಿ ಅವರಿಗೆ ರಾಮ ಸೀತಾ ಲಕ್ಷ್ಮಣರ ಸುಂದರವಾದ ಶಿಲಾ ಮೂರ್ತಿಗಳು ದೊರಕಿದವು. ಅವುಗಳನ್ನು ಅವರು ಜೋಳಿಗೆಯೊಳಗೆ ಹಾಕಿಕೊಂಡು ಚಾಫಳಕ್ಕೆ ಬರಬೇಕೆಂದು ಹೊರಟರಲು ಆ ಊರೊಳಗಿನ ಜನರು "ಈ ಮೂರ್ತಿಗಳನ್ನು ನಮ್ಮ ಪೂರ್ವಜರು ಇಲ್ಲಿ ಹಾಕಿದ್ದಾರೆ. ಇವುಗಳನ್ನು ನಾವು ಒಯ್ಯಗೊಡುವದಿಲ್ಲ. ಇವು ನಮ್ಮವು" ಎಂದು ಹೇಳಿದರು. ಇದನ್ನು ಕೇಳಿ ಸಮರ್ಥರು ಆ ಮೂರ್ತಿಗಳನ್ನು ಅಲ್ಲಿಯೇ ಬಿಟ್ಟು ಚಾಫಳಕ್ಕೆ ಹೊರಟು ಹೋದರು. ತರುವಾಯ ಆ ಊರಜನರು ಆ ಮೂರ್ತಿಗಳನ್ನು ತೆಗೆದುಕೊಂಡು ಹೋಗುವದಕ್ಕಾಗಿ ಅನೇಕ ಜನ ಸೇವಕರನ್ನೂ ಎತ್ತು ಬಂಡಿಗಳನ್ನೂ ತಂದು ಬಹಳ ದಿವಸ ಪ್ರಯತ್ನ ಮಾಡಿದಾಗ್ಯೂ ಆ ಮೂರ್ತಿಗಳನ್ನು ಎತ್ತಿ ಬಂಡಿಯಲ್ಲಿ ಹಾಕುವದು ಅಸಾಧ್ಯವಾಯಿತು. ಆಗ ಅವರಿಗೆ ಬಹಳ ಪಶ್ಚಾತ್ತಾಪವುಂಟಾಗಿ ಅವರು ಸಮರ್ಥರನ್ನು ಚಾಫಳದಿಂದ ಕರೆದುಕೊಂಡು ಬಂದು ಆ ಮೂರ್ತಿಗಳನ್ನು ಅವರ ಸ್ವಾಧೀನಕ್ಕೆ ಕೊಟ್ಟರು!!

ಶಿಷ್ಯವರ್ಗ—ಸಮರ್ಥರಿಗೆ ಅನೇಕ ಜನ ಶಿಷ್ಯರಿದ್ದರು. ಅವರಲ್ಲಿ ಉದ್ಧವಗೋಸಾವಿ, ಕಲ್ಯಾಣಸ್ವಾಮಿ, ಅಕ್ಕಾ, ವೇಣೂಬಾಯಿ, ಸೀತಾಬಾಯಿ, ರೋಕಡಾರಾಮ, ಮುಸಳರಾಮ, ಭೋಳಾರಾಮ, ರಂಗೋಬಾ ಗೋಸಾವಿ, ಬಾಜೀಪಂ

ತ ಮುಂತಾದ ೭೨ ಜನರು ಮುಖ್ಯ ಶಿಷ್ಯರಿದ್ದರು. ಸಮರ್ಥರು ತಾವು ಹೋದಲ್ಲೆಲ್ಲ ಮಠಗಳನ್ನು ಸ್ಥಾಪನ ಮಾಡಿ ತಮ್ಮ ತಮ್ಮ ಶಿಷ್ಯರನ್ನು ಆಯಾಯ ಮಠಗಳಲ್ಲಿಟ್ಟು ಅವರ ಕೈಯಿಂದ ಜನರಿಗೆ ಧರ್ಮೋಪದೇಶ ಮಾಡಿಸುತ್ತಿದ್ದರು. ಸಮರ್ಥರು ಹನ್ನೊಂದು ಕಡೆಗೆ ಪ್ರಾಣ ದೇವರ ಪ್ರತಿಷ್ಠಾಪನೆಯನ್ನು ಮಾಡಿದ್ದಾರೆ.

ಶಿವಾಜಿಮಹಾರಾಜರು ರಾಮದಾಸ ಸ್ವಾಮಿಗಳ ದರ್ಶನ ತೆಗೆದುಕೊಂಡದ್ದು—ಒಂದು ಸಾರೆ ಶ್ರೀ ಛತ್ರಪತಿ ಶಿವಾಜಿ ಮಹಾರಾಜರು ರಾಯಗಡದಿಂದ ಮಹಾಡಕ್ಕೆ ಬಂದಾಗ ಒಬ್ಬ ಹರಿದಾಸನ ಕಡೆಯಿಂದ ಹರಿಕೀರ್ತನವನ್ನು ಮಾಡಿಸಿದರು. ಆ ಕೀರ್ತನದಲ್ಲಿ ಹರಿದಾಸನು ಧ್ರುವ ಚರಿತ್ರವನ್ನು ಹೇಳಿ "ಸದ್ಗುರುವಿಲ್ಲದೆ ಮೋಕ್ಷವಿಲ್ಲ"ವೆಂಬ ವಿಷಯವನ್ನು ಪ್ರತಿಪಾದನ ಮಾಡಿದನು. ಇದು ಶ್ರೀ ಶಿವಾಜಿ ಮಹಾರಾಜರ ಮನಸ್ಸಿನ ಮೇಲೆ ಚನ್ನಾಗಿ ಬಿಂಬಿಸಿತು. ಆಗ ಮಹಾರಾಜರು ತಾವು ಯಾವ ಸತ್ಪುರುಷರಿಗೆ ಶರಣು ಹೋದರೆ ತಮಗೆ ಉಪದೇಶವು ದೊರಕೀತೆಂದು ಬಹಳ ಚಿಂತೆಯನ್ನು ಮಾಡತೊಡಗಿದರು. ಅವರ ಮನಸ್ಸಿನಲ್ಲಿ ಶ್ರೀ ಸಮರ್ಥರ ದರ್ಶನ ತೆಗೆದುಕೊಳ್ಳಬೇಕೆಂಬ ಹಂಬಲವು ವಿಶೇಷವಿತ್ತು. ಆದರೆ ಮಹಾರಾಜರು ಹಿಂದಕ್ಕೆ ಕೆಲವು ಸಾರೆ ಸಮರ್ಥರ ದರ್ಶನಕ್ಕಾಗಿ ಹೋದಾಗ್ಗೆ ಅವರಿಗೆ ದರ್ಶನವಾಗಿದ್ದಿಲ್ಲ. ಅದ್ದರಿಂದ ಸಮರ್ಥರ ದರ್ಶನವು ತಮಗೆ ಲಭ್ಯವಾಗುವದಿಲ್ಲೆಂದು ಬಹಳ ಉದಾಸೀನರಾಗಿದ್ದರು. ಆಕಾರಣ ತಾವು ಯಾರಿಗೆ ಶರಣು ಹೋಗಬೇಕೆಂದು ಕೇಳಿಕೊಳ್ಳುವದಕ್ಕಾಗಿ ಕಾಲಿಕಾ ದೇವಿಗೆ ಪ್ರಾರ್ಥನೆಯನ್ನು ಮಾಡಿದರು. ಆಗ ಅವರಿಗೆ ಒಂದು ಸ್ವಪ್ನ ಬಿತ್ತು. ಆ ಸ್ವಪ್ನದೊಳಗೆ ಒಬ್ಬ ಮುತ್ತೈದಿಯು ಬಂದು ಮಹಾರಾಜರಿಗೆ "ರಾಮದಾಸ ಸ್ವಾಮಿಗಳಿಗೆ ಶರಣು ಹೋಗಿ ಗುರುಪದೇಶವನ್ನು ತೆಗೆದುಕೊಳ್ಳಿರಿ" ಎಂದು ಹೇಳಿದಳು. ಆಗಂತೂ ಮಹಾರಾಜರು ಸಮರ್ಥರ ದರ್ಶನವನ್ನು ತೆಗೆದುಕೊಳ್ಳಬೇಕೆಂದು ಪುನಃ ನಿಶ್ಚಯಮಾಡಿ ತಮ್ಮ ಪರಿವಾರದೊಂದಿಗೆ ಚಾಫಳಕ್ಕೆ ಬಂದರು. ಆಗ ಸಮರ್ಥರು ಅಲ್ಲಿ ಇದ್ದೇ ಇಲ್ಲ. ಶ್ರೀ ಶಿವಾಜಿಮಹಾರಾಜರು ಶ್ರೀ ರಘುಪತಿಯ ದರ್ಶನ ತೆಗೆದುಕೊಂಡು ಶಿಷ್ಯರು ತಂದು ಕೊಟ್ಟ ಪ್ರಸಾದವನ್ನು ಸ್ವೀಕರಿಸಿ ಪುನಃ ನಿರಾಶೆಯಿಂದ ಹೊರಟು ಬಂದರು. ಮಹಾರಾಜರಿಗೆ ಸಮರ್ಥರ ದರ್ಶನ ತೆಗೆದುಕೊಳ್ಳಬೇಕೆಂಬ ಲವಲವಿಕೆಯು ದಿನೇ ದಿನೇ ಹೆಚ್ಚಾಯಿತು. ಕಾರಕೂನ ಮುಂತಾದವರನ್ನು ಅನೇಕ ಕಡೆಗೆ ಸಮರ್ಥರ ಶೋಧಕ್ಕಾಗಿ ಕಳಿಸಿದರು. ಆದರೂ ಅವರು ಇಂಥಲ್ಲಿ ಇದ್ದಾರೆಂಬ ಶೋಧವಾಗಲಿಲ್ಲ. ತರುವಾಯ ಮಹಾರಾಜರು ಒಂದು ಸಾರೆ, ಸಮರ್ಥರ ದರ್ಶನ ತೆಗೆದುಕೊಳ್ಳದೆ ತಾವು ಅನ್ನಗ್ರಹಣ ಮಾಡುವದಿಲ್ಲೆಂದು ದೃಢ ನಿಶ್ಚಯದಿಂದ ಉಪೋಷಣ ಮಾಡಿ ಮಲಗಿಕೊಂಡು ಬಿಟ್ಟರು. ಈ ರೀತಿಯಿಂದ ಮಹಾರಾಜರು

ನಿದ್ರೆಗೈಯ್ಯುತ್ತಿರುವಾಗ ಸಮರ್ಥರು ಕಾಲಲ್ಲಿ ಪಾದುಕೆಗಳನ್ನು ಹಾಕಿಕೊಂಡು, ಕೌಪಿನ ಪರಿಧಾನ ಮಾಡಿ, ಕೈಯಲ್ಲಿ ಜಪಮಾಲೆಯನ್ನು ಹಿಡಿದು, ಬಗಲಲ್ಲಿ ಜೋಳಿಗೆಯನ್ನು ಹಾಕಿಕೊಂಡು, ತಲೆಯ ತುಂಬ ಜಡೆಗಳನ್ನು ಬಿಟ್ಟು, ಮಹಾರಾಜರಿಗೆ ದರ್ಶನವನ್ನೂ ಪ್ರಸಾದವನ್ನೂ ಕೊಟ್ಟು ಅಂತರ್ಧಾನವನ್ನು ಹೊಂದಿದರು. ಮಹಾರಾಜರು ಆನಂದದಿಂದ ನಿದ್ರೆಯಿಂದೆಚ್ಚತ್ತು ನೋಡುವಲ್ಲಿ, ಕೈಯಲ್ಲಿ ಮಾತ್ರ ತೆಂಗಿನಕಾಯಿಯು ಇತ್ತು. ಸಮರ್ಥರು ಅದೃಶ್ಯರಾಗಿದ್ದರು. ಈ ಎಲ್ಲ ಸಂಗತಿಯನ್ನು ಮಹಾರಾಜರು ತಮ್ಮ ಜೇಷ್ಠ ಪತ್ನಿಯಾದ ಸಯಿಬಾಯಿಗೂ ಮಾತೋಶ್ರಿಯಾದ ಜಿಜಾಬಾಯಿಗೂ ತಿಳಿಸಿದರು. ಅವರೆಲ್ಲರು ಇದನ್ನು ಕೇಳಿ ಆನಂದ ಪಟ್ಟರು. ತರುವಾಯ ಮಹಾರಾಜರು ಮಹಾಬಳೇಶ್ವರಕ್ಕೆ ಹೋಗಿ ಅಲ್ಲಿ ಬ್ರಾಹ್ಮಣ ಭೋಜನ ಹಾಕಿ ಬೇಕಾದಷ್ಟು ದಾನಧರ್ಮ ಮಾಡಿದರು. ಭೋಜನ ಸಮಾರಂಭವು ನಡೆದಿರುವಾಗಲೇ ಸಮರ್ಥರ ಕಡೆಯಿಂದ ಒಂದು ಆಜ್ಞಾ ಪತ್ರವು ಬಂದು ತಲ್ಪಿತು. ಅದರಲ್ಲಿ "ಧರ್ಮಸ್ಥಾಪನ ಮಾಡುವ ಭಾರವು ನಿನ್ನನ್ನೇ ಕೂಡಿರುತ್ತದೆ. ಅರಸರೊಳಗೆ ನಿನ್ನಂಥ ಪುಣ್ಯವಂತನೂ, ನೀತಿವಂತನೂ, ಆಚಾರಶೀಲನೂ, ವಿಚಾರಶೀಲನೂ, ದೇವಧರ್ಮಗೋಬ್ರಾಹ್ಮಣ ಪ್ರತಿಪಾಲಕನೂ, ಧೀರಉದಾರಗಂಭೀರನೂ, ವೀರಾಗ್ರೇಸರನೂ ಯಾರನ್ನೂ ಕಾಣೆನು. ನಿನ್ನಂಥ ಸರ್ವಜ್ಞ ಧರ್ಮ ಮೂರ್ತಿಗೆ ವಿಶೇಷ ಬರೆಯುವದೇನದೆ?" ಎಂಬ ಅರ್ಥವನ್ನು ಸುಂದರವಾದ ಮಹಾರಾಷ್ಟ್ರ ಶ್ಲೋಕಗಳಿಂದ ಗರ್ಭಿತ ಮಾಡಿದ್ದರು. ಇದನ್ನು ಓದಿಕೊಂಡು ಮಹಾರಾಜರು ಬಹಳ ಸಂತೋಷ ಪಟ್ಟು ಆ ಪತ್ರವನ್ನು ತೆಗೆದುಕೊಂಡು ಬಂದಿದ್ದ ಶಿಷ್ಯನ ಸತ್ಕಾರ ಮಾಡಿ "ನಾನು ಸರ್ವಸ್ವಿ ಅಪರಾಧಿಯಾಗಿದ್ದೇನೆ. ದಯಾಶೀಲರಾದ ತಾವು ಈ ಬಡವನನ್ನು ಕ್ಷಮಿಸಬೇಕು. ಆದಾಗ್ಯೂ, ಈಗ ನಾನು ತಮ್ಮ ದರ್ಶನಕ್ಕಾಗಿ ಬರಬೇಕೆಂದು ಅಪೇಕ್ಷಿಸುತ್ತೇನೆ. ತಮ್ಮ ದರ್ಶನಾಪೇಕ್ಷೆಯಿಂದ ಬಳಲುವ ಈ ದರಿದ್ರನಿಗೆ ದರ್ಶನವೆಂಬ ದ್ರವ್ಯವನ್ನು ಕೊಟ್ಟು ಸಂತೃಪ್ತಗೊಳಿಸಲಿಕ್ಕೆ ತಾವು ಸಮರ್ಥರೇ ಇದ್ದೀರಿ. ಇತಿ ಶಿರಸಾಷ್ಟಾಂಗ ನಮಸ್ಕಾರ" ಎಂಬ ಉತ್ತರವನ್ನು ಬರೆದು ಶಿಷ್ಯನ ಕೈಯಲ್ಲಿ ಕೊಟ್ಟು ಕಳಿಸಿದರು. ಮೂರನೇ ದಿವಸ ಮಹಾರಾಜರು ಚಾಫಳ ಮಠಕ್ಕೆ ಬಂದು ವಿಚಾರಿಸಲಾಗಿ ಶ್ರೀಗಳವರು ಎರಡನೇ ಕಡೆಗೆಹೊರಟು ಹೋಗಿದ್ದರು. ಅಲ್ಲಿಂದ ಮಹಾರಾಜರು ದಿವಾಕರಭಟ್ಟನೆಂಬವನನ್ನು ತಮ್ಮ ಸಂಗಡ ಕರೆದುಕೊಂಡು ಸಿಂಗಣವಾಡಿಗೆ ಬಂದರು. ಆ ಸಮಯದಲ್ಲಿ ಸಮರ್ಥರು ತೋಟದಲ್ಲಿ ಒಂದು ಅವುದುಂಬರ ಗಿಡದ ಕೆಳಗೆ ಕುಳಿತು "ದಾಸಬೋಧ"ವನ್ನು ಬರೆಯುವಲ್ಲಿ ತೊಡಗಿದ್ದರು. ಆಗ ಕಲ್ಯಾಣಸ್ವಾಮಿಯು ಶಿವಾಜಿ ಮಹಾರಾಜರ ಕಡೆಯಿಂದ ತಂದ ಉತ್ತರವನ್ನು ಸಮರ್ಥರ ಕೈಯಲ್ಲಿ ತಂದು ಕೊಡಲು ಅವರು ಅದನ್ನು ಓದಿಕೊಂಡು "ಶಿವಾಜಿ ಮಹಾರಾಜನಿಗೆ ನನ್ನ ದರ್ಶನ ತೆಗೆದುಕೊಳ್ಳುವ ಆತುರವಿದ್ದಂತೆ ಈ ಉತ್ತರದ ಮೇಲಿಂದ ಕಾಣುತ್ತ

ದೆ- ಬಹುಶಃ ಇವತ್ತೇ ಬಂದಾನು” ಎಂದು ಹೇಳಿದರು. ಇಷ್ಟು ಆಗ ಆಗುವಷ್ಟರಲ್ಲಿ ಶಿವಾಜಿ ಮಹಾರಾಜರು ದಿವಾಕರಭಟ್ಟನೊಂದಿಗೆ ಬಂದು ತಲ್ಪಿದರು. ಅವರ ಹಿಂದಿಂದೆ ಚಿಟ್ನೀಸ, ಮುಜುಮುದಾರ ಮುಂತಾದ ಜನರು ಬಂದರು. ಶಿವಾಜಿ ಮಹಾರಾಜರಿಗೆ ಸಮರ್ಥರ ದರ್ಶನವಾದ ತರುವಾಯ ಮಹಾರಾಜರು ಸಮರ್ಥರ ಪಾದಗಳಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ಅನುಗ್ರಹ ಪ್ರಸಾದವನ್ನು ಕೊಡಬೇಕೆಂದು ಪ್ರಾರ್ಥನೆಯನ್ನು ಮಾಡಿದರು. ಆಗ ಸಮರ್ಥರು ಒಡಂಬಡಲಾಗಿ ಮಹಾರಾಜರು ಸ್ನಾನ ಮಾಡಿ ಸಮರ್ಥರ ಪೂಜೆಯನ್ನು ಮಾಡಿದರು. ಪೂಜಾ ಸಮಯಕ್ಕೆ ಮಹಾರಾಜರು ದ್ರವ್ಯ ವಸ್ತ್ರ ಭೂಷಣಗಳನ್ನು ಅರ್ಪಿಸಿದರು. ಮೋಹರು, ಪುತಳಿ ರುಪಾಯಿ ಮುಂತಾದವುಗಳನ್ನು ಸರಿಬೆರಿಕೆ ಮಾಡಿ ಸಮರ್ಥರ ಪಾದುಕಗಳ ಮೇಲೆ ಅಭಿಷೇಕ ಮಾಡಿದರು. ಅದರೊಳಗೆ ಕೆಲವನ್ನು ಸಮರ್ಥರು ದನ ಕಾಯುವ ಹುಡುಗರಿಗೆ ಹಂಚಿ ಕೆಲವನ್ನು ನಾಲ್ಕೂ ದಿಕ್ಕಿಗೆ ಸೂರಿ ಮಾಡಿದರು. ಪೂಜಾವಿಧಿಯು ಮುಗಿದ ತರುವಾಯ ಸಮರ್ಥರು ಮಹಾರಾಜರಿಗೆ ಅನುಗ್ರಹ ಮಂತ್ರವನು ಉಪದೇಶಿಸಿದರು. ಅದರಿಂದ ಮಹಾರಾಜರು ಬ್ರಹ್ಮಾನಂದವನ್ನು ಹೊಂದಿ, ತಾವು ಇನ್ನು ರಾಜ್ಯಕ್ಕೆ ಮರಳಿ ಹೋಗುವದಿಲ್ಲೆಂತಲೂ ಚರಣ ಸನ್ನಿಧಿಯಲ್ಲಿಯೇ ಯಾವಾಗಲು ಇದ್ದು ಸೇವೆಯನ್ನು ಮಾಡಲಿಕ್ಕೆ ತಮಗೆ ಅಪ್ಪಣೆಯು ದೊರೆಯಬೇಕೆಂತಲೂ ಪ್ರಾರ್ಥಿಸಿದರು. ಅದನ್ನು ಕೇಳಿ ಸಮರ್ಥರು ಮುಗಳ್ನಗೆಯಿಂದ ನಕ್ಕು “ಅರಸರಿಗೆ ಕ್ಷಾತ್ರ ಧರ್ಮವೇ ಉಚಿತವಾಗಿರುತ್ತದೆ. ಅರಸರು ತಮ್ಮ ರಾಜಧಾನಿಯಲ್ಲಿಯಲ್ಲಿದ್ದು ದೇವ ಬ್ರಾಹ್ಮಣರ ಸೇವೆಯನ್ನು ಮಾಡಬೇಕು. ಅಂದರೆ ಅದರಿಂದಲೇ ಅವರಿಗೆ ಮೋಕ್ಷ ಪ್ರಾಪ್ತಿಯಾಗುತ್ತದೆ” ಎಂಬದಾಗಿ ಸವಿಸ್ತಾರವಾಗಿ ರಾಜಧರ್ಮವನ್ನೂ ಕ್ಷಾತ್ರ ಧರ್ಮವನ್ನೂ ಉಪದೇಶಿಸಿದರು. ಅಲ್ಲಿ ಮಹಾರಾಜರು ಮೂರು ರಾತ್ರಿಗಳನ್ನು ಕಳೆದು ಸಮರ್ಥರ ಅಪ್ಪಣೆಯನ್ನು ಹೊಂದಿ ಪ್ರತಾಪಗಡಕ್ಕೆ ಮರಳಿ ಬಂದು ತಮ್ಮ ತಾಯಿಯಾದ ಜಿಜಾಬಾಯಿಯ ಮುಂದೆ ಈ ನಡೆದ ವೃತ್ತಾಂತವನ್ನು ಹೇಳಿ ತಮಗೆ ಸಮರ್ಥರು ಕೊಟ್ಟ ತೀರ್ಥ ಪ್ರಸಾದವನ್ನು ಅವಳ ಮುಂದೆ ಇಟ್ಟರು. ಅವಳು ತನ್ನ ಮುಂದೆ ಮಹಾರಾಜರು ತಂದಿಟ್ಟ ಮಣ್ಣು, ಲದ್ದಿ, ಮತ್ತು ಹರಳುಗಳನ್ನು ನೋಡಿ ಇವುಗಳ ಅರ್ಥವೇನೆಂದು ಕೇಳಿದಳು. ಅದಕ್ಕೆ ಮಹಾರಾಜರು “ಮಣ್ಣು ಅಂದರೆ ಭೂಮಿ ಎಂತಲೂ ಲದ್ದಿ ಯೆಂದರೆ ಐಶ್ವರ್ಯ ವೆಂತಲೂ ಹರಳು ಅಂದರೆ ಕೋಟೆಎಂತಲೂ ಅರ್ಥವಾಗುತ್ತದೆ. ಅದ್ದರಿಂದ ನನಗೆ ಇನ್ನು ಭೂಮಿಯೆಲ್ಲ ಹಸ್ತಗತವಾಗುವದು; ನನಗೆ ದೊಡ್ಡ ಐಶ್ವರ್ಯವು ಪ್ರಾಪ್ತವಾಗುವದು; ಮತ್ತು ಅನೇಕ ಕೋಟೆಗಳು ನನಗೆ ದೊರಕುವವು” ಎಂದು ಹೇಳಿದರು. ಇದನ್ನು ಕೇಳಿ ಜಿಜಾಬಾಯಿಯು ಬಹಳ ಆನಂದ ಪಟ್ಟಳು. ಶ್ರೀಶಿವಾಜಿ ಮಹಾರಾಜರು ಶ್ರೀರಾಮದಾಸ ಸ್ವಾಮಿಗಳ ಕಡೆಯಿಂದ ಉಪದೇಶ ತೆಗೆದುಕೊಂಡಾಗ್ಗೆ ೨೨ ವರ್ಷ ಪ್ರಾಯದವರಿದ್ದರು.

**ಹಲವು ಚಮತ್ಕಾರಗಳು**-ಶಿವಾಜಿ ಮಹಾರಾಜರು ಸಮರ್ಥರ ದರ್ಶನಕ್ಕೆ ಹೋದಾಗ್ಗೆ ಕೆಲಕೆಲವು ಸಾರೆ ಅತ್ಯಂತ ಚಮತ್ಕಾರಗಳು ಸಂಭವಿಸಿದವು. ಮಹಾರಾಜರು ಸಮರ್ಥರಿಂದ ಅನುಗ್ರಹ ಪ್ರಸಾದವನ್ನು ಪಡೆದ ದಿವಸ ಕಲ್ಯಾಣಸ್ವಾಮಿಯ ಸಂಗಡ ಶ್ರೀ ರಘುಪತಿಯ ದರ್ಶನಕ್ಕಾಗಿ ಹೋಗಿ ದರ್ಶನವನ್ನು ಹೊಂದಿ ಕೈಯೊಡ್ಡಿ ಪ್ರಸಾದವನ್ನು ಬೇಡಿಕೊಳ್ಳಲು ಶ್ರೀ ರಘುಪತಿಯ ಮಸ್ತಕದಲ್ಲಿದ್ದ ಮಲ್ಲಿಗೆಯ ಹೂವಿನ ಮಾಲಿಯು ಮಹಾರಾಜರ ಕೈಯೊಳಗೆ ಬಂದು ಬಿತ್ತು!! ಅದನ್ನು ಮಹಾರಾಜರು ತಮ್ಮ ಮುಂಡಾಸಕ್ಕೆ ಚುಚ್ಚಿಕೊಂಡು ಭೋಜನೋತ್ತರ ಅದನ್ನು ತೆಗೆದು ನೋಡಲಾಗಿ ಮಲ್ಲಿಗೆಯ ಹೂವುಗಳ ಬದಲಾಗಿ ಆ ಮಾಲೆಯಲ್ಲಿ ಮುತ್ತುಗಳೇ ತುಂಬಿದ್ದವು!! ಒಂದುಸಾರೆ ಮಹಾರಾಜರು ತಮ್ಮ ೨೦೦೦ ಸೈನ್ಯದ ಜನರೊಂದಿಗೆ ಸಮರ್ಥರ ದರ್ಶನಕ್ಕೆ ಶಾಮಘಳಿ ಎಂಬ ಗುಡ್ಡಕ್ಕೆ ಹೋಗಿದ್ದರು. ಅಲ್ಲಿ ಮಹಾರಾಜರು ಸಮರ್ಥರ ದರ್ಶನ ತೆಗೆದುಕೊಂಡು ಸ್ವಲ್ಪ ಹೊತ್ತು ಅವರ ಕೂಡ ಸಂಭಾಷಣ ಮಾಡಿದ ತರುವಾಯ ತಮಗೆ ಹೋಗಿ ಬರಲಿಕ್ಕೆ ಅಪ್ಪಣೆಯನ್ನು ಕೇಳಿದರು. ಆಗ ಸಮರ್ಥರು—“ಈಗ ಮಧ್ಯಾಹ್ನದ ಬಿಸಿಲು ಏರುತ್ತ ನಡದದೆ. ಎಲ್ಲರು ಭೋಜನವನ್ನು ತೀರಿಸಿಕೊಂಡು ಹೋಗಬೇಕು” ಎಂದು ಬಹಳ ಆಗ್ರಹ ಮಾಡಿದರು. ಸಮರ್ಥರ ಅಪ್ಪಣೆಯನ್ನು ಮೀರಲಾರದೆ ಮಹಾರಾಜರು ಅದಕ್ಕೆ ಒಡಂಬಟ್ಟರು. ತರುವಾಯ ಸಮರ್ಥರು ತಮ್ಮ ಹತ್ತರ ಕುಳಿತಿದ್ದ ಕಲ್ಯಾಣಸ್ವಾಮಿಗೆ ಅಪ್ಪಣೆಯನ್ನು ಕೊಡಲು, ಯಾವತ್ತರು ತಮ್ಮ ಸ್ನಾನವನ್ನು ತೀರಿಸಿಕೊಂಡು ಬರುವಷ್ಟರಲ್ಲಿ ಕಲ್ಯಾಣಸ್ವಾಮಿಯು ಅರಸರ ಯೋಗ್ಯತೆಗೆ ತಕ್ಕಂಥ ಪಕ್ವಾನ್ನದ ಸಿದ್ಧತೆಯನ್ನು ಮಾಡಿ ಎಲ್ಲರಿಗೂ ಅವರವರ ಯೋಗ್ಯತೆಯ ಮೇರೆಗೆ ಎಲೆಯಮೇಲೆ ಕೂಡ್ರಿಸಿ ಶ್ರೇಷ್ಠವಾದ ಪಕ್ವಾನ್ನಗಳನ್ನೂ ರುಚಿಕರವಾದ ಪದಾರ್ಥಗಳನ್ನೂ ಬಡಿಸಿ ಅವರಿಗೆ ಭೋಜನ ಮಾಡಿಸಿದನು. ಭೋಜನೋತ್ತರದಲ್ಲಿ ಪ್ರತಿಯೊಬ್ಬರ ಕೈಯಲ್ಲಿ ತ್ರಯೋದಶಗುಣಯುಕ್ತ ತಾಂಬೂಲವನ್ನು ಸಹಾ ಕೊಟ್ಟನು!! ಸಮರ್ಥರ ಈ ಅದ್ಭುತ ಲೀಲೆಯನ್ನು ನೋಡಿ ಶಿವಾಜಿ ಮಹಾರಾಜರೂ ಅವರ ಪರಿವಾರದವರೂ ಆಶ್ಚರ್ಯಚಕಿತರಾದರು. ಶಿವಾಜಿ ಮಹಾರಾಜರು ಈ ಚಮತ್ಕಾರದ ಇಂಗಿತವೇನೆಂದು ಅಂಜಂಜುತ್ತ ಕೈಜೋಡಿಸಿ ಸಮರ್ಥರಿಗೆ ಕೇಳಿದರು. ಆಗ ಸಮರ್ಥರು ಇದರ ಇಂಗಿತವನ್ನು ನಿಮಗೆ ತುಕಾರಾಮ ಸತ್ಪುರುಷನು ತಿಳಿಸುವನೆಂದು ಹೇಳಿದರು.

**ಶಿವಾಜಿಮಹಾರಾಜರು ತುಕಾರಾಮನ ಭೇಟಿ ತೆಗೆದುಕೊಂಡದ್ದು**—ಸಮರ್ಥರ ಕಾಲಕ್ಕೆ ತುಕಾರಾಮ ಸತ್ಪುರುಷನೆಂಬವನು ಇದ್ದನು. ಅವನೂ ಸಮರ್ಥರಂತೆ ದೊಡ್ಡ ಭಗವದ್ಭಕ್ತನಿದ್ದನು. ಅವನು ಪುಣೇ ಜಿಲ್ಹೆಗೆ ಸೇರಿದ ದೇಹೂ ಎಂಬ ಊರಲ್ಲಿರುತ್ತಿದ್ದನು. ಶಿವಾಜಿ ಮಹಾರಾಜರು ಆ ಮಹಾತ್ಮನ ದರ್ಶನವ

ನ್ನು ತೆಗೆದುಕೊಳ್ಳಬೇಕೆಂಬ ಅಪೇಕ್ಷೆಯಿಂದ ಆಸತ್ಪುರುಷನನ್ನು ಸನ್ಮಾನಪೂರ್ವಕವಾಗಿ ಕರೆದುಕೊಂಡು ಬರಬೇಕೆಂದು ತಮ್ಮೊಬ್ಬ ಕಾರಕೂನನಿಗೆ ಅಪ್ಪಣೆಯನ್ನು ಮಾಡಿದರು. ಆ ಕಾರಕೂನನು ಮಹಾರಾಜರ ಅಪ್ಪಣೆಯ ಮೇರೆಗೆ ಹಗಲು ದೀವಟಿಗೆಯನ್ನೂ ಶ್ವೇತ ಛತ್ರವನ್ನೂ ಕುದುರೆಗಳನ್ನೂ ತೆಗೆದುಕೊಂಡು ಪರಿವಾರ ಸಹಿತ ಹೋದನು. ಆದರೆ ತುಕಾರಾಮ ಸತ್ಪುರುಷನು ಇದೆಲ್ಲಾ ಡಂಭಾಟವು ತನಗೆ ಬೇಡೆಂದು ಹೇಳಿ ಆ ಕಾರಕೂನನನ್ನು ತಿರಿಗಿ ಕಳಿಸಿಕೊಟ್ಟನು. ಶಿವಾಜಿ ಮಹಾರಾಜರು ತುಕಾರಾಮನ ದರ್ಶನವನ್ನು ತೆಗೆದುಕೊಳ್ಳಬೇಕೆಂದು ಅನೇಕ ತರದ ಪ್ರಯತ್ನಗಳನ್ನು ಮಾಡಿದರು. ಆದರೂ ಅವರಿಗೆ ಆ ಮಹಾತ್ಮನ ದರ್ಶನದ ಯೋಗವು ಬಂದಿದ್ದಿಲ್ಲ. ಒಂದು ಸಾರೆ ಪುಣೆಯೊಳಗೆ ಸಿರೋಳೆಯ ದೇಶಮುಖರ ಮನೆಯಲ್ಲಿ ತುಕಾರಾಮನ ಕೀರ್ತನವು ನಡೆಯುವದೆಂಬ ವರ್ತಮಾನವನ್ನು ಮಹಾರಾಜರು ಕೇಳಿ ರಾತ್ರಿಯಲ್ಲಿ ಅಲ್ಲಿಗೇ ಹೋಗಿ ತುಕಾರಾಮನ ಕೀರ್ತನವು ಮುಗಿದ ಬಳಿಕ ಅವನಿಗೆ ಏಕಾಂತ ಭೆಟ್ಟಿಯಾಗಿ “ ನಿಮ್ಮ ಚರಣಸಾನ್ನಿಧ್ಯವು ದೊರಕಬೇಕು ” ಎಂತ ಪ್ರಾರ್ಥನೆ ಮಾಡಿದರು. ಆಗ ಆಸತ್ಪುರುಷನು—“ ಸಮರ್ಥನೂ ನಾನೂ ಬೇರೇ ಅಲ್ಲ. ಒಂದು ಸಾರೆ ಭಕ್ತಿ ಇಟ್ಟ ಸ್ಥಳದಲ್ಲಿ ನಿರಂತರ ಇಡಬೇಕು. ಮನಸ್ಸು ಹೋಯ್ದಾಡುವಂತೆ ಮಾಡಬಾರದು. ನನ್ನಲ್ಲಿ ವಿಶೇಷಜ್ಞಾನ ಉಂಟೆಂದು ಯಾರಾದರೂ ನಿಮಗೆ ಹೇಳಿದ್ದರೆ ಅದು ನಿಜವಲ್ಲ ” ಎಂಬದಾಗಿ ಸಮಾಧಾನ ಹೇಳಿ ಮಹಾರಾಜರನ್ನು ಕಳಿಸಿದನು. ತುಕಾರಾಮನ ಈ ನಿಸ್ಪೃಹ ಸ್ವಭಾವವನ್ನು ನೋಡಿ ಆ ಮಹಾತ್ಮನ ದರ್ಶನವನ್ನು ಮೇಲಿಂದ ಮೇಲೆ ತೆಗೆದುಕೊಳ್ಳಬೇಕೆಂದು ಶಿವಾಜಿ ಮಹಾರಾಜರ ಮನಸ್ಸಿನಲ್ಲಿ ಅಪೇಕ್ಷೆ ಹುಟ್ಟಿತು. ಒಂದುಸಾರೆ ಪುಣೆಯ ಸಮೀಪದಲ್ಲಿ ಮಹಾರಾಜರು ತಮ್ಮ ಸೈನ್ಯಸಮೇತ ತಿರುಗಾಡುತ್ತಿದ್ದರು. ಆಗ ಅಲ್ಲಿಂದ ತುಕಾರಾಮನ ಊರು ದೇಹೂ ಎಂಬದು ಸಮೀಪವಿರುತ್ತದೆಂದು ನೋಡಿ, ಆ ಮಹಾತ್ಮನ ದರ್ಶನ ತೆಗೆದುಕೊಂಡು, ಆತನನ್ನು ಕೇಳಿದರೆ ತಿಳಿಯುವದೆಂದು ಸಮರ್ಥರು ಹೇಳಿದ ಅದ್ಭುತ ಸಂಗತಿಯನ್ನು ವಿಚಾರಿಸಬೇಕೆಂಬ ಆಲೋಚನೆಯು ಮಹಾರಾಜರ ಮನಸ್ಸಿನಲ್ಲಿ ಬಂತು. ಆದ್ದರಿಂದ ಅವರು ತಮ್ಮ ಯಾವತ್ತು ಸೈನ್ಯ ಸಹಿತ ದೇಹೂ ಊರಿಗೆ ಹೋದರು. ಮಹಾರಾಜರ ಸ್ವಾರಿಯು ಆ ಊರಿಗೆ ಹೋಗಿ ಮುಟ್ಟಿದ ತರುವಾಯ ಮಹಾರಾಜರು ಪಾದಚಾರಿಯಾಗಿ ತಮ್ಮ ಒಬ್ಬಿಬ್ಬ ವಿಶ್ವಾಸಿಕಮನುಷ್ಯರನ್ನು ಸಂಗಡ ಕರೆದುಕೊಂಡು ತುಕಾರಾಮನ ಮನೆಗೆ ಬಂದರು. ಆಗ ತುಕಾರಾಮನು ತನ್ನದೊಂದು ಸಣ್ಣ ಗುಡುಸಲದಲ್ಲಿ ಕೈಯೊಳಗೆ ತಾಳ ಹಿಡಿದು ಭಜನೆ ಮಾಡುತ್ತ ಕುಳಿತಿದ್ದನು. ತುಕಾರಾಮನ ದರ್ಶನವಾದ ಕೂಡಲೆ ಮಹಾರಾಜರಿಗೆ ಆನಂದವಾಯಿತು. ಮಹಾರಾಜರು ಭಕ್ತಿಭಾವದಿಂದ ತುಕಾರಾಮನ ಚರಣಗಳ ಮೇಲೆ ಮಸ್ತಕವನ್ನಿಟ್ಟ ತರುವಾಯ, ತುಕಾರಾಮನು ಮಹಾರಾಜರಿಗೆ ಬಹಳ ಆದರದಿಂದ

ಕೂಡ್ರಿಸಿಕೊಂಡು ಅವರ ಕ್ಷೇಮಕುಶಲವೃತ್ತಾಂತವನ್ನು ವಿಚಾರಿಸಿ ಸಮರ್ಥರ ಸ್ವಾಮರ್ಥ್ಯವನ್ನು ಕುರಿತು ಬಹಳ ಸ್ತುತಿಮಾಡಿ ಅವರ ಬಗ್ಗೆ ತನ್ನ ಪೂಜ್ಯ ಬುದ್ಧಿಯನ್ನು ವ್ಯಕ್ತಪಡಿಸಿದನು. ಬಹಳೊತ್ತಿನ ತನಕ ಇಬ್ಬರೊಳಗೂ ಸಂಭಾಷಣವಾಯಿತು. ತರುವಾಯ ಶಿವಾಜಿಮಹಾರಾಜರು ತಾವು ಹೋಗಿ ಬರುತ್ತೇವೆಂದು ಅಪ್ಪಣೆಯನ್ನು ಕೇಳಿಕೊಂಡರು. ಆಗ ತುಕಾರಾಮನು—"ಈಗ ಮಧ್ಯಾಹ್ನವಾಯಿತು. ಪಾಂಡುರಂಗನ ನೈವೇದ್ಯವು ಸಿದ್ಧವಾಗಿರುತ್ತದೆ. ಪ್ರಸಾದಗ್ರಹಣಮಾಡಿ ಹೋಗಬೇಕು" ಎಂದು ಹೇಳಿದನು. ಆಗ ಮಹಾರಾಜರು—"ನನ್ನ ಸಂಗಡ ಬಹಳ ಜನರು ಇದ್ದಾರೆ. ಆದ್ದರಿಂದ ದಯಮಾಡಿ ಆಗ್ರಹಮಾಡಬಾರದು" ಎಂದು ವಿನಂತಿ ಮಾಡಿದರು. ಅದನ್ನು ಕೇಳಿ ತುಕಾರಾಮನು—"ವಿಶ್ವಂಭರನು ಸರ್ವರ ಪೋಷಣೆಮಾಡುತ್ತಾನೆ. ಅವನ ಮನೆಯಲ್ಲಿ ಏನು ಕಡಿಮೆಯಾಗಿರುತ್ತದೆ!" ಎಂದು ಹೇಳಿದನು. ಆಗ ಮಹಾರಾಜರು ಪುನಃ—"ಸ್ವಾಮೀ, ನನ್ನ ಸಂಗಡ ಅನೇಕ ಕುದುರೆಗಳು ಬಂದಿರುತ್ತವೆ. ಅವುಗಳ ಹೊಟ್ಟೆಗೆ ಮೇವು ಕಾಳುಗಳು ದೊರಕುವದು ಇಲ್ಲಿ ಕಠಿಣವಾದೀತು" ಎಂದು ಅಂಜಂಜುತ್ತ ನುಡಿದರು. ಅದಕ್ಕೆ ಆ ಮಹಾತ್ಮನು—"ಆ ಎಲ್ಲ ವ್ಯವಸ್ಥೆಯನ್ನು ವಿಶ್ವಂಭರನು ಮಾಡುವನು. ನೀವು ಚಿಂತೆಮಾಡಬೇಡಿರಿ" ಎಂದು ಹೇಳಿ ಅವರನ್ನು ಇಟ್ಟುಕೊಂಡನು. ಮಹಾರಾಜರು ತಮ್ಮ ಎಲ್ಲ ಪರಿವಾರದವರಿಗೆ ಅಲ್ಲಿಯೇ ಮುಕ್ಕಾಮು ಮಾಡಲಿಕ್ಕೆ ಅಪ್ಪಣೆಯನ್ನು ಮಾಡಿದರು. ಇತ್ತಲಾ ತುಕಾರಾಮನು ತನ್ನ ಮಗನಾದ ನಾರಾಯಣನಿಗೆ ಕರೆದು ಮನೆಯೊಳಗಿನ ಮೇವು ಕಾಳುಗಳನ್ನು ಒಯ್ದು ಸೈನ್ಯದೊಳಗಿನ ಎಲ್ಲ ಕುದುರೆಗಳಿಗೆ ಹಾಕಿ ಬಾ ಎಂದು ಅಪ್ಪಣೆಮಾಡಿದನು. ತುಕಾರಾಮನ ಮನೆಯು ತೀರಸಣ್ಣದಿತ್ತು. ಅದು ಒಂದು ಜಂತಿ ಮತ್ತು ಮೂರು ಗಳಗಳಿಂದ ಕೂಡಿ ಆದಂಥಾದ್ದಿತ್ತೆಂದು ಹೇಳಿದರೂ ಅಡ್ಡಿ ಇಲ್ಲ. ಆ ಮನೆಯಲ್ಲಿ ಒಂದು ಸಿವಡು ಮೇವು ಮತ್ತು ಒಂದು ಹಿಡಿತುಂಬ ಕಡ್ಲಿ ಇದ್ದವು! ಇದಕ್ಕೂ ಹೆಚ್ಚಿಗೆ ಏನೂ ಇದ್ದಿಲ್ಲ! ಅದನ್ನಷ್ಟೇ ನಾರಾಯಣನು ತೆಗೆದುಕೊಂಡು ಶಿವಾಜಿ ಮಹಾರಾಜರ ಲಷ್ಕರದ ಛಾವಣಿಯೊಳಗೆ ಹೋಗಿ ನಿಂತು ಎಲ್ಲ ರಾಹುತರನ್ನು ಕರೆದು—"ನಿಮ್ಮ ನಿಮ್ಮ ಕುದುರೆಗೆ ಬೇಕಾಗುವಷ್ಟು ಮೇವು ಕಾಳುಗಳನ್ನು ತೆಗೆದುಕೊಂಡು ಹೋಗಿರಿ" ಎಂದು ಹೇಳಿದನು. ಎಲ್ಲರೂ ಇಷ್ಟು ಸ್ವಲ್ಪದರೊಳಗಿಂದ ಈ ಹುಡುಗನು ಹ್ಯಾಗೆ ಪೂರೈಸುವನೆಂದು ನಕ್ಕರು! ಆದರೆ ಎಲ್ಲರೂ ಬಂದು ತಮಗೆ ಸಾಕಸಾಕಾಗುವಷ್ಟು ವೈದರು. ಅಂದರೂ ಅದು ಇನ್ನೂ ತೀರಲಿಲ್ಲ!! ಆಗ ಎಲ್ಲರೂ ತುಕಾರಾಮನಿಗೆ 'ಧನ್ಯಧನ್ಯ' ವೆಂದು ನುಡಿದರು. ಆ ಮೇಲೆ ಇಂದ್ರಾಯಣೀ ತೀರದಲ್ಲಿ ಒಂದು ಭವ್ಯವಾದ ಮಂಟಪವನ್ನು ನಿರ್ಮಿಸಿ ಉತ್ತಮವಾದ ಪಕ್ವಾನ್ನವನ್ನು ಸಿದ್ಧಮಾಡಿ ಎಲ್ಲರನ್ನು ಕರೆದುಕೊಂಡು ಹೋಗಿ ಯಥಾಸ್ಥಿತವಾಗಿ ಭೋಜನಮಾಡಿಸಿದನು. ತಿಲಮಾತ್ರವಾದರೂ ವ್ಯವಸ್ಥೆಯಲ್ಲಿ

ನ್ಯೂನತೆ ಇದ್ದಿಲ್ಲ. ಮಹಾರಾಜರು ಭೋಜನೋತ್ತರ ತಾಂಬೂಲವನ್ನು ಸೇವಿಸಿ ತುಕಾರಾಮನ ಮುಂದೆ ಕೈಜೋಡಿಸಿ ಕೇಳಿತು—“ ಸ್ವಾಮಿ, ಒಂದು ಸಾರೆ ಸಮರ್ಥರು ಇಂಥಾ ಅದ್ಭುತ ಸಾಮರ್ಥ್ಯವನ್ನು ತೋರಿಸಿದರು. ಈ ಹೊತ್ತು ಅದನ್ನೇ ಇಲ್ಲಿ ಕಂಡೆವು. ಇಂಥಾ ಅದ್ಭುತ ಸಾಮರ್ಥ್ಯವು ಯಾತರಿಂದ ಉಂಟಾಗುತ್ತದೆಂಬುವದನ್ನು ನಿಮ್ಮ ಬಾಯಿಂದಲೇ ಕೇಳುವದಕ್ಕೆ ಸಮರ್ಥರು ಅಪ್ಪಣೆಯನ್ನು ಮಾಡಿದ್ದಾರೆ. ದಯಮಾಡಿ ಅದನ್ನು ತಿಳಿಸಬೇಕು ” ಎಂದು ಪ್ರಾರ್ಥನೆ ಮಾಡಿದರು. ಆಗ ತುಕಾರಾಮನು ನಕ್ಕು—“ ರಾಜನೇ! ಅಲ್ಪಜ್ಞ ಮನುಷ್ಯರು ಸಂಶಯ ತೆಗೆದುಕೊಂಡಿದ್ದರೆ ಶೋಭಿಸುತ್ತಿತ್ತು. ನಿನ್ನಂಥ ವಿಚಾರವಂತನು ಸಂಶಯ ತೆಗೆದುಕೊಂಡರೆ ಏನು ಹೇಳತಕ್ಕದ್ದು? ರಾಮದಾಸಸ್ವಾಮಿಗಳು ಮಾರುತಿಯ ಅವತಾರವಿರುತ್ತಾರೆ. ಅವರ ಇಚ್ಛಾಮಾತ್ರದಿಂದ ಏನು ಆಗಲಿಕ್ಕಿಲ್ಲ! ನಾನಂತೂ ವಿಠೋಬನದಾಸನು. ನಮಗೆ ಮನೆಯಲ್ಲಿ ತಿನ್ನಲಿಕ್ಕೆ ಭಕ್ಕರಿ ಇಲ್ಲದಿದ್ದರೂ ಕಾಮಧೇನು ನಮ್ಮಲ್ಲಿರುತ್ತದೆ! ನಮ್ಮ ಮನೆಯಲ್ಲಿ ಕೂಡ್ರಲಿಕ್ಕೆ ಸ್ಥಳವಿಲ್ಲದಿದ್ದರೂ ವೈಕುಂಠ ಲೋಕವೆಲ್ಲಾ ನಮ್ಮದೇ ಆಗಿರುತ್ತದೆ! ” ಎಂದು ಹೇಳಿದರು. ಇದನ್ನು ಕೇಳಿ ಶಿವಾಜಿಮಹಾರಾಜರು ಬಹಳ ಸಂತೋಷಪಟ್ಟು “ ಇನ್ನು ಮುಂದೆ ಸಂಶಯವೇನೂ ಉಳಿಯಲಿಲ್ಲ ” ಎಂದು ಹೇಳಿ ತುಕಾರಾಮನಿಗೆ ದಂಡವತ್ಪ್ರಣಾಮಗಳನ್ನು ಮಾಡಿ ಹೊರಟುಹೋದರು.

ಅನುಗ್ರಹವನ್ನು ತಿರಿಗಿಕೊಟ್ಟದ್ದು—ಸಮರ್ಥರು ತಮ್ಮ ಹತ್ತರ ಅನುಗ್ರಹ ಪಡೆದುಕೊಂಡವರಿಗೆಲ್ಲ ಶಿಷ್ಯರನ್ನಾಗಿ ಮಾಡಿಕೊಳ್ಳುತ್ತಿದ್ದರು. ಶಿಷ್ಯರಿಗೆ ಮಠದಲ್ಲಿ ಎರಡೂಹೊತ್ತು ಯಥಾಸ್ಥಿತ ಭೋಜನಮಾಡಿ ಸೌಖ್ಯದಿಂದಿರಲಿಕ್ಕೆ ಅನುಕೂಲವಿತ್ತು. ಆದ್ದರಿಂದ ಅನೇಕ ಸೋಮಾರಿ ಜನರು ಮಠದಲ್ಲಿ ಶಿಷ್ಯರಾಗಿರುತ್ತಿದ್ದರು. ಇಂಥಾ ಸೋಮಾರಿಗಳಲ್ಲಿ ಒಬ್ಬ ಬ್ರಾಹ್ಮಣನನ್ನು ಸಮರ್ಥರು ತಮ್ಮ ಸಂಗಡ ಸಂಚಾರಕ್ಕೆ ಕರೆದೊಯ್ಯಹತ್ತಿದರು. ಅವನು ಸಮರ್ಥರ ಸಂಗಡ ಅಡವಿಯಲ್ಲಿ ಸಂಚರಿಸಿ ಥಂಡಿಯಲ್ಲಿ ಗದಗದ ನಡುಗಿ, ಉಪವಾಸದಿಂದ ಕಳವಳಗೊಂಡು ತುಕಾರಾಮನ ಕೀರ್ತಿಯನ್ನು ಕೇಳಿ ಅವನ ಹತ್ತರ ಅನುಗ್ರಹ ಪಡೆದರೆ ತನಗೆ ಸೌಖ್ಯವಾದೀತೆಂದು ಆಶಿಸಿ ಆ ಮಹಾತ್ಮನ ಕಡೆಗೆ ಹೋದನು. ಆಗ ತುಕಾರಾಮನು—“ ಒಮ್ಮೆ ಒಬ್ಬರ ಕಡೆಯಿಂದ ಅನುಗ್ರಹ ಪಡೆದವರಿಗೆ ನಾನು ಅನುಗ್ರಹ ಕೊಡುವದಿಲ್ಲ” ಎಂತ ಹೇಳಿದನು. ಆಗ ಆ ಬ್ರಾಹ್ಮಣನು ಅಂಗಲಾಚಿ ಬೇಡಿಕೊಂಡದ್ದರಿಂದ “ ನೀನು ರಾಮದಾಸರ ಕಡೆಯಿಂದ ಪಡೆದುಕೊಂಡ ಅನುಗ್ರಹವನ್ನು ಅವರಿಗೆ ತಿರಿಗಿ ಒಪ್ಪಿಸಿ ಬಾ; ಅಂದರೆ ನಾನು ಅನುಗ್ರಹವನ್ನು ಕೊಡುವೆನು” ಎಂದು ಸಮಾಧಾನ ಮಾಡಿದನು. ಅದನ್ನು ಕೇಳಿ ಆ ಬ್ರಾಹ್ಮಣನು ಸಮರ್ಥರ ಕಡೆಗೆ ಹೋಗಿ

ಅವರ ಮುಂದೆ ಎಲ್ಲ ವೃತ್ತಾಂತವನ್ನು ಹೇಳಿ "ನೀವು ಕೊಟ್ಟ ಅನುಗ್ರಹವನ್ನು ತಿರಿಗಿ ಒಪ್ಪಿಸಿಕೊಳ್ಳಬೇಕು" ಎಂದು ಬೇಡಿಕೊಂಡನು. ಆಗ ಸಮರ್ಥರು-"ನಿನ್ನ ಮನಸ್ಸಿಗೆ ಬೇಡಾದರೆ ನಾನು ಕೊಟ್ಟ ಅನುಗ್ರಹಮಂತ್ರವನ್ನು ಬಾಯೊಳಗೆ ನೀರುಮುಕ್ಕಳಿಸಿ ಉಗುಳಿ ಬಿಡು" ಎಂದು ಹೇಳಿದರು ಅದರಂತೆ ಆ ಬ್ರಾಹ್ಮಣನು ಮಾಡಲಾಗಿ ಅವನು ಉಗುಳಿದ ಸ್ಥಳದಲ್ಲಿ ತ್ರಯೋದಶಾಕ್ಷರದ ಮಂತ್ರವು ಮುದ್ರಿತವಾಯಿತು! ಹಾಗೂ ಆ ಬ್ರಾಹ್ಮಣನ ಬಾಯಿ ಹೋಯಿತು! ಆಗ ಆ ಬ್ರಾಹ್ಮಣನು ಅಳುತ್ತಾ ತುಕಾರಾಮನ ಬಳಿಗೆ ಹೋಗಲಾಗಿ ಅವನು ಮೂಕನಾದದ್ದು ಕಂಡು ತುಕಾರಾಮನು ತಾನೇ ಸ್ವತಃ ಸಮರ್ಥರ ಬಳಿಗೆ ಹೋಗಿ ಅವನಿಗೆ ತಿರಿಗಿ ಬಾಯಿ ಕೊಡಲಿಕ್ಕೆ ವಿನಂತಿ ಮಾಡಿದನು. ಅದಕ್ಕೆ ಸಮರ್ಥರು ಆ ಬ್ರಾಹ್ಮಣನಿಗೆ "ನೀನು ಉಗುಳಿದ್ದನ್ನು ನೆಕ್ಕು" ಎಂತ ಹೇಳಿದರು. ಅದರಂತೆ ಅವನು ಮಾಡಲಾಗಿ ತಿರಿಗಿ ಅವನ ಬಾಯಿ ಬಂತು!! ಈ ಅದ್ಭುತ ಸಂಗತಿಯು ಶಕೆ ೧೫೭೭ನೇ ಜ್ಯೇಷ್ಠಮಾಸದ ಕೃಷ್ಣಪಕ್ಷದಲ್ಲಿ ವರ್ತಿಸಿತು.

ಪಂಢರಪುರದಯಾತ್ರೆ:—ಒಂದು ಸಾರೆ ಪಂಢರಪುರಕ್ಕೆ ಆಷಾಢ ಏಕಾದಶಿಯ ಯಾತ್ರೆಯುಗೋಸ್ಕರ ಅನೇಕ ಜನರು ಹೊರಟಿರು. ಆ ಯಾತ್ರೆಗೆ ಹೊರಟ ಜನರೊಳಗೆ ಕೆಲವರು ಸಮರ್ಥರಿಗೆ "ನೀವೂ ಯಾತ್ರೆಗೆ ಬರ್ರಿ" ಎಂದು ಪ್ರಾರ್ಥಿಸಿದರು. ಅದಕ್ಕೆ ಸಮರ್ಥರು ಅವರೆಲ್ಲರಿಗೂ "ನಮ್ಮ ಉಪಾಸ್ಯದೈವತ್ತು ಪಂಢರಪುರದಲ್ಲಿಲ್ಲ. ಅದ್ದರಿಂದ ನಾವು ಬರುವದಿಲ್ಲ" ಎಂದು ಹೇಳಿದರು. ಆಗ ಪಾಂಡುರಂಗನ ಮನಸ್ಸಿನಲ್ಲಿ ಸಮರ್ಥರನ್ನು ಪಂಢರಪುರಕ್ಕೆ ಕರೆದುಕೊಂಡು ಬರಬೇಕೆಂಬ ಅಪೇಕ್ಷೆಯು ಹುಟ್ಟಿ ಪಾಂಡುರಂಗನು ಒಬ್ಬ ವೃದ್ಧ ಬ್ರಾಹ್ಮಣನ ವೇಷದಿಂದ ಸಮರ್ಥರ ಬಳಿಗೆ ಹೋಗಿ ಪಂಢರಪುರಕ್ಕೆ ನಡೆಯಬೇಕೆಂದು ಆಗ್ರಹದಿಂದ ಹೇಳಿದನು. ಅದಕ್ಕೆ ಸಮರ್ಥರು "ನಮ್ಮ ರಾಮದೇವರು ಅಲ್ಲಿ ಇಲ್ಲ" ಎಂದು ಉತ್ತರ ಕೊಟ್ಟರು. ಆಗ ಆ ಬ್ರಾಹ್ಮಣನು—"ನೀವು ಮಹಾ ಜ್ಞಾನಿ ಇದ್ದು ಹೀಗೆ ಯಾಕೆ ಅನ್ನುತ್ತೀರಿ? ರಾಮದೇವರಿಗೆ ಇರಲಿಕ್ಕೆ ಸ್ವತಂತ್ರ ಸ್ಥಳವೆಲ್ಲಿರುತ್ತದೆ?" ಎಂದು ನುಡಿದನು. ಈ ಉತ್ತರವನ್ನು ಕೇಳಿ ಸಮರ್ಥರು ನಿರುತ್ತರರಾಗಿ ಪಂಢರಪುರಕ್ಕೆ ಹೊರಟು ಹೋದರು. ಸಮರ್ಥರ ಅಂತಃಕರಣವೆಲ್ಲ ರಾಮಮಯವಾಗಿದ್ದದರಿಂದ ಅವರಿಗೆ ಶ್ರೀ ವಿಠೋಬನ ಮೂರ್ತಿಯೇ ರಾಮಚಂದ್ರನ ಮೂರ್ತಿಯಾಗಿಯೂ ಪಂಢರಪುರವೇ ಅಯೋಧ್ಯಾನಗರವಾಗಿಯೂ ಕಂಡಿತು. ಆಗ ಸಮರ್ಥರು ರಾಮಚಂದ್ರನೇ ವಿಠೋಬನೆಂತಲೂ ಸೀತಾಬಾಯಿಯೇ ರಖುಮಾಬಾಯಿಯೆಂತಲೂ ಅಯೋಧ್ಯಾನಗರವೇ ಪಂಢರಪುರವೆಂತಲೂ ಶರಯು ಗಂಗಾ ನದಿಗಳೇ ಚಂದ್ರಭಾಗವೆಂತಲೂ ಸಾಮ್ಯತೆಯನು‌ಳ್ಳಂಥ ಸುಂದರವಾದ ಅಭಂಗಗಳನ್ನು ಪಂಢರಪುರದಲ್ಲಿ ಹಾಡಿದರು. ಈ ವೇಳೆ

ಗೆ ಸಮರ್ಥರು ಪಂಢರಪುರದ ಯಾತ್ರೆಯನ್ನು ಮಾಡಿಕೊಂಡು ಆಷಾಢವದ್ಯ ೧೧ನೇ ದಿವಸ ಚಾಫಳಕ್ಕೆ ಮರಳಿ ಬಂದರು.

**ಗೋಮಾಂತಕದ ಮಾವಿನ ಹಣ್ಣುಗಳು:**—ಒಂದ ಸೊಂದು ಸಾರೆ ಯಾರೋ ಒಬ್ಬರು ಶಿವಾಜಿ ಮಹಾರಾಜರಿಗೆ ಗೋಮಾಂತಕ ಪ್ರದೇಶದಿಂದ ಅತ್ಯುತ್ಕೃಷ್ಟವಾದ ಮಾವಿನ ಹಣ್ಣುಗಳನ್ನು ಕಳಿಸಿದ್ದರು. ಅವುಗಳನ್ನು ಅವರ ರಾಣಿಯರು ಕೊಯ್ದು ಸುಂದರವಾದ ಹೋಳಿಕೆಗಳನ್ನು ಮಾಡಿ ರಾತ್ರಿಯ ಹೊತ್ತಿನೊಳಗೆ ಮಹಾರಾಜರು ಕೂತ ಸ್ಥಳದಲ್ಲಿ ಅವರ ಮುಂದೆ ತಂದಿಟ್ಟರು. ಸಮರ್ಥರ ಮೇಲೆ ಶಿವಾಜಿ ಮಹಾರಾಜರ ನಿಸ್ಸೀಮ ಭಕ್ತಿ ಇದ್ದದರಿಂದ ಮಹಾರಾಜರು ಯಾವದೊಂದು ಉತ್ತಮ ಪದಾರ್ಥವನ್ನು ಸಮರ್ಥರಿಗೆ ಅರ್ಪಿಸಿದ ಹೊರತು ತಾವು ಪರಿಗ್ರಹಿಸುತ್ತಿದ್ದಿಲ್ಲ. ಅದರಿಂದ ಮಹಾರಾಜರು ತಮ್ಮ ಮುಂದೆ ಇಟ್ಟಿದ್ದ ಗೋಮಾಂತಕದ ಸುಂದರವಾದ ಅಮ್ರಫಲಗಳನ್ನು ಸ್ವೀಕರಿಸದೆ ಮನಸ್ಸಿನಲ್ಲಿ ಶ್ರೀ ಸಮರ್ಥರನ್ನು ಧೇನಿಸುತ್ತ ಕೂತರು. ರಾಣಿಯರು ಪತಿಯ ಮೇಲಿನ ಅನುರಾಗದಿಂದ ಮಹಾರಾಜರಿಗೆ—"ಸ್ವಾಮಿ, ಇವುಗಳನ್ನು ಸೇವಿಸಬೇಕು" ಎಂದು ಹೇಳಲಾಗಿ, ಅವರು "ನಾನು ಇವುಗಳನ್ನು ಸಮರ್ಥರಿಗೆ ಮುಂಚೆ ಅರ್ಪಿಸದೆ ಹ್ಯಾಗೆ ಸೇವಿಸಲಿ?" ಎಂದು ನುಡಿದರು. ಇಷ್ಟರಲ್ಲಿ ಸಮರ್ಥರು ಬಂದವರೇ ರಾಣಿವಾಸದ ಬಾಗಿಲವನ್ನು ಒಡೆದು "ಶಿವರಾಯಾ, ಬಾಗಿಲ ತೆರಿ" ಎಂತ ಒದರಿದರು. ಸಮರ್ಥರ ಧ್ವನಿಯನ್ನು ಕೇಳಿದವರೇ ಮಹಾರಾಜರು ಅತ್ಯಂತ ಆನಂದದಿಂದ ಎದ್ದು ಬಾಗಿಲವನ್ನು ತೆರೆದು ಸಮರ್ಥರನ್ನು ಆನಂದದಿಂದ ಒಳಗೆ ಕರೆದುಕೊಂಡು ಬಂದು ಕುಳ್ಳಿರಿಸಿದರು. ಮಹಾರಾಜರೂ ಯಾವತ್ತು ರಾಣಿಯರೂ ಅವರಿಗೆ ಸಾಷ್ಟಾಂಗ ನಮಸ್ಕರಿಸಿ ಆ ಮಾವಿನ ಹಣ್ಣುಗಳನ್ನು ಅರ್ಪಣ ಮಾಡಿದರು. ತರುವಾಯ ಅವರೆಲ್ಲರೂ ಶೇಷ ಪ್ರಸಾದವನ್ನು ಗ್ರಹಣ ಮಾಡಿ ಸ್ವಲ್ಪ ಹೊತ್ತಿನವರೆಗೆ ಅವರ ಕೂಡ ಕ್ಷೇಮಕುಶಲವರ್ತಮಾನವನ್ನು ಮಾತಾಡಿದರು. ಆ ಮೇಲೆ ಸಮರ್ಥರು ಎದ್ದು "ಚಾಫಳಕ್ಕೆ ಇನ್ನು ಹೋಗುತ್ತೇವೆ" ಎಂದು ನುಡಿದರು. ಅದನ್ನು ಕೇಳಿ ಮಹಾರಾಜರು—"ಸ್ವಾಮಿ, ಇಷ್ಟು ರಾತ್ರಿಯಲ್ಲಿ ತಾವು ಹೋಗುವದು ಹ್ಯಾಗೆ? ನಾಳೆ ಹೋಗಬಹುದು. ಬೇಕಾದರೆ ತಮ್ಮ ಸಂಗಡ ದೀವಟಿಗೆ ಮುಂತಾದ ಸಾಹಿತ್ಯಗಳನ್ನು ಕಳಿಸುತ್ತೇನೆ" ಎಂದು ಹೇಳಿದರು. ಅದಕ್ಕೆ ಸಮರ್ಥರು ಮಹಾರಾಜರ ಕೈ ಹಿಡಿದು "ಹೊರಗೆ ಬಂದು ನಾನು ಹ್ಯಾಗೆ ಹೋಗುತ್ತೇನೆಂಬುವದನ್ನು ನೋಡಿರಿ" ಎಂದು ಹೇಳಿ ಮಹಾರಾಜರನ್ನು ಹೊರಗೆ ಕೋಟೆಯ ಬಾಗಿಲದ ತನಕ ಕರೆದುಕೊಂಡು ಬಂದು "ನಾನು ಹ್ಯಾಗೆ ಬಂದೆನೋ ಹಾಗೆ ಹೋಗುತ್ತೇನೆ" ಎಂದು ನುಡಿದು ಒಂದು ಕಾಲನ್ನು ಕೋಟೆಯ ಕೆಳಗೆ ಇಟ್ಟವರೇ ವಿದ್ಯುಲ್ಲತೆಯಂತೆ ತೇಜಃಪುಂಜರಾಗಿ ಅಂ

ತರಿಕ್ಷಮಾರ್ಗದಿಂದ ಹೊರಟು ಹೋದರು. ಈ ಚಮತ್ಕಾರವನ್ನು ಮಹಾರಾಜರು ನೋಡಿ ಆಶ್ಚರ್ಯಪಟ್ಟು ತಮ್ಮ ರಾಣೀವಾಸಕ್ಕೆ ಮರಳಿ ಬಂದರು.

ಕುಬಡೀತೀರ್ಥ:—ಒಂದು ದಿವಸ ಸಮರ್ಥರು ರಾಮಘಳೀಹತ್ತರ ಗುಡ್ಡದಲ್ಲಿ ಕುಳಿತುಕೊಂಡಾಗ್ಗೆ ಮಧ್ಯಾಹ್ನದ ೨ ಘಂಟೆಯ ಸುಮಾರಕ್ಕೆ ಶಿವಾಜಿ ಮಹಾರಾಜರು ಸಮರ್ಥರ ದರ್ಶನಕ್ಕೆ ಬಂದರು. ಆಗ ಮಹಾರಾಜರು ನಿತ್ಯಸಾಂಪ್ರದಾಯುಕ್ತನುಸರಿಸಿ ಸಮರ್ಥರಿಗೆ ಪ್ರಣಿಪಾತಗಳನ್ನು ಮಾಡಿ ನಿಂತುಕೊಂಡರು. ಅವರ ಕಡೆಗೆ ಸಮರ್ಥರು ನೋಡಿ—"ಶಿವರಾಯಾ, ನಿಮ್ಮ ಮುಖಶ್ರೀಯು ಈಪೊತ್ತು ಮ್ಲಾನವಾದಂತೆ ಕಾಣುತ್ತದೆ. ಇದರ ಕಾರಣವೇನು?" ಎಂದು ವಿಚಾರಿಸಿದರು. ಅದಕ್ಕೆ ಮಹಾರಾಜರು—"ಸಮರ್ಥರ ಕೃಪಾಛತ್ರದ ಕೆಳಗೆ ನನಗೇನೂ ಕೊರತೆ ಇಲ್ಲ. ಬಿಸಿಲು ದಿವಸಗಳಿರುವದರಿಂದ ನನಗೆ ನೀರಡಿಕೆಯಾಗಿರುತ್ತದೆ. ಆದ್ದರಿಂದ ನನ್ನ ಮೋರೆಯು ಕಂದಿದಂತೆ ಕಾಣುತ್ತಿರಬಹುದು" ಎಂದು ಉತ್ತರ ಕೊಟ್ಟರು. ಅದನ್ನು ಕೇಳಿ ಸಮರ್ಥರು—"ಇಷ್ಟೇ ಅಲ್ಲವೇ? ಕ್ರಿಮಿಕೀಟಕಾದಿಗಳಿಗೆ ಅನ್ನವನ್ನು ಕೊಟ್ಟು ಸಲಹುವ ಭಗವಂತನು ನಿಮಗೆ ನೀರನ್ನು ಕೊಡಲಾರನೋ?" ಎಂದು ನುಡಿದು ತಮ್ಮ ಕೈಯೊಳಗಿನ ಗಿಡ್ಡ ಬಡಿಗೆಯಿಂದ ತಾವು ಕೂತ ಸ್ಥಳದ ಮಗ್ಗಲಿಗೆ ಇದ್ದಂಥ ಒಂದು ಸಣ್ಣ ಶಿಲೆಯನ್ನು ನೂಕಿಸಿದರು. ಆ ಕೂಡಲೆ ಅದರ ಕೆಳಗಿಂದ ಅಮೃತದಂಥ ನೀರಿನ ಝರಿಯು ಅಲ್ಲಿ ಹರಿಯ ಹತ್ತಿತು. ಆಗ ಮಹಾರಾಜರು ತಮ್ಮ ಸಂಗಡ ಬಂದಿದ್ದ ಸೇವಕನ ಕಡೆಯಿಂದ ಇಸದುಕೊಂಡ ಸಕ್ಕರಿಯನ್ನು ಸೇವಿಸಿ ಈ ಅಮೃತ ತುಲ್ಯವಾದ ಉದಕವನ್ನು ಪಾನ ಮಾಡಿದರು ಆ ಝರಿಯು ಈಗಲೂ ಇರುತ್ತದೆ. ಅದಕ್ಕೆ "ಕುಬಡೀತೀರ್ಥ"ವೆಂಬ ಹೆಸರು ಒಂದಿರುತ್ತದೆ. ಯೋಗಿಗಳು ಕೈಯಲ್ಲಿ ಹಿಡಿಯುವ ಗಿಡ್ಡ ಬಡಿಗೆಗೆ ಮಹಾರಾಷ್ಟ್ರ ಭಾಷೆಯಲ್ಲಿ "ಕುಬಡಿ" ಎಂದೆನ್ನುತ್ತಾರೆ.

ಸಜ್ಜನಗಡ:—ಒಂದು ಸಾರೆ ಸಮರ್ಥರು ಒಂದು ಗುಡ್ಡದಲ್ಲಿ ಇದ್ದಾಗ್ಗೆ ಶಿವಾಜಿ ಮಹಾರಾಜರು ಅವರ ದರ್ಶನಕ್ಕೆ ಬಂದರು. ಆಗ ಅಲ್ಲಿ ನಡೆದ ಭಾಷಣದೊಳಗೆ ಮಹಾರಾಜರು ನಿತ್ಯದಲ್ಲಿ ತಮಗೆ ಸಮರ್ಥರ ಸಾನ್ನಿಧ್ಯವಿರಬೇಕೆಂದು ಸಮರ್ಥರಿಗೆ ವಿನಂತಿ ಮಾಡಿಕೊಂಡರು. ಮಹಾರಾಜರ ಅತ್ಯಂತ ಭಕ್ತಿಪೂರ್ವಕವಾದ ವಿನಂತಿಯನ್ನು ಸಮರ್ಥರು ಅಲ್ಲಗಳೆಯದೆ "ಯಾಕಾಗಲೊಲ್ಲದು" ಎಂದು ಒಡಂಬಟ್ಟರು. ಬಳಿಕ ಮಹಾರಾಜರು ಸಮರ್ಥರನ್ನು ಪರಳಿಯ ಕಿಲ್ಲೆಯಲ್ಲಿರಲಿಕ್ಕೆ ಕರೆದುಕೊಂಡು ಬಂದು, ಅಲ್ಲಿ ಮಾರುತಿ ದೇವರನ್ನು ಸ್ಥಾಪನ ಮಾಡಿ, ಯಾವತ್ತು ಕಿಲ್ಲೆಯನ್ನು ಸಮರ್ಥರ ಸ್ವಾಧೀನಕ್ಕೆ ಒಪ್ಪಿಸಿದರು. ಹಾಗೂ ನಿತ್ಯದಲ್ಲಿ ಸ್ವಾಮಿಗಳ ಮತ್ತು ಅವರ ಶಿಷ್ಯರ ಭೋಜನ ಖರ್ಚಿಗಾಗಿ ಒಂದು ಗ್ರಾಮದ ಉತ್ಪನ

ವನ್ನು ಕೊಟ್ಟು ಕೊಂಡೋಪಂತ ವಾಕನೀಸನೆಂಬವನನ್ನು ಉತ್ಪನ್ನದ ಎತ್ತುವಳಿ ಮಾಡುವ ಕೆಲಸಕ್ಕೆ ಸೇಮಿಸಿದರು. ಆ ಕಿಲ್ಲೆಯ ಹೆಸರು "ಸಜ್ಜನಗಡ" ವೆಂಬದಾಗಿ ಇಡಲ್ಪಟ್ಟಿತು. ಸಮರ್ಥರ ದರ್ಶನಕ್ಕಾಗಿ ಅನೇಕ ಜನ ಸತ್ಪುರುಷರು ಮೇಲಿಂದ ಮೇಲೆ ಅಲ್ಲಿ ಕೂಡಹತ್ತಿದ ಕಾರಣ ಅದಕ್ಕೆ ಈ ಹೆಸರು ಬಂತು.

ಕಲ್ಲಿನಲ್ಲಿದ್ದ ಕಪ್ಪೆಗಳು :—ಕರವೀರಪ್ರಾಂತದೊಳಗೆ ಹುಕ್ಕೇರಿ ಎಂಬಲ್ಲಿ ಶಿವಾಜಿ ಮಹಾರಾಜರು ಸಾಮನಗಡ ಎಂಬ ಕಿಲ್ಲೆಯನ್ನು ಕಟ್ಟಿಸುವದಕ್ಕಾಗಿ ಆರಂಭಿಸಿದ್ದರು. ಒಂದು ದಿವಸ ಈ ಕೆಲಸವು ನಡಿದಿರುವಾಗ್ಗೆ ಮಹಾರಾಜರು ಸ್ವತಃ ಬಂದು ನಿಂತು ಅದನ್ನು ನೋಡುತ್ತಿದ್ದರು. ಅಲ್ಲಿ ಸಾವಿರಾರು ಜನರು ಕೆಲಸವನ್ನು ಮಾಡುವಲ್ಲಿ ತೊಡಗಿದ್ದರು. ಅವರೆಲ್ಲರನ್ನು ನೋಡಿ "ಇಷ್ಟೆಲ್ಲ ಜನರ ಪಾಲನ ಪೋಷಣಮಾಡುವ ಸಾಮರ್ಥ್ಯವು ನನ್ನಲ್ಲಿ ಉಂಟು. ಅಂದ ಬಳಿಕ ನಾನೆಷ್ಟು ಧನ್ಯನು!" ಎಂಬ ಅಭಿಮಾನದ ಕಲ್ಪನೆಯು ಮಹಾರಾಜರ ಮನಸ್ಸಿನಲ್ಲಿ ಉತ್ಪನ್ನವಾಯಿತು. ಅಷ್ಟರಲ್ಲಿ ಅಕಸ್ಮಾತ್ತಾಗಿ ಸಮರ್ಥರು ಅಲ್ಲಿಗೆ ಬಂದರು. ಆಗ ಮಹಾರಾಜರು ಅವರಿಗೆ ದಂಡವತ್ ಪ್ರಣಾಮಗಳನ್ನು ಮಾಡಿ "ತಾವು ಇಲ್ಲಿ ಅಕಸ್ಮಾತ್ ಯಾಕೆ ಬರುವಂಥವರಾದಿರಿ?" ಎಂದು ವಿಚಾರಿಸಿದರು. ಅದಕ್ಕೆ ಸಮರ್ಥರು:—"ನೀನು ಶ್ರೀಮಂತನಿದ್ದು ಸಾವಿರಾರು ಜನರನ್ನು ಪೋಷಣೆ ಮಾಡುತ್ತಿರುವಿ. ಆದ್ದರಿಂದ ಈ ನಿನ್ನ ಕೆಲಸವನ್ನು ನೋಡಲಿಕ್ಕೆ ಬಂದೆನು" ಎಂದು ಉತ್ತರಕೊಟ್ಟರು. ಆಗ ಮಹಾರಾಜರು—"ಸ್ವಾಮಿಾ, ಇದೆಲ್ಲ ತಮ್ಮ ಆಶೀರ್ವಾದದ ಫಲವು" ಎಂದು ನುಡಿದರು. ಹೀಗೆ ಮಾತಮಾತಾಡುತ್ತ ಉಭಯತರು ಕಿಲ್ಲೆಕಟ್ಟುವದನ್ನೂ ಕಿಲ್ಲೆಯ ಮಾರ್ಗವು ತಯಾರಾಗುವದನ್ನೂ ನೋಡುತ್ತಲಿದ್ದರು. ಇಷ್ಟರಲ್ಲಿ ಮಾರ್ಗದ ಮಧ್ಯಭಾಗದೊಳಗೆ ಒಂದು ದೊಡ್ಡ ಕಲ್ಲುಬಿದ್ದದ್ದನ್ನು ಸಮರ್ಥರು ನೋಡಿ "ಶಿವರಾಯಾ! ಈ ಕಲ್ಲು ಯಾಕೆ ದಾರಿಯೊಳಗೆ ಬಿದ್ದಿರುತ್ತದೆ?" ಎಂದು ಪ್ರಶ್ನೆಮಾಡಿದರು. ಅದಕ್ಕೆ ಮಹಾರಾಜರು—"ಮಾರ್ಗವು ಸಿದ್ಧವಾದ ಬಳಿಕ ಈ ಕಲ್ಲನ್ನು ಒಡೆಯಿಸಬೇಕೆಂದು ಆಲೋಚಿಸಿರುವೆನು" ಎಂದು ಹೇಳಿದರು. ಆಗ ಸಮರ್ಥರು—"ಒಮ್ಮೆ ಒಂದುಕೆಲಸಕ್ಕೆ ಕೈಹಚ್ಚಿದ ಬಳಿಕ ಒತ್ತಟ್ಟಿಂದ ಆ ಕೆಲಸವನ್ನು ಮುಗಿಸಿಕೊಂಡು ಬಿಡಬೇಕು. ಸುಮ್ಮನೆ ಮುಂದ್ಯಾಕೆ ತೊಂದರೆ? ಕಲ್ಲುಕುಟುಕರನ್ನು ಕರೆಯಿಸಿ ಈಗಲೇ ಇದನ್ನು ಒಡೆಯಿಸು" ಎಂದು ಅಜ್ಞಾಪಿಸಿದರು. ಅದನ್ನು ಕೇಳಿ ಮಹಾರಾಜರು ಕಲ್ಲುಕುಟುಕರನ್ನು ಅಲ್ಲಿಗೆ ಕರೆಯಿಸಿದರು. ಆಗ ಸಮರ್ಥರು ಅವರಿಗೆ—"ಕಲ್ಲುಗಳನ್ನು ಬಹಳ ತುಣುಕುಮಾಡದೆ ಒಂದರೊಳಗೆ ಎರಡಾಗುವಂತೆ ಸೀಳಿಬಿಡಿರಿ" ಎಂದು ಹೇಳಿದರು. ಸಮರ್ಥರ ಅಜ್ಞೆಯಂತೆ ಆ ಕಲ್ಲುಕುಟಿಕರು

ಒಂದು ಕೈಯಿಂದ ಥಾನವನ್ನು ಹಿಡಿದು ಇನ್ನೊಂದು ಕೈಯಿಂದ ಅದರ ಮೇಲೆ ಸುತ್ತಿಗೆಯನ್ನು ಒಡೆಯಲು ಆ ದೊಡ್ಡ ಕಲ್ಲು ಇಬ್ಭಾಗವಾಗಿ ಒಡೆದುಹೋಯಿತು. ಆಗ ಆ ಕಲ್ಲಿನ ಒಳಮೈಯಲ್ಲಿ ಪೊಳ್ಳು ಇದ್ದು ಅದರೊಳಗಿಂದ ನೀರೂ ಜೀವಂತ ಕಪ್ಪೆಗಳೂ ಹೊರಬಿದ್ದವು! ಅದನ್ನು ನೋಡಿ ಸಮರ್ಥರು—“ಶಿವರಾಯಾ, ನಿಮ್ಮ ಯೋಗ್ಯತೆಯು ದೊಡ್ಡದು! ನಿಮ್ಮ ಕೃತ್ಯವು ಅಗಾಧವಾದ್ದು! ಇದು ಎರಡನೆಯವರ ಕೈಯಿಂದ ಹ್ಯಾಗೆ ಸಂಭವಿಸೀತು?” ಎಂದು ನುಡಿದರು. ಅದಕ್ಕೆ ಮಹಾರಾಜರು—“ಸ್ವಾಮಿ, ಇದರಲ್ಲಿ ನನ್ನದೇನುಂಟು?” ಎಂದರು. ಆಗ ಸಮರ್ಥರು ತಿರುಗಿ—“ಯಾಕೆ? ನಿಮ್ಮ ಹೊರತು ಈ ಅದ್ಭುತ ಕೃತ್ಯವು ಯಾರಿಂದ ಆದೀತು! ನಿಮ್ಮ ಹೊರತಾಗಿ ಜೀವರಾಶಿಗಳ ಪೋಷಣವು ಹ್ಯಾಗೆ ಆದೀತು?” ಎಂದು ನುಡಿದರು. ಅದಕ್ಕೆ ಮಹಾರಾಜರು—“ಸ್ವಾಮಿ, ದಾಸನಿಗೆ ಕ್ಷಮಿಸಬೇಕು” ಎಂದರು. ಆಗ ಸಮರ್ಥರು—“ಯಾಕೆ? ಎಲ್ಲರ ಪಾಲನವನ್ನು ನೀವೇ ಮಾಡುತ್ತೀರಿ. ಅಂದ ಬಳಿಕ ಕಲ್ಲಿನಲ್ಲಿರುವ ಕಪ್ಪೆಗಳಿಗೆ ನೀವೇ ಉದಕವನ್ನು ಕೊಟ್ಟು ಪಾಲನಮಾಡುವದಿಲ್ಲವೇ?” ಎಂದು ಪುನಃ ನುಡಿದರು. ಅದಕ್ಕೆ ಮಹಾರಾಜರು—“ಭಗವನ್, ನನ್ನಂಥ ಪಾಮರನಿಂದ ಇದು ಹ್ಯಾಗೆ ಆದೀತು?” ಎಂದರು. ಆಗ ಸಮರ್ಥರು—“ಅಂದ ಬಳಿಕ ನಿಮ್ಮ ಮನಸ್ಸಿನಲ್ಲಿ ಎಲ್ಲರ ಪಾಲನ ಪೋಷಣವು ನಿಮ್ಮ ಕೈಯಿಂದ ಆಗುತ್ತದೆಂಬ ಅಭಿಮಾನವು ಯಾಕೆ ಉತ್ಪನ್ನವಾಯಿತು? ನೀವು ಶ್ರೀಮಂತರೆಂತಲೇ ನಿಮ್ಮ ಕೈಯಿಂದ ಭಗವಂತನು ಪರೋಪಕಾರದ ಕೆಲಸಗಳನ್ನು ಮಾಡಿಸುತ್ತಾನೆ. ಆದ್ದರಿಂದ ನೀವು ಇನ್ನು ಮುಂದೆ ಇಂಥ ಕ್ಷುದ್ರ ವಿಚಾರಗಳನ್ನು ಮನಸ್ಸಿನಲ್ಲಿ ತರಬೇಡಿರಿ. ಇದನ್ನು ಹೇಳುವದಕ್ಕಾಗಿ ನಾನು ಇಲ್ಲಿಗೆ ಬಂದೆನು. ಅದಕ್ಕೆ ಮಹಾರಾಜರು—“ಸ್ವಾಮಿ, ನಾನು ಪೂರ್ಣ ಅಪರಾಧಿಯಾಗಿದ್ದೇನೆ. ದಯಮಾಡಿ ಕ್ಷಮಿಸಬೇಕು” ಎಂದು ಬೇಡಿಕೊಂಡರು. ಆಗ ಸಮರ್ಥರು ನಕ್ಕು—“ನಿಮಗೆ ಕ್ಷಮಿಸುವದಕ್ಕಾಗಿಯೇ ಇಲ್ಲಿ ಬಂದೆನು” ಎಂದು ನುಡಿದು ಮಹಾರಾಜರ ವಿನಂತಿಯ ಮೇರೆಗೆ ಭೋಜನವನ್ನು ತೀರಿಸಿಕೊಂಡು ಸಜ್ಜನಗಡಕ್ಕೆ ಮರಳಿ ಹೋದರು.

ಸಮರ್ಥರು ಶಿವಾಜಿಮಹಾರಾಜರಿಗೆ ತಮ್ಮ ಅಪೇಕ್ಷೆಗಳನ್ನು ತಿಳಿಸಿದ್ದು—ನಿತ್ಯಸಾಂಪ್ರದಾಯದ ಮೇರೆಗೆ ಒಂದು ದಿವಸ ಶಿವಾಜಿಮಹಾರಾಜರು ಸಮರ್ಥರ ದರ್ಶನಕ್ಕೆ ಹೋಗಿದ್ದರು. ಆಗ ಮಹಾರಾಜರು ಸಮರ್ಥರಿಗೆ—“ತಾವು ಮೇಲಿಂದಮೇಲೆ ನನ್ನ ಕಡೆಯಿಂದ ಸೇವೆಯನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡಿಕೊಂಡಾಗ್ಯೂ ತಮ್ಮ ಕಡೆಯಿಂದ ನನಗೆ ಆಜ್ಞೆಯಾಗುವದಿಲ್ಲ. ಇದರ ಕಾರಣವು, ನನ್ನ ರಾಜ್ಯವು ತಮ್ಮದಲ್ಲವೆಂತಲೋ! ನಾನು ತಮ್ಮ ಸೇವೆಯನ್ನು

ಮಾಡಲಿಕ್ಕೆ ಅನಾಧಿಕಾರಿ ಇರುತ್ತೇನೆಂತಲೋ? ದಯಮಾಡಿ ಇದನ್ನು ನನಗೆ ವಿವರಿಸಬೇಕು" ಎಂದು ವಿನಂತಿ ಮಾಡಿದರು ಅದನ್ನು ಕೇಳಿ ಸಮರ್ಥರು—"ಶಿವರಾಯಾ! ನೀವು ಮ್ಲೇಂಛರನಿವಾರಣಮಾಡಿ ದೇವ ಬ್ರಾಹ್ಮಣರ ಸೇವೆಯನ್ನೂ ಧರ್ಮಸ್ಥಾಪನೆಯನ್ನೂ ಮಾಡುತ್ತಲಿದ್ದೀರಿ. ಇದು ಸ್ವಪಾಕಾರ್ಯವಲ್ಲೇ? ಇದಕ್ಕೂ ಹೆಚ್ಚಿನ ಸೇವೆಯನ್ನು ನಿಮಗೇನು ಹೇಳುವದು!" ಎಂದು ನುಡಿದರು. ಆಗ ಮಹಾರಾಜರು—"ಆ ಆಜ್ಞೆಯಂತೂ ಸರಿಯೇ. ಶ್ರೀ ಸನ್ನಿಧಿಯಲ್ಲಿ ನನ್ನ ಕೈಯಿಂದ ವಿನಾದರೂ ಸೇವೆಯುಂಟಾಗುವಂತೆ ಆಜ್ಞೆಯನ್ನು ದಯಪಾಲಿಸಬೇಕು" ಎಂದು ಬೇಡಿಕೊಂಡರು. ಅದಕ್ಕೆ ಸಮರ್ಥರು—"ನಾವು ಬೇಡಿದ್ದು ನೀವು ಕೊಡುತ್ತೀರೆಂಬುದು ನಿಶ್ಚಯವಿದ್ದಲ್ಲಿ ಬೇಡುವೆವು" ಅಂದರು ಅದನ್ನು ಕೇಳಿ ಮಹಾರಾಜರು—"ಸ್ವಾಮಿ, ಈ ದೇಹವೇ ತಮ್ಮದದೆ. ಅಂದಮೇಲೆ ತಾವು ಬೇಡಿದ್ದನ್ನು ಕೊಡುತ್ತೇನೆಂಬ ನಿಶ್ಚಯವನ್ನು ಕುರಿತು ಸಂಶಯವ್ಯಾತಕ್ಕೆ?" ಎಂದು ಹೇಳಿದರು. ಆಗ ಸಮರ್ಥರು ಕೆಳಗೆ ಬರೆದ ಮೂರು ಅಪೇಕ್ಷೆಗಳನ್ನು ಮಹಾರಾಜರಿಗೆ ತಿಳಿಸಿದರು:—(೧) ನೀವು ಶಿವಭಕ್ತರಾಗಿರುವದರಿಂದ ಪ್ರತಿವರ್ಷ ಕೋಟಿಪಾರ್ಥಿವಲಿಂಗಗಳನ್ನು ಮಾಡಿ ಬ್ರಾಹ್ಮಣರಿಗೆ ಅನ್ನಸಂತರ್ಪಣವನ್ನು ಮಾಡಿಸಬೇಕು. (೨) ಪ್ರತಿವರ್ಷ ಶ್ರಾವಣಮಾಸದಲ್ಲಿ ಬ್ರಾಹ್ಮಣರಿಗೆ ದಕ್ಷಿಣೆಗಳನ್ನು ಕೊಟ್ಟು ಉಂಬಳಿಗಳನ್ನು ಕೊಡಬೇಕು. (೩) ನಿಮ್ಮ ರಾಜ್ಯವು ಹಿಂದೂರಾಜ್ಯವಿರುವದರಿಂದ ಅಂತ್ಯಜರ ಹೊರತಾಗಿ ಯಾರಾದರೂ "ಜೋಹಾರ" (ಮುಜರಿ) ಮಾಡಿದರೆ ಅದನ್ನು ನಿರ್ಬಂಧ ಪಡಿಸಬೇಕು.

**ಮೈಮೇಲೆ ಹೊತ್ತಿದ್ದ ಶಾಲು ಬಿತ್ತು**—ಒಂದು ದಿವಸ ಸಮರ್ಥರು ತಮ್ಮ ಶಿಷ್ಯರೊಂದಿಗೆ ಪರಳೀ ಕಿಲ್ಲೆಯ ಮೇಲೆ ಕೂತಿದ್ದರು. ಕಿಲ್ಲೆಯ ಗೋಡೆಗಳು ಬಹಳ ಎತ್ತರವಿದ್ದವು ಸಮರ್ಥರು ಹೊತ್ತುಕೊಂಡಿದ್ದ ಕ್ಯಾಂವಿಯ ಶಾಲು ಒಮ್ಮಿಂದೊಮ್ಮೆ ಗಾಳಿಯಿಂದ ಹಾರಿ ಕೆಳಗೆ ಬಿತ್ತು. ಸಮರ್ಥರ ಹತ್ತಿರ ಕಲ್ಯಾಣಸ್ವಾಮಿಯೆಂಬ ಅವರ ಮುಖ್ಯ ಶಿಷ್ಯನು ಕೂತಿದ್ದನು. ಸಮರ್ಥರು ಅವನ ಕಡೆಗೆ ನೋಡಿ ಶಾಲು ಬಿತ್ತು! ಎಂದು ಹೇಳಿದರು. ಆ ಕೂಡಲೆ ಕಲ್ಯಾಣಸ್ವಾಮಿಯು ಹಿಂದೆ ಮುಂದೆ ನೋಡದೆ ಕೆಳಗೆ ಹಾರಿಕೊಂಡನು. ಆಗ ಅಲ್ಲಿ ಕೂತವರೆಲ್ಲರು ಕಲ್ಯಾಣನು ಸತ್ತನೆಂದು ಕೂಗಿದರು. ಇದನ್ನು ಸಮರ್ಥರು ಕಂಡು ನಗುತ್ತ—"ಕಲ್ಯಾಣನೆಂಬ ಹೆಸರಿಗೆ ಮರಣವು ಹ್ಯಾಗೆ ಬಂದೀತು?" ಎಂದು ನುಡಿದರು. ಅಷ್ಟರಲ್ಲಿ ಕಲ್ಯಾಣಸ್ವಾಮಿಯು ಸಮರ್ಥರ ಶಾಲನ್ನು ತೆಗೆದುಕೊಂಡು ಮೇಲಕ್ಕೆ ಬಂದದ್ದನ್ನು ಎಲ್ಲರು ಕಂಡು ಸಮರ್ಥರ ಪಾದಕೃಪೆಯಿಂದಲೇ ಬದುಕಿದನೆಂದು ಸಮರ್ಥರ ಜಯಜಯಕಾರವನ್ನು ಮಾಡಿದರು!

**ಭೋಳಾರಾಮನನಿಸ್ಸೀಮಭಕ್ತಿ**:—ಸಮರ್ಥರ ಶಿಷ್ಯಸಮುದಾಯದೊಳಗೆ ಔರಂಗಾಬಾದ ಕಡೆಯ ಒಬ್ಬ ಶಿಷ್ಯನಿದ್ದನು. ಅವನು ಬಹಳ ಭೋಳೆಸ್ವಭಾವದವನಿದ್ದನು. ಆದ್ದರಿಂದ ಸಮರ್ಥರು ಯಾವಾಗ್ಯಾದರೂ ತಾಂಬೂಲವನ್ನು ಕುಟ್ಟಿಸಿ ಬೇಡುವದಿದ್ದರೆ ಭೋಳಾರಾಮನಿಗೇ ಬೇಡುತ್ತಿದ್ದರು. ಒಂದುಸಾರೆ ಸಮರ್ಥರಿಗೆ ಕೆಮ್ಮಿನ ಉಪದ್ರವ ಹೆಚ್ಚಾಗಿತ್ತು. ಗೊರ್ರ ಎಂದು ಕೆಮ್ಮಿದ ಕೂಡಲೆ ಕಫದ ಲೊದಡಿಯು ಹೇಳಕೂಡದದಷ್ಟು ಬೀಳುತ್ತಿತ್ತು. ಸಮರ್ಥರ ಹತ್ತರ ಇಟ್ಟಿದ್ದ ಉಗುಳುವ ಪಾತ್ರೆಯು ಲೊದಡಿಯಿಂದಲೂ ಉಗುಳಿನಿಂದಲೂ ತುಂಬಿಹೋಯಿತು. ಆದ್ದರಿಂದ ಸಮರ್ಥರು “ಆ ಪಾತ್ರೆಯೊಳಗಿನ ಉಗುಳು ಲೊದಡೆಗಳನ್ನು ಜನರಿಲ್ಲದಲ್ಲಿ ಚಲ್ಲಿ ಪಾತ್ರೆಯನ್ನು ತೊಳೆದುಕೊಂಡು ಬಾ” ಎಂದು ಅವನಿಗೆ ಹೇಳಿದರು. ಆಗ ಅವನು ಆ ಪಾತ್ರೆಯನ್ನು ತೆಗೆದುಕೊಂಡು ಹೋಗಿ ಕಿಲ್ಲೆಯ ತುಂಬೆಲ್ಲ ಅಡ್ಡಾಡಿದಾಗ್ಯೂ ಜನರು ಓಡ್ಯಾಡುವದನ್ನು ಕಂಡು ಆ ಉಗುಳನ್ನು ತನ್ನ ಬಾಯಿಯಲ್ಲಿಯೇ ನುಂಗಿ ಪಾತ್ರೆಯನ್ನು ಸ್ವಚ್ಛ ಮಾಡಿ ಸಮರ್ಥರ ಮುಂದೆ ತಂದಿಟ್ಟನು. ಸಮರ್ಥರು ಎಲ್ಲಿ ಚಲ್ಲಿದಿ ಎಂದು ವಿಚಾರಿಸಲು ಅವನು ಸಂಭವಿಸಿದ ನಿಜವೃತ್ತಾಂತವನ್ನು ಅವರಿಗೆ ತಿಳಿಸಿದನು. ಅದನ್ನು ಕೇಳಿ ಅವರು ಅವನ ನಿಸ್ಸೀಮ ಭಕ್ತಿಯ ಒಗ್ಗೆ ಬಹಳ ಕೌತುಕಪಟ್ಟರು. ಸಮರ್ಥರು ದಿನಾಲು ಭೋಜನೋತ್ತರ ತಾವು ಮೆಲ್ಲುವ ತಾಂಬೂಲವನ್ನು ಭೋಳಾರಾಮನ ಕೈಯಿಂದಲೇ ಕುಟ್ಟಿಸುವದನ್ನು ಕಂಡು ಉಳಿದ ಶಿಷ್ಯರು ಅವನಕೂಡ ಮತ್ಸರ ಮಾಡಹತ್ತಿದರು. ಆದ್ದರಿಂದ ಒಂದು ಸಾರೆ ಅವರು ಭೋಳಾರಾಮನು ತಾಂಬೂಲು ಕುಟ್ಟುವ ಒರಳನ್ನು ಎತ್ತಿ ಎರಡನೇ ಕಡೆಗೆ ತೆಗದಿಟ್ಟರು. ಅವನು ದಿನಂಪ್ರತಿಯಂತೆ ಆ ಒರಳನ್ನು ಎಷ್ಟು ಹುಡುಕಿದರೂ ಅದು ಸಿಗಲಿಲ್ಲ. ಆದ್ದರಿಂದ ಅವನು ತನ್ನ ಹಲ್ಲಿನಿಂದಲೇ ತಾಂಬೂಲವನ್ನು ಜಜ್ಜಿ ಜೀರ್ಣ ಮಾಡಿ ಅದನ್ನು ಸಮರ್ಥರಿಗೆ ಕೊಟ್ಟನು. ಆಗ ಸಮರ್ಥರು—“ಈ ಪ್ರೊತ್ತು ಕುಟ್ಟಿ ತಂದ ತಾಂಬೂಲವು ಬಹಳ ರುಚಿಕರವಾಗಿದೆ” ಎಂದು ನುಡಿದರು. ಅದಕ್ಕೆ ಭೋಳಾರಾಮನು—“ಈ ಪ್ರೊತ್ತು ತಾಂಬೂಲವನ್ನು ಕುಟ್ಟಿತಂದ ಒರಳು (ಖಲಬತ್ತು) ಹೊಸಮಾದರಿಯುಳ್ಳದ್ದಿರುತ್ತದೆ” ಎಂದು ಹೇಳಿದನು. ಆಗ ಸಮರ್ಥರು ಭೋಳಾರಾಮನಿಗೆ “ದಿನಾಲು ಈಪ್ರೊತ್ತಿನ ಖಲಬತ್ತಿನಲ್ಲಿಯೇ ಕುಟ್ಟಿಕೊಂಡು ಬರುತ್ತಬಾ” ಎಂದು ಹೇಳಿದರು. ಅವನು ಮುಂದೆ ಅದರಂತೆಯೇ ಮಾಡಹತ್ತಿದನು. ಇದನ್ನು ಉಳಿದ ಶಿಷ್ಯರು ನೋಡಿ—“ಈ ಭ್ರಷ್ಟನು ತನ್ನ ಬಾಯಿಯಲ್ಲಿ ತಿಂದ ಎಂಜಲವನ್ನು ಸ್ವಾಮಿಗಳಿಗೆ ಕೊಡುತ್ತಾನೆ. ಇದನ್ನು ಸ್ವಾಮಿಗಳಿಗೆ ಹ್ಯಾಗೆ ತಿಳಿಸಬೇಕು?” ಎಂದು ತಮ್ಮ ತಮ್ಮೊಳಗೆ ವಿಚಾರಮಾಡತೊಡಗಿದರು. ಒಬ್ಬರಿಗೂ ಸಮರ್ಥರ ಮುಂದೆ ಬಂದು ಇದನ್ನು ಹೇಳುವ ಧೈರ್ಯವಾಗಲಿಲ್ಲ. ಆದರೆ ಅವರೆಲ್ಲರು ಇದನ್ನು ಶಿವಾಜಿಮಹಾರಾಜರಿಗೆ ತಿಳಿಸಿದರು. ಆಗ ಮಹಾರಾಜರು

ಭೋಳಾರಾಮನು ತಿಂದುಕೊಟ್ಟ ಎಂಜಲದ ತಾಂಬೂಲವನ್ನು ಸಮರ್ಥರಿಗೆ ಕೊಡಗೊಡಬಾರದೆಂದು ನಿಶ್ಚಯಿಸಿ ಸಮರ್ಥರ ಬಳಿಯಲ್ಲಿಯೇ ಬಹಳೊತ್ತು ಕೂತುಕೊಂಡರು. ಸಮರ್ಥರು ತಮ್ಮ ನಿತ್ಯ ಸಾಂಪ್ರದಾಯದ ಪ್ರಕಾರ ತಾಂಬೂಲವನ್ನು ಬೇಡಲು ಶಿವಾಜಿಮಹಾರಾಜರು—"ಈ ಹೊತ್ತು ನಾನೇ ತಾಂಬೂಲವನ್ನು ಕಟ್ಟಿಕೊಡುತ್ತೇನೆ" ಎಂದು ಹೇಳಿದರು. ಆಗ ಸಮರ್ಥರು—"ಬೇಡ. ಭೋಳಾರಾಮನೇ ತಂದುಕೊಡಲಿ. ಬೇಕಾದರೆ ಅವನ ಕಡೆಯಿಂದ ಕಟ್ಟಿಸಿ ತೆಗೆದುಕೊಂಡು ಬರ್ರಿ' ಎಂದು ನುಡಿದರು. ಅದನ್ನು ಕೇಳಿ ಮಹಾರಾಜರು—'ಭೋಳಾರಾಮನು ಕಟ್ಟುವ ಬರಳುಕಲ್ಲು ಸ್ವಚ್ಛವಿಲ್ಲ" ಎಂದು ಹೇಳಿದರು. ಆಗ ಸಮರ್ಥರು—"ಭೋಳಾರಾಮನ ಕಡೆಯಿಂದಲೇ ತಾಂಬೂಲವನ್ನು ಕಟ್ಟಿಸಿ ತೆಗೆದುಕೊಂಡು ಬರ್ರಿ. ಹಾಗೂ ಬರುವಾಗ ಅವನು ಕಟ್ಟುವ ಬರಳುಕಲ್ಲು ಸಹಾ ತೆಗೆದುಕೊಂಡು ಬರ್ರಿ" ಎಂತ ಆಜ್ಞಾಪಿಸಿದರು. ಅದರಂತೆ ಶಿವಾಜಿ ಮಹಾರಾಜರು ಭೋಳಾರಾಮನ ಕಡೆಗೆ ಹೋಗಿ ಕೇಳಲು, ಅವನು ತಾಂಬೂಲವನ್ನು ಬಾಯಿಯಲ್ಲಿ ತಿಂದು ಜೀರ್ಣಮಾಡಿ, ಅದು ಇನ್ನೂ ತನ್ನ ಬಾಯಿಯಲ್ಲಿರುವಾಗಲೇ ಒಂದು ಕೈಯಿಂದ ತನ್ನ ಕುತ್ತಿಗೆಯನ್ನು ಚೂರಿಯಿಂದ ಕೊಯ್ದು ಇನ್ನೊಂದು ಕೈಯಿಂದ ತನ್ನ ಜಂಡಿಕೆಯನ್ನು ಹಿಡಿದು ತನ್ನ ಮಸ್ತಕವನ್ನೇ ಅವರ ಕೈಯಲ್ಲಿ ಕೊಟ್ಟುಬಿಟ್ಟನು! ಮಹಾರಾಜರು ಇದನ್ನು ನೋಡಿ ಅಂಜಂಜುತ್ತ ಭೋಳಾರಾಮನ ಕುತ್ತಿಗೆಯನ್ನು ಸಮರ್ಥರ ಮುಂದೆ ಒಯ್ಯಲು ಭೋಳಾರಾಮನು ಸಮರ್ಥರನ್ನು ಕಂಡವನೇ ತನ್ನ ಬಾಯಿ ತೆರೆದನು. ಆಗ ಅವನ ಬಾಯೊಳಗಿಂದ ಜೀರ್ಣವಾದ ತಾಂಬೂಲವು ಹೊರಬಿತ್ತು. ಅದನ್ನು ಸಮರ್ಥರು ಪರಮ ಆದರದಿಂದ ಭಕ್ಷಣ ಮಾಡಿ—"ಯಾಕೆ ಶಿವರಾಯಾ! ಇಂಥಾ ಬರಳೊಳಗೆ ಕಟ್ಟಿದ ತಾಂಬೂಲವನ್ನು ತಿನ್ನಬೇಕೋ ತಿನ್ನಬಾರದೋ ನೀನೇ ಹೇಳು" ಎಂದು ವಿಚಾರಿಸಿದರು. ಆಗ ಮಹಾರಾಜರು ಅಂಜಿ ನಡಗುತ್ತ—"ನಾನು ಸರ್ವಸ್ವ ಅಪರಾಧಿಯಾಗಿರುತ್ತೇನೆ. ಇಂಥ ಭಕ್ತಿಯು ಇನ್ನೆಲ್ಲಿಂದ ಬರಬೇಕು!" ಎಂತ ಹೇಳಿದರು. ಅದನ್ನು ಕೇಳಿ ಸಮರ್ಥರು ಶಿವಾಜಿ ಮಹಾರಾಜರಿಗೆ—"ನೀವು ಅಂಜುವ ಕಾರಣವಿಲ್ಲ. ಈ ಬುಲಬತ್ತು ತಿರಿಗಿ ತೆಗೆದುಕೊಂಡು ಹೋಗಿ ಅದರ ಮುಂಚಿನ ಸ್ಥಳದಲ್ಲಿ ಇಟ್ಟು ಬರ್ರಿ" ಎಂದು ಆಜ್ಞೆಯಿತ್ತರು. ಅದರಂತೆ ಮಹಾರಾಜರು ಆ ಮಸ್ತಕವನ್ನೊಯ್ದು ಭೋಳಾರಾಮನ ರಕ್ತ ತುಂಬಿದ ಧಡದ ಮೇಲಿಡಲಾಗಿ ಅದು ಮುಂಚಿನಂತೆ ಅಂಟಿಕೊಂಡು ಭೋಳಾರಾಮನು ನಿತ್ಯದಂತೆ ತನ್ನ ಕೆಲಸವನ್ನು ಮಾಡಹತ್ತಿದನು.

ರಂಗನಾಥ ಸ್ವಾಮಿಗಳು ಮಾಡಿದ ಚಮತ್ಕಾರ:—ಒಂದು ಸಾರೆ ಶಿವಾಜಿ ಮಹಾರಾಜರು ರಾಯಗಡದಿಂದ ಸಾತಾರೆಗೆ ಬಂದರು. ಆಗ ಸಮರ್ಥರು ಜರಂಡಿ ಎಂಬಲ್ಲಿ ಇದ್ದರು. ಮಹಾರಾಜರು ಅಲ್ಲಿಂದ ಸಮರ್ಥರನ್ನು ಕರಿಸಿಕೊಂಡರು. ಆ

ಭಯುತರು ಸಾತಾರೆಗೆ ಬಂದದ್ದನ್ನು ಕೇಳಿ ರಂಗನಾಥ ಸ್ವಾಮಿಗಳು ಸಾತಾರೆಗೆ ಬಂದರು. ರಂಗನಾಥ ಸ್ವಾಮಿಗಳ ಉಡಿಗೆ ತೊಡಿಗೆಗಳು ಸರದಾರರಂತೆ ಇದ್ದವು. ಅವರು ದೊಡ್ಡ ಕುದುರೆಯನ್ನು ಹತ್ತಿ ಅಡ್ಡಾಡುವರು. ತಮ್ಮ ಟೊಂಕದೊಳಗೆ ಕತ್ತಿಗಳನ್ನು ಕಟ್ಟಿಕೊಳ್ಳುವರು. ಈ ಪ್ರಕಾರದ ತಮ್ಮ ಪದ್ಧತಿಯಂತೆ ರಂಗನಾಥ ಸ್ವಾಮಿಗಳು ಕೌಪಿನ ಧರಿಸಿದ ನೂರಾರು ಶಿಷ್ಯರನ್ನು ಕರಕೊಂಡು ಊರಲ್ಲಿ ಬಂದು ಧರ್ಮಶಾಲಿಯಲ್ಲಿ ಇಳಿದುಕೊಳ್ಳುವದಕ್ಕಾಗಿ ಅತ್ತ ಕಡೆಗೆ ಹೋಗುತ್ತಿದ್ದರು. ಅವರನ್ನು ಶಿವಾಜಿ ಮಹಾರಾಜರು ನೋಡಿ ಮನಸ್ಸಿನಲ್ಲಿ "ಇವರು ಸರದಾರರೆನ್ನಬೇಕೇ? ಇವರ ಸಂಗಡ ಕೌಪಿನ ಧರಿಸಿದ ಶಿಷ್ಯ ಸಮುದಾಯವುಂಟು! ಇವರು ಸಾಧುಗಳೆನ್ನಬೇಕೇ! ಕುದುರೆಯ ಮೇಲೆ ಕೂತುಕೊಂಡಿದ್ದು ಟೊಂಕದಲ್ಲಿಯೂ ಬಗಲಲ್ಲಿಯೂ ಶಸ್ತ್ರಗಳನ್ನು ಧರಿಸಿರುವರು" ಎಂದು ವಿಚಾರ ಮಾಡುತ್ತ ತಮ್ಮ ದ್ವಾರಪಾಲಕನ ಕಡೆಯಿಂದ ಹೋಗುವವರ್ಯಾರೆಂದು ಶೋಧ ಮಾಡಿಸಿದರು. ಆಗ ಅವರು ನಿಗಡಿಯ ರಂಗನಾಥಸ್ವಾಮಿಗಳೆಂದು ಮಹಾರಾಜರಿಗೆ ಶೋಧವಾಯಿತು. ಅದು ತಿಳಿದ ಕೂಡಲೆ ಮಹಾರಾಜರು "ಇವರೆಂಥಾ ಸಾಧುಗಳು? ಸಾಧುಗಳೆನಿಸಿಕೊಳ್ಳುವವರ ಉಡಿಗೆ ತೊಡಿಗೆಗಳೂ ಇತರತಕ್ಕ ಪದ್ಧತಿಯೂ ಹೀಗೆ ಇರಬೇಕೋ!" ಎಂದು ಮನಸ್ಸಿನಲ್ಲಿ ಸ್ವಲ್ಪ ಸಕ್ತ—"ಹ್ಯಾಗೂ ಆಗಲಿ. ಸಮರ್ಥರು ರಂಗನಾಥ ಸ್ವಾಮಿಗಳಿಗೆ ತಮ್ಮ ಚಿರಂಜೀವರೆಂದು ಕರೆಯುತ್ತಾರೆ. ಹಾಗೂ ಅವರಿಗೆ ಮೇಲಿಂದ ಮೇಲೆ ವಸ್ತ್ರಾಲಂಕಾರಗಳನ್ನು ಕಳಿಸುತ್ತಾರೆ. ಪರಸ್ಪರರಲ್ಲಿ ಬಹಳ ಪ್ರೇಮವಿರುತ್ತದೆ. ಆದ್ದರಿಂದ ಅವರ ಸತ್ಕಾರವನ್ನು ಮಾಡುವದು ನಮಗೆ ಉಚಿತವು" ಎಂದು ಯೋಚಿಸಿ ತಮ್ಮ ಪಾರುಪತ್ಯಗಾರನನ್ನು ಅವರ ಕಡೆಗೆ ಕಳಿಸಿ ಅವರಿಗೆ ಇಳಿಯಲಿಕ್ಕೆ ಸೌಖ್ಯವಾದ ಸ್ಥಳವನ್ನು ತೋರಿಸಿ ಅಲ್ಲಿ ಯಾವತ್ತು ವ್ಯವಸ್ಥೆಯನ್ನು ಚನ್ನಾಗಿಟ್ಟರು. ಮುಂದೆ ತುಸು ಹೊತ್ತಿನ ತರುವಾಯ ಮಹಾರಾಜರು ತಮ್ಮೊಬ್ಬ ಕಾರಕೂನನನ್ನು ರಂಗನಾಥಸ್ವಾಮಿಗಳ ಕಡೆಗೆ ಕಳಿಸಿ "ಸಮರ್ಥರು ಇಲ್ಲಿಯೇ ಬಂದಿದ್ದಾರೆ. ಆದ್ದರಿಂದ ತಮ್ಮದೂ ಅವರದೂ ಪಂಙ್ಕ್ತಿಯ ಲಾಭತ್ರ ಅರಮನೆಯಲ್ಲಿ ಆಗಬೇಕು" ಎಂದು ವಿನಂತಿಯನ್ನು ಮಾಡಿಕೊಂಡರು. ಅದಕ್ಕೆ ರಂಗನಾಥಸ್ವಾಮಿಗಳು "ಒಳ್ಳೇದು" ಎಂದು ಒಡಂಬಟ್ಟರು. ಸಮರ್ಥರು ಸಾತಾರೆಗೆ ಬಂದರೆಂದರೆ ಅಲ್ಲಿ ಇರುವಾಗೆಲ್ಲ ದಿನಾಲು ಬೆಳಿಗ್ಗೆ ಎದ್ದು ಮಾಹುಲಿಯ ಸಂಗಮಕ್ಕೆ ಹೋಗಿ ಸ್ನಾನಸಂಧ್ಯಾದಿ ಕರ್ಮಗಳನ್ನು ತೀರಿಸಿಕೊಂಡು ಪ್ರಸಾದಕ್ಕೆ ಅರಮನೆಗೆ ಬರುತ್ತಿದ್ದರು. ಆಹೊತ್ತು ಅದರಂತೆಯೇ ಸ್ನಾನಸಂಧ್ಯಾದಿಕರ್ಮಗಳನ್ನು ತೀರಿಸಿಕೊಂಡು ದಿನದಕಿಂತಲು ಬೇಗನೆ ಬಂದು ಅಡಿಗೆಯ ಮನೆಯಲ್ಲಿ ಹೋಗಿ "ಅಡಿಗೆಯು ಸಿದ್ಧವಾಗಿರುವದಷ್ಟೇ! ಬೇಗನೆ ಎಲೆಗಳನ್ನು ಬಡಿಸಿರಿ" ಎಂದು ಗಡಬಿಡಿ ಮಾಡಿದರು. ಮಹಾರಾಜರು ಇದನ್ನು ನೋಡಿದವರೇ ತಮ್ಮೊಬ್ಬ ಕಾರಕೂನನ ಕಡೆಯಿಂದ ರಂಗ

ನಾಥಸ್ವಾಮಿಗಳಿಗೆ ತ್ವರೆಯಾಗಿ ಬರಬೇಕೆಂಬ ಸೂಚನೆಯನ್ನು ಕಳಿಸಿದರು. ಸಮರ್ಥರು ಮಹಾರಾಜರ ಗಡಬಿಡಿಯನ್ನು ನೋಡಿ ಮಹಾರಾಜರಿಗೆ ಇದೇನೆಂದು ಪ್ರಶ್ನೆ ಮಾಡಿದರು. ಆಗ ಮಹಾರಾಜರು "ರಂಗನಾಥಸ್ವಾಮಿಗಳು ಬಂದಿರುವದರಿಂದ ಈವರೆಗೂ ಪಂಙ್ತಿಗೆ ಬರಲಿಕ್ಕೆ ಅಮಂತ್ರಣ ಕೊಟ್ಟಿರುತ್ತದೆ" ಎಂದು ಹೇಳಿದರು. ಅದಕ್ಕೆ ಸಮರ್ಥರು—"ಯಾವ ರಂಗನಾಥಸ್ವಾಮಿ?" ಎಂದು ತಿರಿಗಿ ಕೇಳಿದರು. ಆಗ ಮಹಾರಾಜರು—"ನಿಮ್ಮ ಚಿರಂಜೀವರಾದ ನಿಗಡಿಯ ರಂಗನಾಥಸ್ವಾಮಿ" ಎಂದು ಹೇಳಿದರು. ಅದನ್ನು ಕೇಳಿ ಸಮರ್ಥರು ಆಶ್ಚರ್ಯಮುದ್ರೆಯಿಂದ—"ಅವನು ಭ್ರಷ್ಟನಿರುತ್ತಾನೆ. ಅವನ ಪಂಙ್ತಿಗೆ ನಾನು ಕೂತುಕೊಳ್ಳುವದಿಲ್ಲ. ಆದ್ದರಿಂದ ಅವನು ತಾನಿಳಿದಲ್ಲಿಯೇ ಅಡಿಗೆ ಮಾಡಿ ಊಟ ಮಾಡಲೆಂದು ನಿನ್ನೊಬ್ಬ ಕಾರಕೂನನ ಕಡೆಯಿಂದ ಹೇಳಿಕಳಿಸು" ಎಂದು ನುಡಿದರು. ಮಹಾರಾಜರು ತಾವೇ ತಮ್ಮ ಮನಸ್ಸಿನಲ್ಲಿ ನಾಚಿಕೊಂಡು ಒಂದು ತುಟಿಯನ್ನು ಎರಡು ಮಾಡದೆ ಸುಮ್ಮನೆ ನಿಂತರು. ಸಮರ್ಥರು ಅವರಿಗೆ ಮೂರು ನಾಲ್ಕಾವರ್ತಿ "ಕಾರಕೂನನನ್ನು ರಂಗನಾಥನ ಕಡೆಗೆ ಕಳಿಸಿಕೊಟ್ಟಿರೋ?" ಎಂದು ವಿಚಾರಿಸಿದರು. ಮಹಾರಾಜರು ಉತ್ತರವನ್ನೇ ಕೊಡಲಿಲ್ಲ. ಆಗ ಸಮರ್ಥರು ತಾವೇ ಒಬ್ಬ ಕಾರಕೂನನನ್ನು ಕೂಗಿ ರಂಗನಾಥಸ್ವಾಮಿಗಳ ಕಡೆಗೆ ನೀನು ಹೋಗಿ "ನೀನು ಭ್ರಷ್ಟನಾಗಿರುತ್ತೀ. ನಿನ್ನ ಪಂಙ್ತಿಗೆ ನಾನು ಕೂಡ್ರುವದಿಲ್ಲ. ಆದ್ದರಿಂದ ನೀನು ಅಲ್ಲಿಯೇ ಅಡಿಗೆ ಮಾಡಿಕೊಂಡು ಊಟ ಮಾಡೆಂಬು ತಿಳಿಸು" ಎಂದು ಹೇಳಿದರು. ಸಮರ್ಥರ ಬಾಯಿಂದ ಹೊರಟ ಮಾತನ್ನು ಮೀರುವವರಾರು! ಸಮರ್ಥರ ಆಜ್ಞೆಯು ಮಹಾರಾಜರಿಗೆ ಸಹಾ ಯಾವಾಗಲು ಮಾನ್ಯವು. ಅಂಡಬಳಿಕ ಆ ಬಡಕಾರಕೂನನು ಕಾ ಕೂ ಎಂದು ನುಡಿಯುವದು ಹ್ಯಾಗೆ? ಅವನು ಮಹಾರಾಜರ ಮೋರೆಯನ್ನು ನೋಡನೋಡುತ್ತ ಮೆಲ್ಲ ಮೆಲ್ಲನೆ ಹೆಜ್ಜೆಯನ್ನಿಡುತ್ತ ರಂಗನಾಥ ಸ್ವಾಮಿಗಳ ಕಡೆಗೆಹೊರಟು ಹೋದನು. ಅಲ್ಲಿ ಹೋದತರುವಾಯ ಕಾರಕೂನನಕಡೆಯಿಂದ ರಂಗನಾಥಸ್ವಾಮಿಗಳಿಗೆ ಭೋಜನಕ್ಕೆ ಬರಬೇಡಿರೆಂದು ಹೇಳುವದು ಹ್ಯಾಗೆ ಆಗಬೇಕು? ಅವನು ಹೋಗಿ ರಂಗನಾಥ ಸ್ವಾಮಿಗಳ ಮುಂದೆ ಸುಮ್ಮನೆ ಕುಳಿತನು. ಸ್ವಾಮಿಗಳು ತಾವಾಗಿ—"ಯಾಕೆ ಬಂದಿ?" ಎಂದು ವಿಚಾರಿಸಿದರು. ಕಾರಕೂನನು ಅಂಜಂಜುತ್ತ—"ತಮ್ಮ ಸನ್ನಿಧಿಗೆ ವಿನಂತಿ ಮಾಡಲಿಕ್ಕೆ ಬಂದೆನು" ಎಂತ ಹೇಳಿದನು. ಸ್ವಾಮಿಗಳು—"ಅದೇನು?" ಎಂದು ವಿಚಾರಿಸಿದರು. ಆದಕ್ಕೆ ಕಾರಕೂನನು ಉತ್ತರವನ್ನೇ ಕೊಡಲಿಲ್ಲ. ಈ ಪ್ರಕಾರ ಕಾರಕೂನನ ಮೌನದಿಂದ ಬಹಳೊತ್ತು ಆಯಿತು. ಆಗ ಸ್ವಾಮಿಗಳು ತಾವಾಗಿ—"ಸಮರ್ಥರ ನಿರೋಪವನ್ನೇನಾದರು ತಂದಿರುವಿರೋ?" ಎಂದು ಕೇಳಿದರು. ಅದಕ್ಕೆ ಕಾರಕೂನನು "ಹೌದು" ಎಂದು ಹೇಳಿ, ಆ ನಿರೋಪವನ್ನು ತಿಳಿಸದೆ ಸುಮ್ಮ

ನಾದನು. ಆಗ ರಂಗನಾಥ ಸ್ವಾಮಿಗಳು ನಕ್ಕು—"ನಾವು ಭ್ರಷ್ಟರಾಗಿರುವದರಿಂದ ನಮ್ಮ ಪಂಙ್ತಿಗೆ ಸಮರ್ಥರು ಕೂಡ್ರುವದಿಲ್ಲೆನ್ನುತ್ತಾರೆ. ಆದ್ದರಿಂದ ನಾವು ಇಲ್ಲಿಯೇ ಭೋಜನ ತೀರಿಸಿಕೊಳ್ಳಬೇಕು. ಹೌದೋ?" ಎಂದು ಕಾರಕೂನನನ್ನು ಕೇಳಿದರು. ಕಾರಕೂನನು ನಮ್ರತೆಯಿಂದ ಕೈಮುಗಿದು—"ಸ್ವಾಮಿಗಳು ಸರ್ವಜ್ಞರೇ ಇದ್ದೀರಿ" ಎಂದು ಹೇಳಿದನು ಆಗ ರಂಗನಾಥಸ್ವಾಮಿಗಳು ಕಾರಕೂನನಿಗೆ—"ಒಳ್ಳೇದು. ನಾವು ಇಲ್ಲಿಯೇ ಭೋಜನದ ವ್ಯವಸ್ಥೆಯನ್ನು ಮಾಡಿಕೊಳ್ಳುವೆವು. ನಮ್ಮ ಬಗ್ಗೆ ನೀವು ಚಿಂತೆ ಮಾಡಬೇಡಿರೆಂದು ಸಮರ್ಥರಿಗೆ ತಿಳಿಸಿರಿ" ಎಂತ ಹೇಳಿ ಅವನನ್ನು ಕಳಿಸಿದರು. ತರುವಾಯ ರಂಗನಾಥಸ್ವಾಮಿಗಳು ತಮ್ಮ ಶಿಷ್ಯನಿಗೆ—"ಎಲೋ, ಹೊರಗೆ ಹೋಗಿ ಏನಾದರೂ ತೆಗೆದುಕೊಂಡು ಬಂದು ಅಡಿಗೆಯ ವ್ಯವಸ್ಥೆಯನ್ನು ಮಾಡಿ ಊಟವನ್ನು ಮಾಡಿಸು" ಎಂದು ಹೇಳಿದರು. ಶಿಷ್ಯನು—"ಸ್ವಾಮಿ, ಅಡಿಗೆಯ ಪಾತ್ರೆಗಳು ಇಲ್ಲ" ಎಂದು ಹೇಳಿದನು. ಅದಕ್ಕೆ ಸ್ವಾಮಿಗಳು—"ಹೊಸ ಮಡಿಕೆಗಳನ್ನು ಕುಂಬಾರನ ಮನೆಯಿಂದ ತರಿಸು" ಎಂದು ಹೇಳಿದರು. ಅದರಂತೆ ಅವನು ಮಡಿಕೆಗಳನ್ನು ತರಿಸಿದನು. ತರುವಾಯ ಶಿಷ್ಯನು—"ಸ್ವಾಮಿ, ಅಡಿಗೆಯ ಸಾಹಿತ್ಯವೆಲ್ಲಿ?" ಎಂದು ಕೇಳಿದನು. ಸ್ವಾಮಿಗಳು—"ಹೋಗಿ ತೆಗೆದುಕೊಂಡು ಬಾ" ಎಂದು ಹೇಳಿದರು. ಅದಕ್ಕೆ ಶಿಷ್ಯನು—"ಸ್ವಾಮಿ, ಇಲ್ಲಿಂದ ಪೇಟೆಯು ದೂರಿರುತ್ತದೆ. ಇಲ್ಲಿಂತೂ ಯಾವ ಸಾಹಿತ್ಯವೂ ದೊರಕುವದಿಲ್ಲ" ಅಂದನು. ಇದನ್ನು ಕೇಳಿ ರಂಗನಾಥ ಸ್ವಾಮಿಗಳು—"ಎಲಾ, ನಮಗೇನು! ಹೊರಗೆ ದೃಷ್ಟಿಗೆ ಬಿದ್ದದ್ದನ್ನು ತೆಗೆದುಕೊಂಡು ಬಂದು ಕುದಿಸಿ ಅಡಿಗೆ ಮಾಡು" ಎಂತ ಆಜ್ಞಾಪಿಸಿದರು. ಆಗ ಒಬ್ಬ ಶಿಷ್ಯನು ಹೊರಗೆ ಹೋಗಿ ಹುಡುಕಲಾಗಿ ಏನೂ ಅವನ ಕಣ್ಣಿಗೆ ಬೀಳಲಿಲ್ಲ. ಒಂದು ಕೊಬ್ಬಿದ ಕೋಣವು ಮಾತ್ರ ಹೊರಗೆ ನಿಂತಿತ್ತು. ಅದನ್ನು ನೋಡಿದವನೇ ಒಳಗೆ ಸ್ವಾಮಿಗಳ ಹತ್ತರ ಹೋಗಿ ಕೋಣವು ನಿಂತ ವರ್ತಮಾನವನ್ನು ಹೇಳಿದನು. ಸ್ವಾಮಿಗಳು—"ಒಳ್ಳೇದು. ಆ ಕೋಣವನ್ನೇ ಜಗ್ಗಿಕೊಂಡು ಬಾ" ಎಂದು ಹೇಳಿ, ಅದು ಒಳಗೆ ಬಂದ ಕೂಡಲೆ ಅದರ ಶಿರಚ್ಛೇದನ ಮಾಡಲಿಕ್ಕೆ ಜನಾರ್ದನ ಗೋಸಾವಿಗೆ ಅಪ್ಪಣೆ ಮಾಡಿದರು. ಅದಕ್ಕೆ ಅವನು—"ನಾನೆಂದೂ ಈ ಕೆಲಸವನ್ನು ಮಾಡಿಲ್ಲ"ವೆಂದು ಹೇಳಿದನು. ಆಗ ಸ್ವಾಮಿಗಳು ತಾವೇ ಕತ್ತಿಯ ವರಿಯನ್ನು ತೆಗೆದು ಅದರ ಶಿರಸ್ಸನ್ನು ಕೊಯ್ದು ತಮ್ಮ ಶಿಷ್ಯರಿಗೆ "ಇದರ ಮಾಂಸವನ್ನು ನೀವು ಇನ್ನು ತೆಗೆದು ಅದನ್ನು ಕುದಿಸಿ ರಘುಪತಿಗೆ ನೈವೇದ್ಯವನ್ನು ಅರ್ಪಿಸಿರಿ" ಎಂದು ಆಜ್ಞೆಯನ್ನಿತ್ತರು. ಈ ಮೇರೆಗೆ ಅವರ ಯಾವತ್ತು ಶಿಷ್ಯರು ಈ ಉದ್ಯೋಗದಲ್ಲಿ ತೊಡಗಿದರು. ಶಿವಾಜಿ ಮಹಾರಾಜರ ಕಡೆಯಿಂದ ನಿರೋಪವನ್ನು ಹೇಳಲಿಕ್ಕೆ ಹೋಗಿದ್ದ ಕಾರಕೂನನು ಇದನ್ನೆಲ್ಲ ನೋಡಿ ಹೌಹಾರಿ ಅಲ್ಲಿಯೇ ಕೂತುಕೊಂಡು

ಬಿಟ್ಟನು. ಸ್ವಲ್ಪ ಹೊತ್ತಿನ ತರುವಾಯ ಅವನು ಮಹಾರಾಜರ ಬಳಿಗೆ ತಿರಿಗಿ ಹೋಗಿ ರಂಗನಾಥ ಸ್ವಾಮಿಗಳು ಕೋಣವನ್ನು ಕೊಂದು ಮಾಂಸವನ್ನು ಅಡಿಗೆ ಮಾಡುಸುತ್ತಿದ್ದ ವರ್ತಮಾನವನ್ನು ತಿಳಿಸಿ "ಸಮರ್ಥರು ರಂಗನಾಥ ಸ್ವಾಮಿಗೆ ಭ್ರಷ್ಟನೆಂದದ್ದು ಯಥಾರ್ಥವದೆ" ಎಂದು ಹೇಳಿದನು. ಅದು ಮಹಾರಾಜರಿಗೆ ನಿಜ ವೆಂದು ತೋರಲಿಲ್ಲ. ಅವರು ಬಹಳ ವಿಚಾರ ಮಾಡುವಲ್ಲಿ ತೊಡಗಿದರು. ಕೆಲವು ಹೊತ್ತಿನ ತರುವಾಯ ಮಹಾರಾಜರು ತಮ್ಮ ವಿಶ್ವಾಸಿಕನಾದ ಪಾರುಪತ್ಯಗಾರನ ನ್ನು "ಅಲ್ಲಿಗೆ ಹೋಗಿ ನಿಜವಾದ ಸಂಗತಿಯನ್ನು ನೋಡಿಕೊಂಡು ಬಾ" ಎಂದು ಕಳಿ ಸಿದರು. ಅವನೂ ಅದನ್ನೆಲ್ಲ ಪರೀಕ್ಷಿಸಿ ನೋಡಿ ಮಹಾರಾಜರಿಗೆ ತಿಳಿಸಿದನು, ಆಗ ಮಹಾರಾಜರು ಅದನ್ನೆಲ್ಲ ಕೇಳಿ ಸಖೇದಾಶ್ಚರ್ಯಪಟ್ಟರು.

ಇತ್ತಲಾ ಅರಮನೆಯಲ್ಲಿ ಎಲೆಗಳನ್ನು ಬಡಿಸಿರಲಾಗಿ ಸಮರ್ಥರು ಮಹಾರಾ ಜರಿಗೆ "ಉಳಿದವರೆಲ್ಲರು ಊಟಕ್ಕೆ ಕೂಡ್ರಲಿ. ನೀವು ಸಹಾ ಊಟಕ್ಕೆ ಕೂತು ಕೊಳ್ಳಿರಿ. ನಮ್ಮ ರಂಗನಾಥನು ಭ್ರಷ್ಟನಾಗಿದ್ದರೂ, ಅವನು ಉಂಡನೋ ಉಪ ವಾಸ ಬಿದ್ದನೋ ಎಂಬದನ್ನು ನಾನು ನೋಡಿಕೊಂಡು ಬರಲಿಕ್ಕೇಬೇಕು. ಅವನು ಊಟಮಾಡುವ ಹೊರತು ನಾನು ಊಟಕ್ಕೆ ಕೂಡ್ರಲಾರೆನು" ಎಂದು ಹೇಳಿದರು. ಆಗ ಮಹಾರಾಜರು "ಎಲ್ಲರನ್ನು ಊಟಕ್ಕೆ ಕೂಡ್ರಿಸಿ ನಾನೂ ನಿಮ್ಮ ಸಂಗಡ ಬರುವೆನು" ಎಂದು ನುಡಿದು ಸಮರ್ಥರ ಬೆನ್ನುಹತ್ತಿ ಹೋದರು. ಉಭಯತ ರೂ ರಂಗನಾಥ ಸ್ವಾಮಿಗಳು ಇಳಿದ ಸ್ಥಳಕ್ಕೆ ಹೋದರು. ಸ್ವಾಮಿಗಳ ಬಿಡಾರದ ಬಾಗಿಲವು ಇಕ್ಕಿತ್ತು. ಸಮರ್ಥರು ಒದರಿ ಅದನ್ನು ತೆಗಿಸಿದರು. ಉಭಯತರು ಮನೆಯೊಳಗೆ ಪ್ರವೇಶಿಸಿ ನೋಡಲು ಒಳಂಗಳದಲ್ಲಿ ಕೋಣದ ಎಲವು ತೊಗಲು ಗಳು ಬಿದ್ದಿದ್ದವು; ರಕ್ತಮಾಂಸಗಳು ಅಲ್ಲಲ್ಲಿ ಹರವಿದ್ದವು. ಜನಾರ್ದನ ಗೋಸಾವಿ ಯು ಅಡಿಗೆಯನ್ನು ಮಾಡುತ್ತ ಕುಳಿತಿದ್ದನು. ಅವನನ್ನು ನೋಡಿ ಸಮರ್ಥರು— "ನೀನೂ ಭ್ರಷ್ಟನು! ನಿನ್ನ ಗುರುವೂ ಭ್ರಷ್ಟನು! ಕೋಣವನ್ನು ಕೊಯ್ದು ಏನು ತಿನ್ನುತ್ತೀರಿ?" ಅಂದರು. ಅದನ್ನು ರಂಗನಾಥ ಸ್ವಾಮಿಯು ಕೇಳಿ—"ನಾವು ಭ್ರಷ್ಟರಾಗಿರುವದನ್ನು ಬಲ್ಲವರು ಸಹಾ ಇಲ್ಲಿಯೇ ಸಮೀಪದಲ್ಲಿರಬಹುದು" ಎಂ ದು ನುಡಿದನು. ಅದಕ್ಕೆ ಸಮರ್ಥರು—"ರಂಗನಾಥಾ, ಎಷ್ಟೋ ಜನರು ಭ್ರಷ್ಟರಾ ದದ್ದನ್ನು ನೋಡಿದ್ದೇನೆ. ಆದರೆ ಕೋಣವನ್ನು ಕೊಂದು ತಿಂದು ಭ್ರಷ್ಟರಾದವರನ್ನು ನಾನು ಇನ್ನೂ ವರೆಗೆ ನೋಡಿಲ್ಲ" ಎಂತ ಉತ್ತರಕೊಟ್ಟರು. ತರುವಾಯ ರಂಗನಾಥ ಸ್ವಾಮಿಯು—"ನಾನು ಇಂಥಾ ಭ್ರಷ್ಟನೆಂಬುವದು ಸತ್ಯ. ಆದರೆ ನಾನು ಯಾರ ಶಿಷ್ಯನು?" ಎಂದು ವಿಚಾರಿಸಿದನು. ಅದನ್ನು ಕೇಳಿ ಸಮರ್ಥರು ಶಿವಾಜಿ ಮಹಾ ರಾಜರನ್ನುದ್ದೇಶಿಸಿ—"ಶಿವರಾಯಾ! ಇದೆಂಥಾ ಚಮತ್ಕಾರ! ಪ್ರತ್ಯಕ್ಷ ಕೋಣ

ವನ್ನು ಕಡಿದು ತಿಂದು ರಂಗನಾಥನು ಗುಡ್ಡ ಗುಡ್ಡದಂಥ ವೇದಾಂತದ ಮಾತುಗಳನ್ನು ಹೇಳುತ್ತಾನೆ" ಎಂತ ಹೇಳಿದರು ಆಗ ಮಹಾರಾಜರು ಕೈಮುಗಿದುಕೊಂಡು ನಿಂತು—"ಈ ಲೀಲೆಯ ಅರ್ಥವೇ ನನಗೆ ತಿಳಿಯಲೊಲ್ಲದು!" ಎಂದು ಉತ್ತರ ಕೊಟ್ಟರು. ತರುವಾಯ ಸಮರ್ಥರು ರಂಗನಾಥ ಸ್ವಾಮಿಯ ಕಡೆಗೆ ನೋಡಿ—"ನಮ್ಮನ್ನೂ ನಿನ್ನ ಪಂಙ್ತಿಗೆ ಕರೆದುಕೊಳ್ಳುವೆಯಾ!" ಎಂದು ಪ್ರಶ್ನೆ ಮಾಡಿದರು. ಆಗ ರಂಗನಾಥಸ್ವಾಮಿಯು—"ನಿಮ್ಮಂಥಾ ಅತಿಥಿಗಳು ಬಂದರೆ ನನ್ನ ಪುಣ್ಯಕ್ಕೇನು ಕೊರತೆಯುಂಟು?" ಎಂತ ಹೇಳಿದನು. ಅದನ್ನು ಕೇಳಿ ಸಮರ್ಥರು ಮಹಾರಾಜರಿಗೆ—"ನಾನಂತೂ ರಂಗನಾಥನ ಕೂಡ ಭ್ರಷ್ಟನಾಗುತ್ತೇನೆ. ನಿಮ್ಮ ಮನೋದಯವೇನದೆ?" ಎಂದು ಪ್ರಶ್ನೆಮಾಡಿದರು. ಆಗ ಮಹಾರಾಜರು—"ನನಗಂತೂ ಏನೂ ತಿಳಿಯಲೊಲ್ಲದು. ದಾಸನು ತಮ್ಮ ಆಜ್ಞೆಯಂತೆ ವರ್ತಿಸಲಿಕ್ಕೆ ಸಿದ್ಧನಿರುತ್ತಾನೆ" ಎಂದು ಉತ್ತರಕೊಟ್ಟರು. ತರುವಾಯ ಶಿವಾಜಿ ಮಹಾರಾಜರಿಗೂ ಸಮರ್ಥರಿಗೂ ಎಲೆಗಳನ್ನು ಬಡಿಸಿದರು. ಆಗ ಸಮರ್ಥರು ರಂಗನಾಥ ಸ್ವಾಮಿಗೆ—"ನಾವಂತೂ ಈ ಅಂಗಳದಲ್ಲಿ ಭೋಜನಕ್ಕೆ ಕೂಡ್ರುವೆವು. ಅಂದಮೇಲೆ ಇಲ್ಲಿ ಕೋಣವು ಯಾತಕ್ಕೆಬೇಕು! ಇದನ್ನು ಎಬ್ಬಿಸಿ ಹೊರಗೆ ಅಟ್ಟಬಿಡು" ಎಂದು ಹೇಳಿದರು. ಅದನ್ನು ಕೇಳಿ ರಂಗನಾಥ ಸ್ವಾಮಿಯು "ಅಪ್ಪಣೆ" ಎಂದು ನುಡಿದು ಸಮರ್ಥರ ಪಾದತೀರ್ಥವನ್ನು ತೆಗೆದುಕೊಂಡು ಕೋಣದ ಎಲವು ಮಾಂಸಗಳ ಮೇಲೆ ಸಿಂಪಡಿಸಿದನು. ಆ ತೀರ್ಥವನ್ನು ಸಿಂಪಡಿಸಿದ ಕೂಡಲೆ ಕೋಣವು ಜೀವಂತವಾಗಿ ಎದ್ದು ಬಾಲವನ್ನು ನಿಗರಿಸುತ್ತಲೂ ಬಾಯಿಂದ ಹೂಂಕರಿಸುತ್ತಲೂ ಹೊರಗೆ ಹೊರಟುಹೋಯಿತು. ಈ ಅದ್ಭುತ ಚಮತ್ಕಾರವನ್ನು ಶಿವಾಜಿ ಮಹಾರಾಜರು ನೋಡಿ ಬಹಳ ಆಶ್ಚರ್ಯಪಟ್ಟರು. ತರುವಾಯ ರಂಗನಾಥಸ್ವಾಮಿಯು ಸಮರ್ಥರ ಪೂಜೆಯನ್ನು ಮಾಡಿ ಅವರ ಚರಣ ತೀರ್ಥವನ್ನು ತೆಗೆದುಕೊಂಡು ಮಾಂಸವನ್ನು ಕುದಿಸಿದ ಗಡಿಗೆಯನ್ನು ತರಿಸಿ ಶ್ರೀರಘುಪತಿಗೆ ನೈವೇದ್ಯವನ್ನು ಅರ್ಪಿಸಿ ಅದರೊಳಗಿಂದಲೇ ಎಲೆಗಳ ಮೇಲೆ ಬಡಿಸಹತ್ತಿದರು. ಮೊದಲಿಗೆ ಶಿವಾಜಿಮಹಾರಾಜರಿಗೆ ಗಡಿಗೆಯೊಳಗಿಂದ ಮಾಂಸವನ್ನು ಬಡಿಸುತ್ತಾರೆಂದು ಸ್ವಲ್ಪ ಅಸಂಹ್ಯವಾಯಿತು. ಆದರೆ ಮುಂದೆ ಎಲೆಗಳ ಮೇಲೆ ಪಂಚಪಕ್ವಾನ್ನಗಳು ಬಡಿಸಿದ್ದನ್ನು ಕಂಡು ಮಹಾರಾಜರು ಬಹಳ ಆಶ್ಚರ್ಯಪಟ್ಟರು ಈ ಮೇರೆಗೆ ಎಲ್ಲರು ಭೋಜನವನ್ನು ಮುಗಿಸಿ ತಾಂಬೂಲವನ್ನು ಮೆದ್ದ ತರುವಾಯ ಶಿವಾಜಿಮಹಾರಾಜರು ಸಮರ್ಥರಿಗೆ—"ತಾವು ಈ ಪೊತ್ತು ಇಷ್ಟೊಂದು ಲೀಲೆಯನ್ನು ತೋರಿಸಿದಿರಿ. ಆದರೆ ನನ್ನ ಕಡೆಯಿಂದ ಏನು ಅಪರಾಧವುಂಟಾಯಿತೆಂದು ದಯಮಾಡಿ ತಿಳಿಸರಿ" ಎಂದು ಪ್ರಾರ್ಥನೆಯನ್ನು ಮಾಡಿದರು. ಆಗ ಸಮರ್ಥರು—"ನೀ

ವು ಬೇಗ್ಗೆ ರಂಗನಾಥನ ಉಡಿಗೆ ತೊಡಿಗೆಗಳನ್ನು ಕಂಡು ಅವನ ಸಾಧುತ್ವದ ಬಗ್ಗೆ ನಾನಾ ಪ್ರಕಾರದ ತರ್ಕಗಳನ್ನು ಮಾಡಿದ್ದರಿ. ಆದ್ದರಿಂದ ನಾನು ಅವರ ಕೈಯಿಂದ ಇಷ್ಟೆಲ್ಲ ಚಮತ್ಕಾರವನ್ನು ಮಾಡಿಸಬೇಕಾಯಿತು. ನೀವು ಇನ್ನುಮುಂದೆ ಸಾಧುಗಳ ಬಗ್ಗೆ ಯಾವ ತರದ ಸಂಶಯವನ್ನು ತೆಗೆದುಕೊಳ್ಳಬೇಡಿರಿ. ಸಾಧುಗಳು ಜಗತ್ತಿನಲ್ಲಿ ಯಾವ ವೇಷದಿಂದ ಸಂಚರಿಸುತ್ತಾರೆಂಬುವದು ಗೊತ್ತಿಲ್ಲ. ಸಾಧುಗಳ ಚಿಕಿತ್ಸೆಯನ್ನು ಎಂದೂ ಮಾಡಬಾರದು. ಸಾಧುಗಳನ್ನು ಕಂಡಕೂಡಲೆ ಅವರ ಚರಣಕ್ಕೆ ಲೀನರಾಗಬೇಕು'' ಎಂದು ಉಪದೇಶಿಸಿದರು.

ಅಗ್ನಿಪ್ರಳಯ—ಒಂದಾನೊಂದು ದಿವಸ ಸಮರ್ಥರು ಚಾಫಳ ಎಂಬ ಊರಿಂದ ಪರಳೀ ಎಂಬ ಊರಿಗೆ ಹೋಗುತ್ತಿದ್ದಾಗ್ಗೆ ಪಾಡಳೀ ಎಂಬ ಊರ ಸಮೀಪದಲ್ಲಿ ಬಂದರು. ಆಗ ಮಧ್ಯಾಹ್ನವಾಯಿತು. ಬಿಸಿಲಲ್ಲಿ ನಡೆದು ನಡೆದು ಶಿಷ್ಯರೆಲ್ಲರು ಬಿಸಲಿನ ತಾಪದಿಂದ ಬಿಸುಸುಯ್ದು ಇಲ್ಲಿಯೇ ಸ್ನಾನ ಸಂಧ್ಯಾದಿಗಳನ್ನು ತೀರಿಸಿಕೊಂಡು ಮುಂದೆ ಹೋಗಬೇಕೆಂದು ಸಮರ್ಥರಿಗೆ ವಿನಂತಿ ಮಾಡಿದರು. ಸಮರ್ಥರು ಅದಕ್ಕೆ ಒಪ್ಪಿಕೊಂಡದ್ದರಿಂದ ಎಲ್ಲರು ನದಿಯ ತೀರದಲ್ಲಿ ಇಳಕೊಂಡರು. ಕೆಲವು ಶಿಷ್ಯರು ಊರೊಳಗೆ ಭಿಕ್ಷೆಯನ್ನು ಬೇಡಿಕೊಂಡು ಬರಲಿಕ್ಕೆ ಹೋದರು. ಆಗ ಊರಲ್ಲಿ ಚಾವಡಿಯೊಳಗೆ ಸುಭೇದಾರನೂ ಗ್ರಾಮಸ್ಥರೂ ಕೂತಿದ್ದರು. ಸುಭೇದಾರನು ಆ ಶಿಷ್ಯರನ್ನು ನೋಡಿದವನೇ ಅವರಿಗೆ ಬಹಳ ಅಪಮಾನವಾಗುವಂತೆ ಜರಿದು ಮಾತಾಡಿದನು. "ನೀವು ಭಿಕ್ಷೆಬೇಡಿ ತಿನ್ನುತ್ತೀರಿ. ಹಾಗೂ ಲಂಗೋಟಿಯನ್ನು ಹಾಕಿಕೊಂಡು ಅರ್ಧಬತ್ತಲೆಯಾಗಿ ಊರಲ್ಲಿ ಓಡ್ಯಾಡುತ್ತೀರಿ. ಇದು ಯಾವ ದೇಶದ ಧರ್ಮವು?'' ಎಂತ ಅಂದು ಸುಭೇದಾರನು ಆ ಶಿಷ್ಯರ ಜೋಳಿಗೆಗಳನ್ನೂ ಖಡಾಸನಗಳನ್ನೂ ಕಸದುಕೊಳ್ಳಲಿಕ್ಕೆ ತನ್ನ ಸಿಪಾಯರಿಗೆ ಅಪ್ಪಣೆ ಮಾಡಿದನು. "ಈ ಶಿಷ್ಯರು ರಾಮದಾಸ ಸ್ವಾಮಿಗಳ ಶಿಷ್ಯರು. ಇವರಿಗೆ ಅಪಮಾನ ಮಾಡಬೇಡಿರಿ'' ಎಂದು ಹತ್ತರ ಇದ್ದ ಜನರು ಹೇಳಿದಾಗ್ಯೂ ಸುಭೇದಾರನು ಅವರ ಮಾತನ್ನು ಲಾಲಿಸದೆ ಆ ಶಿಷ್ಯರಿಗೆ ಸಿಪಾಯರ ಕೈಯಿಂದ ಚಂಡಿನ ಮೇಲೆ ಕೈಕೊಟ್ಟು ಊರಬಿಟ್ಟು ದಬ್ಬಿ ಹಾಕಿಸಿದನು. ಆ ಶಿಷ್ಯರು ಸಮರ್ಥರ ಕಡೆಗೆ ಬಂದು ಊರಲ್ಲಿ ನಡೆದ ವೃತ್ತಾಂತವನ್ನು ತಿಳಿಸಿದರು. ಆಗ ಸಮರ್ಥರು "ಜೋಳಿಗೆ ಕಸದುಕೊಂಡು ನಿಮ್ಮನ್ನು ಬಿಟ್ಟದ್ದೇ ಉಪಕಾರವಾಯಿತು. ಇನ್ನು ಮೇಲೆ ಇಂಥ ಊರಲ್ಲಿ ಒಂದು ಅರಕ್ಷಣ ಸಹ ನಿಲ್ಲುವದು ಉಚಿತವಲ್ಲ" ಎಂದು ನುಡಿದು ಎಲ್ಲರನ್ನು ಗಡಬಿಡಿಯಿಂದ ಹೊರಡಿಸಿಕೊಂಡು ನಡೆದರು. ಅವರೆಲ್ಲರು ಸ್ವಲ್ಪ ದೂರ ಹೋಗಿರುವಷ್ಟರಲ್ಲಿ ಪಾಡಳೀ ಊರಿಗೆ ಬೆಂಕೆಹತ್ತಿತು. ಅದರಿಂದ ಊರೊಳಗೆಲ್ಲ ಅಲ್ಲೋಲಕಲ್ಲೋಲವಾಯಿತು! ಊರವರೆಲ್ಲಾ "ಇದು ಸುಭೇದಾರನು ರಾಮದಾ

ಸ ಸ್ವಾಮಿಗಳ ಶಿಷ್ಯರಿಗೆ ಅವಮಾನಮಾಡಿ ಪೀಡಿಸಿದ್ದರ ಫಲವು" ಎಂದು ಅವನಿಗೆ ದೂಷಣೆಯನ್ನು ಕೊಡಹತ್ತಿದರು. ಆಗ ಆ ಸುಭೇದಾರನಿಗೂ ಕೆಡಕು ಅನ್ನಿಸಿತು. ಸ್ವಾಮಿಗಳ ಕ್ಷಮೆಯನ್ನು ಬೇಡಿಕೊಳ್ಳದೇ ಈ ಅನರ್ಥವು ತಪ್ಪುವದಿಲ್ಲೆಂದು ತಿಳಿದು ಸುಭೇದಾರ ಸಹಿತವಾಗಿ ಊರೊಳಗಿನ ಎಲ್ಲ ಜನರು ತಮ್ಮ ಹೆಂಡರು ಮಕ್ಕಳನ್ನು ಕಟ್ಟಿಕೊಂಡು ಸಮರ್ಥರ ಕಡೆಗೆ ಹೊರಟರು. ಸಮರ್ಥರು ಊರದಾಟ ಮಾವಿನ ತೋಫಿನಲ್ಲಿ ಇಳಕೊಂಡಿದ್ದಾರೆಂದು ಅವರಿಗೆ ವರ್ತಮಾನವು ಹತ್ತಿತು. ಅದರಂತೆ ಅವರೆಲ್ಲರು ಅಲ್ಲಿ ಹೋಗಿ ನೋಡಲು ಸಮರ್ಥರು ಅಲ್ಲಿದ್ದಿಲ್ಲ. ಮುಂದೆ ಹೋಗಿದ್ದಾರೆಂದು ತಿಳಿಯಬಂತು. ಆಗ ಊರ ಜನರೆಲ್ಲ ಊರ ಕಡೆಗೆ ತಿರಿಗಿ ನೋಡಲು ಒಂದು ಕಪಿಯು ಕೈಯಲ್ಲಿ ಕೊಳ್ಳಿಯನ್ನು ಹಿಡಿದು ಒಂದು ಮನೆಯಿಂದ ಇನ್ನೊಂದು ಮನೆಗೆ ಹಾರಿ ಒಂದರ ತರುವಾಯ ಇನ್ನೊಂದು ಮನೆಗೆ ಉರಿ ಹಚ್ಚುತ್ತ ಹೋಗುವಂತೆ ಕಂಡರು! ಈ ಅನರ್ಥವನ್ನು ನೋಡಿ ಊರವರೆಲ್ಲರು ಭಯಪಟ್ಟು ಸ್ವಾಮಿಗಳನ್ನು ಕಾಣದೆ ತಿರುಗಿ ಬರಬಾರದೆಂದು ನಿಶ್ಚಯಿಸಿ ಮುಂದಕ್ಕೆ ಮಾರ್ಗಕ್ರಮಣ ಮಾಡಿದರು. ಅವರಿಗೆ ರಾಮದಾಸಸ್ವಾಮಿಗಳ ಭೇಟಿಯು ಖಿಂಡಿ ಎಂಬ ಊರಲ್ಲಿ ಆಯಿತು. ಆಗ ಎಲ್ಲರೂ ಅವರ ಕಾಲಿಗೆ ಅಡ್ಡಬಿದ್ದು ತಮ್ಮ ಅಪರಾಧವನ್ನು ಕ್ಷಮಿಸಬೇಕೆಂದು ದೀನೋಕ್ತಿಯಿಂದ ಬೇಡಿಕೊಳ್ಳಲಾಗಿ ಸಮರ್ಥರು "ಚಿಂತೆಮಾಡಬೇಡರಿ. ನಿಮ್ಮ ಊರ ಕಡೆಗೆ ತಿರಿಗಿ ನೋಡಿರಿ" ಎಂದು ಹೇಳಿದರು. ಅದರಂತೆ ಅವರು ನೋಡಲಾಗಿ ಮೊದಲು ಕೈಯಲ್ಲಿ ಕೊಳ್ಳಿಯನ್ನು ಹಿಡಿದು ಮನೆಗಳಿಗೆ ಉರಿಹಚ್ಚುತ್ತಿದ್ದ ಕಪಿಯು ಹೆಗಲ ಮೇಲೆ ನೀರ ಕೊಡವನ್ನು ಹೊತ್ತು ಉರಿಯನ್ನು ನೊಂದಿಸಹತ್ತಿರುವದನ್ನು ಕಂಡರು! ಈ ಚಮತ್ಕಾರವನ್ನು ನೋಡಿ ಅವರು ಸಮರ್ಥರಿಗೆ ನೀವು ನಮ್ಮ ಊರಿಗೆ ನಿಮ್ಮೆಲ್ಲ ಶಿಷ್ಯಸಹ ವರ್ತಮಾನ ಬಂದು ಭೋಜನವನ್ನು ತೀರಿಸಿಕೊಂಡು ಹೋಗಬೇಕು" ಎಂದು ಶರಗೊಡ್ಡಿ ಬೇಡಿಕೊಂಡರು. ಸಮರ್ಥರು "ಹಾಗೇ ಆಗಲಿ" ಎಂದು ಹೇಳಿ ತಮ್ಮೆಲ್ಲ ಶಿಷ್ಯರನ್ನು ಕರೆದುಕೊಂಡು ಆ ಊರಿಗೆ ತಿರಿಗಿ ಬಂದರು. ಊರೊಳಗೆ ಒಬ್ಬರ ಮನೆಗೂ ಬೆಂಕೆಯಿಂದ ಕೇಡಾಗಿದ್ದಿಲ್ಲ! ಸಮರ್ಥರೂ ಅವರೆಲ್ಲ ಶಿಷ್ಯರೂ ಆ ಊರಲ್ಲಿ ಭೋಜನವನ್ನು ತೀರಿಸಿಕೊಂಡರು. ಆಗ ಊರವರು "ನಮ್ಮ ಬಡ ಊರಿನ ಮೇಲೆ ನಿಮ್ಮ ಕೃಪಾದೃಷ್ಟಿ ಇರಬೇಕು" ಎಂತ ಬೇಡಿಕೊಂಡರು. ಸಮರ್ಥರು ಅವರಿಗೆ "ನಿಮ್ಮ ಊರಿಗೆ ಎಂದೆಂದಿಗೂ ಅಗ್ನಿನಾರಾಯಣನ ಉಪದ್ರವವು ಆಗಲಿಕ್ಕಿಲ್ಲ" ವೆಂದು ಅಭಯವನ್ನು ಕೊಟ್ಟರು. ಈ ಸಂಗತಿಯು ಶಕೆ ೧೫೬೬ ನೇ ಫಾಲ್ಗುಣ ವದ್ಯ ೧೩ ನೇ ದಿವಸ ಸಂಭವಿಸಿತು.

**ಶಿವಾಜಿಮಹಾರಾಜರ ಭೇಟಿಯು**:—ಒಂದು ಗುರುವಾರ ದಿವಸ ಶಿವಾಜಿ ಮಹಾರಾಜರು ಸಮರ್ಥರ ದರ್ಶನಕ್ಕೆ ಬಂದಾಗ್ಗೆ ತಮ್ಮ ತೀರ್ಥ ರೂಪರಾದ ಶಾಹಜಿ ಮಹಾರಾಜರು ದರ್ಶನಕ್ಕೆ ಬರಬೇಕೆಂದು ಅಪೇಕ್ಷಿಸುತ್ತಾರೆಂಬದಾಗಿ ಅವರಿಗೆ ತಿಳಿಸಿದರು. ಅದಕ್ಕೆ ಸಮರ್ಥರು "ಒಳ್ಳೇದು" ಎಂದು ಅಪ್ಪಣೆಯನ್ನು ಕೊಟ್ಟರು. ತರುವಾಯು ಸ್ವಲ್ಪಹೊತ್ತಿನ ಮೇಲೆ ಶಾಹಜಿ ಮಹಾರಾಜರು ಜಿಜಾಬಾಯಿ, ತುಕಾಬಾಯಿ ಮುಂತಾದವರನ್ನು ಸಂಗಡ ಕರೆದುಕೊಂಡು ಸಮರ್ಥರ ದರ್ಶನಕ್ಕೆ ಬಂದರು. ಅವರೆಲ್ಲರು ಅತ್ಯಂತ ಭಕ್ತಿಭಾವದಿಂದ ಸಮರ್ಥರ ಪೂಜೆಯನ್ನು ಮಾಡಿದರು. ಸಮರ್ಥರು ಅವರೆಲ್ಲರಿಗೆ ಬಹಳ ಆದರ ಸತ್ಕಾರಮಾಡಿ ತಮ್ಮ ಹತ್ತರ ೩ ದಿವಸಗಳವರೆಗೆ ಇಟ್ಟುಕೊಂಡರು. ಆಗ ಶಾಹಜಿ ಮಹಾರಾಜರು—"ವಿಜಾಪುರದ ಬಾದಶಹರು ನನ್ನನ್ನು ಗೋಡೆಯಲ್ಲಿ ಮುಚ್ಚಿಟ್ಟಿದ್ದರು. ಅಲ್ಲಿಂದ ಶ್ರೀ ಕೃಪೆಯಿಂದ ಪಾರಾಗಿ ಬಂದೆನು" ಎಂದು ಹೇಳಿ "ಶಿವಾಜಿಯು ನಿಮ್ಮವನೇ ಇದ್ದಾನೆ. ಶ್ರೀ ಕೃಪೆಯಿಂದ ಪ್ರಾಪ್ತವಾದ ರಾಜ್ಯವಾದರೂ ನಿಮ್ಮದೇ ಇರುತ್ತದೆ. ಅವನನ್ನು ಎಲ್ಲಾ ರೀತಿಯಿಂದ ಸಂರಕ್ಷಣ ಮಾಡುವದು ನಿಮ್ಮನ್ನೇ ಕೂಡಿರುತ್ತದೆ" ಎಂತ ಸದ್ಗದಿತ ಅಂತಃಕರಣದಿಂದ ಸಮರ್ಥರಿಗೆ ಪ್ರಾರ್ಥನೆಯನ್ನು ಮಾಡಿದರು. ಅದನ್ನು ಕೇಳಿ ಸಮರ್ಥರು—"ಶಿವಾಜಿಯು ಶ್ರೀಯ ಪೂರ್ಣ ಭಕ್ತನಿದ್ದಾನೆ. ನೀವು ಕರ್ಣೋಪಕರ್ಣದಿಂದ ಶಿವಾಜಿಯ ಪರಾಕ್ರಮವನ್ನು ಕೇಳಿರುತ್ತೀರಿ. ಶಾಹಿಸ್ತೇಖಾನನ ಕಾಲಕ್ಕೆ ಅವನು ಅಮಾನುಷಕೃತ್ಯವನ್ನು ತೋರ್ಪಡಿಸಿದ್ದಾನೆ. ನಿಮ್ಮ ಪೂರ್ವಾರ್ಜಿತ ಪುಣ್ಯದಿಂದ ಮತ್ತು ದೇವಿಯ ವರಪ್ರಸಾದದಿಂದ ಅವನಿಗೆ ಯಾವಾಗಲು ವಿಜಯ ಉಂಟಾಗುತದು. ಅವನ ಮೇಲೆ ಶ್ರೀರಘುಪತಿಯ ಪೂರ್ಣ ಕೃಪೆಯುಂಟು. ನೀವು ಯಾವದೊಂದಕ್ಕೂ ಚಿಂತೆ ಮಾಡಕೂಡದು" ಎಂದು ಸಮಾಧಾನ ಮಾಡಿ ಮೂರು ದಿವಸ ರಾತ್ರಿ ತಮ್ಮ ಹತ್ತರ ಇಟ್ಟುಕೊಂಡು ಅವರಿಗೆ ಅಪ್ಪಣೆ ಕೊಟ್ಟರು. ಶಿವಾಜಿ ಮಹಾರಾಜರು ಮುಂದೆ ಕೆಲವು ದಿವಸ ಅಲ್ಲಿದ್ದು ರಾಯಗಡಕ್ಕೆ ಹೊರಟು ಹೋದರು.

ದತ್ತಾತ್ರಯನ ದರ್ಶನ—ಸಮರ್ಥರು ಒಂದು ಸಾರೆ ಸಂಚರಿಸುತ್ತಾ ಸಂಚರಿಸುತ್ತಾ ಮಾಹಾಪುರ ಎಂಬಲ್ಲಿಗೆ ಬಂದರು. ಅಲ್ಲಿ ದತ್ತಾತ್ರಯನ ದೇವಾಲಯ ಉಂಟೆಂದು ನೋಡಿ ಅವನ ದರ್ಶನಕ್ಕೆ ಹೋದರು. ಒಳಗೆ ದೇವಾಲಯದಲ್ಲಿ ಹತ್ತುಮಂದಿ ಬ್ರಾಹ್ಮಣರು ಅನುಷ್ಠಾನಕ್ಕೆ ಕುಳಿತಿದ್ದರು. ಅವರೆಲ್ಲರಿಗೂ ಸಮರ್ಥರು ನಮಸ್ಕರಿಸಿ—"ನೀವೆಲ್ಲರು ಯಾವ ಉದ್ದಿಶ್ಯವಾಗಿ ಅನುಷ್ಠಾನವನ್ನು ಮಾಡುತ್ತಲಿದ್ದೀರಿ?" ಎಂದು ಪ್ರಶ್ನೆ ಮಾಡಿದರು. ಬ್ರಾಹ್ಮಣರೆಲ್ಲರು "ದತ್ತಾತ್ರಯನು ನಮಗೆ ದರ್ಶನ ಕೊಡಬೇಕೆಂದು ನಾವು ಅನುಷ್ಠಾನಕ್ಕೆ ಕೂತಿದ್ದೇವೆ" ಎಂದು ಉ

ತ್ತರ ಕೊಟ್ಟರು. ಅದನ್ನು ಕೇಳಿ ಸಮರ್ಥರು—"ಹಾಗಾದರೆ ನಾವೂ ಅವನ ದರ್ಶನ ತೆಗೆದುಕೊಂಡ ತರುವಾಯವೇ ಹೋಗುವೆವು" ಎಂದು ನುಡಿದು ಆ ಬ್ರಾಹ್ಮಣರ ಹತ್ತರ ಆಸನವನ್ನು ಹಾಕಿ ಕುಳಿತರು. ಆಗ ಆ ಬ್ರಾಹ್ಮಣರೆಲ್ಲರು ತಮ್ಮ ತಮ್ಮ ಮನಸ್ಸಿನಲ್ಲಿ ನಗುತ್ತ "ನಾವೆಲ್ಲರು ಹನ್ನೆರಡು ವರ್ಷ ಅನುಷ್ಠಾನಕ್ಕೆ ಕೂತರೂ ನಮಗೆ ಆತನ ದರ್ಶನವಾಗಲೊಲ್ಲದು. ಇವನು ಒಂದು [ಗಳಿಗೆಯಲ್ಲಿ ದರ್ಶನ ತೆಗೆದುಕೊಂಡು ಹೋಗುವದಕ್ಕೆ ಕುಳಿತುಬಿಟ್ಟಿದ್ದಾನೆ! ಒಳ್ಳೇದು. ಏನೇನು ಚಮತ್ಕಾರವರ್ತಿಸುವದೋ ನೋಡೋಣ" ವೆಂದು ಸುಮ್ಮನೆ ಕುಳಿತರು. ಸಮರ್ಥರು ಅಲ್ಲಿ ಕುಳಿತು ಒಂದು ಅರಗಳಿಗೆಯು ತೀರುವಷ್ಟರಲ್ಲಿ ಮಲಂಗಫಕೀರನೆಂಬ ವೇಷವನ್ನು ಧರಿಸಿ ದತ್ತಾತ್ರೇಯನು ಅಲ್ಲಿ ಪ್ರಕಟನಾದನು. ಅವನ ಸಂಗಡ "ಮಾಯಾ" ಎಂಬದು ಒಬ್ಬ ಹೆಂಗಸಿನ ರೂಪವನ್ನೂ ಸತ್ವ, ರಜ, ತಮ ಎಂಬ ಗುಣಗಳು ಮೂರು ಮಕ್ಕಳ ರೂಪವನ್ನೂ [ಷಡ್ರಿಪುಗಳು ಆರು ಕುರಿಗಳ ರೂಪವನ್ನೂ, ೨೫ ತತ್ವಗಳು ಕೋಳಿಗಳ ರೂಪವನ್ನೂ ಅಹಂಕಾರವು ಕೋಣನ ರೂಪವನ್ನೂ ಧರಿಸಿ ಬಂದಿದ್ದವು. ಈ [ಪ್ರಕಾರ] ಯಾವತ್ತು ಪರಿವಾರ ಸಹಿತವಾಗಿ ಮಿಯ್ಯಾಸಾಹೇಬನು ದೇವಾಲಯದ ಹತ್ತರವೇ ಬಿಡಾರವನ್ನು ಮಾಡಿದನು. ತರುವಾಯ ಮಿಯ್ಯಾಸಾಹೇಬನು ಬಿಬೀಸಾಹೇಬಳಿಗೆ "ಒಗಾ ಆಭ್ಜೀಹ್ಯೆ. ಹಂಡೀಪಕಾವ" ಎಂದು ಅಪ್ಪಣೆಯನ್ನು ಮಾಡಿದನು. ಬಿಬೀಸಾಹೇಬಳು "ಹುಕುಮಸಾಬ" ಎಂದು ಹೇಳಿ ಒಂದು ದೊಡ್ಡ ಗಡಿಗೆಯನ್ನು ಒಲೆಯಮೇಲೆ ಇಟ್ಟು ಅದರೊಳಗೆ ತುಸು ನೀರು ಸುರವಿ "ಹಜರತ್! ಹಂಡೀಮೆ ಕ್ಯಾಡಾಲನಾ?" ಎಂದು ಮಿಯ್ಯಾಸಾಹೇಬನನ್ನು ಕೇಳಿದಳು. ಆಗ ಮಿಯ್ಯಾಸಾಹೇಬನು "ಮುಳಗ್ಯಾಕಾಟಡಾಲೋ" ಎಂದು ಉತ್ತರವನ್ನು ಕೊಟ್ಟನು. ಅದನ್ನು ಕೇಳಿದವಳೇ ಬಿಬೀಸಾಹೇಬಳು ಕೈಯಲ್ಲಿ ಚೂರಿಯನ್ನು ತೆಗೆದುಕೊಂಡು ತ್ವರೆಯಿಂದ ಎಲ್ಲ ಕೋಳಿಗಳನ್ನು ಕೊಯ್ದು ಗಡಿಗೆಯಲ್ಲಿ ಹಾಕಿ ಪುನಃ ಮಿಯ್ಯಾಸಾಹೇಬನಿಗೆ—"ಹಜರತ್! ಹಂಡೀ ಭರೀನಹಿ" ಎಂದು ಹೇಳಿದಳು. ಆಗ ಮಿಯ್ಯಾಸಾಹೇಬನು—"ಅಚ್ಛಾ! ಬಕರೀಕಾಟಡಾಲೋ" ಎಂದು ಸೂಚಿಸಿದನು. ಅವಳು ಹಾಗೆ ಮಾಡಿದವಳೇ ತಿರಿಗಿ ಮಿಯ್ಯಾಸಾಹೇಬನಿಗೆ—"ಹಜರತ್! ಹಂಡೀ ತೋಅಬ್ಬಿಭರೀನಹಿ" ಎಂದು ಹೇಳಿದಳು. ಅದನ್ನು ಕೇಳಿ ಮಿಯ್ಯಾಸಾಹೇಬನು ಪುನಃ ಬಿಬೀಸಾಹೇಬಳಿಗೆ—"ಅಚ್ಛಾ! ಬಹುತ ಜೀತೇತ್ತೋ! ರೇಡಾಕಾಟಡಾಲೋ" ಎಂದು ಹೇಳಿದನು. ಅವಳು ಕೋಣನನ್ನು ಕೊಯ್ದು ಗಡಿಗೆಯಲ್ಲಿ ಹಾಕಿದಳು. ಆದರೂ ಗಡಿಗೆಯು ತುಂಬಲಿಲ್ಲ. ಆದ್ದರಿಂದ ಅವಳು ಮಿಯ್ಯಾಸಾಹೇಬನಿಗೆ—"ಹಂಡೀ ತೋ ಅಬ್ಬೀ ಭರೀನಹಿ" ಎಂದು ಪುನಃ ಹೇಳಿದಳು. ಆಗ ಮಿಯ್ಯಾಸಾಹೇಬನು "ಅಛಾ ಹ್ಯೆ! ಏ ಬೈಠೆಸ್ಯೆನೋ ಸಬ್ ಬಮ್ಮನ್ ಕಾಟಡಾಲೋ" ಎಂದು ಉತ್ತರ

ಕೊಟ್ಟನು. ಅದನ್ನು ಕೇಳಿದವಳೇ ಬಿಬೀಸಾಹೇಬಳು ಕೈಯಲ್ಲಿ ಚೂರಿಯನ್ನು ಹಿಡಿದುಕೊಂಡು ಅನುಷ್ಠಾನಕ್ಕೆ ಕೂತಿದ್ದ ಬ್ರಾಹ್ಮಣರ ಮೈಮೇಲೆ ಹೋದಳು. ಆಗ ಅಲ್ಲಿ ಅನುಷ್ಠಾನಕ್ಕೆ ಕುಳಿತಿದ್ದ ಬ್ರಾಹ್ಮಣರು ತಮ್ಮ ತಮ್ಮ ಜೀವವನ್ನು ಉಳಿಸಿಕೊಳ್ಳುವದಕ್ಕಾಗಿ ದಿಕ್ಕುದಿಕ್ಕಿಗೆ ಓಡಲಾರಂಭಿಸಿದರು. ಅದನ್ನು ನೋಡಿ ಬಿಬೀಸಾಹೇಬಳು ಮಿಯ್ಯಾಸಾಹೇಬನ ಬಳಿಗೆ ಬಂದು—"ಹಜರತ! ಸಬ್ ಬಮ್ಮನ್ ಭಾಗಗಯೆ. ಅಬ್ ಕ್ಯಾ ಕರನಾ?" ಎಂದು ಕೇಳಿದಳು. ಅದಕ್ಕೆ ಮಿಯ್ಯಾಸಾಹೇಬನು—"ಅಭೀ ಹೈ! ಏಕದೋ ಖಡೇಕೈಸೋ ಕಾಟೋ" ಎಂದು ಹೇಳಿದನು. ಅದರಂತೆ ಅವಳು ಕೈಯಲ್ಲಿ ಚೂರಿಯನ್ನು ತಕ್ಕೊಂಡು ಪುನಃ ಅಲ್ಲಿಗೆ ಬಂದು ಸಮರ್ಥರ ಮೈಮೇಲೆ ಹೋಗಲಾಗಿ ಸಮರ್ಥರು ತಮ್ಮ ಕುತ್ತಿಗೆಯನ್ನು ಅವಳ ಮುಂದೆ ಚಾಚಿದರು. ಅವಳು ಸಮರ್ಥರ ಶಿಷ್ಯನಾದ ಕಲ್ಯಾಣನ ಮೈಮೇಲೆ ಹೋಗಲಾಗಿ ಅವನೂ ತನ್ನ ಕುತ್ತಿಗೆಯನ್ನು ಅವಳಮುಂದೆ ಚಾಚಿದನು. ಇದನ್ನು ಕಂಡು ದತ್ತಾತ್ರಯನು ತನ್ನ ನಿಜಸ್ವರೂಪವನ್ನು ಪ್ರಕಟ ಮಾಡಿ ಸಮರ್ಥರಿಗೆ ಅಪ್ಪಿಕೊಂಡನು. ಇದು ಶಕೆ ೧೫೬೪ರಲ್ಲಿ ವರ್ತಿಸಿತು.

ತೈಲಂಗಣದೇಶಕ್ಕೆ ಬಿಜಯಮಾಡಿದ್ದು—ಸಮರ್ಥರು ತೀರ್ಥಯಾತ್ರೆಯನ್ನು ಮಾಡುತ್ತಾ ಮಾತಾಪುರದಿಂದ ತೈಲಂಗಣ ದೇಶಕ್ಕೆ ಹೋದರು. ಅಲ್ಲಿ ಸಂಚರಿಸುತ್ತಾ ಒಂದು ದಿವಸ ನಾರಂಗಪುರದ ಸಮೀಪಕ್ಕೆ ಇರುವ ಇಂದೂರ ಎಂಬ ಊರಿಗೆ ಹೋಗಿ ಮುಟ್ಟಿದರು. ಆ ಊರ ಹೊರಗೆ ಒಂದು ದೊಡ್ಡ ಕೆರೆ ಇದ್ದು ಅದರ ಸುತ್ತಲು ಗುಡ್ಡಗಾಡು ಇತ್ತು. ಆ ಕೆರೆಯಲ್ಲಿ ೬೦ ಮಂದಿ ಬ್ರಾಹ್ಮಣರು ನಾಭಿಯ ಪರಿಯಂತರ ನೀರೊಳಗೆ ನಿಂತು ಪರ್ಜನ್ಯದ ಬಗ್ಗೆ ಅನುಷ್ಠಾನವನ್ನು ಮಾಡುತ್ತಿದ್ದರು. ಅವರನ್ನು ಕಂಡು ಸಮರ್ಥರು "ನೀವೆಲ್ಲರು ನೀರೊಳಗೆ ಇಷ್ಟೊತ್ತಿನತನಕ ಯಾಕೆ ನಿಂತಿದ್ದೀರಿ?" ಎಂದು ಕೇಳಿದರು. ಅದಕ್ಕೆ ಅವರು "ನಾವು ಪರ್ಜನ್ಯದ ಗೋಸ್ಕರ ಅನುಷ್ಠಾನವನ್ನು ನಡಿಸಿರುತ್ತೇವೆ" ಎಂದು ಹೇಳಿದರು. ಆಗ ಸಮರ್ಥರು—"ನಾನು ಹೇಳಿದಂತೆ ನೀವೆಲ್ಲರು ಮಾಡಿದರೆ ಈ ಪೊತ್ತು ಒಂಭತ್ತು ತಾಸಿಗೆ ಪರ್ಜನ್ಯವಾಗುವದು." ಎಂತ ಹೇಳಿದರು. ಅದನ್ನು ಕೇಳಿ ಅವರೆಲ್ಲರು "ಏನು ಅಪ್ಪಣೆಯಾಗುತ್ತದೆ?" ಎಂತ ಪ್ರಶ್ನೆಮಾಡಿದರು. ಆಗ ಸಮರ್ಥರು "ನೀವೆಲ್ಲರು ನೀರೊಳಗಿಂದ ಹೊರಟು ಬರ್ರಿ" ಎಂದು ಹೇಳಿದರು. ಸಮರ್ಥರ ಅಪ್ಪಣೆಯಂತೆ ಬ್ರಾಹ್ಮಣರೆಲ್ಲರು ನೀರೊಳಗಿಂದ ಮೇಲಕ್ಕೆ ಹೊರಟು ಬರಲಾಗಿ, ಸಮರ್ಥರು ಒಂದು ಕಲ್ಲನ್ನು ತಕ್ಕೊಂಡು ಅದರ ಮೇಲೆ ಇದ್ದಲಿಯಿಂದ ಹನುಮಂತ ದೇವರ ಚಿತ್ರವನ್ನು ಬರೆದು ಆ ಕಲ್ಲಿನ ಮೇಲೆ ಒಂದು ಮದ್ದಿಯ ಶಾಲನ್ನು ಹೊಚ್ಚಿ ಆ ಬ್ರಾಹ್ಮಣರೆಲ್ಲರಿಗೆ ಅದಕ್ಕೆ ರುದ್ರಾಭಿಷೇಕ ಮಾಡಿರೆಂದು ಹೇಳಿದರು. ಆಗ ಆ ಬ್ರಾಹ್ಮಣರು ಸಮರ್ಥರ ಅಪ್ಪಣೆಯಂತೆ ಅಭಿಷೇಕ

ಮಾಡಿದರು. ಅಭಿಷೇಕವು ಮುಗಿದ ತರುವಾಯ ಆ ಕಲ್ಲಿನ ಮೇಲಿನ ಮುಸುಕು ತೆಗೆದು ನೋಡಲಾಗಿ ಆ ಕಲ್ಲಿನ ಮೇಲೆ ಹನುಮಂತದೇವರ ಚಿತ್ರವನ್ನು ಉಪ್ಪಾರೆಯ ಶಸ್ತ್ರಗಳಿಂದ ಕಟೆದು ಸಿದ್ಧಮಾಡಿದಂತೆ ಕಂಡುಬಂತು! ತರುವಾಯ ಸಮರ್ಥರು ಆ ಬ್ರಾಹ್ಮಣರಿಗೆ—"ನೀವು ಈ ಗಿಡಗಂಟೆಯಲ್ಲಿರುವ ಅಡಿಗೆಯ ಪಾತ್ರೆಗಳನ್ನೂ ಅನ್ನ ಸಾಮುಗ್ರಿಯನ್ನೂ ತೆಗೆದುಕೊಂಡು ಅಡಿಗೆಯನ್ನು ಮಾಡಿ ಭೋಜನ ತೀರಿಸಿರಿ" ಎಂದು ಅಪ್ಪಣೆಯನ್ನು ಮಾಡಿದರು. ಆ ಪ್ರಕಾರ ಅವರು ಊಟವನ್ನು ತೀರಿಸಿ ಸ್ಥಳಶುದ್ಧಿಯನ್ನು ಮಾಡಿದ ತರುವಾಯ ಆ ಪಾತ್ರೆಗಳೂ ಅನ್ನ ಸಾಮುಗ್ರಿಯೂ ಒಮ್ಮಿಂದೊಮ್ಮೆ ಅಲ್ಲಿಲ್ಲದಂತೆ ಆದವು! ತರುವಾಯ ಸಮರ್ಥರು ಆ ಬ್ರಾಹ್ಮಣ ಸಮುದಾಯದೊಂದಿಗೆ ಒಂದು ಗಿಡದ ಕೆಳಗೆ ಮಾತಾಡುತ್ತ ಕೂತಿರುವಾಗ ಒಮ್ಮಿಂದೊಮ್ಮೆ ಆಕಾಶದಲ್ಲಿ ಮೋಡಗವಿದು ಒಂದು ಗಳಿಗೆಯೊಳಗಾಗಿ ಮಳೆಯು ಆರಂಭವಾಗಿ ಒಂದೆಸವನೆ ೪ ಗಳಿಗೆಯು ತನಕ ಸುರಿಯಿತು. ಎಲ್ಲಿ ನೋಡಿದಲ್ಲಿ ನೀರಿನ ಸಮೃದ್ಧಿಯಾಯಿತು. ಆದರೆ ಸಮರ್ಥರು ಕೂತಿದ್ದ ಗಿಡದ ಸುತ್ತಲು ಮಾತ್ರ ಮಳೆಯಾಗಲಿಲ್ಲ, ಅಷ್ಟು ಭಾಗದಲ್ಲಿ ನೆಲವು ಒಣಗಿದ್ದಂತೆ ಇತ್ತು. ಈ ಚಮತ್ಕಾರವನ್ನು ನೋಡಿ ಎಲ್ಲ ಬ್ರಾಹ್ಮಣರಿಗೆ ಅತ್ಯಂತ ಆಶ್ಚರ್ಯವುಂಟಾಗಿ "ನೀವು ಸಾಕ್ಷಾತ್ ಪರಮೇಶ್ವರರು" ಎಂದು ಹೇಳಿ ಅವರೆಲ್ಲರು ಸಮರ್ಥರ ಮುಂದೆ ದಿಂಡರಕಿ ಉರುಳಾಡಹತ್ತಿದರು. ಬ್ರಾಹ್ಮಣರನ್ನು ಅನುಷ್ಠಾನಕ್ಕೆ ಕೂಡ್ರಿಸಿದ್ದರಿಂದಲೇ ಪರ್ಜನ್ಯವಾಯಿತೆಂದು ಸಂತೋಷಪಟ್ಟು ಆ ಊರ ಅಧಿಕಾರಿಯಾದ ಯವನನು ಆ ಬ್ರಾಹ್ಮಣರನ್ನು ಸನ್ಮಾನ ಪೂರ್ವಕವಾಗಿ ಎದುರುಗೊಂಡು ಮೆರಿಸುತ್ತ ಊರಲ್ಲಿ ಕರೆದುಕೊಂಡು ಒಯಬೇಕೆಂದು ಆಲೋಚಿಸಿ ಅವರು ಅನುಷ್ಠಾನ ಮಾಡುತ್ತಿದ್ದ ಕೆರೆಗೆ ಹೋದನು. ಆದರೆ ಆ ಬ್ರಾಹ್ಮಣರೆಲ್ಲರು ಸಮರ್ಥರ ಕಡೆಗೆ ಕೈತೋರಿಸಿ "ಇವರಿಂದಲೇ ಪರ್ಜನ್ಯವಾಯಿತು. ನಮ್ಮ ಕಡೆಗೆ ಅದರ ಶ್ರೇಯಸ್ಸು ಎಷ್ಟು ಮಾತ್ರಕ್ಕೂ ಇಲ್ಲ" ಎಂತ ಹೇಳಿದರು. ಅದನ್ನು ಕೇಳಿ ಆ ಯವನನು ಸಮರ್ಥರನ್ನು ಊರೊಳಗೆ ಊದುತ್ತ ಬಾರಿಸುತ್ತ ಬಹಳ ಸಂಭ್ರಮದಿಂದ ಕರೆದುಕೊಂಡು ಬಂದು ಕೆಲವು ದಿವಸಗಳ ವರೆಗೆ ಅವರನ್ನು ಇಟ್ಟುಕೊಂಡು ಅವರಿಗೆ ಅಲ್ಲಿ ಒಂದು ಮಠವನ್ನು ಕಟ್ಟಿಸಿಕೊಟ್ಟನು. ಸಮರ್ಥರು ಅಲ್ಲಿ ಕೋದಂಡರಾಮನ ಮೂರ್ತಿಯನ್ನು ಸ್ಥಾಪಿಸಿ ಉದ್ಧವ ಗೋಸಾವಿಯನ್ನು ಆ ಮಠದೊಳಗಿಟ್ಟು ಮಾಹುಲಿಗೆ ಹೊರಟು ಬಂದರು. ಈ ಸಂಗತಿಯು ಇಂದೂರೊಳಗೆ ಶಕೆ ೧೫೭೩ ರಲ್ಲಿ ವರ್ತಿಸಿತು.

ಸರ್ಪದಂಶ—ಒಂದಾನೊಂದು ಸಾರೆ ಸಮರ್ಥರು ತಮ್ಮ ಶಿಷ್ಯ ಮಂಡಳಿಯೊಂದಿಗೆ ರಾಮಘಳಿಯಲ್ಲಿದ್ದಾಗ್ಗೆ ಅವರ ಶಿಷ್ಯರು "ಸಮರ್ಥರು ಯಾವಾಗಲು

ಕಲ್ಯಾಣಸ್ವಾಮಿಗೆ ತಮ್ಮ ಸ್ವಂತ ಕೆಲಸವನ್ನು ಮಾಡಲಿಕ್ಕೆ ಹೇಳುತ್ತಾರೆ. ಅವನ ಮೇಲೆಯೇ ಸಮರ್ಥರ ಪ್ರೀತಿಯು ಹೆಚ್ಚಾಗಿರುತ್ತದೆ" ಎಂದು ತಮ್ಮ ತಮ್ಮೊಳಗೆ ಗುಜುಗುಜು ಮಾಡಹತ್ತಿದರು. ಕಲ್ಯಾಣ ಸ್ವಾಮಿಯನ್ನು ಕಂಡರೆ ಉಳಿದ ಶಿಷ್ಯರು ಸೇರದಂತಾದರು. ಅವರ ಮನಸ್ಸಿನಲ್ಲಿ ಕಲ್ಯಾಣ ಸ್ವಾಮಿಯ ಬಗ್ಗೆ ಮತ್ಸರವು ಹುಟ್ಟಿತು. ಇದು ಸಮರ್ಥರಿಗೆ ತಿಳಿದ ಕೂಡಲೆ ಕಲ್ಯಾಣ ಸ್ವಾಮಿಯ ಶ್ರೇಷ್ಠವಾದ ಗುಣವನ್ನು ಅವರ ಅವಲೋಕನಕ್ಕೆ ತಂದು ಕೊಡಬೇಕೆಂದು ಸಮರ್ಥರ ಮನಸಿನಲ್ಲಿ ಬಂತು. ಒಂದು ದಿವಸ ರಾತ್ರಿ ಸಮರ್ಥರು ಹಾಸಿಗೆಯ ಮೇಲೆ ಎದ್ದು ಕುಳಿತು ಅರ್ಧ ಹೊತ್ತಿನಲ್ಲಿ ತಾಂಬೂಲವನ್ನು ಬೇಡಿದರು. ಆಗ ಕಲ್ಯಾಣಸ್ವಾಮಿಯು ಅವರಿಂದ ಸ್ವಲ್ಪ ದೂರದ್ದನು. ಇಬ್ಬರು ಮೂರು ಮಂದಿ ಶಿಷ್ಯರು ಎಲೆಯನ್ನಿಡುವ ಸಂಬಳಿಗೆಯ ಬಳಿಗೆ ಹೋಗಿ ಅದನ್ನು ಪರೀಕ್ಷಿಸಲು ಅದರಲ್ಲಿಯ ಎಲೆಗಳು ತೀರಿದ್ದವು. ಅದರಿಂದ ಎಲ್ಲ ಶಿಷ್ಯರು "ಎಲೆಗಳನ್ನು ಮುಂದಾಗಿ ತಂದಿಡತಕ್ಕದ್ದಿತ್ತು. ಎಲೆಗಳು ತೀರಿ ಹೋಗಿರುತ್ತವೆ. ಇನ್ನು ಮುಂದೆ ಏನೆಂತ ಉತ್ತರ ಕೊಡತಕ್ಕದ್ದು?" ಎಂದು ತಮ್ಮ ತಮ್ಮೊಳಗೆ ಆಲೋಚನೆ ಮಾಡುತ್ತ ಖಿನ್ನವದನರಾಗಿ ನಿಂತುಕೊಂಡರು. ಸಮರ್ಥರು ಎರಡು ಮೂರಾವರ್ತಿ ಗಟ್ಟಿಸಿ "ತಾಂಬೂಲವನ್ನು ತೆಗೆದುಕೊಂಡು ಬರ್ರಿ" ಎಂದು ಶಿಷ್ಯರನ್ನು ಕೂಗಿದರು. ಆ ಕೂಗು ಕಲ್ಯಾಣಸ್ವಾಮಿಯ ಕಿವಿಗೆ ಬಿದ್ದ ಕೂಡಲೆ ಅವನು ಗಡಬಡಿಯಿಂದ ನಿದ್ದೆಗಣ್ಣಿನಿಂದಲೇ ಎದ್ದು " ಈಗ ತೆಗೆದು ಕೊಂಡು ಬರುತ್ತೇನೆ" ಎಂದು ಹೇಳಿ ಎಲೆಯ ಚೀಲವನ್ನು ಹುಡುಕಿ ಎಲೆಗಳನ್ನು ತರಲಿಕ್ಕೆ ಬಾಘಕ್ಕೆ ವೇಗದಿಂದ ಹೋಗುತ್ತಿದ್ದನು. ಆಗ ಮಧ್ಯರಾತ್ರಿಯಾಗಿತ್ತು. ಕತ್ತಲವು ಬಹಳ ಕವಿದಿತ್ತು. ಹೊರಗೆ ಕಾಲಿಟ್ಟರೆ ಒಬ್ಬರ ಮೋರೆ ಇನ್ನೊಬ್ಬರಿಗೆ ಕಾಣಿಸುವಂತೆ ಇದ್ದಿಲ್ಲ. ಆದರೂ ಕಲ್ಯಾಣಸ್ವಾಮಿಯು ಹಿಂದೆ ಮುಂದೆ ವಿಚಾರ ಮಾಡದೆ "ಸಮರ್ಥರಿಗೆ ತಡವಾಗಬಾರದು" ಎಂತ ಕಾತುರೆಯ ಓಟದಿಂದ ನಡೆದಿರುವಾಗ ಮಾರ್ಗದಲ್ಲಿ ಒಂದು ಘಟಸರ್ಪವು ಅವನಿಗೆ ಕಚ್ಚಿತು. ಅವನು "ಜಯ ಜಯ ರಘುವೀರ ಸಮರ್ಥ" ಎಂದು ಎರಡು ಮೂರಾವರ್ತಿ ಕೂಗಿ ವಿಸ್ಮೃತಿಯಿಂದ ಭೂಮಿಯ ಮೇಲೆ ಬಿದ್ದನು. ಈ ಕೂಗನ್ನು ಸಮರ್ಥರು ಕೇಳಿ ತನ್ನ ಶಿಷ್ಯರಿಗೆ—"ಎಲೋ! ಅಲ್ಲಿ ಯಾರು ಕೂಗುತ್ತಾರೆ! ನೋಡಿರಿ. ಕಲ್ಯಾಣನೋ ಏನೋ?" ಎಂದು ಹೇಳಿದರು. ಎಲ್ಲರೂ ಕಗ್ಗತ್ತಲದಲ್ಲಿ ಹೊರಗೆ ಕಾಲಿಡಲಾರದೆ, "ನೀ ಹೋಗು ನೀ ಹೋಗು" ಎಂದು ಒಬ್ಬರನ್ನೊಬ್ಬರು ದೂಡುತ್ತಲೂ ತಾವು ಹಿಂದಕ್ಕೆ ಸರಿದುಕೊಳ್ಳುತ್ತಲೂ ಇದ್ದರು. ಕಡೆಗೆ ಯಾರೂ ಹೋಗಲೊಲ್ಲರೆಂದು ನೋಡಿ ಸಮರ್ಥರು ತಾವೇ ಎದ್ದು ಕೈಯೊಳಗೆ ಕಕ್ಕಡವನ್ನು ಹಚ್ಚಿಕೊಂಡು ಅದರ ಬೆಳಕಿನಿಂದ ಹೊರಗೆ ಹೊರಟರು. ಆಗ ಅವರ ಸಂಗಡ ಉಳಿದ ಶಿಷ್ಯರೂ ಹೊರ

ಟಿರು. ಹೀಗೆ ಹೋಗುತ್ತಿರುವಾಗ ದಾರಿಯಲ್ಲಿ ಕಲ್ಯಾಣಸ್ವಾಮಿಯು ನಿಶ್ಚೇತನನಾಗಿ ಬಿದ್ದಿರುವದನ್ನೂ ಘಟಸರ್ಪವು ಹೆಡೆಯನ್ನೆತ್ತಿಕೊಂಡು ಅವನ ಪಾರ್ಶ್ವದಲ್ಲಿ ಕುಳಿತಿರುವದನ್ನೂ ಕಂಡು ಅಲ್ಲಿಯ ಬಹಿರೋಬನೆಂಬ ದೇವರಿಗೆ "ನನ್ನ ಕಲ್ಯಾಣನನ್ನು ಎಚ್ಚರಪಡಿಸಿ ಅವನಿಗೆ ಗುಣ ಮಾಡಿದರೆ ೧೧ ಮಣ ಬೆಲ್ಲವನ್ನು ನಿನಗೆ ಹಂಚುತ್ತೇನೆ" ಎಂದು ಪ್ರಾರ್ಥಿಸಿ ಕಲ್ಯಾಣಸ್ವಾಮಿಯ ಸಮೀಪಕ್ಕೆ ಹೋಗಿ ಅವನ ಮೈಮೇಲೆ ಕೈಯಾಡಿಸಿದರು. ಆಗ ಅವನು ಮೂರ್ಛೆಯಿಂದ ತಿಳಿದು ಎದ್ದವನೇ ಸಮರ್ಥರ ಪಾದಕ್ಕೆರಗಿದನು. ತರುವಾಯ ಸಮರ್ಥರು ಆ ಘಟಸರ್ಪಕ್ಕೆ—"ನಮ್ಮ ಜನರು ಈ ದಾರಿಯಿಂದ ರಾತ್ರಿ ಅಪರಾತ್ರಿಯೊಳಗೆ ಅಡ್ಡಾಡುತ್ತಾರೆ. ಆದ್ದರಿಂದ ನೀನು ಈ ಸ್ಥಳವನ್ನು ಬಿಟ್ಟು ಎಡನೆ ಕಡೆಗೆ ಹೋಗು" ಎಂದು ಅಪ್ಪಣೆ ಮಾಡಿದರು. ಆಗ ಆ ಸರ್ಪವು ತನ್ನ ಹೆಡೆಯನ್ನೆತ್ತಿ ಗಿರ್ರ‍ಗಿರ್ರನೆ ತಿರಿಗಿ ಸಮರ್ಥರ ಸುತ್ತಲು ಪ್ರದಕ್ಷಿಣವನ್ನು ಹಾಕಿ ಎರಡನೆ ಕಡೆಗೆ ಹೊರಟು ಹೋಯಿತು. ತರುವಾಯ ಸಮರ್ಥರು ತಮ್ಮೆಲ್ಲ ಶಿಷ್ಯರನ್ನು ಕರಕೊಂಡು ಬಿಡಾರಕ್ಕೆ ಮರಳಿ ಬಂದರು. ಆಗ ಕಲ್ಯಾಣಸ್ವಾಮಿಯು ಪುನಃ "ನಾನು ತೋಫಳಕ್ಕೆ ಹೋಗಿ ಎಲೆಗಳನ್ನು ತೆಗೆದುಕೊಂಡು ಬರುತ್ತೇನೆ" ಎಂದು ಹೇಳಿದನು. ಅದಕ್ಕೆ ಸಮರ್ಥರು "ಎಲೆಗಳಿಲ್ಲದ್ದರೂ ಚಿಂತಿಲ್ಲ. ಎಲೆಗಳಿಗೋಸ್ಕರ ಜೀವವನ್ನು ಕೊಡುವದ್ಯಾಕೆ?" ಎಂದು ಪ್ರಶ್ನೆ ಮಾಡಿರು. ಅದನ್ನು ಕೇಳಿ ಕಲ್ಯಾಣಸ್ವಾಮಿಯು—"ನನ್ನ ಜೀವದ ಹೊಣೆಗಾರರು ನೀವು ಇದ್ದೀರಿ. ಅಂದ ಬಳಿಕ ನನ್ನ ಜೀವದ ಚಿಂತೆಯು ನನಗ್ಯಾಕೆ?" ಎಂತ ಉತ್ತರ ಕೊಟ್ಟನು. ಕಲ್ಯಾಣಸ್ವಾಮಿಯ ಇಷ್ಟೊಂದು ಭಕ್ತಿಯನ್ನು ನೋಡಿ ಸಮರ್ಥರು—"ಒಳ್ಳೇದು! ಇನ್ನೊಮ್ಮೆ ಹೋಗಿ ಆ ಎಲೆಯ ಚೀಲವನ್ನು ಪರೀಕ್ಷಿಸು. ಅದರಲ್ಲಿ ಎಲೆ ಇದ್ದರೆ ತಕ್ಕೊಂಡು ಬಾ. ಇಲ್ಲದಿದ್ದರೆ ನನಗೆ ಅದು ಬೇಡ" ಎಂತ ಹೇಳಿದರು. ಅದನ್ನು ಕೇಳಿ ಕಲ್ಯಾಣಸ್ವಾಮಿಯು ಎಲೆಯ ಚೀಲದ ಹತ್ತರ ಹೋಗಿ ಅದನ್ನು ನೋಡಲಾಗಿ ಅದರಲ್ಲಿ ಎಲೆಗಳು ತುಂಬಿದ್ದವು. ಆಗ ಅವನು ಅತ್ಯಾನಂದದಿಂದ ತಾಂಬೂಲವನ್ನು ಸಿದ್ಧ ಮಾಡಿ ಸಮರ್ಥರಿಗೆ ಕೊಟ್ಟನು. ಇದನ್ನು ನೋಡಿ ಸಮರ್ಥರು ಉಳಿದ ಶಿಷ್ಯರಿಗೆ—"ಕಲ್ಯಾಣನ ಈ ಭಕ್ತಿಯನ್ನು ನೋಡಿರಿ! ಭಕ್ತಿಯಂತೆ ಯಾರದಾದರೂ ಪ್ರೀತಿಯು ಉತ್ಪನ್ನವಾಗುತ್ತದೆ. ಆದ್ದರಿಂದ ನೀವು ಅವನನ್ನು ಕಂಡು ಮತ್ಸರ ಮಾಡಬೇಡರಿ. ಅವನ ಭಕ್ತಿಯಂತೆ ನೀವೂ ಭಕ್ತಿಯನ್ನು ಕಲಿಯಿರಿ" ಎಂದು ಉಪದೇಶಿಸಿದರು.

ಮಧ್ವಾಚಾರ್ಯರ ಶಿಷ್ಯನು ಸಮರ್ಥರನ್ನು ಪರೀಕ್ಷಿಸುವದಕ್ಕೆ ಬಂದದ್ದು—ಉಡಪಿಯುಮಠದ ಮಧ್ವಾಚಾರ್ಯರೆಂಬ ವೈಷ್ಣವ ಸ್ವಾಮಿಗಳು ಸಮರ್ಥರ ದಿಗಂತರಕೀರ್ತಿಯನ್ನು ಕೇಳಿ ಸಮರ್ಥರು ಹನುಮಂತ ದೇವರ ಅವತಾರವೆಂಬದು

ನಿಜವೋ ಹುಸಿಯೋ ಎಂತ ಪರೀಕ್ಷೆ ಮಾಡಿಕೊಂಡು ಬರುವದಕ್ಕಾಗಿ ತನ್ನೊಬ್ಬ ಚತುರ ಮತ್ತು ಜಾಣನಾದ ಶಿಷ್ಯನನ್ನು ಸಮರ್ಥರ ಕಡೆಗೆ ಚಾಫಳಕ್ಕೆ ಕಳಿಸಿದರು. ಆ ಶಿಷ್ಯನ ಸಂಗಡ ಅನೇಕ ಮಂದಿ ಸೇವಕರು ಹೊರಟರು. ಅವರೆಲ್ಲರು ತಮ್ಮ ತಮ್ಮ ಕುದುರೆಗಳನ್ನೂ ಪರಿವಾರವನ್ನೂ ತೆಗೆದುಕೊಂಡು ಹೊರಟದ್ದರಿಂದ ದಾರಿಯಲ್ಲೆಲ್ಲ ನೀರಿನ ಸೌಖ್ಯವನ್ನು ಕಂಡಲ್ಲಿ ವಸತಿ ಮಾಡಿ ಯಥಾಸ್ಥಿತವಾಗಿ ಭೋಜನವನ್ನು ಮಾಡುತ್ತಾ ಮೆಲ್ಲಮೆಲ್ಲನೆ ಮಾರ್ಗಕ್ರಮಣ ಮಾಡಿದರು. ಒಂದಾನೊಂದು ದಿವಸ ಮಧ್ಯಾಹ್ನದಲ್ಲಿ ಅವರು ಒಂದು ನದಿಯ ತೀರದಲ್ಲಿ ಇಳಿದುಕೊಂಡರು. ಮಧ್ವಾಚಾರ್ಯರ ಶಿಷ್ಯನು ತನ್ನ ನಿತ್ಯ ಸಾಂಪ್ರದಾಯದಂತೆ ಸ್ನಾನಸಂಧ್ಯಾದಿಗಳನ್ನು ತೀರಿಸಿಕೊಂಡು, ಸೇವಕರು ಇಳಿದ ಸ್ಥಳದಿಂದ ಸ್ವಲ್ಪ ಅಂತರದ ಮೇಲೆ ಒಂದು ಗಿಡದ ಮರೆಗೆ ಸ್ವಹಸ್ತದಿಂದ ಅಡಿಗೆಯನ್ನು ಮಾಡಿ, ಶಾಲಿಗ್ರಾಮಕ್ಕೆ ನೈವೇದ್ಯವನ್ನು ಅರ್ಪಿಸಿ, ಉದಕವನ್ನು ತರುವದಕ್ಕಾಗಿ ನದಿಗೆ ಹೋದನು. ಆಗ ಒಂದು ನಾಯಿಯು ಅಲ್ಲಿ ಬಂದು ಅವನು ಬಡಿಸಿಟ್ಟದ್ದ ನೈವೇದ್ಯದ ಪಾತ್ರೆಯನ್ನು ಸ್ಪರ್ಶ ಮಾಡಿತು. ಇದು ಆ ಉದಕವನ್ನು ತುಂಬಿಕೊಂಡು ಬಂದ ಶಿಷ್ಯನ ದೃಷ್ಟಿಗೆ ಬಿತ್ತು. ಆಗ ಅವನು—“ಇನ್ನೇನು ಗತಿ? ಪುನಃ ಅಡಿಗೆ ಮಾಡಿಕೊಳಬೇಕಾದರೆ ಅತಿ ಪ್ರಯಾಸವಾಗುವದು. ಪುನಃ ಅಡಿಗೆ ಮಾಡಿಕೊಳ್ಳದಿದ್ದರೆ ನಾಳೆ ಇಷ್ಟೊತ್ತಿನ ತನಕ ಉಪವಾಸದಿಂದ ವ್ಯಥೆ ಪಡಬೇಕಾಗುವದು” ಎಂದು ಬಹಳವಾಗಿ ಚಿಂತಿಸಿ ಕಡೆಗೆ ತನ್ನ ಮನಸ್ಸಿನಲ್ಲಿ ‘ನಾಯಿಯು ನೈವೇದ್ಯವನ್ನು ಸ್ಪರ್ಶ ಮಾಡಿದ್ದು ಯಾರೂ ಕಂಡಿಲ್ಲ ಸೇವಕರು ಈ ಗಿಡದ ಮರೆಯಲ್ಲಿರುತ್ತಾರೆ. ಅಂದ ಬಳಿಕ ತೀರ್ಥವನ್ನು ಸಿಂಪಡಿಸಿ ತುಳಸೀದಳವನ್ನು ನೈವೇದ್ಯಕ್ಕೆ ಸಮರ್ಪಿಸಿ ಭೋಜನ ಮಾಡಿದರೆ ತೀರಿತು’ ಎಂದು ಆಲೋಚಿಸಿ ಹಾಗೇ ಮಾಡಿದನು. ಈ ಮೇರೆಗೆ ಭೋಜನವನ್ನು ತೀರಿಸಿಕೊಂಡು ಮುಂದೆ ಕೆಲವು ದಿವಸಗಳ ತರುವಾಯ ಚಾಫಳಕ್ಕೆ ಬಂದು ಮುಟ್ಟಿ ಸಮರ್ಥರ ದರ್ಶನ ತೆಗೆದುಕೊಂಡು ಉಡಪಿಯ ಸರ್ವವರ್ತಮಾನವನ್ನು ಸಮರ್ಥರಿಗೆ ನಿವೇದನ ಮಾಡಿ ತಾನು ಮಧ್ವಾಚಾರ್ಯರ ಕಡೆಯಿಂದ ತಂದಿದ್ದ ಪತ್ರವನ್ನು ತಲ್ಪಿಸಿದನು. ಅದನ್ನು ಸಮರ್ಥರು ಓದಿಕೊಂಡು ಪ್ರೇಮಾನಂದದಿಂದ ಮಧ್ವಾಚಾರ್ಯರ ಪತ್ರವನ್ನು ಅಭಿವಂದಿಸಿ ಅವರಿಗೆ ಸ್ನಾನಕ್ಕಾಗಿ ಒಳಗೆ ಹೋಗಿರೆಂದು ಸೂಚಿಸಿದರು. ಅದಕ್ಕೆ ಆ ಶಿಷ್ಯನು—“ನಾವು ವೈಷ್ಣವ ಸಾಂಪ್ರದಾಯಿಕರು, ಎರಡನೆಯವರು ಸಿದ್ಧ ಮಾಡಿದ ಪಾಕವನ್ನು ಭೋಜನ ಮಾಡುವದಿಲ್ಲ” ಎಂದು ಉತ್ತರ ಕೊಟ್ಟನು. ಆಗ ಸಮರ್ಥರು ದಿವಾಕರಭಟ್ಟನ ಕಡೆಯಿಂದ ಆ ಶಿಷ್ಯನಿಗೆ ಭೋಜನದ ಸಾಮಗ್ರಿ ಸಾಹಿತ್ಯವನ್ನು ಕೊಡಿಸಿದರು. ಅದನ್ನು ತೆಗೆದುಕೊಂಡು ಆ ಶಿಷ್ಯನು ಸ್ನಾನಾನಂತರದಲ್ಲಿ ಪಾಕವನ್ನು ಮಾಡಿ

ತನ್ನ ಎಲೆಯನ್ನು ಸಮರ್ಥರ ಪಂಕ್ತಿಯಲ್ಲಿ ಬಡಿಸಿಕೊಂಡು ಕುಳಿತನು. ಸಮರ್ಥರ ಪಂಕ್ತಿಗೆ ಅವರ ಅನೇಕ ಜನ ಶಿಷ್ಯರು ದಿನಾಲು ಭೋಜನ ಮಾಡುತ್ತಿದ್ದರು. ಅವರೆಲ್ಲರಿಗಾಗಿ ದಿನದ ವಾಡಿಕೆಯಂತೆ ಎಲೆಗಳು ಬಡಿಸಲ್ಪಟ್ಟವು. ಸಮರ್ಥರು ದಿವಾಕರಭಟ್ಟನಿಗೆ "ಎಲೆಗಳ ಮೇಲೆ ಎಲ್ಲಾ ಬಡಿಸಿದ ಮೇಲೆ ತುಪ್ಪ ಬಡಿಸುವದನ್ನು ಮಾತ್ರ ನನ್ನಗೋಸ್ಕರ ಬಿಡು. ನಾನೇ ಸ್ವತಃ ಈವೊತ್ತು ನನ್ನ ಕೈಯಿಂದ ತುಪ್ಪವನ್ನು ಬಡಿಸುತ್ತೇನೆ" ಎಂದು ಮುಂಚಿತವಾಗಿ ಸೂಚನೆಯನ್ನು ಕೊಟ್ಟಿದ್ದರು. ಆ ಪ್ರಕಾರ ತುಪ್ಪ ಬಡಿಸುವದಕ್ಕೆ ಸಮರ್ಥರು ತಾವೇ ಎದ್ದು ನಿಂತು ಒಂದು ಕೈಯಲ್ಲಿ ತುಪ್ಪದ ಗಿಂಡಿಯನ್ನೂ ಇನ್ನೊಂದು ಕೈಯಲ್ಲಿ ದೊನ್ನೆಯನ್ನೂ ಹಿಡಿದು ಮುಂಚೆ ಮಧ್ವಾಚಾರ್ಯರ ಶಿಷ್ಯನ ಎಲೆಯ ಮುಂದೆ ಹೋಗಿ ನಿಂತು ಅವನ ಎಲೆಯ ಮೇಲೆ ದೊನ್ನೆಯನ್ನಿಟ್ಟು ಅವನಿಗೆ ತುಪ್ಪವನ್ನು ಸುರವಿದರು. ಆಗ ಕೇಳುವದೇನದೆ? ಭೋಜನಕ್ಕೆ ಕುಳಿತಾಗ ಎರಡನೇ ಸಾಂಪ್ರದಾಯಿಕರ ನೆರಳು ಸಹಾ ಬೀಳಬಾರದೆಂಬುವವರಿಗೆ ಈ ಸ್ಪರ್ಶವು ಹ್ಯಾಗೆ ತಡೆಯಬೇಕು! ಆ ಶಿಷ್ಯನಾದ ಆಚಾರ್ಯನು ಕ್ರೋಧಾಯಮಾನನಾಗಿ "ಈ ಅನ್ನವನ್ನು ನಾನಿನ್ನು ಭೋಜನ ಮಾಡುವದು ಹ್ಯಾಗೆ? ಎರಡನೆಯವರು ಸ್ಪರ್ಶ ಮಾಡಿದ ಅನ್ನವನ್ನು ನಾವು ಭೋಜನ ಮಾಡುವದಿಲ್ಲ" ಎಂದು ಬಹಳ ಅಭಿಮಾನದಿಂದ ಮಾತನಾಡಿ ಎಲೆಯನ್ನು ಬಿಟ್ಟು ಮೇಲಕ್ಕೆ ಎದ್ದನು. ಅದನ್ನು ನೋಡಿ ಸಮರ್ಥರು ತಮ್ಮ ಕೈಯಲ್ಲಿದ್ದ ತಪ್ಪದ ಗಿಂಡಿಯನ್ನು ಕೆಳಗೆ ಇಟ್ಟು ಅಳಹತ್ತಿದರು. ಆಗ ಸಮರ್ಥರ ಶಿಷ್ಯರಾದ ಕಲ್ಯಾಣಸ್ವಾಮಿ ಮೊದಲಾದವರು—"ನೀವು ಸುಮ್ಮನೆ ನಿಮ್ಮ ಮನಸ್ಸಿಗೆ ಯಾಕೆ ಕ್ಲೇಶ ಪಡಿಸುವಿರಿ! ಆಚಾರ್ಯರಿಗೆ ಪುನಃ ನಾವು ಸಹಿತ್ಯವನ್ನು ಕೊಡುತ್ತೇವೆ ಅವರು ಪುನಃ ಅಡಿಗೆ ಮಾಡಿಕೊಂಡಾರು" ಎಂದು ಸಮಾಧಾನ ಹೇಳಿದರು ಆದಾಗ್ಯೂ ಸಮರ್ಥರು "ನನ್ನ ದೇಹವು ಎಷ್ಟು ಅಪವಿತ್ರವಾದದ್ದಾಗಿದೆ!" ಎಂದು ತಿರಿಗಿ ಅಳಹತ್ತಿದರು. ಅದನ್ನು ಕಂಡು ಅವರ ಶಿಷ್ಯರು ಅವರಿಗೆ ತಿರಿಗಿ ಸಮಾಧಾನ ಹೇಳಹತ್ತಿದರು. ಆಗಂತೂ ಸಮರ್ಥರು ದೊಡ್ಡ ಧ್ವನಿ ತೆಗೆದು ಅತ್ತು "ನನ್ನ ದೇಹವು ನಾಯಿಗಿಂತ ಹೆಚ್ಚು ಅಪವಿತ್ರವಾಯಿತಲ್ಲಾ!" ಎಂದು ನುಡಿದರು. ಇದರ ಅರ್ಥವು ಅವರ ಶಿಷ್ಯರೊಬ್ಬರಿಗೂ ತಿಳಿಯಲಿಲ್ಲ. ಆದ್ದರಿಂದ ಅವರು ಸಮರ್ಥರಿಗೆ "ಸ್ವಾಮಿನ್, ನೀವು ನಿಮ್ಮಷ್ಟಕ್ಕೆ ನಾಯಿಗಿಂತ ನೀಚರೆಂದು ಯಾಕೆ ಅಂದುಕೊಳ್ಳುತ್ತೀರಿ! ದಯ ಮಾಡಿ ಹೇಳಬೇಕು" ಎಂದು ವಿನಂತಿ ಮಾಡಿದರು. ಅದಕ್ಕೆ ಸಮರ್ಥರು—"ಆ ಆಚಾರ್ಯರನ್ನೇ ಕೇಳಿಕೊಳ್ಳಿರಿ" ಎಂದು ಉತ್ತರ ಕೊಟ್ಟರು. ಆಗ ಆಚಾರ್ಯರು ಹಿಂದಕ್ಕೆ ತಾವು ತಮ್ಮ ಅನ್ನವನ್ನು ನಾಯಿಯು ಮುಟ್ಟಿದಾಗ್ಯೂ ಉಂಡದ್ದು ನೆನಪುವಾಗಿ, ಸಮರ್ಥರು ತ್ರಿಕಾಲಜ್ಞರೆಂದು ಮನವರಿಕೆ ಮಾಡಿ-

ಕೊಂಡು ಸಮರ್ಥರ ಪಾದಕ್ಕೆ ಅಡ್ಡ ಬಿದ್ದು "ಕ್ಷಮಿಸಬೇಕು" ಎಂದು ಬೇಡಿಕೊಂಡು ಎಲೆಯ ಮೇಲೆ ಪುನಃ ಕುಳಿತು ಭೋಜನ ಮಾಡಿದರು. ಮುಂದೆ ಈ ನಾಯಿಯ ಕಥೆಯು ಎಲ್ಲರಿಗೂ ತಿಳಿಯ ಬಂತು. ಸಮರ್ಥರು ಮಧ್ವಾಚಾರ್ಯರ ಶಿಷ್ಯನನ್ನು ಎಷ್ಟೋ ದಿವಸಗಳ ಪರಿಯಂತರ ಪ್ರೀತಿಯಿಂದ ತಮ್ಮ ಹತ್ತಿರ ಇಟ್ಟುಕೊಂಡು ಅವನು ಹೋಗುವಾಗ ಅವನ ಸಂಗಡ ಮಧ್ವಾಚಾರ್ಯರಿಗೆ ಉತ್ತರವನ್ನು ಬರೆದು ಕಳಿಸಿದರು. ಆ ಶಿಷ್ಯನು ಸಮರ್ಥರ ನಿರೋಪ ತೆಗೆದುಕೊಂಡು ಹೊರಡುವಾಗ್ಗೆ ಸಮರ್ಥರ ಹತ್ತಿರ ಏಕಾಂತದಲ್ಲಿ ಹೋಗಿ "ನಾನು ದಾರಿಯಲ್ಲಿ ನಾಯಿ ಮುಟ್ಟಿದ ಅನ್ನವನ್ನುಂಡ ವರ್ತಮಾನವು ಮಧ್ವಾಚಾರ್ಯರ ಕಿವಿಗೆ ಹೋಗಬಾರದು" ಎಂದು ಬೇಡಿಕೊಂಡನು. ಆಗ ಸಮರ್ಥರು ಆ ಶಿಷ್ಯನಿಗೆ—"ಅದರ ಬಗ್ಗೆ ಎಷ್ಟು ಮಾತ್ರಕ್ಕೂ ಚಿಂತೆ ಮಾಡಬೇಡ" ಎಂದು ಧೈರ್ಯ ಹೇಳಿದರು. ಮುಂದೆ ಆ ಶಿಷ್ಯನು ತನ್ನ ಗುರುಗಳಾದ ಮಧ್ವಾಚಾರ್ಯರ ಕಡೆಗೆ ಹೋಗಿ "ಸಮರ್ಥರು ಸಾಕ್ಷಾತ್ ಹನುಮಂತ ದೇವರ ಅವತಾರ" ವೆಂದು ಬಹಳ ಪ್ರಶಂಸೆ ಮಾಡಿದನು. ಕೆಲವು ದಿವಸಗಳ ತರುವಾಯ ಸಮರ್ಥರು ರಾಮೇಶ್ವರಕ್ಕೆ ಹೋದಾಗ ಇವರನ್ನು ಮಧ್ವಾಚಾರ್ಯರು ತಮ್ಮ ಉಡಪೀ ಮಠಕ್ಕೆ ಕರೆಕೊಂಡು ಹೋಗಿ ತಿಂಗಳೊಪ್ಪತ್ತು ಇಟ್ಟುಕೊಂಡು ಬಹಳ ಆದರ ಸತ್ಕಾರ ಮಾಡಿದರು. ಈ ಸಂಗತಿಯು ಶಕೆ ೧೫೭೬ ರಲ್ಲಿ ವರ್ತಿಸಿತು.

ಏಕಾಂತ ಭೋಜನ—ಸಮರ್ಥರು ನಿತ್ಯದಲ್ಲು ಏಕಾಂತದಲ್ಲಿ ಕುಳಿತು ಭೋಜನ ಮಾಡುತ್ತಿದ್ದರು. ಸಮರ್ಥರ ಎಲೆಯ ಮೇಲೆ ಯಾವತ್ತು ಪದಾರ್ಥಗಳನ್ನು ಬಡಿಸಿ ಆ ಎಲೆಯನ್ನು ಒಂದು ಕೋಣೆಯಲ್ಲಿ ಒಯ್ದು ಇಟ್ಟುಬರುವ ಸಾಂಪ್ರದಾಯವಿತ್ತು. ಸಮರ್ಥರು ಭೋಜನಕ್ಕಾಗಿ ಒಳಗೆ ಕೋಣೆಯಲ್ಲಿ ಹೋದ ಬಳಿಕ ಅವರ ಭೋಜನವು ಮುಗಿಯುವ ತನಕ ಅವರ ಕೋಣೆಯ ಕಡೆಗೆ ಯಾರೂ ಹೋಗಬಾರದೆಂಬ ನಿರ್ಬಂಧವಿತ್ತು. ಒಂದಾನೊಂದು ದಿವಸ ಪರಳಿಯಲ್ಲಿ ಸಮರ್ಥರು ಕೋಣೆಯೊಳಗೆ ಭೋಜನಕ್ಕೆ ಕುಳಿತಿದ್ದರು. ಸಮರ್ಥರಿಗಾಗಿ ಎಲೆಯ ಮೇಲೆ ಪದಾರ್ಥಗಳನ್ನು ಬಡಿಸಿಕೊಂಡು ಹೋಗಿ ವೇಣೂಬಾಯಿಯು ಕೋಣೆಯಲ್ಲಿಟ್ಟು ಬಂದಿದ್ದಳು. ಆದರೆ ಒಳಗೆ ಅಡಗೀಮನೆಯಲ್ಲಿ ಬಂದು ನೋಡಲು ಒಂದು ಪದಾರ್ಥವು ಸಮರ್ಥರ ನೈವೇದ್ಯಕ್ಕೆ ಅರ್ಪಣಮಾಡಿಲ್ಲವೆಂದು ವೇಣೂಬಾಯಿಯು ಕಂಡು ಲಗಬಗೆಯಿಂದ ಆ ಪದಾರ್ಥವನ್ನು ತೆಗೆದುಕೊಂಡು ಹೋಗಿ ಅವರು ಭೋಜನಕ್ಕೆ ಕುಳಿತ ಕೋಣೆಯ ಬಾಗಿಲವನ್ನು ಸ್ವಲ್ಪಸಾರಿಮಾಡಿ ನೋಡಲಾಗಿ ಮಾರುತಿಯು ವಿಶಾಲ ರೂಪವನ್ನು ಧಾರಣಮಾಡಿ ಒಳಗೆ ಭೋಜನವನ್ನು ಮಾಡುತ್ತಿದ್ದದ್ದು ಅವಳ ದೃಷ್ಟಿಗೆ ಬಿತ್ತು. ವೇಣೂಬಾಯಿಯು ಬಾಗಿಲವನ್ನು

ಮಾರಿಮಾಡಿ ಒಳಗೆ ಕೋಣೆಯ ಕಡೆಗೆ ನೋಡಿದಾಗ ಸಮರ್ಥರು ಮೂಗಿನಿಂದ ಸ್ವಲ್ಪ ಶ್ವಾಸಬಿಟ್ಟರೂ ಆ ಉಗ್ರರೂಪವನ್ನು ನೋಡಿದವಳೇ ವೇಣುಬಾಯಿಯು ಒಮ್ಮೆಲೇ ನಿಶ್ಚೇತಳಾಗಿ ಬಿದ್ದದ್ದನ್ನು ಕಂಡು ಅವರೆಲ್ಲರು ಓಡಿಬಂದು ಅವಳನ್ನು ಉಪಚರಿಸಹತ್ತಿದರು. ವೇಣೂಬಾಯಿಯು ವ್ಯಮೇಲೆ ಎಚ್ಚರವು ಬರಲೊಲ್ಲದಾಯಿತು. ಆಗ ಎಲ್ಲರು ಗಾಬರಿಯಾಗಿ ಒಬ್ಬರನ್ನೊಬ್ಬರು ಟಕಮಕ ನೋಡುತ್ತ ನಿಂತರು. ಅಷ್ಟರಲ್ಲಿ ಸಮರ್ಥರು ತಮ್ಮ ಭೋಜನವನ್ನು ತೀರಿಸಿಕೊಂಡು ಹೊರಗೆ ಬಂದರು. ಆಗ ಎಲ್ಲರೂ ಅವರಿಗೆ "ವೇಣುಬಾಯಿಯನ್ನು ಮೂರ್ಛೆಯಿಂದ ತಿಳಿದು ಮೇಲಕ್ಕೆ ಎಬ್ಬಿಸಬೇಕು" ಎಂತ ಬೇಡಿಕೊಂಡರು. ಆಗ ಸಮರ್ಥರು ಸಿಟ್ಟಿನಿಂದ "ನಿತ್ಯ ಸಾಂಪ್ರದಾಯವು ಗೊತ್ತಿದ್ದು ವೇಣುಬಾಯಿಯು ಭೋಜನವು ನಡೆದಿರುವಾಗ ನಡುವೇ ಅಲ್ಲಿಗೆ ಯಾಕೆ ಬರಬೇಕು" ಎಂದು ಉದ್ಗಾರ ತೆಗೆದರು. ಅದನ್ನು ಕೇಳಿ ಅಕ್ಕಾ ಎಂಬ ಹೆಸರಿನ ಶಿಷ್ಯಳು ಕೈಜೋಡಿಸಿ "ತಾಯಿ ತಂದೆಗಳು ಒತ್ತಟ್ಟಿಗೆ ಕೂಡಿ ಇರುವಾಗ ಸಣ್ಣ ಮಕ್ಕಳು ಅವರ ಒಳಗೆ ಹೋಗಲಿಕ್ಕೆ ಅಡ್ಡಿ ಏನಿರುವದು! ಒಂದು ವೇಳೆ ಅಂಥಾ ಅಪರಾಧವು ಘಟ್ಟಿ ಸಂಭವಿಸಿದಾಗ್ಯೂ ಮಕ್ಕಳನ್ನು ಶಿಕ್ಷಿಸುವದು ಯೋಗ್ಯವೇ?" ಎಂದು ನುಡಿದಳು. ಆಗ ಸಮರ್ಥರು ನಕ್ಕು "ಅಕ್ಕಾ! ಒಟ್ಟಿಗೆ ನೀವು ನನ್ನ ಮೇಲಿಗೋ ದೋಷ ಹೊರಿಸುತ್ತೀರಿ ಹಾಗಾದರೆ ಯಾಕಾಗಲೊಲ್ಲದು" ಎಂದು ಹೇಳಿ "ವೇಣೂ, ಮೇಲಕ್ಕೆ ಏಳು" ಎಂದು ದೊಡ್ಡ ಧ್ವನಿಯಿಂದ ಕೂಗಿದರು. ಆ ಕೂಡಲೆ ವೇಣುಬಾಯಿಯು ಮೂರ್ಛೆಯಿಂದ ತಿಳಿದು ಮೇಲಕ್ಕೆ ಎದ್ದಳು ಬಳಿಕ ಎಲ್ಲರು ತಮ್ಮ ಭೋಜನವನ್ನು ಮಾಡಿದರು.

ರಾಜ್ಯದಾನ—ಒಂದಾನೊಂದು ದಿವಸ ಸಮರ್ಥರು ಮಹಾಬಲಿ ತೀರ್ಥದಲ್ಲಿ ಸ್ನಾನ ಸಂಧ್ಯಾದಿಗಳನ್ನು ತೀರಿಸಿಕೊಂಡು ಕರ್ಜೆ ಎಂಬ ಊರಲ್ಲಿ ಭಿಕ್ಷೆಯನ್ನು ಬೇಡಿಕೊಂಡು ಬಂದು ಸಾತಾರೆಯ ಊರೊಳಗೆ ಭಿಕ್ಷೆಯನ್ನು ಬೇಡಲಿಕ್ಕೆ ಹೋದರು. ಶಿವಾಜಿ ಮಹಾರಾಜರು ರಾಯಗಡದಲ್ಲಿರಬಹುದೆಂಬ ತಿಳುವಳಿಕೆಯಿಂದ ಸಮರ್ಥರು ಸಾತಾರೆಯೊಳಗಿರುವ ಮಹಾರಾಜರ ಅರಮನೆಗೆ ಭಿಕ್ಷೆ ಬೇಡಲಿಕ್ಕೆ ಹೋಗಿ "ಜಯ ಜಯ ರಘುವೀರ ಸಮರ್ಥ" ವೆಂದು ಗರ್ಜನೆ ಮಾಡಿದರು. ಶಿವಾಜಿ ಮಹಾರಾಜರು ರಾಯಗಡದಿಂದ ಆದೇ ಬಂದು ಅರಮನೆಯೊಳಗೆ ಕುಳಿತಿದ್ದರು. ಅವರು ಸಮರ್ಥರ ಧ್ವನಿಯನ್ನು ಕೇಳಿ "ಇಂಥಾ ಸತ್ಪಾತ್ರರಿಗೆ ಯಾವ ಭಿಕ್ಷೆಯನ್ನು ಕೊಡತಕ್ಕದ್ದು?" ಎಂದು ಮನಸ್ಸಿನೊಳಗೆ ವಿಚಾರ ಮಾಡಿ, ಕೂಡಲೇ ತಮ್ಮ ಮಂತ್ರಿಯನ್ನು ಕರೆದು ಅವನ ಕೈಯಿಂದ "ಶ್ರೀ ಸಮರ್ಥರ ಚರಣಗಳಿಗೆ ಸರ್ವ ರಾಜ್ಯವನ್ನು ಅರ್ಪಣ ಮಾಡಿರುತ್ತೇನೆ" ಎಂಬ ಅರ್ಪಣ

ಪತ್ರಿಕೆಯನ್ನು ಬರಿಸಿ ಅದಕ್ಕೆ ರಾಜಮುದ್ರೆಯನ್ನು ಹಾಕಿ ಆ ಅರ್ಪಣ ಪತ್ರಿಕೆಯನ್ನು ತೆಗೆದುಕೊಂಡು ಹೋಗಿ ಭಕ್ತಿಪೂರ್ವಕವಾಗಿ ಸಮರ್ಥರ ಜೋಳಿಗೆಯಲ್ಲಿ ಹಾಕಿ ಅವರ ಪಾದಗಳಿಗೆ ನಮಸ್ಕರಿಸಿದರು. ಇದನ್ನು ನೋಡಿ ಸಮರ್ಥರು—“ಶಿವರಾಯಾ! ಇದು ಎಂಥಾ ಭಿಕ್ಷೆಯು! ನೀವು ನನಗೆ ಒಂದು ಹಿಡಿತುಂಬ ಅಕ್ಕಿಯನ್ನು ತಂದು ಹಾಕಿದ್ದರೆ ನನ್ನ ಮಧ್ಯಾಹ್ನದ ಊಟದ ಪಡಿಪಾಟಲವು ತಪ್ಪುತ್ತಿತ್ತು. ಆದರೆ ನೀವು ಈಪೊತ್ತು ಬರೀ ಕಾಗದದ ಮೇಲಿಂದ ನನ್ನ ಕ್ಷುಧೆಯನ್ನು ಶಾಂತಪಡಿಸುವಿರೋ?” ಎಂದು ನುಡಿದು ಆ ಕಾಗದವನ್ನು ಜೋಳಿಗೆಯಿಂದ ತೆಗೆದು ಓದಿದರು. ಆ ಕಾಗದದಲ್ಲಿ ಎಲ್ಲ ರಾಜ್ಯವನ್ನು ಸಮರ್ಥರಿಗೆ ಅರ್ಪಣ ಮಾಡಿದ ಸಂಗತಿಯು ಬರೆಯಲ್ಪಟ್ಟಿತ್ತು. ಅದನ್ನು ಓದಿಕೊಂಡು ಸಮರ್ಥರು ಶಿವಾಜಿ ಮಹಾರಾಜರಿಗೆ—“ಶಿವರಾಯಾ! ನೀವಂತೂ ನನಗೆ ರಾಜ್ಯವನ್ನು ಕೊಟ್ಟುಬಿಟ್ಟಿರಿ, ಇನ್ನುಮುಂದೆ ನೀವೇನು ಮಾಡಬೇಕೆಂತ ಆಲೋಚಿಸಿದ್ದೀರಿ?” ಎಂದು ಕೇಳಿದರು. ಅದಕ್ಕೆ ಮಹಾರಾಜರು ಕೈಜೋಡಿಸಿ— ತಮ್ಮ ಚರಣ ಸೇವೆಯುಲ್ಲಿದ್ದುಕೊಂಡು ಕಾಲಕ್ರಮಣ ಮಾಡುವೆನು” ಎಂದು ಉತ್ತರ ಕೊಟ್ಟರು. ಅದನ್ನು ಕೇಳಿ ಸಮರ್ಥರು ನಕ್ಕು “ಉತ್ತಮವಾಯಿತು; ನಮ್ಮ ಸಂಗಡ ನಡಿಯಿರಿ” ಎಂದು ಊರಲ್ಲಿ ಅವರನ್ನು ತಮ್ಮ ಸಂಗಡ ಭಿಕ್ಷೆ ಬೇಡಲಿಕ್ಕೆ ಕರೆದೊಯ್ದು ಮಧ್ಯಾಹ್ನದ ೨ ಗಂಟೆಗೆ ವೇಣಿಯ ತೀರದಲ್ಲಿ ಕಣಕದ ಮುದ್ದಿಯನ್ನು ಸುಟ್ಟು ತಿಂದು ಭೋಜನ ವಿಧಿಯನ್ನು ತೀರಿಸಿದರು. ಉಭಯತರು ಆ ಸ್ಥಳದಲ್ಲಿ ಭೋಜನೋತ್ತರ ಕುಳಿತಿರುವಾಗ ಸಮರ್ಥರು ಶಿವಾಜಿ ಮಹಾರಾಜರಿಗೆ ಅತ್ಯುತ್ತಮವಾದ ಉಪದೇಶವನ್ನು ಮಾಡಿದರು. ಅದರ ಸಾರಾಂಶವೇನಂದರೆ:—“ಅಪ್ಪಾ! ಪ್ರತಿಯೊಬ್ಬರು ತಮ್ಮ ತಮ್ಮ ಕೆಲಸಗಳನ್ನು ಮಾಡುವದೇ ಯೋಗ್ಯವು. ನಮ್ಮ ಸಹವಾಸದ ಸೌಖ್ಯವನ್ನು ಈಗ ಮನಗಂಡಿರಾ? ಆದ್ದರಿಂದ ನಮ್ಮ ಕೂಡ ಬರುವ ಹವ್ಯಾಸಕ್ಕೆ ಬೀಳಬೇಡಿರಿ. ಬ್ರಾಹ್ಮಣರು ಸ್ನಾನಸಂಧ್ಯಾದಿಗಳನ್ನು ನೆರವೇರಿಸಿ ಜ್ಞಾನ ಸಂಪಾದನೆಯನ್ನು ಮಾಡತಕ್ಕದ್ದು. ಕ್ಷತ್ರಿಯರು ಕ್ಷಾತ್ರಧರ್ಮವನ್ನು ಪಾಲಿಸತಕ್ಕದ್ದು. ಇದರಿಂದಲೇ ಪರಸ್ಪರರಿಗೆ ಮೋಕ್ಷ ಪ್ರಾಪ್ತಿಯಾಗುತ್ತದೆ. ಪ್ರತಿಯೊಬ್ಬರು ತಮ್ಮ ತಮ್ಮ ಕರ್ತವ್ಯಗಳನ್ನು ಯಥಾಯೋಗ್ಯ ರೀತಿಯಿಂದ ನೆರವೇರಿಸಿದರೆ ಅವರ ಜನ್ಮ ಸಾಫಲ್ಯವಾಗುವದು. ಪೂರ್ವದಲ್ಲಿ ಶ್ರೀ ರಾಮಚಂದ್ರನು ತನ್ನ ಕುಲಗುರುಗಳಾದ ವಶಿಷ್ಠರಿಗೆ ಅರ್ಧ ರಾಜ್ಯವನ್ನು ಅರ್ಪಣ ಮಾಡಿದ್ದನು. ಆ ಕಾಲಕ್ಕೆ ಅವರಾದರೂ ಶ್ರೀರಾಮಚಂದ್ರನಿಗೆ ಯೋಗವಾಸಿಷ್ಠವೆಂಬ ಹೆಸರಿನಿಂದ ಪ್ರಸಿದ್ಧವಿರುವ ನೀತಿ ನ್ಯಾಯ ಧರ್ಮ ತತ್ವಗಳನ್ನು ಉಪದೇಶಿಸಿ ಶ್ರೀರಾಮಚಂದ್ರನು ಅರ್ಪಣ ಮಾಡಿದ್ದ ರಾಜ್ಯವನ್ನು

ಅವನಿಗೆ ತಿರಿಗಿ ಕೊಟ್ಟನು. ಜನಕರಾಯನು ಯಾಜ್ಞವಲ್ಕ್ಯ ಮುನಿಗಳಿಗೆ ರಾಜ್ಯವನ್ನು ಅರ್ಪಣ ಮಾಡಿದ್ದನು. ಅವರಾದರೂ ಜನಕರಾಯನಿಗೆ ರಾಜಧರ್ಮವನ್ನು ಉಪದೇಶಿಸಿ ಅವನು ದಾನ ಕೊಟ್ಟಿದ್ದ ರಾಜ್ಯವನ್ನು ತಿರಿಗಿ ಒಪ್ಪಿಸಿದರು. ಆದ್ದರಿಂದ ನಮ್ಮಂಥ ಗೋಸಾವಿಗಳಿಗೆ ರಾಜ್ಯ ತೆಗೆದುಕೊಂಡು ಏನು ಮಾಡತಕ್ಕದ್ದದೆ? ನೀವು ಮಾಡಿದ ರಾಜ್ಯದಾನವನ್ನು ನಾವು ಪ್ರತಿಗ್ರಹ ಮಾಡಿದಾಗ್ಯೂ ನಮಗೆ ಆ ರಾಜ್ಯವನ್ನು ನಡಿಸಲಿಕ್ಕೆ ಮಂತ್ರಿಯು ಬೇಡವೇ? ನೀವೇ ನನ್ನ ಮಂತ್ರಿಯಾಗಿ ನನ್ನ ರಾಜ್ಯವೆಂತಲೇ ತಿಳಿದು ರಾಜ್ಯಭಾರವನ್ನು ಮಾಡಿರಿ ಎಲೋ! ಪ್ರತಿಯೊಂದು ಕಾರ್ಯವನ್ನು ಮಾಡುವಾಗ ಸಾರಾಸಾರ ವಿಚಾರವನ್ನು ಮಾಡುತ್ತಿರಬೇಕು' ಸಮರ್ಥರು ಮಾಡಿದ ಈ ಉಪದೇಶವನ್ನು ಕೇಳಿ ಶಿವಾಜಿ ಮಹಾರಾಜರಿಗೆ ತಮ್ಮ ರಾಜ್ಯವನ್ನು ತಿರಿಗಿ ತೆಗೆದುಕೊಳ್ಳುವ ಹೊರತಾಗಿ ಎರಡನೇ ಮಾರ್ಗವೇ ಉಳಿಯಲಿಲ್ಲ. ಆಗ ಮಹಾರಾಜರು ಸಮರ್ಥರಿಗೆ—" ನಿಮ್ಮ ಪಾದುಕಗಳನ್ನಾದರೂ ಕೊಡಿರಿ. ಅಂದರೆ ಅವುಗಳನ್ನು ಸಿಂಹಾಸನದ ಮೇಲಿರಿಸಿ ನಿಮ್ಮ ಹೆಸರಿನಿಂದ ನಿಮ್ಮ ರಾಜ್ಯವನ್ನು ನಡಿಸುತ್ತೇನೆ" ಎಂದು ನುಡಿದರು. ಆಗ ಸಮರ್ಥರು ತಮ್ಮ ಕಾಲೊಳಗಿನ ಪಾದುಕಗಳನ್ನು ತೆಗೆದು ಮಹಾರಾಜರಿಗೆ ಒಪ್ಪಿಸಿದರು. ತರುವಾಯ ಮಹಾರಾಜರು ಸಮರ್ಥರಿಗೆ—" ನಿಮ್ಮ ರಾಜಚಿನ್ಹವನ್ನು ಜನರಿಗೆ ತಿಳುಹುವದಕ್ಕೆ ಏನಾದರೂ ಗುರುತು ಕೊಡಿರಿ" ಎಂದು ಬೇಡಿಕೊಂಡರು. ಅದನ್ನು ಕೇಳಿ ಸಮರ್ಥರು ನಕ್ಕು—" ಎಲೋ! ನಾವು ಹೇಳಿ ಕೇಳಿ ಗೋಸಾವಿಗಳು. ನಮ್ಮ ರಾಜಚಿನ್ಹವು ಏನಿರಬೇಕಾಗಿದೆ? ಭಗವಿ ವಸ್ತ್ರಗಳೇ ನಮ್ಮ ಚಿನ್ಹವೆಂದು ತಿಳಿದುಕೋ! ಆದ್ದರಿಂದ ಇನ್ನು ಮುಂದೆ ಮಹಾರಾಷ್ಟ್ರ ರಾಜ್ಯದ ನಿಶಾನಿಯನ್ನು ಭಗವೀ ವಸ್ತ್ರದಿಂದ ಮಾಡಿಸು" ಎಂದು ಅಜ್ಞೆಯನ್ನು ಕೊಟ್ಟರು. ಆಗಿನಿಂದ ಶಿವಾಜಿ ಮಹಾರಾಜರು "ಭಗವಾಝೇಂಡಾ" ಎಂಬ ನಿಶಾನಿಯನ್ನು "ಸಮರ್ಥರ ರಾಜ್ಯದ ಚಿನ್ಹ"ವೆಂದು ಪ್ರಸಿದ್ಧ ಮಾಡಿ ರಾಜ್ಯವನ್ನು ನಡಿಸಿದರು. ಸಮರ್ಥರು ಮಹಾರಾಜರಿಗೆ ಈ ಉಪದೇಶವನ್ನು ಮಾಡಿದ ತರುವಾಯ ಪುನಃ ಶಕೆ ೧೫೭೭ರಲ್ಲಿ ರಾಮೇಶ್ವರ ಯಾತ್ರೆಯನ್ನು ಮಾಡಿಕೊಂಡು ಬರಲಿಕ್ಕೆ ಹೊರಟರು.

ರಾಮೇಶ್ವರ ಯಾತ್ರೆ—ಸಮರ್ಥರು ರಾಮೇಶ್ವರ ಯಾತ್ರೆಯಗೋಸ್ಕರ ಹೋಗುವಾಗ್ಗೆ ಮಾರ್ಗದಲ್ಲಿ ಚಿಕ್ಕೋಡಿ ಎಂಬಲ್ಲಿ ಇಳಿದರು. ಅಲ್ಲಿ ತಿಮ್ಮಾಜಿಪಂತ ದೇಶಪಾಂಡೆ ಎಂಬ ಹೆಸರಿನ ಒಬ್ಬ ಜಗಪ್ರಸಿದ್ಧನಿದ್ದನು. ಅವನು ತನ್ನ ಊರಿಗೆ ಸಮರ್ಥರು ಬಂದಿರುತ್ತಾರೆಂಬ ವರ್ತಮಾನ ಕೇಳಿ ಅವರ ದರ್ಶನ ತಕ್ಕೊಂಡು ಅವರ ಕಡೆಯಿಂದ ಅನುಗ್ರಹಪ್ರಸಾದವನ್ನು ತೆಗೆದುಕೊಂಡನು. ಸಮರ್ಥರು ಅವನಿಗೆ ರಾಮಪಂಚಾಯತನವನ್ನು ಕೊಟ್ಟು ಅವನ ಮಸ್ತಕದ ಮೇಲೆ ವರದ ಹಸ್ತವನ್ನಿಟ್ಟು

ಮುಂದಕ್ಕೆ ಸಾಗಿದರು. ತಿಮ್ಮಾಜಿಪಂತನು ಪ್ರತಿದಿನದಲ್ಲು ರಾಮಪಂಚಾಯತನವ ನ್ನು ಬಹಳ ಭಕ್ತಿಯಿಂದ ಪೂಜಿಸುತ್ತಿದ್ದನು. ಒಂದು ದಿನ ಅವನು ಬಹಿರ್ದಿಶೆಗೆ ಹೋದಾಗ್ಗೆ ಒಂದು ಸರ್ಪವು ಅವನನ್ನು ಕಚ್ಚಿತು. ಅವನು ಬಹಿರ್ದಿಶೆಯಿಂದ ತಿರಿಗಿ ಬಂದ ತರುವಾಯ ಶ್ರೀರಾಮಚಂದ್ರನ ಮುಂದೆ ಕುಳಿತು ಕರುಣಾಪ ರವಾದ ಪದ್ಯಗಳಿಂದ ಆತನ ಸ್ತೋತ್ರ ಮಾಡಿದನು. ಆಗ ತಿಮ್ಮಾಜಿಪಂತನ ಮೈಯ ಲ್ಲಿ ಭೇದಿಸಿದ್ದ ವಿಷವೆಲ್ಲ ಇಳಿದು ಶ್ರೀರಾಮಚಂದ್ರನ ಮೈಯೊಳಗೆ ಸೇರಿದ್ದರಿಂದ ರಾಮಮೂರ್ತಿಯು ಕರ್ರಗೆ ಇದ್ದಲಿಯ ಬಣ್ಣದ್ದಾಯಿತು! ಅದನ್ನು ನೋಡಿ ತಿಮ್ಮಾಜಿಪಂತನು ತನ್ನಗೋಸ್ಕರ ದೇವರಿಗೆ ದುಃಖ ಕೊಟ್ಟಂತಾಯಿತೆಂದು ನೆನಿಸಿ ಶ್ರೀ ರಾಮಚಂದ್ರನಿಗೆ—ಎಲೌ ದೇವಾಧಿದೇವನೇ! ನಿನ್ನ ಮೂರ್ತಿಯು ಮುಂಚಿ ನಂತೆ ಆಗದಿದ್ದರೆ ನಾನು ನನ್ನ ಕುತ್ತಿಗೆಯನ್ನು ಒತ್ತಿಕೊಂಡು ನಿನ್ನ ಮುಂದೆ ನನ್ನ ಪ್ರಾಣವನ್ನು ಕಳೆದುಕೊಳ್ಳುತ್ತೇನೆ" ಎಂದು ತನ್ನ ದೃಢನಿಶ್ಚಯವನ್ನು ತಿಳಿಸಿದನು. ಆಗ ಆ ರಾಮಚಂದ್ರನ ಮೂರ್ತಿಯು ಪುನಃ ಮೊದಲಿನಂತೆ ಆಯಿತು. ತರುವಾ ಯ ತಿಮ್ಮಾಜಿಪಂತನು ಮಾರನೇ ದಿವಸ ಪರಮಸಂತೋಷದಿಂದ ಬ್ರಾಹ್ಮಣ ಭೋ ಜನವನ್ನು ಮಾಡಿಸಿ ರಾಮಪಂಚಾಯತನ ಮೂರ್ತಿಯನ್ನು ತನ್ನ ಮನೆಯಲ್ಲಿ ಸ್ಥಾಪಿ ಸಿದನು.

ತಂಜಾವರಕ್ಕೆ ಪ್ರಯಾಣಮಾಡಿದ್ದು—ಸಮರ್ಥರು ಚಿಕ್ಕೋಡಿಯಿಂದ ಹೊರಟು, ಮಾರ್ಗದಲ್ಲಿ ತಮಗೆ ಶರಣು ಬಂದವರಿಗೆಲ್ಲ ಅನುಗ್ರಹವನ್ನು ಕೊಡು ತ್ತಲು ರಾಮೇಶ್ವರಕ್ಕೆ ಪ್ರಯಾಣ ಮಾಡಿದರು. ಶ್ರೀ ಅಪ್ಪಯ್ಯ ದೀಕ್ಷಿತ ಎಂಬ ವರು ಕಾವೇರಿ ನದಿಯ ತೀರದಲ್ಲಿ ಆಡಪಳೆ ಎಂಬ ಊರಲ್ಲಿ ಇರುತ್ತಿದ್ದರು. ಅವ ರು ಕೇವಲ ಸಾಂಬನ ಅವತಾರವೇ ಆಗಿದ್ದರು. ಸಮರ್ಥರು ಅವರು ಇದ್ದಲ್ಲಿಗೆ ಹೋಗಿ ಅವರ ಭೇಟಿಯನ್ನು ತೆಗೆದುಕೊಂಡು ತಂಜಾವರಕ್ಕೆ ಹೋಗುವದಕ್ಕಾಗಿ ಮುಂದಕ್ಕೆ ಸಾಗಿದರು. ಆಗ ವೆಂಕೋಜಿರಾಜರು ಸಮರ್ಥರನ್ನು ತಮ್ಮ ಸ್ಥಳಕ್ಕೆ ಕರೆದುಕೊಂಡು ಹೋಗಿ ಅವರಿಗೋಸ್ಕರ ಇಳಿದುಕೊಳ್ಳಲಿಕ್ಕೆ ಸ್ವತಂತ್ರವಾದ ವ್ಯವಸ್ಥೆಯನ್ನು ಮಾಡಿ ಅವರ ಸೇವೆಯನ್ನು ಮಾಡಲಿಕ್ಕೆ ತಾವೇ ಟೊಂಕಕ ಟ್ಟಿಕೊಂಡು ನಿಂತರು. ವೆಂಕೋಜಿರಾಜರ ಆಶ್ರಯದಲ್ಲಿ ಆಂಧ್ರ ದೇಶದ ಒಬ್ಬ ವಿದ್ವಾಂಸನಾದ ಬ್ರಾಹ್ಮಣನಿರುತ್ತಿದ್ದನು. ಅವನಿಗೆ ರಾಜರು ತಮ್ಮ ಗುರುಗಳಂತೆ ನ ಡೆದುಕೊಳ್ಳುತ್ತಿದ್ದರು. ಆದರೆ ಸಮರ್ಥರು ಬಂದತರುವಾಯ ರಾಜರ ಲಕ್ಷ್ಯವು ಸಮರ್ಥರ ಸೇವೆಯಕಡೆಗೆ ಹತ್ತಿದ ಕಾರಣ ಅದನ್ನು ಅವನು ಸೇರಲಾರದೆ ತನ್ನ ವರ್ಚಸ್ವವು ಇನ್ನು ಮುಂದೆ ರಾಜಸನ್ನಿಧಿಯಲ್ಲಿ ಕಡಿಮೆಯಾಗುವದೆಂಬ ಕ್ಷುದ್ರ ವಿಚಾರದಿಂದ ಸಮರ್ಥರಿಗೆ ಅನುಲಕ್ಷಿಸಿ— "ನೀವು ಬ್ರಹ್ಮಚಾರಿಗಳಾಗಿ ನಿಮ

ಸಂಗಡ ಸ್ತ್ರೀಯರನ್ನು ಕರೆದುಕೊಂಡು ಪ್ರವಾಸಮಾಡುವದು ಭೂಷಣವಲ್ಲ" ಎಂತ ನುಡಿದನು. ಇದನ್ನು ಕೇಳಿ ಸಮರ್ಥರು ಆ ಬ್ರಾಹ್ಮಣನನ್ನು ಏಕಾಂತದಲ್ಲಿ ಕರೆದುಕೊಂಡು ಹೋಗಿ ಸ್ವೇಚ್ಛೆಯಿಂದ ವೀರ್ಯವನ್ನು ಹೊರಗೆ ಬಿಟ್ಟು ಪುನಃ ಅದನ್ನು ಒಳಗೆ ಆಕರ್ಷಣಮಾಡಿಕೊಂಡು ತೋರಿಸಿದರು. ಈ ಅದ್ಭುತ ಸಾಮರ್ಥ್ಯವನ್ನು ಆ ಬ್ರಾಹ್ಮಣನು ಕಂಡು ತಾನು ನುಡಿದ ಮಾತಿಗೆ ಬಹಳ ವಿಸ್ಮಯ ಪಟ್ಟು ಸಮರ್ಥರ ಕ್ಷಮೆಯನ್ನು ಬೇಡಿಕೊಂಡನು. ತರುವಾಯ ಆ ಬ್ರಾಹ್ಮಣನು ಸಮರ್ಥರನ್ನು ಅತಿ ಸಂಭ್ರಮದಿಂದ ತನ್ನ ಮನೆಗೆ ಕರೆದುಕೊಂಡು ಹೋಗಿ ಅವರನ್ನು ಅತ್ಯಾದರದಿಂದ ಪೂಜಿಸಿ ಅವರಿಂದ ಅನುಗ್ರಹವನ್ನು ತೆಗೆದುಕೊಂಡನು. ಹೀಗೂ ವ್ಯಂಕೋಜಿ ಮಹಾರಾಜರಿಗೆ ಸಮರ್ಥರ ಕೈಯಿಂದ ಅನುಗ್ರಹ ತೆಗೆದುಕೊಳ್ಳಲಿಕ್ಕೆ ಆ ಬ್ರಾಹ್ಮಣನು ಪ್ರೇರೇಪಿಸಿದನು. ಈ ಮೇರೆಗೆ ಸಮರ್ಥರು ವ್ಯಂಕೋಜಿ ಮಹಾರಾಜರಿಗೆ ಶಕೆ ೧೫೭೭ ಜೇಷ್ಠ ವದ್ಯ ತೃತಿಯಾ ದಿವಸ ಅನುಗ್ರಹವನ್ನು ಕೊಟ್ಟು ಮುಂದೆ ತಂಜಾವರದಲ್ಲಿ ಒಂದು ಮಠವನ್ನು ಸ್ಥಾಪನೆಮಾಡಿ ಆ ಮಠದೊಳಗೆ ಭಿಕ್ಕಾಜಿ ಗೋಸಾವಿಯನ್ನೂ ಮೌನಿಗೋಸಾವಿಯನ್ನೂ ಇಟ್ಟು ಶ್ರೀ ರಾಮೇಶ್ವರಕ್ಕೆ ಹೋದರು. ಅಲ್ಲಿಂದ ಮಂಜಾಳಕ್ಕೆ ಹೋಗಿ ಶ್ರೀ ರಾಘವೇಂದ್ರ ಸ್ವಾಮಿಗಳ ಭೇಟಿಯನ್ನು ತೆಗೆದುಕೊಂಡು ಉಡಪಿ ಮತ್ತು ಸುಬ್ರಹ್ಮಣ್ಯ ಕ್ಷೇತ್ರಗಳಿಗೆ ಹೋದರು. ಅಲ್ಲಿ ಕೆಲವು ದಿವಸಗಳ ಪರಿಯಂತರ ಇದ್ದು ಕೃಷ್ಣಾ ತೀರಕ್ಕೆ ತಿರಿಗಿ ಬಂದರು. ಸಮರ್ಥರು ರಾಮೇಶ್ವರ ಯಾತ್ರೆಯನ್ನು ಮಾಡಿಕೊಂಡು ಮರಳಿ ಬಂದರೆಂಬ ವರ್ತಮಾನವನ್ನು ಕೇಳಿ ಶ್ರೀ ಶಿವಾಜಿ ಮಹಾರಾಜರು ತೊರಗಲ್ಲದ ವರೆಗೆ ಹೋಗಿ ಸಮರ್ಥರನ್ನು ಎದುರುಗೊಂಡು ಚಾಫಳದ ಮಠಕ್ಕೆ ಕರೆದುಕೊಂಡು ಬಂದರು. ಅಲ್ಲಿ ಕೆಲವು ದಿವಸಗಳ ವರೆಗೆ ಸಮರ್ಥರು ಉಳಿದು ರಾಯಗಡಕ್ಕೆ ಹೊರಟು ಹೋದರು. ಈ ಸಂಗತಿಯು ಶಕೆ ೧೫೭೭ರಲ್ಲಿ ವರ್ತಿಸಿತು.

ಸಮರ್ಥರ ಮಾತೋಶ್ರೀಯು ಪರಲೋಕಕ್ಕೆ ತೆರಳಿದ್ದು —ಮುಂದೆ ಸಮರ್ಥರು ಪರಳಿಯಲ್ಲಿರುವಾಗ್ಗೆ ಕೆಲವು ಶಿಷ್ಯರನ್ನು ತಮ್ಮ ಬಳಿಗೆ ಕರೆದು "ನಾವು ಈವತ್ತಿನಿಂದ ೧೫ ದಿವಸಗಳ ತನಕ ಕೋಣೆಯಲ್ಲಿರುತ್ತೇವೆ. ನಾವು ಕೋಣೆಯಲ್ಲಿ ಹೋಗಿ ಕೂತ ತರುವಾಯ ಬಾಗಿಲಕ್ಕೆ ಹೊರಗಿಂದ ಬೀಗಹಾಕಿಕೊಂಡು ೧೬ನೇ ದಿವಸ ಬಾಗಿಲವನ್ನು ತೆರೆಯಿರಿ" ಎಂದು ಆಜ್ಞೆಯನ್ನು ಕೊಟ್ಟು ಕೋಣೆಯೊಳಗೆ ಹೋಗಿ ಕೂತರು. ಶಿಷ್ಯರು ತಮಗೆ ಅಪ್ಪಣೆಯನ್ನು ಕೊಟ್ಟ ಮೇರೆಗೆ ಕೋಣೆಯ ಬಾಗಿಲವನ್ನು ಮುಚ್ಚಿ ಬೀಗವನ್ನು ಹಾಕಿದರು. ಇತ್ತ ಲಾಜಾಂಬ ಎಂಬ ಊರಲ್ಲಿ ಅವರ ಮಾತೋಶ್ರೀಯು ಅಂತ್ಯಕಾಲವು ಸಮೀಪಿಸಿ ಅವಳು

ತನ್ನ ಹಿರೆ ಮಗನಾದ ಶ್ರೀಕೃಷ್ಣನ ತೊಡೆಯ ಮೇಲೆ ತಲೆಯನ್ನು ಕೊಟ್ಟು ಮಲಗಿಕೊಂಡಿರುವಾಗ ಸಮರ್ಥರನ್ನು ನೆನಿಸಿ "ನನ್ನ ಅಂತ್ಯಕಾಲಕ್ಕೆ ನನ್ನ ಹತ್ತರ ನಾರಾಯಣನು ಇರಲಿಲ್ಲವಲ್ಲಾ!" ಎಂಬ ಉದ್ಗಾರಗಳನ್ನು ತೆಗೆದಳು. ಇಷ್ಟರಲ್ಲಿ ಸಮರ್ಥರು ಅವಳ ಬಳಿಗೆ ಹೋಗಿ ಅವಳಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ "ಮಾತೋಶ್ರೀ! ಇನ್ನು ನೀವು ಮನಸ್ಸಿನಲ್ಲಿ ಯಾವ ತರದ ಖೇದವನ್ನೂ ತರಬಾರದು. ನೀವು ಸಾಕ್ಷಾತ್ ಭಗವತಿಯು! ಆದಿ ತಾಯಿಯಾದ ಅಂಬಿಕೆಯು! ನೀವು ನಮಗೆ ಜನನವನ್ನು ಕೊಟ್ಟು ಉದ್ಧಾರ ಮಾಡಿದಿರಿ" ಎಂದು ಬಹು ಪರಿಯಿಂದ ಅವಳಿಗೆ ಸಮಾಧಾನ ಹೇಳಿದರು ಇಷ್ಟರಲ್ಲಿ ಅವಳು "ಶಿವ! ಶಿವ!" ಎಂಬ ನಾಮೋಚ್ಚಾರ ಮಾಡಿ "ರಾಮ" ಎಂಬ ಶಬ್ದದ ಸಂಗಡವೇ ಪರಂಧಾಮಕ್ಕೆ ಹೋದಳು! ಆವೊತ್ತು ಶಕೆ ೧೫೭೭ ನೇ ಕಾರ್ತೀಕ ಶುದ್ಧ ಪ್ರತಿಪದೆಯು ಇತ್ತು. ತರುವಾಯ ಶ್ರೀಕೃಷ್ಣನೂ ಸಮರ್ಥರೂ ೧೫ ದಿವಸಗಳತನಕ ಯಥಾವಿಧಿಪೂರ್ವಕವಾಗಿ ಅವಳ ಉತ್ತರ ಕಾರ್ಯವನ್ನು ನೆರವೇರಿಸಿದರು. ಇತ್ತಲಾ ಪರಳಿಯಲ್ಲಿ ಸಮರ್ಥರ ಶಿಷ್ಯರು ೧೬ ನೇ ದಿವಸ ಸಮರ್ಥರ ಅಪ್ಪಣೆಯ ಮೇರೆಗೆ ಕೋಣೆಯ ಬಾಗಿಲವನ್ನು ತೆರೆದು ನೋಡಲಾಗಿ ಒಳಗೆ ಸಮರ್ಥರು ಇದ್ದಿಲ್ಲ. ಇದನ್ನು ನೋಡಿ ಶಿಷ್ಯರೆಲ್ಲರು ಬಹಳ ಆಶ್ಚರ್ಯ ಚಕಿತರಾದರು. ಇಷ್ಟರಲ್ಲಿ ಯಾರೋ ಬಂದು ಸಮರ್ಥರು ಅಂಗಲಾಯಿ ಗುಡಿಯೊಳಗೆ ಕುಳಿತಿರುವರೆಂಬ ವರ್ತಮಾನವನ್ನು ಶಿಷ್ಯರಿಗೆ ತಿಳಿಸಿದರು. ಆಗ ಆ ಶಿಷ್ಯರು ಆಗುಡಿಗೆ ಹೋಗಿ ನೋಡುವಷ್ಟರಲ್ಲಿ ಸಮರ್ಥರು ಕ್ಷೌರವಿಧಿಯನ್ನು ಮಾಡಿಸಿಕೊಂಡು ಕುಳಿತಿದ್ದರು. ಸಮರ್ಥರು ಮುಂಡನ ಮಾಡಿಸಿಕೊಂಡು ಕುಳಿತದ್ದನ್ನು ಕಂಡು ಅವರ ಶಿಷ್ಯರು "ಇದೇನು!" ಎಂದು ವಿಚಾರಿಸಲಾಗಿ "ನಮ್ಮ ಮಾತೋಶ್ರೀಯು ನಿಜಧಾಮಕ್ಕೆ ಹೋದ್ದರಿಂದ ನಾನು ಅವಳಕಡೆಗೆ ಹೋಗಿದ್ದೆ" ಎಂದು ಹೇಳಿದರು. ಸಮರ್ಥರ ಲೀಲೆಯನ್ನು ನೋಡಿ ಎಲ್ಲರು ಕೌತುಕಪಟ್ಟರು.

**ಶಿವಾಜಿಗೆ ಉಪದೇಶ:**— ಸಮರ್ಥರ ತಾಯಿಯು ನಿವರ್ತಿಸಿದ ವರ್ತಮಾನವು ಶ್ರೀಶಿವಾಜಿ ಛತ್ರಪತಿಗಳಿಗೆ ತಿಳಿದು ಬಂದದ್ದರಿಂದ ಅವರೂ ಸಮರ್ಥರ ಸಮಾಚಾರಕ್ಕಾಗಿ ಬಂದು ಜಾಂಬಗ್ರಾಮದ ಯಾವತ್ತು ಸಂಗತಿಗಳನ್ನು ವಿಚಾರಿಸುತ್ತಲು ಸಮರ್ಥರ ಸಾನ್ನಿಧ್ಯದಲ್ಲಿ ಕೆಲವು ದಿವಸ ಉಳಿದುಕೊಂಡರು. ಒಂದು ದಿವಸ ಸಮರ್ಥರು ಸ್ವಸ್ಥಚಿತ್ತದಿಂದ ಕುಳಿತಿರುವಾಗ ಶ್ರೀಶಿವಛತ್ರಪತಿಗಳು ಸವಿನಯದಿಂದ— "ಜನ್ಮವಾಗುವ ಕಾರಣವೇನು?" ಎಂದು ವಿಚಾರಿಸಿದರು. ಅದಕ್ಕೆ ಸಮರ್ಥರು "ಅಪ್ಪಾ! ಅಪೇಕ್ಷೆಯು ಜನ್ಮದ ಅಂಕುರವು" ಎಂದು ಉತ್ತರ ಕೊಟ್ಟರು. ಆಗ ಛತ್ರಪತಿಗಳು— "ಈ ಅಪೇಕ್ಷೆಯನ್ನು ಕೊಲ್ಲುವ ಬಗೆ ಯಾವ

ದು?'' ಎಂದು ಕೇಳಿದರು. ಅದಕ್ಕೆ ಸಮರ್ಥರು— ''ಸದ್ಗುರುವಿಗೆ ಶರಣು ಹೋಗುವವರಿಂದ, ಅಧ್ಯಾತ್ಮಪ್ರಾವಿಣ್ಯದಿಂದ, ಮತ್ತು ಅಭ್ಯಾಸದ ಯೋಗದಿಂದ ಅಪೇಕ್ಷೆಯನ್ನು ಕೊಲ್ಲಲಿಕ್ಕೆ ಆಗುತ್ತದೆ'' ಎಂದು ಹೇಳಿ ತಮ್ಮಹತ್ತರ ಶೇಯ್ದಿಟ್ಟಿದ್ದ ಗಂಧವನ್ನು ರಾಜಶ್ರೀಗಳ ಧೋತರದ ಶೆರಗಿನಲ್ಲಿ ಹಾಕಿ ಅದನ್ನು ಹಿಂಡಲಿಕ್ಕೆ ಅಜ್ಞಾಪಿಸಿದರು. ಈ ಮೇರೆಗೆ ಛತ್ರಪತಿಗಳ ಕೈಯಿಂದ ಆ ಧೋತರದ ಸೆರಗನ್ನು ಎರಡು ಮೂರಾವರ್ತಿ ಹಿಂಡಿಸಿದರು. ಅದರಿಂದ ಆ ಧೋತರವು ಮುಂಚಿನಂತೆ ಒಣಗಿತು ಆಗ ಸಮರ್ಥರು ''ಇದೇ ಪ್ರಕಾರ ಅಪೇಕ್ಷೆಯೆಂಬದು ನಾಶವಾಗುತ್ತದೆ'' ಎಂದು ಹೇಳಿದರು. ರಾಜಶ್ರೀಗಳು ''ಅಜ್ಞಾನದ ಮೂಲಕ ಇನ್ನೂ ಈ ವಿಷಯವು ಚನ್ನಾಗಿ ತಿಳಿಯಲೊಲ್ಲದು'' ಎಂದು ಸಮರ್ಥರಿಗೆ ಪುನಃ ವಿನಂತಿ ಮಾಡಿಕೊಂಡರು. ಆಗ ಸಮರ್ಥರು ರಾಜಶ್ರೀಗಳಿಗೆ ಕೆಲವು ಹೊತ್ತು ಸುಂದರವಾದ ಉಪದೇಶವನ್ನು ಮಾಡಿ ಅನಾತ್ಮವಾದದ್ದನ್ನು ಆತ್ಮದಿಂದ ಪೃಥಕ್ಕರಣ ಮಾಡಿದರೆ ಅಪೇಕ್ಷೆಯೆಂಬದು ದಗ್ಧವಾಗಿಹೋಗುತ್ತದೆಂಬ ವಿಷಯವನ್ನು ಚನ್ನಾಗಿ ತಿಳಿಸಿಗೊಟ್ಟರು. ಸಮರ್ಥರ ಭಾಷಣವನ್ನು ಕೇಳಿ ರಾಜಶ್ರೀಗಳು— ''ನನ್ನ ಜೀವಕ್ಕೆ ಅಪೇಕ್ಷೆಯೆಂಬದು ಯಾವದೂ ಉಳಿದಿಲ್ಲ. ಆದರೆ ಈ ನನ್ನ ಶಸ್ತ್ರದ ಮೇಲಿನ ಮೋಹವೊಂದು ಮಾತ್ರ ಉಳಿದಿರುತ್ತದೆ. ಅದನ್ನೂ ಈ ಹೊತ್ತು ಶ್ರೀಗಳವರ ಚರಣಕ್ಕೆ ಅರ್ಪಿಸಿ ಬಿಡುತ್ತೇನೆ'' ಎಂದು ನುಡಿದು ತಮ್ಮ ಬಳಿಯಲ್ಲಿ ಅಹೋರಾತ್ರಿ ಇಟ್ಟಿರುತ್ತಿದ್ದ ಭವಾನಿತರವಾರ ವೆಂಬ ಶಸ್ತ್ರವನ್ನು ಸಮರ್ಥರಿಗೆ ಒಪ್ಪಿಸಿ ಸಮರ್ಥರ ಅಪ್ಪಣೆಯನ್ನು ಪಡೆದು ಪ್ರತಾಪಗಡಕ್ಕೆ ಹೊರಟು ಹೋದರು. ಆಗಿನಿಂದ ಸಮರ್ಥರು ಈ ಭವಾನಿತರವಾರ ವನ್ನು ಯಾವಾಗಲು ತಮ್ಮ ತಲೆಗಿಂಬಿಗೆ ಇಟ್ಟು ಕಾಪಾಡಹತ್ತಿದರು. ಈ ಸಂಗತಿಯು ಶಕೆ ೧೫೭೭ರಲ್ಲಿ ವರ್ತಿಸಿತು.

ಏಕನಾಥನೆಂಬ ಬ್ರಾಹ್ಮಣನಿಗೆ ಸಮರ್ಥರು ಮಾಡಿತೋರಿಸಿದ ಚಮತ್ಕಾರವು—ಪೈಠಣ ಎಂಬ ಊರಲ್ಲಿ ಏಕನಾಥನೆಂಬ ಬ್ರಾಹ್ಮಣನು ಇರುತ್ತಿದ್ದನು. ಅವನು ಉದರನಿಮಿತ್ತವಾಗಿ ಕೆಲವು ದಿವಸ ತನ್ನ ಮನೆಯನ್ನು ಬಿಟ್ಟು ದೇಶಾಂತರಕ್ಕೆ ಹೋಗಿ ವಕೀಲಿಯನ್ನು ಮಾಡಿ ೩-೪ ವರ್ಷಗಳಲ್ಲಿ ೬೦ ಹೊನ್ನುಗಳನ್ನು ಸಂಪಾದಿಸಿ ತನ್ನ ಊರಿಗೆ ಬರಬೇಕೆಂದು ಹೊರಟಿರುವಾಗ ಮಾರ್ಗದಲ್ಲಿ ಸಮರ್ಥರ ಕೀರ್ತಿಯನ್ನು ಕೇಳಿ ಪೂರ್ವದಲ್ಲಿ ತನ್ನ ಊರೊಳಗೆ ಆಗಿಹೋದ ಏಕನಾಥಸ್ವಾಮಿಗಳಂತೆ ಇವರಲ್ಲೇನಾದರೂ ಚಮತ್ಕಾರಗಳಿದ್ದರೆ ಅವಲೋಕಿಸಬೇಕೆಂಬ ಕುತೂಹಲದಿಂದ ಚಾಫಳಕ್ಕೆ ಬಂದನು. ಅಲ್ಲಿ ಸಮರ್ಥರು ಇದ್ದಿಲ್ಲ. ಆಗ ಏಕನಾಥಪಂತನು ಕಲ್ಯಾಣಸ್ವಾಮಿಯನ್ನು ಕರೆದುಕೊಂಡು ರಾಮಘಳಿ ಎಂಬ ಊರಿಗೆ ಬಂದನು. ಆಗ ಸಮರ್ಥರು ಒಂದು ಜಲಾಶಯದ ಬದಿಗೆ ಕುಳಿತಿದ್ದರು. ಅವರನ್ನು ಕಂಡು

ಏಕನಾಥಪಂತನು ಸಮಸ್ಕರಿಸಲು ಕಲ್ಯಾಣಸ್ವಾಮಿಯು ಏಕನಾಥಪಂತನ ಪೂರ್ವೋತ್ತರವನ್ನು ಸಮರ್ಥರಿಗೆ ನಿವೇದನ ಮಾಡಿದನು. ಅದನ್ನೆಲ್ಲ ಸಮರ್ಥರು ಕೇಳಿಕೊಂಡು "ಈಗಂತೂ ಮಧ್ಯಾಹ್ನವಾಯಿತು. ಸ್ನಾನಸಂಧ್ಯಾದಿಗಳನ್ನು ತೀರಿಸಿ ರಘುಪತಿಯ ಪ್ರಸಾದ ತೆಗೆದುಕೊಂಡ ತರುವಾಯ ಹೋಗಬಹುದು" ಎಂದು ಏಕನಾಥಪಂತನಿಗೆ ಅಪ್ಪಣೆಯನ್ನು ಮಾಡಿದರು. ಆಗ ಏಕನಾಥಪಂತನು ತನ್ನ ಮನಸ್ಸಿನಲ್ಲಿ—"ಇದಂತೂ ನಿಬಿಡಾರಣ್ಯವು. ಇಲ್ಲಿ ನೈವೇದ್ಯವು ಎಲ್ಲಿಂದ ಬರಬೇಕು? ಏನಾಗುವದು ನೋಡೋಣ" ಎಂದು ಆಲೋಚಿಸಿ ಸ್ನಾನ ಮಾಡುವ ಸಿದ್ಧತೆಯನ್ನು ನಡಿಸಿದನು. ಇತ್ತಲು ಸಮರ್ಥರು ಕಲ್ಯಾಣಸ್ವಾಮಿಗೆ—"ಆ ಗಿಡಗಂಟೆಗಳ ಹಿಂಭಾಗಕ್ಕೆ ಸರ್ವಸಾಹಿತ್ಯವಿರುತ್ತದೆ. ಅದನ್ನು ತಕ್ಕೊಂಡು ಅಡಿಗೆ ಮಾಡಿರಿ" ಎಂದು ಆಜ್ಞಾಪಿಸಿದರು. ಆಗ ಕಲ್ಯಾಣಸ್ವಾಮಿಯೂ ಏಕನಾಥಪಂತನೂ ಅಲ್ಲಿಗೆ ಹೋಗಿ ನೋಡಲು ಮೂರು ಮಂದಿಗೆ ಸಾಕಾಗುವಷ್ಟು ಸಾಹಿತ್ಯವು ಇಡಲ್ಪಟ್ಟಿತ್ತು. ಮೂರು ಎಲೆಗಳೂ ಆರು ದೊನ್ನೆಗಳೂ ಸಹ ಅಲ್ಲಿದ್ದವು! ಅವುಗಳನ್ನು ತಕ್ಕೊಂಡು ಕಲ್ಯಾಣಸ್ವಾಮಿಯು ಅಡಿಗೆಯನ್ನು ಮಾಡಲಾರಂಭಿಸಿದನು. ಇಷ್ಟರಲ್ಲಿ ರಾಜಾಪುರದಿಂದ ೬೦ ಮಂದಿ ಬ್ರಾಹ್ಮಣರು ಸಮರ್ಥರ ದರ್ಶನಕ್ಕೆ ಬಂದರು. ಅವರಿಗೂ ಪ್ರಸಾದ ತೆಗೆದುಕೊಂಡು ಹೋಗಿರೆಂದು ಸಮರ್ಥರು ಆಗ್ರಹ ಮಾಡಿದರು. ಅವರು "ನಮ್ಮ ಪರಿವಾರವು ದೊಡ್ಡದಿರುತ್ತದೆ. ನಿಮ್ಮ ದರ್ಶನವಾದದ್ದೇ ನಮಗೆ ಪ್ರಸಾದವಾದಂತಾಯಿತು. ನಿರೋಪ ಕೊಡಬೇಕು" ಎಂದು ಪ್ರಾರ್ಥಿಸಿದರು. ಆದರೆ ಸಮರ್ಥರು ಅವರಿಗೆ ಅಪ್ಪಣೆಯನ್ನು ಕೊಡಲಿಲ್ಲ. ಆಗ ಆ ಬ್ರಾಹ್ಮಣರು ಸಮರ್ಥರ ನುಡಿಯನ್ನು ಮೀರಲಾರದೆ ತಮ್ಮ ತಮ್ಮ ಮನಸ್ಸಿನಲ್ಲಿ "ಇಲ್ಲಂತೂ ಮೂರೇ ಎಲೆಗಳ ಮಟ್ಟಿಗೆ ಅಡಿಗೆಯಾದಂತೆ ಕಾಣುತ್ತದೆ. ಅಂದಮೇಲೆ ನಾವು ೬೦ ಮಂದಿ ಇಲ್ಲಿ ಉಣ್ಣುವ ಬಗೆ ಹ್ಯಾಗೆ? ಹೊಟ್ಟೆತುಂಬ ಉಣ್ಣದಿದ್ದರೂ ಅಡ್ಡಿ ಇಲ್ಲ. ಸ್ವಾಮಿಗಳನ್ನು ಪ್ರೀತಿಪಡಿಸುವದಕ್ಕಾಗಿ ಒಂದೊಂದು ತುತ್ತು ಉಂಡು ದಾರಿಯನ್ನು ಹಿಡಿಯೋಣ" ಎಂದು ವಿಚಾರ ಮಾಡುತ್ತ ಸ್ನಾನವನ್ನು ಮಾಡಿ ತಮ್ಮತಮ್ಮ ಧೋತರಗಳನ್ನು ಹಿಂಡಿ ಒಣಗಿಸಿಕೊಂಡು ಮಡಿಯನ್ನುಟ್ಟು ಊಟಕ್ಕೆ ಕೂಡ್ರಲು ಸಿದ್ಧರಾದರು. ಆಗ ಏಕನಾಥಪಂತನು ಸಮರ್ಥರ ಬಳಿಗೆ ಬಂದು—"ಮೂರು ಎಲೆಗಳೂ ಆರು ದೊನ್ನೆಗಳೂ ಮಾತ್ರ ಉಂಟು. ಇದಕ್ಕೇನುಪಾಯವು?" ಎದು ಬಹಳ ಚಿಂತಾತುರನಾಗಿ ಕೇಳಿದನು. ಅದಕ್ಕೆ ಸಮರ್ಥರು "ಅಡ್ಡಿ ಇಲ್ಲ. ಇದ್ದ ಎಲೆಗಳನ್ನೇ ಹಾಕುತ್ತಾ ನಡಿಯಿರಿ. ಅಂದರೆ ಅವು ಸಾಕಾಗುವವು" ಎಂದು ನುಡಿದರು. ಏಕನಾಥಪಂತನು ಮೂರು ಎಲೆಗಳನ್ನು ಕೈಯಲ್ಲಿ ತಕ್ಕೊಂಡು ಹಾಗೇ ಮಾಡಲು, ಅರವತ್ತು ಮಂದಿಗೆ ಸಾಕಾಗಿ ಮೂರು

ಎಲೆಗಳು ಹಾಗೇ ಉಳಿದವು! ಅವುಗಳಲ್ಲಿಯು ಒಂದು ಎಲೆಯ ಮೇಲೆ ನೈವೇದ್ಯವನ್ನು ಮಾಡಿ ಒಂದನ್ನು ತನಗೂ ಇನ್ನೊಂದನ್ನು ಕಲ್ಯಾಣ ಸ್ವಾಮಿಗೂ ಹಾಕಿದನು. ದೊನ್ನೆಗಳಾದರೂ ಎಲ್ಲರಿಗೆ ಸಾಕಾದವು. ತುಪ್ಪ, ಸಕ್ಕರೆ ಮೊದಲುಗೊಂಡು ಯಾವತ್ತೂ ಸಾಕು ಸಾಕಾಗಿ ಎಲ್ಲರೂ ಯಥೇಷ್ಟ ಭೋಜನ ಮಾಡಿದರು. ಭೋಜನವಾದ ಮೇಲೆ ಅಲ್ಲಿಟ್ಟಿದ್ದ ಮೂರು ಎಲೆಯ ಪಟ್ಟಿಗಳನ್ನು ತಕ್ಕೊಂಡು ಏಕನಾಥ ಪಂತನು ಕೊಡಲಿಕ್ಕೆ ಹತ್ತಲು, ಅವು ಸಹ ಎಲ್ಲರಿಗೂ ಸಾಕಾದವು!! ಈ ಮೇರೆಗೆ ಬ್ರಾಹ್ಮಣರ ಭೋಜನವಾದ ತರುವಾಯ ಅವರು ಹೋಗಲಿಕ್ಕೆ ಹೊರಟರು. ಆಗ ಸಮರ್ಥರು ಏಕನಾಥ ಪಂತನಿಗೆ—"ನಿನ್ನಲ್ಲಿ ಹೊನ್ನುಗಳುಂಟೋ?" ಎಂದು ಕೇಳಿದರು. ಅವನು ಅಹುದೆನ್ನಲು ಸಮರ್ಥರು ಅವನ ಕಡೆಯಿಂದ ೬೧ ಹೊನ್ನುಗಳನ್ನು ತಕ್ಕೊಂಡು ಒಂದೊಂದು ಹೊನ್ನನ್ನು ಅರವತ್ತು ಮಂದಿ ಬ್ರಾಹ್ಮಣರಿಗೆ ದಕ್ಷಿಣೆ ಕೊಟ್ಟು ಉಳಿದೊಂದನ್ನು ಏಕನಾಥ ಪಂತನ ಕೈಯಲ್ಲಿ ಕೊಟ್ಟರು. ಈ ರೀತಿಯಿಂದ ಸಂತೋಷ ಪಟ್ಟು ಬ್ರಾಹ್ಮಣರು ಹೊರಟು ಹೋದ ತರುವಾಯ, ಸಮರ್ಥರೂ ಏಕನಾಥ ಪಂತನೂ ಕಲ್ಯಾಣ ಸ್ವಾಮಿಯೂ ಸ್ಥಳಕ್ಕೆ ಬಂದರು. ಅಲ್ಲಿ ಸಮರ್ಥರು ಏಕನಾಥ ಪಂತನನ್ನು ಪ್ರೀತಿಯಿಂದ ನಾಲ್ಕೈದು ದಿವಸ ಇಟ್ಟುಕೊಂಡು, ಅವನು ಹೋಗುವ ಮುಂದೆ ಅವನಿಗೆ ವಸ್ತ್ರಗಳನ್ನು ಉಡುಗೊರೆ ಮಾಡಿ ಕಳುಹಿ ಕೊಟ್ಟರು. ತಾನು ಕಷ್ಟದಿಂದ ಸಂಪಾದಿಸಿ ಕೃಪಣತನದಿಂದ ಕಾಯ್ದುಕೊಂಡಿದ್ದ ಹೊನ್ನುಗಳು ತನಗೆ ತಿರುಗಿ ಬರಲಿಲ್ಲವೆಂದು ಏಕನಾಥ ಪಂತನು ಬಾಯಿಬಿಡಹತ್ತಿದನು. ಇವತ್ತು ಕೊಟ್ಟಾರು, ನಾಳೆ ಕೊಟ್ಟಾರು ಎಂದು ದಾರಿ ನೋಡಿ ನೋಡಿ ನಿರಾಶೆಯಾದನು. ಊರಿಗೆ ಹೊರಟರೂ ಹೊನ್ನುಗಳ ಸುದ್ದಿಯೇ ಸಮರ್ಥರ ಬಾಯಿಂದ ಹೊರಡಲಿಲ್ಲ. ಬ್ರಾಹ್ಮಣರಿಗೆ ದಕ್ಷಿಣೆ ಕೊಟ್ಟದ್ದನ್ನು ತನಗೆ ತಿರುಗಿ ಕೊಡಿರೆಂದು ಸಮರ್ಥರಿಗೆ ಹ್ಯಾಗೆ ಕೇಳಬೇಕೆಂದು ಏಕನಾಥ ಪಂತನು ಭಿಡೆಯಿಂದ ಸುಮ್ಮನಿದ್ದನು. ಆದರೆ ಅವನ ಮನಸ್ಸಿನಲ್ಲಿ ಮಾತ್ರ ಸಮಾಧಾನವಿದ್ದಿಲ್ಲ. ಸಮರ್ಥರು ಏಕನಾಥ ಪಂತನನ್ನು ಕಳಿಸಲಿಕ್ಕೆ ಎರಡು ಮೂರು ಹರದಾರಿಗಳ ತನಕ ಹೋಗಿ "ದಾರಿಯಲ್ಲಿ ಜಪ್ಪಿಸಿಕೊಂಡು ಹೋಗು" ಎಂದು ಏಕನಾಥ ಪಂತನಿಗೆ ಹೇಳಿ ಮರಳಿ ಬಂದರು. ಆಗಂತೂ ಅವನು ತಾನು ಕಷ್ಟ ಪಟ್ಟು ಸಂಪಾದಿಸಿದ್ದ ಹೊನ್ನುಗಳು ಇನ್ನು ತನಗೆ ತಿರುಗಿ ಬರುವದಿಲ್ಲೆಂದು ಸಂಪೂರ್ಣವಾಗಿ ನಿರಾಶೆಬಟ್ಟನು. ಇನ್ನು ಮುಂದೆ ರಿಕ್ತಹಸ್ತದಿಂದ ಮನೆಗೆ ಹೋಗುವದು ಹ್ಯಾಗೆ! ಜನರಿಗೆ ಮತ್ತು ಊರವರಿಗೆ ಏನಂತ ಮೋರೆ ತೋರಿಸುವದು? ೨–೩ ವರ್ಷ ಪರದೇಶಕ್ಕೆ ಹೋಗಿ ಏನೂ ದ್ರವ್ಯವನ್ನು ತರಲಿಲ್ಲೆಂದು ಯಾವ ಮೋರೆಯಿಂದ ನುಡಿಯಬೇಕು? ಎಂದು ವಿಚಾರ ಮಾಡಿ ಮಾಡಿ, ಮನಸ್ಸಿನಲ್ಲಿ ದುಃಖಿಸುತ್ತ, ದಾರಿಯನ್ನು ಹೊತ್ತಿನ

ಲ್ಲಿ ಊರು ಸೇರಿಕೊಳ್ಳಬೇಕೆಂದು ಆಲೋಚಿಸಿ, ಪೈಠಣದ ಸಮೀಪದಲ್ಲಿರುವ ಮುಂಗೀ ಪೈಠಣವೆಂಬ ಹಳ್ಳಿಯಲ್ಲಿಳಿದುಕೊಂಡನು. ಅದೇ ದಿವಸ ಮೂರರೂ ಸಂಜೆಯು ಮುಂದೆ ಸಮರ್ಥರು ಪೈಠಣದಲ್ಲಿ ಏಕನಾಧ ಪಂತನ ಮನೆಯನ್ನು ಕೇಳುತ್ತಾ ಹೋಗಿ ಅವನ ತಂದೆಗೆ ಭೆಟ್ಟಿಯಾಗಿ,— "ನಿಮ್ಮ ಮಗನೂ ನಾನೂ ಕೂಡಿ ದೇಶದಿಂದ ಬಂದೆವು. ನಿಮ್ಮ ಮಗನು ನನ್ನ ಬಳಿಯ ೧೨೨ ಹೊನ್ನುಗಳನ್ನು ಇಡಲಿಕ್ಕೆ ಕೊಟ್ಟಿದ್ದನು. ಅವನದೂ ನಮ್ಮದೂ ದಾರಿಯಲ್ಲಿ ತಪ್ಪುಗಂಟಾಯಿತು. ಅವನು ಬಹುಶಃ ಇವತ್ತೇ ಊರಿಗೆ ಬಂದಾನು" ಎಂದು ಹೇಳಿ ಅವನ ಕೈಯಲ್ಲಿ ಅವುಗಳನ್ನು ಕೊಟ್ಟರು. ಅವನು ಒಂದೆರಡು ದಿವಸ ಇದ್ದು ಹೋಗಿರೆಂದು ಎಷ್ಟು ಅಂಗಲಾಚಿದಾಗ್ಯೂ "ನನಗೆ ಮುಂದೆ ಹೋಗುವ ಅವಸರವಿರುತ್ತದೆ." ಎಂದು ಹೇಳಿದರು. ಆಗ ಏಕನಾಧ ಪಂತನ ತಂದೆಯು "ನಿಮ್ಮ ಹೆಸರೇನು?" ಎಂದು ವಿಚಾರಿಸಿದ್ದರಿಂದ ಸಮರ್ಥರು "ನನ್ನ ಹೆಸರು ರಾಮದಾಸ" ಎಂದು ಹೇಳಿ ಅಲ್ಲಿ ಊಟ ಮಾಡದೆ ತಿರುಗಿ ಹೋದರು. ರಾತ್ರಿಯಾದ ಮೇಲೆ ಏಕನಾಥ ಪಂತನು ಖಿನ್ನವದನನಾಗಿ ತನ್ನ ಮನೆಗೆ ಬಂದು ತಲ್ಪಿದನು. ಆಗ ಮನೆಯವರು ಅವನನ್ನು ನೋಡಿ ಬಹಳ ಸಂತೋಷಪಟ್ಟರು. ಆದರೆ ಅವನ ಮೋರೆಯ ಮೇಲಿನ ತೇಜಸ್ಸು ಕೈಯೊಳಗಿನ ಗಂಟು ಕಳಕೊಂಡದ್ದರಿಂದ ಹೊರಟು ಹೋಗಿತ್ತು! ಬಾಯಿಂದ ಶಬ್ದಗಳೇ ಹೊರಡಲಿಲ್ಲ! ಆಗ ಅವನ ತಂದೆಯು— "ನೀನು ಉದಾಸೀನನಾಗಿರುವ ಕಾರಣವೇನು?" ಎಂದು ವಿಚಾರಿಸಲು, ಅವನು "ಬರೆಗೈಯಿಂದ ಹೋಗಿ ಬರೆಗೈಯಿಂದ ತಿರುಗಿ ಬಂದೆನು" ಎಂದು ಹೇಳಿದನು. ಅದಕ್ಕೆ ಅವನ ತಂದೆಯು— "ಎಲೋ! ನೀನು ಈಗ ತಂದದ್ದೇನು ಕಡಿಮೆಯಾಗಿರುವದೋ?" ಎಂದು ಸಮಾಧಾನವನ್ನು ನುಡಿದನು. ಆಗ ಅವನು— "ಅಪ್ಪಾ! ನಾನೇನೂ ತರಲಿಲ್ಲ" ಎಂದು ಗೋಳಾಡಿ ಹೇಳಿದನು. ಅವನನ್ನು ಕೇಳಿ ಅವನ ತಂದೆಯು— "ರಾಮದಾಸನೆಂಬವನು ೧೨೨ ಹೊನ್ನುಗಳನ್ನು ನಿನ್ನವೆಂದು ಹೇಳಿ ನನ್ನ ಕೈಯಲ್ಲಿ ತಂದು ಕೊಟ್ಟನು" ಎಂದು ನುಡಿದನು. ತಂದೆಯ ಮಾತು ಈ ಕೃಪಣನಿಗೆ ನಿಜವಾಗಿ ತೋರಲಿಲ್ಲ. ಆಗ ಅವನ ತಂದೆಯು ಒಳಗೆ ಹೋಗಿ ೧೨೨ ಹೊನ್ನುಗಳನ್ನು ತಂದು ತೋರಿಸಿದ ತರುವಾಯ ಅವನು ನಿಜವೆಂದು ನಂಬಿದನು. ತರುವಾಯ ಸಮರ್ಥರ ವಿಷಯದಲ್ಲಿ ಏಕನಾಥ ಪಂತನ ಪೂಜ್ಯ ಬುದ್ಧಿಯು ಎಷ್ಟಾಯಿತೆಂಬದನ್ನು ಹೇಳುವ ಅಗತ್ಯವಿಲ್ಲ. ಕೆಲವು ದಿವಸಗಳು ಕಳೆದು ಹೋದ ತರುವಾಯ ಏಕನಾಥ ಪಂತನು ಸಮರ್ಥರ ಬಳಿಗೆ ಹೋಗಿ ಶಕೆ ೧೫೭೦ರಲ್ಲಿ ಸಮರ್ಥರಿಂದ ಅನುಗ್ರಹವನ್ನು ತೆಗೆದುಕೊಂಡನು.

ದಿಲೇಲಖಾನನಿಗೆ ಆದ ಮಾನಖಂಡನವು—ಒಂದು ದಿವಸ ಸಮರ್ಥರೂ ಕೇಶವ ಸ್ವಾಮಿಗಳೂ ಮಿರಜಿಯಲ್ಲಿದ್ದಾಗ ರಾತ್ರೀ ಹೊತ್ತಿನಲ್ಲಿ ಜಯರಾಮ

ಸ್ವಾಮಿಗಳ ಕೀರ್ತನವು ನಡೆದಿತ್ತು. ಮಿರಜಿಯ ಭಕ್ತ ಜನರು ಈ ಸಮಾರಂಭಕ್ಕೋಸ್ಕರ ರಾಜಬೀದಿಯಲ್ಲಿ ಒಂದು ವಿಸ್ತೀರ್ಣವಾದ ಮಂಟಪವನ್ನು ಹಾಕಿ ಅದನ್ನು ಸುಶೋಭಿತ ಮಾಡಿದ್ದರು. ಕೀರ್ತನವನ್ನು ಕೇಳಲಿಕ್ಕೆ ಊರೊಳಗಿನ ಆಬಾಲವೃದ್ಧ ಸ್ತ್ರೀಪುರುಷರು ಬಂದು ಕುಳಿತಿದ್ದರು. ಸಮರ್ಥರೂ ಕೀರ್ತನವನ್ನು ಕೇಳಲಿಕ್ಕೆ ದಯಮಾಡಿಸಿದ್ದರು. ಎಲ್ಲರು ಕೀರ್ತನವನ್ನು ಭಕ್ತಿಭಾವದಿಂದ ಕೇಳುವಲ್ಲಿ ತಲ್ಲೀನರಾಗಿ ಕುಳಿತಿರುವಾಗ್ಗೆ ದಿಲೇಲಖಾನನೆಂಬ ರಾಣೇದಾರನು ಊರೊಳಗೆ ಗಸ್ತಿಯನ್ನು ತಿರಗುತ್ತಾ ತಿರಗುತ್ತಾ ಆ ಕೀರ್ತನವಾಗುವ ಸ್ಥಳಕ್ಕೆ ಬಂದು ಕೀರ್ತನದ ಗದ್ದಲವನ್ನು ನೋಡಿ ತಾನೂ ಅಲ್ಲಿ ಸ್ವಲ್ಪ ಹೊತ್ತು ನಿಂತು ಕೀರ್ತನವನ್ನು ಕೇಳಿದನು. "ಸಾಧು ಜನರು ಹೋಗುವ ಮಾರ್ಗದಿಂದ ಹೋದರೆ ಶ್ರೀ ರಾಮಚಂದ್ರನ ದರ್ಶನವು ತೀವ್ರದಿಂದ ಆಗುವದು" ಎಂಬದನ್ನು ಜಯರಾಮ ಸ್ವಾಮಿಗಳು ಅಂದದ್ದು ದಿಲೇಲಖಾನನ ಕಿವಿಯ ಮೇಲೆ ಬಿತ್ತು. ಇಷ್ಟೊಂದೇ ವಾಕ್ಯವನ್ನು ಲಕ್ಷದಲ್ಲಿಟ್ಟು ಖಾನನು ಕಿಲ್ಲೆಯೊಳಗೆ ತನ್ನ ಬಿಡಾರಕ್ಕೆ ಹೊರಟು ಹೋದನು. ಮರುದಿನ ಬೆಳಿಗ್ಗೆ ಸಮರ್ಥರು ಸ್ನಾನಕ್ಕೆ ಹೊರಟು ಹೋದರು; ಜಯರಾಮ ಸ್ವಾಮಿಗಳು ಹೊರಗೆ ಹೊರಡುವ ಸಿದ್ಧತೆಯಲ್ಲಿದ್ದರು.. ಇಷ್ಟರಲ್ಲಿ ದಿಲೇಲಖಾನನ ಕಡೆಯಿಂದ ಒಬ್ಬ ಮನುಷ್ಯನು ಜಯರಾಮ ಸ್ವಾಮಿಗಳ ಮುಂದೆ ಬಂದು ನಿಂತು 'ಖಾನಸಾಹೇಬರು ತಮ್ಮಗೋಸ್ಕರ ಪಲ್ಲಕ್ಕಿಯನ್ನು ಕೊಟ್ಟು ಕಳುಹಿಸಿರುತ್ತಾರೆ. ತಾವು ದಯಮಾಡಿ ಕಿಲ್ಲೆಯ ತನಕ ಬಂದು ಅವರಿಗೆ ದರ್ಶನ ಕೊಟ್ಟು ಹೋಗಬೇಕು' ಎಂದು ವಿನಂತಿ ಮಾಡಿದನು. ಖಾನನು ಹೇಳಿಕೇಳಿ ಮುಸಲ್ಮಾನನಿದ್ದು ತಮ್ಮ ಬಗ್ಗೆ ಅವನಲ್ಲಿ ಇಷ್ಟೊಂದು ಭಕ್ತಿಯು ಹ್ಯಾಗೆ ಹುಟ್ಟಿತೆಂದು ಜಯರಾಮಸ್ವಾಮಿಗಳಿಗೆ ಮತ್ತು ಅವರ ಹತ್ತಿರ ಆ ಸಮಯಕ್ಕೆ ಇದ್ದ ಯಾವತ್ತು ಶಿಷ್ಯರಿಗೆ ಆಶ್ಚರ್ಯವಾಯಿತು. ಜಯರಾಮ ಸ್ವಾಮಿಗಳಿಗೆ ಪಠಾಣನ ಕಡೆಗೆ ಹೋಗಲಿಕ್ಕೆ ಮುಂಚೆ ಎದೆಯಾಗಲಿಲ್ಲ. ಆದರೆ ಮುಂದೆ ಅವರ ಶಿಷ್ಯರೆಲ್ಲರು 'ಖಾನನಂಥಾ ಯವನನು ಇಷ್ಟು ಸನ್ಮಾನ ಮಾಡಿ ಕರೆಕಳಿಸಿದ ಬಳಿಕ ತಾವು ಅವನಿಗೆ ದರ್ಶನ ಕೊಟ್ಟು ಬರುವದು ಒಳ್ಳೇದು' ಎಂದು ಅತ್ಯಂತ ಆಗ್ರಹ ಮಾಡಿದ್ದರಿಂದ ಸ್ವಾಮಿಗಳು ಒಡಂಬಟ್ಟು ತಮ್ಮನ್ನು ಕರೆಯಲಿಕ್ಕೆ ಬಂದಿದ್ದ ಪಲ್ಲಕ್ಕಿಯಲ್ಲಿ ಕುಳಿತು ಕಿಲ್ಲೆಗೆ ಹೊರಟು ಹೋದರು. ಸ್ವಾಮಿಗಳು ರಾಣೇದಾರನ ಬಿಡಾರಕ್ಕೆ ಹೋಗಿ ಮುಟ್ಟಿದ ಕೂಡಲೆ ಅವನು ಅವರ ಎದುರಿಗೆ ಹೋಗಿ, ಅವರನ್ನು ಬಹಳ ಸನ್ಮಾನದಿಂದ ಒಳಗೆ ಕರೆದು ತಂದು ಎತ್ತರವಾದ ಸಿಂಹಾಸನದ ಮೇಲೆ ಕುಳ್ಳಿರಿಸಿ, ಅವರ ಮುಂದೆ ಕೈಮುಗಿದುಕೊಂಡು ನಿಂತನು. ಇವನ ನಮ್ರ ಸ್ವಭಾವವನ್ನೂ ನಮ್ರ ಆಚರಣೆಯನ್ನೂ ನೋಡಿ ಸ್ವಾಮಿಗಳಿಗೂ ಸ್ವಾಮಿಗಳ ಎಲ್ಲ ಶಿಷ್ಯರಿಗೂ ಬಹಳ ಆಶ್ಚರ್ಯವಾಯಿತು. ತರುವಾಯ ಸ್ವಲ್ಪ

ಹೊತ್ತಿನ ಮೇಲೆ ದಿಲೇಲಖಾನ ರಿಣಾತಿದಾರನು ತನ್ನ ಯವನೀ ಭಾಷೆಯಿಂದ "ಸಾಧುಗಳು ಹೋದ ಮಾರ್ಗದಿಂದ ಹೋದರೆ ಶ್ರೀ ರಾಮನ ದರ್ಶನವಾಗುತ್ತದೆಂದು ನೀವೇ ನಿನ್ನೆ ನಿಮ್ಮ ಕೀರ್ತನದಲ್ಲಿ ಹೇಳಿದಿರಿ. ನಾನೂ ಇಷ್ಟು ದಿವಸ ನಿಮ್ಮ ಮಾರ್ಗದಿಂದಲೇ ನಡೆದಿರುತ್ತೇನೆ. ಮುಂದೆ ಸಹಾ ನಿಮ್ಮ ಮಾರ್ಗದಿಂದ ಬರಲಿಕ್ಕೆ ಸಿದ್ಧನಿರುತ್ತೇನೆ. ಆದ್ದರಿಂದ ನೀವು ನನಗೆ ರಾಮಚಂದ್ರನನ್ನು ತೋರಿಸಬೇಕು" ಎಂದು ನುಡಿದನು. ಇವನ ಮಾತನ್ನು ಕೇಳಿ ಸ್ವಾಮಿಗಳು ಸ್ತಬ್ಧರಾಗಿ ಕುಳಿತರು. ಇಷ್ಟರಲ್ಲಿ ಖಾನನು ತನ್ನ ಹತ್ತರ ನಿಂತಿದ್ದ ಒಬ್ಬ ಸೇವಕನಿಗೆ ಸಂಕೇತ ಮಾಡಲಾಗಿ ಆತನು ಮನೆಯೊಳಗಿಂದ ಒಂದು ವಸ್ತ್ರ ಮುಚ್ಚಿದ ಸುಂದರವಾದ ತಬಕವನ್ನು ತಂದು ಸ್ವಾಮಿಗಳ ಮುಂದೆ ಇಟ್ಟನು. ಅದನ್ನು ಕಂಡು ಇವನು ಸ್ವಾಮಿಗಳಿಗೆ ಕಾಣಿಕೆಯನ್ನು ತಂದಿಟ್ಟಿರಬಹುದೆಂದು ಎಲ್ಲರು ತಿಳುಕೊಂಡರು. ಆದರೆ ಅದರ ಮೇಲಿನ ವಸ್ತ್ರ ತೆಗೆದು ನೋಡಲಾಗಿ ಆ ತಬಕದಲ್ಲಿ ಗೋಮಾಂಸವು ತುಂಬಿತ್ತು!! ಆ ಗೋಮಾಂಸದ ಕಡೆಗೆ ಖಾನನು ಬೊಟ್ಟು ಮಾಡಿ ತೋರಿಸಿ, ಜಯರಾಮಸ್ವಾಮಿಗಳನ್ನು ಕುರಿತು—"ಸ್ವಾಮಿ! ನೀವು ನನಗೆ ರಾಮನನ್ನು ತೋರಿಸಿರಿ. ಇಲ್ಲದಿದ್ದರೆ ನಾನು ನಿಮ್ಮನ್ನು ಈಗಿಂದೀಗಲೇ ಮುಸಲ್ಮಾನ ಮಾಡುತ್ತೇನೆ" ಎಂದು ನುಡಿದನು. ಇದನ್ನು ಕೇಳಿದ ಕೂಡಲೆ ಜಯರಾಮಸ್ವಾಮಿಗಳು ದಿಂಗು ಬಡೆದು ಹೌಹಾರಿ ಕುಳಿತರು. ಏನು ಮಾಡಬೇಕೆಂಬದು ಅವರಿಗೆ ತಿಳಿಯದೇ ಹೋಯಿತು. ಮುಂದೆ ಅವರು ಕೆಲವು ಹೊತ್ತು ವಿಚಾರ ಮಾಡಿ "ಇದರ ಉತ್ತರವನ್ನು ನಮ್ಮ ಗುರುಗಳಾದ ರಾಮದಾಸರು ಹೇಳುವರು. ಶಿಷ್ಯರನ್ನು ಕೊಟ್ಟು ಅವರನ್ನು ಇಲ್ಲಿಗೆ ಕರೆಕಳಿಸುತ್ತೇನೆ. ಅವರು ಬಂದ ಬಳಿಕ ನಿಮಗೆ ಉತ್ತರ ಕೊಡದಿದ್ದರೆ ನಾನೂ ಅವರೂ ಕೂಡಿಯೇ ಮುಸಲ್ಮಾನ ಧರ್ಮವನ್ನು ಸ್ವೀಕರಿಸುವೆವು" ಎಂದು ಹೇಳಿದರು. ಇದಕ್ಕೆ ಆ ಖಾನನು ಒಪ್ಪಿಕೊಂಡದ್ದರಿಂದ ಜಯರಾಮಸ್ವಾಮಿಗಳು ಸಮರ್ಥರನ್ನು ಕರಕೊಂಡು ಬರಲಿಕ್ಕೆ ಗೋಪಾಳನೆಂಬ ಶಿಷ್ಯನನ್ನು ಕಳಿಸಿದರು. ಇತ್ತಲಾ ಶ್ರೀ ಸಮರ್ಥರು ಮಾರ್ಕಂಡೇಶ್ವರಕ್ಕೆ ಸ್ನಾನಕ್ಕಾಗಿ ಹೋಗಿದ್ದರು. ಗೋಪಾಳಗೋಸಾವಿಯು ಅವರಿದ್ದಲ್ಲಿಗೆ ಹೋಗಿ ನಡೆದ ಸಂಗತಿಯನ್ನು ಅವರ ಮುಂದೆ ತಿಳಿಸಿ ದೊಡ್ಡ ಧ್ವನಿ ತೆಗೆದು ಅಳಹತ್ತಿದನು. ಆಗ ಸಮರ್ಥರು ಕ್ರೋಧಯುಕ್ತ ಮುದ್ರೆಯಿಂದ— "ಸಾಧುಗಳಾದವರು ಅವನಿಗೆ ಬೇಕಾದರೆ ರಾಮದರ್ಶನ ಮಾಡಿಸಲಿ. ಸುಮ್ಮನೆ ನನ್ನ ಕಡೆಗೆ ಯಾಕೆ ಬಂದಿ? ಹೋಗು. ನಾನೇನು ಬರಲಾರೆ" ಎಂದು ಆತನನ್ನು ಗದ್ದರಿಸಿದರು. ಆಗ ಗೋಪಾಳಗೋಸಾವಿಯು ಬಹಳ ನಿರಾಶೆಯುಳ್ಳವನಾಗಿ ಮೋರೆಯನ್ನು ಬಾಡಿಸಿಕೊಂಡು ಜಯರಾಮಸ್ವಾಮಿಗಳ ಕಡೆಗೆ ಹೋಗಲಿಕ್ಕೆ ತೆರಳಿದನು. ಇವನು ಕಿಲ್ಲೆಗೆ ಇನ್ನೂ ಬಂದು ಮುಟ್ಟುವಷ್ಟರಲ್ಲಿ ಸಮರ್ಥರು ಖಾನನ ಮನೆಯಲ್ಲಿ ಜಯರಾಮಸ್ವಾಮಿಗಳು ಕುಳಿತ ಸ್ಥಳಕ್ಕೆ ಬಂದು ಯಾವತ್ತು ಸಂಗ-

ತಿಯನ್ನು ಜಯರಾಮಸ್ವಾಮಿಗಳ ಬಾಯಿಂದ ಕೇಳಿಕೊಂಡು ಖಾನನನ್ನು ಕುರಿತು—"ನಾನು ನಿನಗೆ ರಾಮನನ್ನು ತೋರಿಸುತ್ತೇನೆ. ನೀನು ನನ್ನ ಸಂಗಡ ಬರುತ್ತೀಯೋ?" ಎಂದು ಕೇಳಿದರು. ಅದಕ್ಕೆ ಖಾನನು ಎದೆಗೆ ಕೈ ಹಚ್ಚಿಕೊಂಡು "ಓಹೋ, ನಾನು ನಿನ್ನ ಸಂಗಡ ಬೇಕಾದಲ್ಲಿ ಬರುತ್ತೇನೆ ನಡಿಯಿರಿ" ಎಂದು ಅವರ ಸಂಗಡ ಹೊರಟನು. ಸಮರ್ಥರು ಖಾನನನ್ನೂ ಜಯರಾಮಸ್ವಾಮಿಗಳನ್ನೂ ಅವರ ಶಿಷ್ಯರನ್ನೂ ತಮ್ಮ ಸಂಗಡ ಕರಕೊಂಡು ಕಿಲ್ಲೆಯ ಸುತ್ತೆಲ್ಲ ಅಡ್ಡಾಡಿ ಅಲ್ಲಿಯ ಒಂದು ಹುಡೆಯ ಬುರುಜಿನ ಹತ್ತಿರ ಹೋಗಿ ಅದರ ಸಣ್ಣ ಖಿಂಡಿಯೊಳಗಿಂದ ಕಿಲ್ಲೆಯ ಕೆಳಗೆ ಹೋಗಿ ನಿಂತರು. ನಂತರ ಅವರು ಜಯರಾಮಸ್ವಾಮಿಗಳಿಗೆ ತಮ್ಮ ಬಳಿಗೆ ಕರೆಯಲಾಗಿ ಅವರೂ ಆ ಹುಡೆಯ ಸಣ್ಣ ಖಿಂಡಿಯೊಳಗಿಂದ ಪಾರಾಗಿ ಕಿಲ್ಲೆಯ ಕೆಳಗೆ ನಿಂತರು. ಆ ಬಳಿಕ ಸಮರ್ಥರು ಖಾನನಿಗೆ "ನೀನೂ ಈ ಮಾರ್ಗದಿಂದ ನಮ್ಮ ಕೂಡ ಬಾ" ಎಂದು ಕರೆದರು. ಆಗ ಖಾನನು ಅಲ್ಲಿಂದ ಹೋಗುವ ಬಗೆ ಹ್ಯಾಗೆ? ಅವನು ಸಮರ್ಥರ ಮತ್ತು ಜಯರಾಮಸ್ವಾಮಿಗಳ ಈ ಅದ್ಭುತ ಶಕ್ತಿಯನ್ನು ಕಂಡು ಬೆರಗಾಗಿ "ತೋಬಾ! ತೋಬಾ! ಯಾ ಅಲ್ಲಾ! ಹಿಂದೂಕೆ ಫಕೀರ ಏತೋ ಬಡೆ ಅವಲಿಯಾ ಹೈ!" ಎಂದು ನುಡಿದು ಓಡುತ್ತಾ ಓಡುತ್ತಾ ಎರಡನೇ ದಾರಿಯಿಂದ ಕಿಲ್ಲೆಯ ಕೆಳಗೆ ಹೋಗಿ ಅವರಿಬ್ಬರ ಪಾದಗಳಿಗೆ ಅಭಿನಮಿಸಿ, ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡನು. ತರುವಾಯ ಖಾನನು ತನ್ನ ಮೇಲೆ ಕೃಪೆಯನ್ನು ಮಾಡಬೇಕೆಂದು ಸಮರ್ಥರ ಪಾದವನ್ನು ಗಟ್ಟಿಯಾಗಿ ಹಿಡಿದದ್ದರಿಂದ ಸಮರ್ಥರು ತಮ್ಮ ವರದಹಸ್ತವನ್ನು ಅವನ ಮಸ್ತಕದ ಮೇಲೆ ಇರಿಸಿ "ರಾಮರಾಮ" ಅನ್ನುತ್ತಿರಬೇಕೆಂದು ಉಪದೇಶ ಮಾಡಿದರು. ದಿಲೇಲಖಾನನ ಭಕ್ತಿಯು ಸಮರ್ಥರ ಪಾದದಮೇಲೆ ಅತ್ಯಂತವಾಗಿ ಕೂತಿತು. ಅದ್ದರಿಂದ ಅವನು ಸಮರ್ಥರಿಗೆ ನೀವು ನಿರಂತರವಾಗಿ ನನ್ನ ಊರಲ್ಲಿಯೇ ನಿವಾಸಿಸಬೇಕೆಂದು ಪ್ರಾರ್ಥನೆಯನ್ನು ಮಾಡಿದನು ಆಗ ಸಮರ್ಥರು ಅವನ ಕಡೆಯಿಂದ ಸ್ವಲ್ಪ ಭೂಮಿಯನ್ನು ತೆಗೆದುಕೊಂಡು ಅದರ ಮೇಲೆ ಒಂದು ಮಠವನ್ನು ಕಟ್ಟಿಸಿ ಅಲ್ಲಿ ವೇಣೂಬಾಯಿಯನ್ನು ಇಟ್ಟು "ನೀನು ವೇಣೂಬಾಯಿಯ ಆಜ್ಞೆಯ ಪ್ರಕಾರ ನಡೆದುಕೊಂಡರೆ ನನ್ನ ಆಜ್ಞೆಯ ಪ್ರಕಾರ ನಡೆದಂತಾಗುವದು." ಎಂತ ದಿಲೇಲಖಾನನಿಗೆ ಸಮಾಧಾನ ಪಡಿಸಿ ಚಾಫಳಕ್ಕೆ ಹೊರಟು ಹೋದರು. ಸಮರ್ಥರು ಚಾಫಳಕ್ಕೆ ಹೋಗುವ ದಾರಿಯಲ್ಲಿ ಕೆಲವು ದಿವಸ ಬ್ರಹ್ಮನಾಳಿಯಲ್ಲಿ ಮತ್ತು ಕೆಲವು ದಿವಸ ವಡಗಾಂವದಲ್ಲಿ ಜಯರಾಮಸ್ವಾಮಿ ಸಹಿತವಾಗಿದ್ದು ಮುಂದೆ ಚಾಫಳಕ್ಕೆ ಹೋಗಿ ತಲ್ಪಿದರು. ಸಾರಂಗಪುರದ ಇಂದೂರದ ಮಠದೊಳಗಿನ ಉದ್ಧವಗೋಸಾವಿಯು ಎರಡು ವರ್ಷಗಳಿಂದ ತನಗೆ ಸಮರ್ಥರ ದರ್ಶನವಾಗಿಲ್ಲೆಂದು ಚಡಪಡಿಸ ಹತ್ತಿ ತನ್ನ ಶಿಷ್ಯನೊಡನೆ ಸಮರ್ಥರಿಗೆ

ಒಂದು ಬಿನ್ನಹ ಪತ್ರವನ್ನು ಬರೆದುಕೊಂಡನು. ಅದಕ್ಕೆ ಸಮರ್ಥರ ಕಡೆಯಿಂದ "ನೀನು ಮಠದಲ್ಲಿ ಮಹಾದೇವ ಗೋಸಾವಿಯನ್ನಿಟ್ಟು ಹೊರಟು ಬಾ" ಎಂದು ಉತ್ತರವು ಹೋಗಲಾಗಿ ಉದ್ಧವಗೋಸಾವಿಯು ಸಮರ್ಥರ ದರ್ಶನಕ್ಕಾಗಿ ಚಾಫಳಕ್ಕೆ ಬಂದು ಅವರ ಹತ್ತಿರ ಕೆಲವು ದಿವಸಗಳ ಮಟ್ಟಿಗೆ ಇದ್ದನು.

ಸಮರ್ಥರು ನದಿಯಲ್ಲಿ ಮುಳುಗಿದ್ದು — ಒಂದಾನೊಂದು ದಿವಸ ಸಮರ್ಥರು ಕೊಂಡವಣದಿಂದ ಚಾಫಳಕ್ಕೆ ಬರುವದಕ್ಕಾಗಿ ಹೊರಟಿರಲು ಪಾಟಣ ಎಂಬ ಊರ ಹತ್ತಿರ ಕೋಯನಾ ನದಿಯು ತುಂಬಿ ಹರಿಯುತ್ತಿತ್ತು. ಆಗ ಸಮರ್ಥರು ತಮಗೆ ಆ ನದಿಯನ್ನು ದಾಟಿಸುವದಕ್ಕಾಗಿ ಹೋಡಿಯನ್ನು ತೆಗೆದುಕೊಂಡು ಬರಬೇಕೆಂದು ಅಂಬಿಗರಿಗೆ ಹೇಳಿ ಕಳಿಸಿದರು. ಅಂಬಿಗರು ಬರಲಿಕ್ಕೆ ಸ್ವಲ್ಪ ಅವಧಿಯಾಯಿತು. ಇಷ್ಟರಲ್ಲಿ ಸಮರ್ಥರು ನದಿಯಲ್ಲಿ ಹಾರಿಕೊಂಡು ಈಸುತ್ತಾ ಈಸುತ್ತಾ ನದಿಯ ಆಚೆಯ ದಂಡೆಗೆ ಹೋಗಲಿಕ್ಕೆ ಹತ್ತಿದರು. ಅಷ್ಟರಲ್ಲಿ ನಡುವೆ ಅವರು ಒಂದು ಬಳ್ಳಿಗಳ ಗುಂಪಿಗೆ ತೊಡಕಿ ಕೊಳ್ಳಲಾಗಿ ಅವರು ಕೆಳಗೆ ಮುಳುಗಿ ಹೋದವರು ಮೇಲಕ್ಕೆ ಏಳಲೇ ಇಲ್ಲ! ನದಿಯ ಎರಡೂ ದಂಡೆಗಿದ್ದ ಜನರು ಗೋಸಾವಿಯು ಮುಳುಗಿದನೆಂದು ಒಂದೇ ಸಮನೆ ಎದೆ ಎದೆ ಬಡಕೊಳ್ಳ ಹತ್ತಿದರು. ಎಷ್ಟೋ ಅಂಬಿಗರು ಆ ನದಿಯಲ್ಲಿ ಹಾರಿಕೊಂಡು ಎಲ್ಲ ಕಡೆಗೆ ಹುಡುಕಿ ಬಂದರು. ಆದರೂ ಸಮರ್ಥರು ಇದ್ದದ್ದು ಗೊತ್ತಾಗಲಿಲ್ಲ. ಆಗ ಚಾಫಳದ ಮಠಕ್ಕೆ ಸಮರ್ಥರು ಕೋಯನಾ ನದಿಯಲ್ಲಿ ಮುಳುಗಿದರೆಂದು ಚಾಂದಜೀರಾವ ಎಂಬವನು ಪತ್ರ ಕಳಿಸಿದನು. ಆ ಪತ್ರವು ಮುಟ್ಟುತ್ತಲೇ ಅಲ್ಲಿಂದ ಉದ್ಧವ ಗೋಸಾವಿಯೂ ಕಲ್ಯಾಣಗೋಸಾವಿಯೂ ಆ ನದಿಗೆ ಹೊರಟು ಬಂದು ಅಲ್ಲಿದ್ದ ಜನರ ಕಡೆಯಿಂದ ಸಮರ್ಥರ ಸಮಾಚಾರವನ್ನು ವಿಚಾರಿಸಿದರು. ಆಗ ಎಲ್ಲರು ಅವರಿಗೆ "ಸಮರ್ಥರು ಎಲ್ಲಿಯಾದರೂ ನದಿಯ ಸೆಳವಿನ ಕೂಡ ಹರಿದು ಹೋಗಿರ ಬಹುದು. ಅಥವಾ ಅವರನ್ನು ಜಲಚರಗಳು ತಿಂದು ಬಿಟ್ಟಿರಬಹುದು" ಎಂದು ಹೇಳಿದರು. ಅದನ್ನು ಕೇಳಿ ಕಲ್ಯಾಣ ಸ್ವಾಮಿಯು "ನೀವು ನಿಮ್ಮ ಕೇವಲ ಅಜ್ಞಾನದ ಮೂಲಕ ಹೀಗೆ ತಿಳಿದುಕೊಂಡಿರುತ್ತೀರಿ. ಸಮರ್ಥರ ಜೀವವು ಈ ಪ್ರಕಾರ ದಾರಿಯ ಮೇಲೆ ಬಿದ್ದಿಲ್ಲ!" ಎಂದು ಉತ್ತರ ಕೊಟ್ಟು ನಕ್ಕವನೇ ಜನರು ಬೇಡ ಬೇಡೆಂದು ಹೇಳಿದಾಗ್ಯೂ ಕೇಳದೆ ತಾನೂ ನದಿಯೊಳಗೆ ಹಾರಿಕೊಂಡನು. ಈ ಪ್ರಕಾರ ಅವನು ಹಾರಿಕೊಂಡು ಒಳಗೆ ಹುಡುಕಲಾಗಿ ಸಮರ್ಥರು ಪದ್ಮಾಸನವನ್ನು ಹಾಕಿಕೊಂಡು ಜಪವನ್ನು ಮಾಡುತ್ತ ಕುಳಿತಿದ್ದನ್ನು ಕಂಡು, ಮೇಲಕ್ಕೆ ಬಂದವನೇ ಪುನಃ ಕಸುವಿನಿಂದ ಕೆಳಗೆ ಮುಳುಗಿ, ಸಮರ್ಥರ ತೊಡಿಯ ಸಂದಿನಲ್ಲಿ ತನ್ನ ಕುತ್ತಿಗೆಯನ್ನು ಹಾಕಿ ಸಮರ್ಥರನ್ನು ತನ್ನ ಕುತ್ತಿಗೆಯ ಮೇಲೆ ಕೂಡ್ರಿಸಿಕೊಂಡು, ಈಸುತ್ತಾ ಈಸುತ್ತಾ ನ

ಧಿಯು ಅಚೆಯು ದಂಡೆಗೆ ಬಂದನು ಇದನ್ನು ನೋಡಿ ಎಲ್ಲರು "ಇಷ್ಟು ದಿವಸ ಸಮರ್ಥರು ನೀರಲ್ಲಿ ಹ್ಯಾಗೆ ಬದುಕಿದರು ? ಅವರ ಲೀಲೆಯು ಅತ್ಯಗಾಧವಾಗಿದೆ!" ಎಂದು ನುಡಿದು ಆಶ್ಚರ್ಯ ಪಟ್ಟರು.

ಸಮರ್ಥರ ಕುದುರೆ— ಒಂದಾನೊಂದು ದಿವಸ ಶ್ರೀ ಶಿವಾಜಿ ಮಹಾರಾಜರಿಗೆ ಯಾರೋ ಒಬ್ಬರು ಒಂದು ಅತ್ಯುತ್ತಮವಾದ ಕುದುರೆಯನ್ನು ಪ್ರೇಮ ಪೂರ್ವಕವಾದ ಕಾಣಿಕೆಯಾಗಿ ತಂದು ಕೊಟ್ಟರು. ಸಮರ್ಥರ ಮೇಲೆ ಮಹಾರಾಜರ ಅಪ್ರತಿಮಭಕ್ತಿಯಿದ್ದ ಕಾರಣ ಅವರು ತಮ್ಮ ಕಡೆಗೆ ಬಂದಂಥ ಉತ್ತಮ ವಸ್ತುಗಳನ್ನು ಸಮರ್ಥರಿಗೆ ಅರ್ಪಣ ಮಾಡಲಿಕ್ಕೆ ಎಂದೂ ತಪ್ಪುತ್ತಿದ್ದಿಲ್ಲ. ಈ ಪರಿಪಾಠದಂತೆ ಮಹಾರಾಜರು ಆ ಕುದುರೆಯನ್ನು ಅದರ ಮೇಲಣ ಯಾವತ್ತು ಸಾಹಿತ್ಯ ಮತ್ತು ಅಲಂಕಾರ ಭೂಷಣ ಸಹಿತವಾಗಿ ಸಮರ್ಥರಿಗೆ ಅರ್ಪಣ ಮಾಡಿದರು. ಆ ಕುದುರೆಯನ್ನು ಸಮರ್ಥರು ನೋಡಿ ಆನಂದಬಟ್ಟು ಮೋತಾದಾರನಿಗೆ "ಎಲ್ಲಾ, ಈ ಕುದುರೆಯ ಮೇಲಿನ ಎಲ್ಲಾ ಸಾಮಾನು ತೆಗೆದು ಬಿಡು. ಲಗಾಮು ಸಹ ಇರಗೊಡಬೇಡ" ಎಂದು ಅಪ್ಪಣೆ ಮಾಡಿದರು. ಅದರಂತೆ ಆ ಮೋತಾದಾರನು ಕುದುರೆಯ ಮೇಲಿನ ಯಾವತ್ತು ಸಾಮಾನುಗಳನ್ನು ಲಗಾಮು ಸಹಿತವಾಗಿ ತೆಗೆದುಬಿಡಲಾಗಿ, ಸಮರ್ಥರು ಗಪ್ಪನೆ ಹಾರಿ ಆ ಬತ್ತಲೆ ಕುದುರೆಯಮೇಲೆ ಕುಳಿತುಕೊಳ್ಳಲು, ಆ ಕುದುರೆಯು ನಾಲ್ಕೂ ದಿಕ್ಕಿಗೆ ಗಿಮಿ ಗಿಮಿ ತಿರುಗಿ ಕೋಟೆಯ ಗೋಡೆಗಳನ್ನು ಹಾರಿ ಕೋಟೆಯ ಸುತ್ತಲು ಮೂರು ಸಾರೆ ಪ್ರದಕ್ಷಿಣ ಹಾಕಿ ದಾರೀ ಹಿಡಿದು ಭರದಾಂಡವಾಗಿ ಓಡಿ ಹೋಯಿತು. ಉದವ, ಕಲ್ಯಾಣ ಮೊದಲಾದವರು ಕೈಯಲ್ಲಿ ನೀರಿನ ಪಾತ್ರೆಯನ್ನೂ ಸಕ್ಕರೆಯನ್ನೂ ಹಿಡುಕೊಂಡು ಆ ಕುದುರೆಯ ಬೆನ್ನು ಹತ್ತಿ ಬೇಕಾದಷ್ಟು ಓಡಿದರೂ ಆ ಕುದುರೆಯು ಮಾಟಾಮಾಯವಾಯಿತು. ಮುಂದೆ ಸಮರ್ಥರಿಗೆ ಬಹಳ ತೃಷೆಯಾದ್ದರಿಂದ ಅವರು ಕುದುರೆಯ ಮೇಲಿಂದಲೇ ಹಿಂದಿರುಗಿ ನೋಡಿ ಉದ್ಧವನು ದೂರಿಂದ ನೀರಿನ ಪಾತ್ರೆಯನ್ನೂ ಸಕ್ಕರೆಯನ್ನೂ ಹಿಡಿದುಕೊಂಡು ಬರುವದನ್ನು ಕಂಡು ಆ ಸ್ಥಳದಲ್ಲಿ ಕುದುರೆಯನ್ನು ಕೆಲವೊತ್ತು ನಿಲ್ಲಿಸಲು ಉದ್ಧವನು ಓಡುತ್ತಾ ಸಮರ್ಥರ ಬಳಿಗೆ ಬಂದು ಸಕ್ಕರೆಯನ್ನೂ ನೀರಿನ ಪಾತ್ರೆಯನ್ನೂ ಕೊಡಲು, ಅವರು ಅವುಗಳನ್ನು ಸೇವಿಸಿ ತಮ್ಮ ತೃಷೆಯನ್ನು ಶಾಂತ ಪಡಿಸಿಕೊಂಡು ಆನಂದದಿಂದ— "ಉದ್ಧವಾ! ಈ ಹೊತ್ತು ನನಗೆ ಬಹಳ ನೀರಡಿಕೆಯಾಗಿ ಕಸವಿಸಿಯಾಗಿತ್ತು. ಇಂಥ ಸಮಯಕ್ಕೆ ನೀನು ನನಗೆ ನೀರು ಕುಡಿಸಿ ಬಹಳ ಕಲ್ಯಾಣ ಮಾಡಿದಿ. ಆದ್ದರಿಂದ ನಿನಗೆ ಈ ಹೊತ್ತಿನಿಂದ ಶಿವ ಎಂಬ ಹೆಸರು ಕೊಟ್ಟಿರುತ್ತೇನೆ" ಎಂದು ಹೇಳಿದರು. ಆಗಿನಿಂದ ಉದ್ಧವನೆಂಬ ಶಿಷ್ಯನಿಗೆ ಶಿವ ಸ್ವಾಮಿಯೆಂಬ ಹೆಸರು ಬಂತು. ಇರಲಿ. ಸಮರ್ಥರು ಆ ಕುದುರೆಗೆ ರಾಮ

ಬಾಣ ಎಂಬ ಹೆಸರಿಟ್ಟು ಅದನ್ನು ತಮ್ಮ ಚಾಫಳದ ಮಠದಲ್ಲಿಟ್ಟಿದ್ದರು. ಈ ಸಂಗತಿಯು ಶಕೆ ೧೫೭೯ರಲ್ಲಿ ಉಂಟಾಯಿತು.

ಬೆಳಸಿ— ಶಕೆ ೧೫೮೦ರಲ್ಲಿ ನಿಜಾನಂದ ಸ್ವಾಮಿಗಳ ಪುಣ್ಯ ತಿಥಿಯ ನಿಮಿತ್ಯವಾಗಿ ಸಮರ್ಥರು ಕರ್ಹಾಡಕ್ಕೆ ಹೋಗಿದ್ದರು. ಅಲ್ಲಿಂದ ಅವರು ನಿಗಡಿಗೆ ಹೋಗಿ ರಂಗನಾಥ ಸ್ವಾಮಿಗಳ ಭೇಟಿಯನ್ನು ತೆಗೆದುಕೊಂಡು ಪರಳಿಗೆ ಹೋಗಲಿಕ್ಕೆ ಹೊರಟರು. ಅವರ ಸಂಗಡ ೨೫—೩೦ ಮಂದಿ ಶಿಷ್ಯರಿದ್ದರು. ಆಗ ಮಧ್ಯಾಹ್ನದ ೨ ಗಂಟೆಯಾಗಲಿಕ್ಕೆ ಬಂದಿತ್ತು. ದಾರಿಯಲ್ಲಿ ಇವರೆಗೆಲ್ಲರಿಗೂ ಹಸಿವೆಯಾಯಿತು. ಸುತ್ತು ಇದ್ದ ಹೊಲಗಳಲ್ಲಿ ಬಿಳೆ ಜೋಳದ ದಂಟುಗಳು ಎತ್ತರವಾಗಿ ಬೆಳೆದಿದ್ದು ಅವುಗಳಿಗೆ ಎಳೆಯ ಬೆಳಸೇ ತೆನೆಗಳಾಗಿದ್ದವು. ಆಗ ಅವರೆಲ್ಲರು ತೆನೆಗಳನ್ನು ಸುಟ್ಟು ಬೆಳಸಿಯನ್ನು ತಿನ್ನಬೇಕೆಂದು ಅಪೇಕ್ಷಿಸಿ ಸಮರ್ಥರ ಅಪ್ಪಣೆಯನ್ನು ಬೇಡಿಕೊಂಡರು. ಅದಕ್ಕೆ ಸಮರ್ಥರು— “ನೀವೆಲ್ಲರು ಒಬ್ಬನ ಹೊಲಕ್ಕೇ ಗಂಟು ಬಿದ್ದರೆ ಬಡವನ ಇಡೀ ಹೊಲವನ್ನು ಹಾಳುಗೆಡವೀರಿ. ಅದು ಕಾರಣ ಒಬ್ಬೊಬ್ಬರು ಒಂದೊಂದು ಹೊಲದೊಳಗಿಂದ ಐದೈದು ತೆನೆಗಳನ್ನು ಕೊಯ್ದುಕೊಂಡುಬಂದು ಅವುಗಳನ್ನೆಲ್ಲ ಒತ್ತಟ್ಟಿಗೆ ಕೂಡಿಸಿ ಕೂತುಕೊಂಡು ತಿನ್ನಿರಿ” ಎಂದು ಅಪ್ಪಣೆಯನ್ನು ಮಾಡಿದರು. ಇದರಂತೆ ಆ ಶಿಷ್ಯರೆಲ್ಲರು ಪ್ರತಿಯೊಂದು ಹೊಲದಿಂದ ಐದೈದು ತೆನೆಗಳ ದಂಟುಗಳನ್ನು ಕಿತ್ತುಕೊಂಡು ದೇಗಾಂವದ ಹತ್ತರ ಬರುತ್ತಾಗ ಅಲ್ಲಿಯ ಗೌಡನ ಹೊಲದಲ್ಲಿ ಭಾಂವಿ ಇರುವದನ್ನೂ ಇಳಿಯುಕೊಳ್ಳುವದಕ್ಕೆ ವಿಶಾಲ ಸ್ಥಳವಿರುವದನ್ನೂ ನೋಡಿ ಅಲ್ಲಿಯೇ ಇಳುಕೊಂಡು ಸಮರ್ಥರಿಗೆ ಒಂದು ಗಿಡದ ನೆರಳಿನಲ್ಲಿ ಕೂಡ್ರಲಿಕ್ಕೆ ಆಸನವನ್ನು ಹಾಕಿ ಕೊಟ್ಟರು. ಆ ಮೇಲೆ ಅವರೆಲ್ಲರು ಬೆಂಕೆಯನ್ನು ಹೊತ್ತಿಸಿ ತೆನೆಗಳನ್ನು ಸುಟ್ಟು ಸಮರ್ಥರಿಗೆ ಬೆಳಸೆಯನ್ನು ಉದುರಿಸಿ ಕೊಡಲಿಕ್ಕೆ ಹತ್ತಿದರು. ಇದನ್ನು ಆ ಹೊಲದ ಧನಿಯಾದ ದೇಗಾಂವದ ಗೌಡನು ಅಲ್ಲಿಯೇ ಸಮೀಪದಲ್ಲಿದ್ದ ತನ್ನ ಚಾವಡಿಯೊಳಗಿಂದ ಕಂಡು, ಸಿಟ್ಟಿನಿಂದ ಓಡಿ ಬಂದು, ಯಾರದೂ ವಿಚಾರ ಮಾಡದೆ “ಈ ಗೋಸಾವಿಯೇ ಇವರೆಲ್ಲರ ಮುಖ್ಯಸ್ಥನು. ಇವನದೇ ಇದೆಲ್ಲ ಆಟವದೆ” ಎಂದು ತಿಳಿದು ಅಲ್ಲಿ ಬಿದ್ದ ಜೋಳದ ದಂಟಿನಿಂದ ಸಮರ್ಥರ ಬೆನ್ನ ಮೇಲೆ ಮೂರು ಪೆಟ್ಟುಗಳನ್ನು ಸೆಳೆದನು. ಅದನ್ನು ನೋಡಿ ಸಮರ್ಥರ ಶಿಷ್ಯರು ಆ ಗೌಡನನ್ನು ಹಿಡಿದು ಅವನನ್ನು ತಿರುಗಿ ಹೊಡೆಯ ಹತ್ತಿದರು. ಆಗ ಸಮರ್ಥರು— “ಛೀ ಛೀ! ಅವನ ಹೊಲದಲ್ಲಿಯ ಬೆಳಸಿಯನ್ನು ತಿಂದು ಅವನಿಗೇ ತಿರುಗಿ ಹೊಡೆಯುವದು ಸರಿಯಲ್ಲ” ವೆಂದು ಹೇಳಿ ಬಿಡಿಸಿದರು. ಅವರಿಗೆಲ್ಲರಿಗೂ ಬಹಳ ಸಂತಾಪವಾಗಿತ್ತು. ಆದರೆ ಅವರು ಸಮರ್ಥರ ಆಜ್ಞೆಯನ್ನು ಮೀರಲಾರದೆ ಹಾಗೆಯೇ ಕೈ ಬಿಟ್ಟರು. ನಂತರ ಎಲ್ಲಾ ಶಿಷ್ಯರು ಸಮರ್ಥರೊಂದಿಗೆ ಸಾತಾರೆಯ ದಾರೀ

ಹಿಡಿದರು. ದೇಗಾಂವದ ಗೌಡನು ಸಹ ತನ್ನ ಊರಿಗೆ ಹೊರಟು ಹೋದನು. ಸಮರ್ಥರು ಮಾಹುಲಿಯ ಸಂಗಮಕ್ಕೆ ಬಂದು ಇಳಿದ ವರ್ತಮಾನವು ಶಿವಾಜಿ ಮಹಾರಾಜರಿಗೆ ಗೊತ್ತಾಗುತ್ತಲೇ ಅವರು ಸಮರ್ಥರನ್ನು ಅತ್ಯಂತ ಸಮಾರಂಭದಿಂದ ಸಾತಾರೆಗೆ ಕರೆದುಕೊಂಡು ಬಂದು ತಮ್ಮ ವಾಡೆಯೊಳಗೆ ತಾವೇ ಸ್ವತಃ ತಮ್ಮ ಕೈಯಿಂದ ಸಮರ್ಥರಿಗೆ ಮಂಗಲ ಸ್ನಾನವನ್ನು ಮಾಡಿಸುತ್ತಿರುವಾಗ ಸಮರ್ಥರ ಬೆನ್ನಮೇಲೆ ಮೂಡಿದ ಬಾಸಳಿಕೆಗಳನ್ನು ನೋಡಿ ಆಶ್ಚರ್ಯ ಪಟ್ಟು “ ಈ ಬಾಸಳಿಕೆಗಳು ತಮ್ಮ ಮೇಲೆ ಮೂಡಿರುವ ಕಾರಣವೇನು? ” ಎಂದು ಸಮರ್ಥರಿಗೆ ವಿಚಾರಿಸಿದರು. ಆದರೆ ಸಮರ್ಥರು ಮಹಾರಾಜರ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಭೋಜನೋತ್ತರದಲ್ಲಿ ಸಮರ್ಥರು ಮಲಗಿಕೊಳ್ಳಲಿಕ್ಕೆ ಹೋಗಲು, ಮಹಾರಾಜರು ಸಮರ್ಥರ ಶಿಷ್ಯರ ಒಳಿಗೆ ಹೋಗಿ ಸಮರ್ಥರ ಬೆನ್ನಮೇಲೆ ಬಾಸಳಿಕೆಗಳು ಮೂಡಿರುವದರ ಕಾರಣವನ್ನು ಕೇಳ ತೊಡಗಿದರು. ಆಗ ಆ ಶಿಷ್ಯರಲ್ಲಿ ಕೆಲವರು ಹಾರಿಸಿಕೊಂಡು ಮಾತಾಡಿದರು ಆದರೆ ಮಹಾರಾಜರಿಗೆ ಆ ಬಾಸಳಿಕೆಗಳನ್ನು ನೋಡಿದಾಗಿನಿಂದ ಬಹಳ ಚಡಪಡಿಕೆಯು ಹತ್ತಿತ್ತು. ಅದ್ದರಿಂದ ಅವರು ಬಿಟ್ಟೂ ಬಿಡದೆ ಆ ಶಿಷ್ಯರಿಗೆ ಬಹಳ ಹಂಚಕೆಯಿಂದ ಪ್ರಶ್ನೆ ಮಾಡಿ ಅವರ ಕಡೆಯಿಂದ ದೇಗಾಂವದ ಪಾಟೀಲನ ಯಾವತ್ತೂ ಕೃತ್ಯವನು ಕಿಮಿಮುಟ್ಟ ಕೇಳಿ ತಿಳಕೊಂಡರು. ಆ ಕ್ಷಣವೇ ಶಿವಾಜಿ ಮಹಾರಾಜರು ತಮ್ಮ ಬಿಚ್ಚುಗತ್ತಿಯ ಸ್ವಾರನನ್ನು ಕರೆದು “ ಈಗಿಂದಿಗಲೇ ಆ ದೇಗಾಂವದ ಗೌಡನಿಗೆ ಮುಸಿಕೆ ಕಟ್ಟಿಕೊಂಡು ಅವನನ್ನು ಹೊಡೆದು ಹಣ್ಣು ಮಾಡಿ ಎಳಕೊಂಡು ಬಾ” ಎಂದು ಅಪ್ಪಣೆ ಮಾಡಿದರು. ಇದನ್ನು ಸಮರ್ಥರು ತಾವು ಮಲಗಿದ ಕೋಣೆಯಲ್ಲಿಯೇ ತಮ್ಮ ಕಿವಿಯಿಂದ ಕೇಳಿ “ ಶಿವರಾಯಾ ! ಯಾರನ್ನು ಕರೆಕಳುಹಿಸುತ್ತೀ?” ಎಂದು ಪ್ರಶ್ನ ಮಾಡಿದರು. ಅದಕ್ಕೆ ಮಹಾರಾಜರು “ ಆ ದೇಗಾಂವದ ಪಾಟೀಲನನ್ನು ” ಎಂದು ಉತ್ತರ ಕೊಟ್ಟರು. ಆಗ ಸಮರ್ಥರು “ ನೀನು ಅವನಿಗೆ ನಾವು ಹೇಳಿದ ಶಿಕ್ಷೆಯನ್ನು ಕೊಡುವ ಹಾಗಿದ್ದರೆ ಮಾತ್ರ ಕರೆಯಿಸಬೇಕು. ” ಎಂದು ಹೇಳಿದರು. ಅದಕ್ಕೆ ಮಹಾರಾಜರು ‘‘ ಇದಕ್ಕೆ ಸಂಶಯವ್ಯಾತಕ್ಕೆ ಬೇಕು? ’’ ಎಂದು ಹೇಳಿ ತುಸು ನಕ್ಕರು. ಆ ಸಮಯಕ್ಕೆ ಸಮರ್ಥರು ಮಹಾರಾಜರ ಕೈಯಿಂದ ತಮ್ಮ ಕಾಲು ಮುಟ್ಟಿ ಪ್ರಮಾಣ ಮಾಡಿಸಿಕೊಂಡು ‘‘ ಅವನಿಗೆ ಹೊಡದು ಬಡದು ಮಾಡದೆ ಇಲ್ಲಿಯ ವರೆಗೆ ತರತಕ್ಕದ್ದು ” ಎಂದು ಆಜ್ಞಾಪಿಸಿದರು. ಅದರಂತೆ ಮಹಾರಾಜರು ತಮ್ಮ ಸ್ವಾರನಿಗೆ ಅಪ್ಪಣೆ ಮಾಡಿದರು. ಆಗಲಾ ಸ್ವಾರನು ದೇಗಾಂವಕ್ಕೆ ಹೋಗಿ ಆ ಪಾಟೀಲನನ್ನು ಎಳೆದು ತಂದು ದರಬಾರದೊಳಗೆ ನಿಲ್ಲಿಸಿದನು. ಆ ಸಮಯಕ್ಕೆ ಸಮರ್ಥರು ಉಚ್ಚ ಸಿಂಹಾಸನದ ಮೇಲೆ ವಿರಾಜಮಾನರಾಗಿದ್ದರು. ಆ ಪಾಟೀಲನಿಗೆ ಈ ಮೊದಲೇ, ತನ್ನ ಕಡೆಯಿಂದ ಹೊಡತ ತಿಂದವರು ರಾಜ ಗುರುಗಳಾದ ಶ್ರೀ ರಾಮದಾಸ ಸ್ವಾಮಿಗಳೆಂಬುವದು ಗೊತ್ತಾಗಿತ್ತು. ಈಗಂತೂ ಅತ

ನು ಅವರೇ ಪ್ರತ್ಯಕ್ಷವಾಗಿ ರಾಜ ದರಬಾರದಲ್ಲಿ ಸಿಂಹಾಸನದ ಮೇಲೆ ಕುಳಿತದ್ದ ನ್ನು ಕಂಡನು. ಅಂದ ಮೇಲೆ ಅವನ ಸ್ಥಿತಿಯನ್ನು ಕೇಳುವದೇನು ? ಅವನು ಭಯದಿಂದ ಥರ ಥರ ನಡುಗ ಹತ್ತಿ ಸಮರ್ಥರ ಪಾದಗಳ ಮೇಲೆ ಬಿದ್ದು ಉರುಳಾಡಿ ಒಂದೇ ಸವನೆ ಬಡಕೊಂಡು ಅಳಹತ್ತಿದನು. ಆಗ ಸಮರ್ಥರು ಅವನಿಗೆ “ ಈ ಸಾರೆ ನಿನ್ನ ಹೊಲವು ಚನ್ನಾಗಿ ಬೆಳೆಯುವದು.” ಎಂದು ಆಶೀರ್ವಾದ ಮಾಡಿ ಆತನನ್ನು ಮೇಲಕ್ಕೆಬ್ಬಿಸಿ “ ಶಿವಾಜಿ ಮಹಾರಾಜರ ಕಾಲನ್ನು ಗಟ್ಟಿಯಾಗಿ ಹಿಡಿದುಕೋ” ಎಂದು ಹೇಳಿದರು. ಆ ಪ್ರಕಾರ ಅವನು ಎದ್ದವನೇ ಶಿವಾಜಿ ಮಹಾರಾಜರ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡನು. ಆಗ ಸಮರ್ಥರು ಶಿವಾಜಿ ಮಹಾರಾಜರಿಗೆ ಗೌಡನನ್ನು ಕ್ಷಮಿಸಬೇಕೆಂತಲೂ, ಅವನ ಹೊಲವನ್ನು ಇನಾಮವಾಗಿ ನಡಿಸಬೇಕೆಂತಲೂ ಅವನಿಗೆ ವಸ್ತ್ರ ಭೂಷಣಗಳನ್ನು ಕೊಟ್ಟು ಸನ್ಮಾನ ಮಾಡಿ ಕಳುಹಿಸಬೇಕೆಂತಲೂ ಅಪ್ಪಣೆ ಮಾಡಿದರು. ಈ ಅಪ್ಪಣೆಯನ್ನು ಕೇಳಿ ಅಲ್ಲಿ ಕೂತಿದ್ದವರೆಲ್ಲರಿಗೂ ಕೌತುಕವಾಯಿತು. ಉಪಕಾರ ಮಾಡಿದವರಿಗೆ ಉಪಕಾರ ಮಾಡುವದು ಆಶ್ಚರ್ಯವಲ್ಲ ಆದರೆ ಅಪಕಾರ ಮಾಡಿದವರಿಗೆ ಉಪಕಾರ ಮಾಡುವ ಬುದ್ಧಿಯೂ ಶತ್ರುಗಳನ್ನು ಮಿತ್ರರಂತೆ ತಿಳಿದುಕೊಂಡು ಅವರ ಮೇಲೆ ಪ್ರೀತಿ ಮಾಡುವ ಮನಸ್ಸೂ ಉಂಟಾದಂಥ ಸತ್ಪುರುಷರು ಧನ್ಯರೇ ಸರಿ! ಆ ಕೂಡಲೆ ಮಹಾರಾಜರು ಸಮರ್ಥರ ಆಜ್ಞೆಯನ್ನು ಶಿರಸಾವಹಿಸ್ಯ ಮಾಡಿ ಆ ಗೌಡನಿಗೆ ಆತನ ಭೂಮಿಯನ್ನು ಇನಾಮಾಗಿ ಕೊಟ್ಟು ಆತನಿಗೆ ವಸ್ತ್ರ ಭೂಷಣಗಳಿಂದ ಸನ್ಮಾನ ಮಾಡಿ ಆತನನ್ನು ಆತನ ಊರಿಗೆ ಕಳುಹಿ ಕೊಟ್ಟರು !

ಛಳಿಯನ್ನು ಕಾವಿಯ ಧೋತರದಲ್ಲಿ ಕಟ್ಟಿದ್ದು:— ಸಮರ್ಥರು ಚಾಫಳದಲ್ಲಿರುವಾಗ್ಗೆ ಅವರಿಗೆ ಛಳಿ ಬರಲಿಕ್ಕೆ ಹತ್ತಿದ್ದವು; ಬೇಕಾದಷ್ಟು ಉಪಚಾರ ಮಾಡಿದಾಗ್ಯೂ ಛಳಿಯು ನಿಂತಿದ್ದಿಲ್ಲ; ಪಾಳಿಯ ಪ್ರಕಾರ ಒಂದು ದಿವಸ ಬಿಟ್ಟು ಒಂಗು ದಿವಸ ಬರುತ್ತಿದ್ದವು. ಹೀಗಿರಲು ಶಿವಾಜಿ ಮಹಾರಾಜರು ಅವರ ದರ್ಶನಕ್ಕಾಗಿ ಒಂದು ದಿವಸ ಮಠಕ್ಕೆ ಬಂದರು. ಸಮರ್ಥರಿಗೆ ಛಳಿ ಬರುತ್ತವೆಂಬ ವರ್ತಮಾನವು ಮಹಾರಾಜರಿಗೆ ಗೊತ್ತಿದ್ದಿಲ್ಲ. ಶಿವಾಜಿ ಮಹಾರಾಜರು ಮಠಕ್ಕೆ ಬರುತ್ತಲೇ ಕಲ್ಯಾಣ ಸ್ವಾಮಿಯು ಕೋಣೆಯೊಳಗೆ ಹೋಗಿ ಮಹಾರಾಜರು ಬಂದಿರುವ ವರ್ತಮಾನವನ್ನು ಸಮರ್ಥರಿಗೆ ತಿಳಿಸಿದನು. ಆಗ ಸಮರ್ಥರು “ ಯಾಕಾಗಲೊಲ್ಲದು, ಮಹಾರಾಜರನ್ನು ಒಳಗೆ ಕಳುಹಿಸು ” ಎಂದು ಹೇಳಿದವರೇ ತಾವು ಹೊತ್ತಿದ್ದ ಕಾವಿಯ ಧೋತರವನ್ನು ತಮ್ಮ ಮಂಡಿಯ ಕೆಳಗೆ ಇಟ್ಟುಕೊಂಡು ಛಟಕ್ಕನೆ ಎದ್ದು ಹಾಸಿಗೆಯ ಮೇಲೆ ಕುಳಿತು ಕೊಂಡರು. ಶಿವಾಜಿ ಮಹಾರಾಜರು ಪಾಡಿಕೆಯಂ

ತೆ ಸಮರ್ಥರ ಹತ್ತಿರ ಬಂದು ಅವರಿಗೆ ಪ್ರಣಿಪಾತ ಮಾಡಿ ಅವರ ಕ್ಷೇಮ ಕುಶಲವನ್ನು ವಿಚಾರಿಸುತ್ತಲೂ ತಮ್ಮ ಕ್ಷೇಮವನ್ನು ಅವರಿಗೆ ತಿಳಿಸುತ್ತಲೂ ಕುಳಿತುಕೊಂಡಿದ್ದರು. ಈ ಮಾತು ಕಥೆಗಳು ನಡೆದಿರುವಾಗ್ಗೆ ಸಮರ್ಥರ ಮೈಯಲ್ಲಿಯ ಛಳಿಯು ನಿಂತಿದ್ದವು. ಅವರು ಯಥಾ ಪ್ರಕಾರವಾಗಿ ಕುಳಿತುಕೊಂಡಿದ್ದರು. ಬೇನೆಯ ಚಿನ್ಹವು ಅವರ ಮೋರೆಯ ಮೇಲೆ ಕಿಂಚಿತ್ತಾದರೂ ಕಾಣಿಸುತ್ತಿದಿಲ್ಲ. ಹೀಗಿರಲು ಒಮ್ಮಿಂದೊಮ್ಮೆ ಅವರ ಮಂಡಿಯ ಕೆಳಗಿನ ಕಾವಿಯ ಧೋತರವು ಗದ ಗದ ನಡುಗಿ ಹಾರಿ ಬೀಳುವದನ್ನು ಮಹಾರಾಜರು ಕಂಡರು !! ಈ ಚಮತ್ಕಾರವನ್ನು ನೋಡಿಪವರೇ ಶಿವಾಜಿ ಮಹಾರಾಜರು ಸಮರ್ಥರ ಕಾವಿಯ ಧೋತರವು ಯಾಕೆ ನಡಗುತ್ತದೆಂದು ಕಲ್ಯಾಣ ಸ್ವಾಮಿಗೆ ವಿಚಾರಿಸಿದರು. ಆಗ ಕಲ್ಯಾಣ ಸ್ವಾಮಿಯು ಶಿವಾಜಿ ಮಹಾರಾಜರಿಗೆ— "ಸಮರ್ಥರಿಗೆ ಛಳಿ ಬರುತ್ತವೆ. ಆದರೆ ನೀವು ಬಂದದ್ದರಿಂದ ಅವರು ಆ ಛಳಿಯನ್ನು ತಮ್ಮ ಕಾವಿಯ ಧೋತರದಲ್ಲಿ ಕಟ್ಟಿ ಮಂಡಿಯ ಕೆಳಗೆ ಇಟ್ಟುಕೊಂಡು ನಿಮ್ಮ ಕೂಡ ಮಾತಾಡುತ್ತ ಕುಳಿತಿರುತ್ತಾರೆ" ಎಂಬದಾಗಿ ಉತ್ತರವನ್ನು ಕೊಟ್ಟನು. ಇದನ್ನು ಕೇಳಿ ಮಹಾರಾಜರು ಸಮರ್ಥರಿಗೆ— "ನಿಮ್ಮ ಕಾವಿಯ ಧೋತರದಲ್ಲಿ ಛಳಿಯನ್ನು ಕಟ್ಟಿಡತಕ್ಕಂಥಾ ಸಾಮರ್ಥ್ಯವು ನಿಮ್ಮಲ್ಲಿರಲು ನೀವು ಸುಮ್ಮನೆ ಆ ಛಳಿಯಿಂದ ನಿಮ್ಮ ದೇಹಕ್ಕೆ ಯಾಕೆ ಕಷ್ಟ ಪಡಿಸುತ್ತೀರಿ?" ಎಂದು ನುಡಿದರು. ಆಗ ಸಮರ್ಥರು ನಕ್ಕು— "ಅಪ್ಪಾ! ಶಿವರಾಯಾ! ಪ್ರಸಂಗಕ್ಕನುಸರಿಸಿ ಒಮ್ಮೆ ಯಾವಾಗಾದರೂ ಈ ಪ್ರಕಾರ ನಮ್ಮ ಬೇನೆಯನ್ನು ಹಿಂದಕ್ಕೆ ಒತ್ತಿ ಸರಿಸ ಬಹುದು. ಅದರಂತೆ ನಾವು ಯಾವಾಗಲು ಮಾಡಿದರೆ ಸೃಷ್ಟಿಗೆ ಬಾಧೆಯನ್ನುಂಟು ಮಾಡಿದಂತಾಗುವದು; ಮತ್ತು ದೇಹ ಭೋಗದ ನಿಯಮವು ವ್ಯರ್ಥವಾಗುವದು. ಆದ್ದರಿಂದ ಯಾವತ್ತೂ ಮಾನವರು ದೇಹ ಭೋಗವನ್ನು ಅನುಭವಿಸುವದು ಯುಕ್ತವಾದದ್ದು" ಎಂದು ಉತ್ತರ ಕೊಟ್ಟರು. ಆ ಬಳಿಕ ಮಹಾರಾಜರು ಮೂರು ರಾತ್ರಿ ಸಮರ್ಥರ ಸನ್ನಿಧಾನದಲ್ಲಿದ್ದು ತಿರುಗಿ ಹೊರಟು ಹೋದರು. ಈ ಸಂಗತಿಯು ಶಕೆ ೧೫೮೦ ಫಾಲ್ಗುಣ ವದ್ಯ ೧೧ನೇ ದಿವಸ ವರ್ತಿಸಿತು.

**ಸದಾಶಿವ ಶಾಸ್ತ್ರಿ ದೇವನ ಗರ್ವ ಖಂಡನ:—** ಆ ಕಾಲಕ್ಕೆ ಸದಾಶಿವ ಶಾಸ್ತ್ರಿ ದೇವನೆಂಬೊಬ್ಬ ಬ್ರಾಹ್ಮಣನು ತನ್ನ ವಿದ್ವತ್ತಿಕೆಯ ಬಲದಿಂದ ಅತಿ ಪ್ರಸಿದ್ಧನಾಗಿದ್ದನು. ಇವನು ಕಾಶಿಯಲ್ಲಿ ಷಟ್ ಶಾಸ್ತ್ರಗಳನ್ನು ಅಭ್ಯಾಸ ಮಾಡಿದ್ದನು. ವ್ಯಾಕರಣ ಮತ್ತು ತರ್ಕಶಾಸ್ತ್ರಗಳಲ್ಲಿ ಇವನಿಗೆ ಅತ್ಯಂತ ಪ್ರವೀಣತೆ ಯುಂಟಾಗಿತ್ತು. ಇವನು ಜಯಪೂರ ಮೊದಲಾದ ರಾಜಧಾನಿಗಳಿಗೆ ಹೋಗಿ ಅಲ್ಲಿಯ ದೊಡ್ಡ ದೊಡ್ಡ ಪಂಡಿತರನ್ನು ವಾದದಲ್ಲಿ ಸೋಲಿಸಿ ಅವರಿಂದ ಅಜಿಂಕ್ಯಪತ್ರಗಳನ್ನು ಪಡೆದುಕೊಂಡಿ

ದ್ದನು. ಇವನು ಹಗಲು ದೀವಟಿಗೆಯನ್ನು ಹಿಡಿಸಿ ಅಡ್ಡಾಡುತ್ತಿದ್ದನು; ಹಾಗೂ ತನ್ನ ಯಜ್ಞೋಪವೀತಕ್ಕೆ ಒಂದು ಚೂರಿಯನ್ನು ಕಟ್ಟಿರುತ್ತಿದ್ದನು. ಯಾವನು ತನ್ನನ್ನು ವಾದದಲ್ಲಿ ಸೋಲಿಸುವನೋ ಅವನು ಆ ದೀವಟಿಗೆಯನ್ನು ನೊಂದಿಸಬೇಕೆಂತಲೂ ತಾನು ಸೋತರೆ ಯಜ್ಞೋಪವೀತದಲ್ಲಿ ಕಟ್ಟಿದ ಚೂರಿಯಿಂದ ತನ್ನ ನಾಲಿಗೆಯನ್ನು ಕೊಯ್ದುಕೊಳ್ಳುವೆನೆಂತಲೂ ಅವನ ಪ್ರತಿಜ್ಞೆ ಇತ್ತು. ಹೀಗಿರಲು ಅವನು ಒಂದು ಸಾರೆ ಸಾತಾರೆಯಲ್ಲಿ ಶಿವಾಜಿಮಹಾರಾಜರ ಆಶ್ರಯದಲ್ಲಿದ್ದ ಗಂಗಾಭಟ್ಟಜಿ ಎಂಬ ವಿದ್ವಾಂಸನ ಕೀರ್ತಿಯನ್ನು ಕೇಳಿ ಅವನ ಕಡೆಯಿಂದ ಅಜಿಂಕ್ಯ ಪತ್ರವನ್ನು ತೆಗದುಕೊಂಡು ಹೋಗುವದಕ್ಕಾಗಿ ಸ್ಸಾತಾರೆಗೆ ಬಂದು ಶಿವಾಜಿ ಮಹಾರಾಜರಿಗೆ ಭೇಟಿಯಾದನು. ಆಗ ಶಿವಾಜಿ ಮಹಾರಾಜರು ಅವನಿಗೆ ಉತ್ತಮ ಪ್ರಕಾರವಾದ ಆದರ ಸತ್ಕಾರವನ್ನು ಮಾಡಿ ಮೂರನೇ ದಿವಸ ಇವನ ಮತ್ತು ಗಂಗಾಭಟ್ಟಜಿಯ ವಿದ್ವತ್ತಿಕಯ ಪರೀಕ್ಷೆಯನ್ನು ನೋಡುವದಕ್ಕೆ ದರಬಾರವನ್ನು ನೆರೆಯಿಸುವದಕ್ಕಾಗಿ ಅಪ್ಪಣೆಯನ್ನು ಕೊಟ್ಟರು. ಆಗ ಗಂಗಾಭಟ್ಟಜಿಯು ತಾನು ಸದಾಶಿವಶಾಸ್ತ್ರಿಯ ಕೂಡ ವಾದ ಮಾಡಲಿಕ್ಕೆ ಹತ್ತಿದರೆ ನಿಜವಾಗಿ ತನ್ನ ಮಾನ ಖಂಡನವಾಗುವದೆಂದು ಭಯಪಟ್ಟು ಏನಾದರೂ ಹಂಚಿಕೆ ಮಾಡಿ ತನ್ನ ಮರ್ಯಾದೆಯನ್ನು ಮುಚ್ಚಿಕೊಳ್ಳಬೇಕೆಂದು ಆಲೋಚಿಸಿ ಆ ದಿವಸ ರಾತ್ರಿ ಸದಾಶಿವಶಾಸ್ತ್ರಿಯು ಇಳಿದಲ್ಲಿಗೆ ಹೋಗಿ ಅವನಿಗೆ ಭೇಟಿಯಾಗಿ ಅವನ ಮುಂದೆ "ನನ್ನ ಯೋಗ್ಯತೆಯು ದೊಡ್ಡದಲ್ಲ. ನಾನೇನು ದೊಡ್ಡ ವಿದ್ವಾಂಸನಲ್ಲ. ಅಥವಾ ದೊಡ್ಡ ಶಾಸ್ತ್ರಿಯಲ್ಲ. ನಿಮ್ಮ ಎದುರಿಗೆ ಕೊಡ್ರಲಿಕ್ಕೆ ಸಹ ನನ್ನ ಯೋಗ್ಯತೆ ಇಲ್ಲ. ನೀವು ವಾದ ಮಾಡಬೇಕಾದರೆ ರಾಜಗುರುಗಳಾದ ಶ್ರೀ ರಾಮದಾಸ ಸ್ವಾಮಿಗಳ ಸಂಗಡ ಮಾಡಬೇಕು" ಎಂದು ಹೇಳಿ, ಅದರಂತೆ ಅವನ ಮನಸ್ಸಿನಲ್ಲಿ ಚನ್ನಾಗಿ ಬಿಂಬಿಸಿಕೊಟ್ಟನು. ಇದನ್ನು ಕೇಳಿ ಸದಾಶಿವಶಾಸ್ತ್ರಿಯು ಆನಂದಪಟ್ಟು "ಯಾಕಾಗಲೊಲ್ಲದು. ನಾವು ಸಮರ್ಥರ ಸಂಗಡಲೇ ವಾದ ಮಾಡುವೆವು. ನಿಮ್ಮ ಸಂಗಡ ವಾದ ಮಾಡುವದಿಲ್ಲ" ಎಂದು ಒಡಂಬಟ್ಟರು. ಈ ಪ್ರಕಾರ ಗಂಗಾಭಟ್ಟಜಿಯು ಸದಾಶಿವಶಾಸ್ತ್ರಿಯ ಮನಸ್ಸಿನಲ್ಲಿ ಸಮರ್ಥರೊಡನೆ ವಾದ ಮಾಡಬೇಕೆಂಬದಾಗಿ ಹುರಿದುಂಬಿಸಿ ಯಾರಿಗೂ ತಿಳಿಯದಂತೆ ತನ್ನ ಮನೆಗೆ ಹೊರಟು ಬಂದನು. ಮಾರನೇ ದಿವಸ ಶಿವಾಜಿ ಮಹಾರಾಜರು ದರಬಾರವನ್ನು ನೆರೆಯಿಸಿ ದರಬಾರದ ಮಧ್ಯದಲ್ಲಿ ಉಚ್ಚವಾದ ಸಿಂಹಾಸನದ ಮೇಲೆ ತಾವು ಕುಳಿತುಕೊಂಡಿದ್ದರು. ಅವರ ಎರಡೂ ಪಾರ್ಶ್ವಗಳಲ್ಲಿ ವಾದ ಮಾಡುವಂಥ ಉಭಯ ವಿದ್ವಾಂಸರಿಗಾಗಿ ಉಚ್ಚಸ್ಥಾನಗಳು ಸಿದ್ಧ ಮಾಡಲ್ಪಟ್ಟಿದ್ದವು. ಆಗ ಸದಾಶಿವ ಶಾಸ್ತ್ರಿಯು ದರಬಾರದಲ್ಲಿ ಬಂದು, ಒಂದು ಉಚ್ಚಸ್ಥಾನದ ಮೇಲೆ ವಿರಾಜಮಾನನಾಗಿದ್ದನು. ಆ ಮೇಲೆ ಹಿಂದಗಡೆಯಲ್ಲಿ ಗಂಗಾಭಟ್ಟಜಿಯು ದರಬಾರಕ್ಕೆ ಬಂದು ತನ್ನ ಗೋಸ್ಕರ

ಕಾದಿಟ್ಟಂಥ ಎರಡನೆ ಉಚ್ಚಸ್ಥಾನದ ಮೇಲೆ ಕುಳಿತುಕೊಳ್ಳದೆ ಸದಾಶಿವ ಶಾಸ್ತ್ರಿಗೆ ಹಂಗನೆ ಮಾಡಿ ಒಂದು ಮಗ್ಗಲಿಗೆ ಕುಳಿತುಕೊಂಡನು ಇದನ್ನು ನೋಡಿ ಶಿವಾಜಿ ಮಹಾರಾಜರು ಅವನಿಗೆ "ಹೀಗ್ಯಾಕೆ?" ಎಂದು ವಿಚಾರಿಸಲಾಗಿ ಗಂಗಾಭಟ್ಟಜಿಯು "ನನಗೆ ಅಲ್ಲಿ ಕೂಡ್ರುವ ಅಧಿಕಾರವಿಲ್ಲ. ಅದು ಸಮರ್ಥರದೇ ಉಂಟು" ಎಂದು ಹೇಳಿದನು. ಇಷ್ಟರಲ್ಲಿ ಸದಾಶಿವ ಶಾಸ್ತ್ರಿಯು—"ನಮಗೆ ರಾಮದಾಸ ಸ್ವಾಮಿಗಳ ಸಂಗಡ ವಾದ ಮಾಡತಕ್ಕದ್ದದೆ. ಗಂಗಾಭಟ್ಟಜಿಯು ಕೂಡ ಮಾಡತಕ್ಕದ್ದಿರುವದಿಲ್ಲ" ಎಂದು ನುಡಿದನು. ಈ ಉಭಯತರ ಇಂಗಿತವನ್ನು ಅರಿತು ಮಹಾರಾಜರು ವಿಸ್ಮಯ ಪಟ್ಟು—"ಇದೇನು ನಿಮ್ಮ ಮನಸ್ಸಿನಲ್ಲಿ ಸೇರಿತು? ಸಮರ್ಥರು ವಿರಕ್ತರು ಮತ್ತೂ ಭಗವದ್ಭಕ್ತರು. ಅವರು ವಿದ್ವಾಂಸರೂ ಅಲ್ಲ, ಶಾಸ್ತ್ರಿಗಳೂ ಅಲ್ಲ, ಅವರ ಮಾರ್ಗ ಬೇರೆ, ಹಾಗೂ ನಿಮ್ಮ ಮಾರ್ಗ ಬೇರೆ. ಅವರು ನಿಮ್ಮಂಥವರ ವಾದದ ತೊಂದರೆಯಲ್ಲಿ ಬೀಳುವವರಲ್ಲ" ಎಂದು ಸದಾಶಿವ ಶಾಸ್ತ್ರಿಗೆ ಬೇಕಾದಷ್ಟು ಹೇಳಿದರು. ಆಗ ಸದಾಶಿವ ಶಾಸ್ತ್ರಿಯು ತಾನು ರಾಮದಾಸ ಸ್ವಾಮಿಗಳ ಸಂಗಡಲೇ ವಾದ ಮಾಡುವದಕ್ಕಾಗಿ ನಿಶ್ಚಯಿಸಿರುತ್ತೇನೆಂದು ಹಟ ಹಿಡಿದನು. ಅದಕ್ಕೆ ಗಂಗಾಭಟ್ಟಜಿಯು ಸಹ ಅವನಿಗೆ ಅನುಮೋದನ ಕೊಟ್ಟದ್ದರಿಂದ ಮಹಾರಾಜರು "ನಿಮ್ಮ ಮನಸ್ಸಿಗೆ ಬಂದಂತೇ ಮಾಡಿರಿ. ಆದರೆ ಸಮರ್ಥರು ಈ ಸಮಯ ಇಂಥಲ್ಲಿಯೇ ಇರುತ್ತಾರೆಂದು ಯಾರಿಗೂ ಹೇಳಲಿಕ್ಕಾಗುವದಿಲ್ಲ. ಅವರು ಎಲ್ಲಿಯಾದರೂ ಗುಡ್ಡದಲ್ಲಿ ಸಂಚರಿಸುತ್ತಿರಬಹುದು" ಎಂದು ನುಡಿದರು. ಆಗ ಸದಾಶಿವ ಶಾಸ್ತ್ರಿಯೂ ಗಂಗಾಭಟ್ಟಜಿಯೂ "ಹಾಗೇ ಆಗಲಿ. ಅವರು ಇದ್ದಲ್ಲಿ ನಾವು ಬರುತ್ತೇವೆ. ತಾವೂ ಅಲ್ಲಿಗೆ ದಯ ಮಾಡಿಸಬೇಕು" ಎಂದು ರಾಜಶ್ರೀಗಳಿಗೆ ಹೇಳಿದರು. ಈ ಉಭಯತರ ಆಗ್ರಹವನ್ನು ನೋಡಿ ಮಹಾರಾಜರು ತಮ್ಮ ಮನಸ್ಸಿನಲ್ಲಿ "ಈ ನಿಮಿತ್ಯದಿಂದಾದರೂ ಸಮರ್ಥರ ಲೀಲೆಯನ್ನು ನೋಡುವ ಪ್ರಸಂಗವು ಒದಗೀತು" ಎಂದು ಆಲೋಚಿಸಿ ಉಭಯ ವಿದ್ವಾಂಸರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ತಮ್ಮ ಪರಿವಾರ ಸಹಿತವಾಗಿ ಚಾಫಳಕ್ಕೆ ಬಂದು ಅಲ್ಲಿಯ ಮಠದಲ್ಲಿ ವಿಚಾರಿಸಿದರು. ಸಮರ್ಥರು ರಾಮಘಳಿಯಲ್ಲಿರುವರೆಂಬ ವರ್ತಮಾನವು ತಿಳಿದುಬಂತು. ಆಗ ಯಾವತ್ತರು ಅತ್ತ ಕಡೆಗೆ ಹೋಗುವದಕ್ಕಾಗಿ ಹೊರಟರು. ಸಮರ್ಥರು ರಾಮಘಳಿಯ ಉತ್ತರ ದಿಕ್ಕಿನ ಮಾರ್ಗದಲ್ಲಿ ಒಂದು ಕಲ್ಲುಹಾಸಿಗೆಯ ಮೇಲೆ ತಮ್ಮ ಯೋಗದಂಡವನ್ನು ಬಲಪಾರ್ಶ್ವಕ್ಕೆ ಊರಿಕೊಂಡು ಕುಳಿತಿದ್ದರು. ಅವರ ಮುಂದೆ ಕಲ್ಯಾಣಸ್ವಾಮಿಯು ನಿಂತುಕೊಂಡಿದ್ದನು. ಆಗ ಸಮರ್ಥರಿಗೆ ಶಿವಾಜಿ ಮಹಾರಾಜರ ಸ್ವಾರಿಯು ತಮ್ಮ ಕಡೆಗೆ ಬರಹತ್ತಿರುವದು ದೃಷ್ಟಿಗೆ ಬಿತ್ತು. ಅದನ್ನು ನೋಡಿ ಸಮರ್ಥರು ಕಲ್ಯಾಣನಿಗೆ—"ಕಲ್ಯಾಣಾ! ಅಲ್ಲಿ ಯಾರು ಬರಹತ್ತಿದ್ದಾರೆಂಬದನ್ನು ನೋಡಿದಿಯಾ?" ಎಂದು ಕೇಳಿದರು. ಆಗ ಕಲ್ಯಾಣನು—"ಹೌದು ಸ್ವಾಮಿ! ಮಹಾರಾಜರೇ ಇತ್ತ

ಕಡೆಗೆ ಬರುತ್ತಿದ್ದಾರೆ. ಅವರ ಸಂಗಡ ಎರಡು ಮೂರು ಪಲ್ಲಕ್ಕಿಗಳುಂಟು" ಎಂದು ಉತ್ತರ ಕೊಟ್ಟನು. ಅದನ್ನು ಕೇಳಿ ಸಮರ್ಥರು ನಕ್ಕು "ಒಳ್ಳೇದು, ಬರಲಿ" ಎಂದು ನುಡಿದರು ಇಷ್ಟರಲ್ಲಿ ಅವರೆಲ್ಲರು ಸಮರ್ಥರ ಸಮೀಪಕ್ಕೆ ಬಂದರು. ಆಗ ಮಹಾರಾಜರು ಎಲ್ಲರಿಗಿಂತಲು ಮುಂದೆ ಬಂದು ಸಮರ್ಥರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಗಂಗಾಭಟ್ಟನೂ ಸಹಾ ಸಾಷ್ಟಾಂಗ ನಮಸ್ಕಾರ ಮಾಡಿದನು ಸದಾಶಿವ ಶಾಸ್ತ್ರಿಯು ಸಮರ್ಥರಿಗೆ ನಮಸ್ಕಾರ ಮಾಡದೆ ಅವರ ಮುಂದೆ ಸುಮ್ಮನೆ ಬಂದು ನಿಂತುಕೊಂಡನು. ಆಗ ಸಮರ್ಥರು ತಾವೇ ಕೈ ಜೋಡಿಸಿ ಸದಾಶಿವ ಶಾಸ್ತ್ರಿಗೆ ನಮಸ್ಕಾರ ಮಾಡಿದರು. ಆಗ ಸದಾಶಿವ ಶಾಸ್ತ್ರಿಯು ಗರ್ವದಿಂದ—"ನಾವು ನಿಮ್ಮ ಸಂಗಡ ವಾದ ಮಾಡುವದಕ್ಕಾಗಿ ಬಂದಿದ್ದೇವೆ ನೀವು ನಮ್ಮನ್ನು ವಾದದಲ್ಲಿ ಸೋಲಿಸಿದ ತರುವಾಯ ನಾವು ನಿಮಗೆ ನಮಸ್ಕಾರ ಮಾಡುವೆವು. ಇಲ್ಲದೆ ಹೋದರೆ ನಾವು ನಿಮಗೆ ಆಶೀರ್ವಾದ ಮಾಡುವೆವು" ಎಂದು ನುಡಿದನು. ಅದನ್ನು ಕೇಳಿ ಸಮರ್ಥರು ನಕ್ಕು—"ನೀವು ಸಾಕ್ಷಾತ್ ಭೂದೇವರೇ ಇದ್ದೀರಿ. ನೀವು ನಮಸ್ಕಾರ ಮಾಡಬೇಕೆಂದು ನಮ್ಮ ಅಪೇಕ್ಷೆಯಿಲ್ಲ. ನೀವು ನಮಗೆ ಆಶೀರ್ವಾದ ಮಾಡಿದರೆ ಸಾಕು" ಎಂದು ಉತ್ತರ ಕೊಟ್ಟರು. ಅದಕ್ಕೆ ಸದಾಶಿವಶಾಸ್ತ್ರಿಯು —"ವಿದ್ವತ್ತಿಕೆಯ ಪರೀಕ್ಷೆಯಾಗುವ ಮುಂಚೆ ನಾವೇನೂ ಮಾಡಲಾರೆವು" ಎಂದು ಹೇಳಿದನು. ಅದಕ್ಕೆ ಸಮರ್ಥರು "ನಮ್ಮ ಪರೀಕ್ಷೆಯು ಯಾತರದು? ನಾವೇನು ಪಂಡಿತರೂ ಅಲ್ಲ, ವೈದಿಕರೂ ಅಲ್ಲ. ವನದಲ್ಲಿ ವನಚರರಂತೆ ಇದ್ದು ರಾಮನ ದಾಸರೆಂದು ಅಂದುಕೊಳ್ಳುತ್ತೇವೆ. ರಾಮನ ವಿಭೂತಿಗಳು ಯಾವ ರೂಪದಿಂದ ಯಾವ ಸ್ಥಳದಲ್ಲಿರುತ್ತಾವೆಂಬುವದು ತಿಳಿಯುವದಿಲ್ಲ. ಆದ್ದರಿಂದ ನೀವು ಸುಮ್ಮನೇ ದುರಾಗ್ರಹಕ್ಕೆ ಬೀಳಬೇಡಿರಿ" ಎಂದು ನುಡಿದರು. ಅದನ್ನು ಕೇಳಿ ಸದಾಶಿವಶಾಸ್ತ್ರಿಯು ಪುನಃ ಸೊಕ್ಕಿನಿಂದ—"ನಾವು ನಿಮ್ಮ ಹತ್ತರ ಬ್ರಹ್ಮಜ್ಞಾನ ಕಲಿಯಲಿಕ್ಕೆ ಬಂದಿರುವದಿಲ್ಲ. ಇವೆಲ್ಲ ಮಾತುಗಳನ್ನು ಭೋಳೇ ಪ್ರಾಣಿಗಳಾದ ಗಂಡಸರಿಗೂ ಹೆಂಗಸರಿಗೂ ಮಾತ್ರ ಹೇಳಿರಿ" ಎಂದು ಹೇಳಿದನು. ಸಮರ್ಥರು ಎಷ್ಟು ಸಮಾಧಾನ ಹೇಳಿದಾಗ್ಯೂ ಸದಾಶಿವ ಶಾಸ್ತ್ರಿಯು ತನ್ನ ದುರಾಗ್ರಹವನು ಬಿಡಲಿಲ್ಲ. ಆಗ ಸಮರ್ಥರು ಕಲ್ಯಾಣನ ಕಡೆಗೆ ನೋಡುತ್ತ —"ಏನು ಕಲ್ಯಾಣಾ! ಶಾಸ್ತ್ರಿಗಳ ಅಂಬೋಣವೇನದೆ?" ಎಂದು ಕೇಳಿದರು. ಅದಕ್ಕೆ ಕಲ್ಯಾಣನು—"ಸ್ವಾಮಿ ಶಾಸ್ತ್ರಿಗಳು ಸತ್ಪಾತ್ರರಿದ್ದಾರೆ. ಅವರ ಮೇಲೆ ಕೃಪೆ ಮಾಡಬೇಕು" ಎಂದು ಬಿನ್ನವಿಸಿದನು. ಸದಾಶಿವ ಶಾಸ್ತ್ರಿಯು ತಾನು ಬಂದಾಗ್ಗೂ ಸಮರ್ಥರು ಕೂತ ಸ್ಥಳವನ್ನು ಬಿಟ್ಟು ಏಳದೆ, ತಮ್ಮ ಯೋಗದಂಡಕ್ಕೆ ಆತುಕೊಂಡು ಕುಳಿತು, ಸವಿ ಮಾತಾಡುತ್ತಿದ್ದದರಿಂದ ತನ್ನ ಅಪಮಾನವಾಯಿತೆಂದು ತಿಳಿದು ಸಿಟ್ಟಿನಿಂದ ಮೋರೆಯನ್ನು ಕೆಂಪಗೆ ಮಾಡಿ ನಿಂತುಕೊಂಡಿದ್ದನು. ಆಗ ಸಮರ್ಥರು ಕಲ್ಯಾಣನ ಕಡೆಗೆ ನೋ

ಡಿ—"ಕಲ್ಯಾಣಾ! ಅತ್ತ ಕಡೆಯಿಂದ ಯಾರು ಹಾದು ಹೋಗುತ್ತಲಿದ್ದಾರೆ?" ಎಂದು ಕೇಳಿದರು. ಅದಕ್ಕೆ ಕಲ್ಯಾಣನು—"ಸ್ವಾಮಿ! ಒಬ್ಬ ಮಾದಿಗನು ಹೋಗುತ್ತಿದ್ದಾನೆ" ಎಂದು ಉತ್ತರ ಕೊಟ್ಟನು. ಆಗ ಸಮರ್ಥರು ಅವನನ್ನು ತಮ್ಮ ಕಡೆಗೆ ಕರೆಯಿಸಿ "ನೀನ್ಯಾರು?" ಎಂದು ಕೇಳಿದರು. ಅವನು ದೂರಿಂದಲೇ ನಿಂತು—"ನಾನು ಜಾತಿಯಿಂದ ಅಂತ್ಯಜನಿದ್ದು ದಿನಾಲು ತಮ್ಮ ಮಠದಲ್ಲಿ ಕಟ್ಟಿಗೆಯ ಹೊರೆಯನ್ನು ತಂದು ಚೆಲ್ಲಿ ತಮ್ಮ ಮಠದಿಂದಲೇ ಭಕ್ಕರಿಯನ್ನು ಹಾಕಿಸಿಕೊಂಡು ಉಪಜೀವನ ಮಾಡುತ್ತೇನೆ" ಎಂದು ಹೇಳಿದನು. ಇದನ್ನು ಕೇಳಿ ಸಮರ್ಥರು ಕಲ್ಯಾಣನ ಕೈಯಲ್ಲಿ ತಮ್ಮ ಯೋಗದಂಡವನ್ನು ಕೊಟ್ಟು "ಈ ಯೋಗದಂಡದಿಂದ ನೀನು ಒಂದು ಗೆರೆಯನ್ನು ಕೊರೆದು ಅದರೊಳಗೆ ಬಂದು ನಿಂತುಕೊಳ್ಳಲಿಕ್ಕೆ ಅವನಿಗೆ ಹೇಳು" ಎಂದು ಅಪ್ಪಣೆಮಾಡಿದರು. ಅದರಂತೆ ಅವನು ಮಾಡಲು ಅಂತ್ಯಜನು ಆ ಗೆರೆಯೊಳಗೆ ಬಂದು ನಿಂತನು. ಆಗ ಸಮರ್ಥರು ಅವನಿಗೆ "ಈಗ ನೀನ್ಯಾರಿರುವಿ?" ಎಂದು ಕೇಳಿದರು. ಅದಕ್ಕೆ ಅವನು "ನಾನು ಈಗ ಶೂದ್ರನಿರುತ್ತೇನೆ" ಎಂದು ಉತ್ತರ ಕೊಟ್ಟನು. ಆಗ ಸಮರ್ಥರು ಪುನಃ ಸುತ್ತಿಷ್ಟು ಮುಂದೆ ಯೋಗದಂಡದಿಂದ ಇನ್ನೊಂದು ಗೆರೆಯನ್ನು ಕಲ್ಯಾಣನ ಕೈಯಿಂದ ಕೊರೆಯಿಸಿ, ಅದರೊಳಗೆ ಬಂದು ನಿಲ್ಲಲಿಕ್ಕೆ ಆ ಅಂತ್ಯಜನಿಗೆ ಹೇಳಿ "ಈಗ ನೀನ್ಯಾರಿರುವಿ?" ಎಂದು ವಿಚಾರಿಸಿದರು. ಆಗ ಅವನು "ನಾನು ಈಗ ಬ್ರಾಹ್ಮಣನಿರುತ್ತೇನೆ" ಎಂದು ಉತ್ತರ ಕೊಟ್ಟನು. ಆಮೇಲೆ ಕಲ್ಯಾಣನು ಸಮರ್ಥರ ಅಪ್ಪಣೆಗನುಸರಿಸಿ ಮತ್ತೊಂದು ಗೆರೆಯನ್ನು ಮತ್ತಿಷ್ಟು ಮುಂದೆ ಕೊರೆದು ಅದರೊಳಗೆ ಬಂದು ನಿಲ್ಲಲಿಕ್ಕೆ ಆ ಅಂತ್ಯಜನಿಗೆ ಆಜ್ಞಾಪಿಸಿದನು. ತರುವಾಯ ಸಮರ್ಥರು ಅವನಿಗೆ "ಈಗ ನೀನ್ಯಾರಿರುವಿ?" ಎಂದು ಕೇಳಿದರು. ಅದಕ್ಕೆ ಅವನು "ಈಗ ನಾನು ದಶಗ್ರಂಥೀ ವಿದ್ವಾಂಸ ಬ್ರಾಹ್ಮಣನಿರುತ್ತಿದ್ದು ಷಟ್‌ಶಾಸ್ತ್ರಗಳಲ್ಲಿ ಪಾರಂಗತನಿರುತ್ತೇನೆ" ಎಂದು ಉತ್ತರಕೊಟ್ಟನು. ಇದನ್ನು ಕೇಳಿ ಸಮರ್ಥರು ಆ ಅಂತ್ಯಜನಿಗೆ "ಇಲ್ಲಿ ಅನಾಯಾಸದಿಂದ ಒಬ್ಬ ಸತ್ಪಾತ್ರ ಬ್ರಾಹ್ಮಣರು ಬಂದಿರುತ್ತಾರೆ. ಅವರೊಡನೆ ನೀನು ವಾದ ಮಾಡು" ಎಂದು ಅಪ್ಪಣೆ ಮಾಡಿದರು. ಅದಕ್ಕೆ ಆ ಅಂತ್ಯಜನು "ಇಷ್ಟು ದಿವಸಗಳಪರಿಯಂತರ ಮಠದ ಅನ್ನವನ್ನುಂಡ ಸಾರ್ಥಕ್ಯವು ಈ ಹೊತ್ತು ಆಗುವ ಪ್ರಸಂಗವು ಬಂದಿರುತ್ತದೆ" ಎಂದು ನುಡಿದು ಸದಾಶಿವ ಶಾಸ್ತ್ರಿಗೆ ಪೂರ್ವಪಕ್ಷ ಮಾಡಲಿಕ್ಕೆ ಹೇಳಿದನು. ಮೇಲಿನ ಅದ್ಭುತ ಚಮತ್ಕಾರವನ್ನು ನೋಡಿ ಸದಾಶಿವ ಶಾಸ್ತ್ರಿಯ ಧೈರ್ಯವು ಒಡೆದು ನೀರಾಗಿತ್ತು! ಆದಾಗ್ಯೂ ಒಣ ಅಭಿಮಾನಕ್ಕಾಗಿ ಪೂರ್ವಪಕ್ಷವನ್ನು ಮಾಡಿದನು. ಅದಕ್ಕೆ ಆ ಅಂತ್ಯಜನು ಶೃತಿಸ್ಮೃತಿಗಳ ಆಧಾರದಿಂದ ಉತ್ತರ ಪಕ್ಷವನ್ನು ಮಾಡಿ ಸದಾಶಿವ ಶಾಸ್ತ್ರಿಗೆ ಯಥಾಸಿತವಾಗಿ ಖಂಡನ ಮಾಡಿ ಬಿಟ್ಟನು! ಆಗ ಸದಾಶಿವ ಶಾಸ್ತ್ರಿಯು "ಇನ್ನ್ಯಾವದೂ ಉಪಾಯ

ಉಳಿಯಲಿಲ್ಲ. ನಾನು ಸರ್ವತೋಪರಿಯಿಂದ ಸೋತು ಹೋದೆನು" ಎಂದು ಅಂದವನೇ ಸಮರ್ಥರ ಮುಂದೆ ಅಡ್ಡಬಿದ್ದು ಉರುಳಾಡಿ, ತನ್ನ ಹಗಲು ದೀವಟಿಗೆಯನ್ನು ತಾನೇ ತನ್ನ ಕೈಯಿಂದ ನೊಂದಿಸಿ, ತನ್ನ ಯಜ್ಞೋಪವೀತದಲ್ಲಿದ್ದ ಚೂರಿಯನ್ನು ತೆಗೆದು ಅದರಿಂದ ತನ್ನ ನಾಲಿಗೆಯನ್ನು ಕೊಯ್ದುಕೊಳ್ಳಲಿಕ್ಕೆ ಯತ್ನಿಸಲು, ಸಮರ್ಥರು ಕಲ್ಯಾಣನಿಗೆ—"ಕಲ್ಯಾಣಾ! ಏನು ನೋಡುತ್ತೀ? ಬಡಬ್ರಾಹ್ಮಣನು ವ್ಯರ್ಥವಾಗಿ ಜೀವಕ್ಕೆ ಎರವಾಗುತ್ತಾನೆ. ಹಿಡಿ ಹಿಡಿ" ಎಂದು ಅಪ್ಪಣೆ ಮಾಡಿದರು. ಆಗ ಕಲ್ಯಾಣನು ಸದಾಶಿವ ಶಾಸ್ತ್ರಿಯ ಬಳಿಗೆ ಹೋಗಿ ಅವನ ಕೈಯೊಳಗಿನ ಚೂರಿಯನ್ನು ಕಸಿದುಕೊಂಡನು. ಇಷ್ಟರಲ್ಲಿ ಆ ಅಂತ್ಯಜನು ಪುನಃ ಆ ಶಾಸ್ತ್ರಿಯ ಕಡೆಗೆ ಹೋಗಿ—"ನೀವು ಇಷ್ಟೊತ್ತಿನ ತನಕ ಪೂರ್ವಪಕ್ಷ ಮಾಡಿದಿರಿ. ಇನ್ನು ಮೇಲೆ ನಾನು ಪೂರ್ವಪಕ್ಷ ಮಾಡುತ್ತೇನೆ. ನೀವು ಉತ್ತರ ಪಕ್ಷ ಮಾಡಿರಿ" ಎಂದು ವಿನಂತಿ ಮಾಡಿದನು. ಆಗ ಆ ಶಾಸ್ತ್ರಿಯು ವಿನಯದಿಂದ—"ಇಲ್ಲಿ ನನ್ನ ವಿದ್ವತ್ತಿಕೆಯ ಆಟವು ಸಾಗುವದಿಲ್ಲ. ಇಷ್ಟೊತ್ತಿನ ತನಕ ಆದದ್ದೇ ಇನ್ನು ಮುಂದೆ ಆಗುವದು ನಿಜವು. ಆದ್ದರಿಂದ ನಾನು ಇಲ್ಲಿ ಸೋತೆನು" ಎಂದು ಹೇಳಿಕೊಂಡನು. ಆ ಮೇಲೆ ಸದಾಶಿವ ಶಾಸ್ತ್ರಿಯು ಸಮರ್ಥರ ಪಾದಗಳನ್ನು ಗಟ್ಟಿಯಾಗಿ ಹಿಡಿದು—"ಸ್ವಾಮೀ! ನಾನು ಇಷ್ಟು ದಿವಸಗಳ ವರೆಗೆ ಅನೇಕ ಮಂದಿ ಬ್ರಾಹ್ಮಣರ ಛಲ ಮಾಡಿದೆನು. ನೀವು ನನ್ನ ಅಪರಾಧವನ್ನು ಕ್ಷಮಿಸಿ ನನ್ನನ್ನು ಉದ್ಧರಿಸಬೇಕು" ಎಂದು ವಿನಂತಿ ಮಾಡಿಕೊಂಡನು. ಆಗ ಸಮರ್ಥರು—"ಶಾಸ್ತ್ರಿಗಳೇ! ನಾಲಿಗೆ ಯಾರದು? ಅದನ್ನು ಕೊಯ್ಯಬೇಕ್ಯಾರು? ದೀವಟಿಗೆ ಯಾರದು? ಅದನ್ನು ನೊಂದಿಸಬೇಕ್ಯಾರು? ಶ್ರೀರಘುಪತಿಯ ಭಾಂಡಾರದಲ್ಲಿ ಅನೇಕ ವಿಭೂತಿಗಳಿದ್ದಾರೆ. ಆದ್ದರಿಂದ ಇಂಥಾ ದುರಾಗ್ರಹವನ್ನು ಯಾರೂ ಮಾಡಬಾರದು" ಎಂದು ಉಪದೇಶಿಸಿದರು. ಸಮರ್ಥರ ಮಧುರ ಭಾಷಣವನ್ನು ಕೇಳಿ ಸದಾಶಿವ ಶಾಸ್ತ್ರಿಯು ನೇತ್ರಗಳಿಂದ ಅಶ್ರುಧಾರೆಗಳು ಸುರಿಯ ಹತ್ತಿದವು. ಇದನ್ನು ಕಂಡು ಮಹಾರಾಜರಿಗೂ ಮಹಾರಾಜರ ಸಂಗಡ ಇದ್ದ ಯಾವತ್ತು ಜನರಿಗೂ ಅತ್ಯಂತ ಆಶ್ಚರ್ಯವಾಯಿತು.

ಈ ಮೇರೆಗೆ ಸದಾಶಿವ ಶಾಸ್ತ್ರಿಯ ಅಹಂಕಾರದ ನಾಟಕವು ಸಮಾಪ್ತಿಯಾದ ನಂತರ ಸಮರ್ಥರು ಆ ಅಂತ್ಯಜನಿಗೆ—"ಅಪ್ಪಾ ಮಗನೇ! ನಿನ್ನ ಕೆಲಸವು ಇನ್ನು ತೀರಿದಂತಾಯಿತು. ಈ ಹೊತ್ತು ನನ್ನ ಸೇವೆಯನ್ನು ನೀನು ಉತ್ತಮ ಪ್ರಕಾರವಾಗಿ ಮಾಡಿದಿ. ಇನ್ನು ಮೇಲೆ ನೀನು ನಿನ್ನ ಕಟ್ಟಿಗೆಯ ಹೊರೆಯನ್ನು ಹೊತ್ತುಕೊಂಡು ನಿನ್ನ ಕೆಲಸಕ್ಕೆ ಹೋಗು" ಎಂದು ನುಡಿದರು. ಆಗ ಆ ಅಂತ್ಯಜನು ಕೈಜೋಡಿಸಿ ಸಮರ್ಥರಿಗೆ—"ಮಹಾರಾಜರೇ! ತಾವು ಜಗದುದ್ಧಾರ ಕರ್ತರು. ತಾವು ತಮ್ಮ ಕೃಪಾಪ್ರಸಾದದಿಂದ ನನ್ನನ್ನು ವಿದ್ವಾನ್ ಬ್ರಾಹ್ಮಣನಾಗಿ ಮಾಡಿದಿರಿ. ಇನ್ನು ಮೇಲೆ ನನ್ನನ್ನು ಪುನಃ ಅಂತ್ಯಜನಾಗಿ ಮಾಡುವಿರಾ? ಇದು ತಮ್ಮ ಕೀರ್ತಿಗೆ

ಭೂಷಣಾಸ್ಪದವಾದದ್ದೋ!" ಎಂದು ಬಹಳ ದೀನತೆಯಿಂದ ಕೇಳಿದನು. ಇದನ್ನು ಕೇಳಿ ಸಮರ್ಥರು ನಕ್ಕು—"ಹಾ! ಅಂತೂ ನೀನು ನನ್ನನ್ನು ತಪ್ಪಿನಲ್ಲಿ ಹಿಡಿದಿಯಾ? ಒಳ್ಳೇದು ನಿನ್ನ ಅಭಿಪ್ರಾಯವೇನಿರುತ್ತದೆ? ಹೇಳು" ಎಂದು ಕೇಳಿದರು. ಆಗ ಆ ಅಂತ್ಯಜನು—"ಸ್ವಾಮಿಗಳೇ! ನಾನು ಪೂರ್ವದಲ್ಲಿ ಚಿತ್ರಸೇನ ಗಂಧರ್ವನಿದ್ದೆನು. ನಾನು ನನ್ನ ಸ್ತ್ರೀಯರೊಂದಿಗೆ ಕ್ರೀಡೆಯಲ್ಲಿ ಆಸಕ್ತನಾಗಿರುವಾಗ ನಾರದ ಮಹರ್ಷಿಗಳ ಅವಮಾನ ಮಾಡಿದ್ದಕ್ಕಾಗಿ ಅವರು ನನಗೆ ಶಾಪಕೊಟ್ಟರು. ಆ ಶಾಪಕ್ಕಾಗಿ ನಾನು ನನ್ನ ಮೊದಲನೇ ಜನ್ಮದಲ್ಲಿ ಜಯಪಾಲ ರಾಜನ ಕುದುರೆಯಾಗಿದ್ದೆನು. ಅಲ್ಲಿ ಶ್ರೀ ಶಂಕರನು ಮುಕುಂದರಾಜನ ಅವತಾರವನ್ನು ಧರಿಸಿ ನನ್ನನ್ನು ಮುಕ್ತಮಾಡಿದನು. ಆ ಮೇಲೆ ನಾನು ನನ್ನ ಎರಡನೇ ಜನ್ಮದಲ್ಲಿ ಪೈಠಣದೊಳಗೆ ಕೋಣನಾಗಿ ಹುಟ್ಟಿದ್ದೆನು. ಆಗ ಶ್ರೀ ವಿಷ್ಣುವು ಜ್ಞಾನೇಶ್ವರನ ಅವತಾರವನ್ನು ತಾಳಿ ನನ್ನ ಬಾಯಿಂದ ವೇದವನ್ನು ಅನ್ನಿಸಿ ನನ್ನ ಮುಕ್ತಿಯನ್ನು ಮಾಡಿದನು. ಈಗ ನಾನು ನನ್ನ ಮೂರನೇ ಜನ್ಮದಲ್ಲಿ ಚಂಪಕ ಕುಲದೊಳಗೆ ಅಂತ್ಯಜನಾಗಿ ಹುಟ್ಟಿರುತ್ತೇನೆ. ಈ ಜನ್ಮದಲ್ಲಿ ನನ ರಾಮದಾಸ ಸ್ವಾಮಿಗಳಿಂದ ಮುಕ್ತಿಯಾದೀತೆಂದು ನಾರದರು ಭವಿಷ್ಯ ಹೇಳಿರುತ್ತಾರೆ. ಅದರಂತೆ ಈಗ ಯಾವತ್ತೂ ಸಂಗತಿಗಳು ವರ್ತಿಸುತ್ತಿದ್ದು ತಾವು ನನ್ನನ್ನು ಉದ್ಧರಿಸಬೇಕು. ನಾನು ಇನ್ನು ಮೇಲೆ ಮುಕ್ತಿಯನ್ನು ಪಡೆಯುವೆನು" ಎಂದು ಹೇಳಿದನು. ಇದನ್ನು ಕೇಳಿ ಸಮರ್ಥರು—"ಒಳ್ಳೇದು. ಇನ್ನೂ ಏನಾದರೂ ಬೇಡಿಕೆಯಿದ್ದರೆ ಬೇಡಿಕೋ" ಎಂದು ಅಪ್ಪಣೆ ಮಾಡಿದರು. ಆಗ ಆ ಅಂತ್ಯಜನು—"ನನ್ನ ಜಾತಿಗೆ ಮಠದಿಂದ ತೆಂಗಿನಕಾಯಿಯ ಮಾನವು ದೊರಕತಕ್ಕದ್ದು" ಎಂದು ಬೇಡಿಕೊಂಡನು. ಆಗ ಸಮರ್ಥರು ತಮ್ಮ ಶಿಷ್ಯರಿಗೆ—"ಚಾಫಳದ ಮಠದಲ್ಲಿ ಶ್ರೀ ರಘುಪತಿಯ ಸ್ವಾರಿಯು ರಥೋತ್ಸವವಾಗಿ ಹೊರಟ ಕೂಡಲೆ ಅಂತ್ಯಜರಿಗೆ ಬಹುಮಾನಾರ್ಥವಾಗಿ ಒಂದು ತೆಂಗಿನಕಾಯಿಯನ್ನು ಕೊಡತಕ್ಕದ್ದು" ಎಂಬದಾಗಿ ಆಜ್ಞಾಪಿಸಿದರು. (ಈ ಮೇರೆಗೆ ಇನ್ನೂ ಆ ಮಠದಲ್ಲಿ ಅಂತ್ಯಜರಿಗೆ ಈ ಮಾನವು ದೊರಕುತ್ತದೆ.) ಬಳಿಕ ಆ ಅಂತ್ಯಜನು ಎಲ್ಲರ ಸಮಕ್ಷ ತನ್ನ ದೇಹವನ್ನಿಟ್ಟನು. ಆಗ ಸಮರ್ಥರು ತಾವು ಕೂತಂಥ ಕಲ್ಲು ಹಾಸಿಗೆಯನ್ನು ಬಿಟ್ಟು ಕೆಳಗಿಳಿದು ತಾವು ಕೂತ ಕಲ್ಲನ್ನು ತೆಗೆದು ಆ ಅಂತ್ಯಜನ ದೇಹದ ಮೇಲೆ ಇಟ್ಟರು. ಆ ದಿವಸ ಮೊದಲ್ಗೊಂಡು ಸದಾಶಿವ ಶಾಸ್ತ್ರಿಯು ಸರ್ವಸಂಗ ಪರಿತ್ಯಾಗ ಮಾಡಿ ಸಮರ್ಥರ ಸೇವೆಯನ್ನು ಮಾಡಲಿಕ್ಕೆ ಆರಂಭಿಸಿದನು. ಅವನಿಗೆ ಸಮರ್ಥರು ವಾಸುದೇವ ಗೋಸಾವಿ ಎಂಬ ಹೆಸರನ್ನಿಟ್ಟು ಅವನನ್ನು ಕಣ್ಹೇರದ ಮಠದಲ್ಲಿ ಸ್ಥಾಪನೆಮಾಡಿದರು. ಈ ಪ್ರಕಾರ ಯಾವತ್ತೂ ಸಂಗತಿಗಳು ನಡೆದ ತರುವಾಯ ಶಿವಾಜಿ ಮಹಾರಾಜರು ಸಮರ್ಥರನ್ನೊಡಗೊಂಡು ಚಾಫಳದ

ಮಠಕ್ಕೆ ಬಂದು, ಅಲ್ಲಿ ಮೂರು ರಾತ್ರಿ ಇದ್ದು, ನಾಲ್ಕನೇ ದಿವಸ ಬೆಳಿಗ್ಗೆ ಸಾತಾರೆಗೆ ಹೊರಟು ಹೋದರು.

ಅಫಝುಲಖಾನನ ಅಂತ್ಯವು— ಶಿವಾಜಿ ಮಹಾರಾಜರು ತಮ್ಮ ರಾಜ್ಯದಲ್ಲಿ ಬಹಳ ಪುಂಡಾಟವನ್ನು ಮಾಡಿ ಅನೇಕ ಕೋಟೆಗಳನ್ನೂ ಸೀಮೆಗಳನ್ನೂ ಹಸ್ತಗತಮಾಡಿಕೊಂಡದ್ದನ್ನು ನೋಡಿ ವಿಜಾಪುರದ ಬಾದಶಹನು ಶಿವಾಜಿ ಮಹಾರಾಜರ ತೀರ್ಥರೂಪರಾದ ಶಹಾಜಿ ಮಹಾರಾಜರಿಗೆ ಬಹಳ ಪರಿಯಿಂದ ಪೀಡಿಸಿದನು. ಆದಾಗ್ಯೂ ಶಿವಾಜಿ ಮಹಾರಾಜರು ತಮ್ಮ ಕ್ರಮವನ್ನು ಬಿಡಲಿಲ್ಲ. ಇದನ್ನು ಕಂಡು ಬಾದಶಹನು ಶಿವಾಜಿ ಮಹಾರಾಜರೊಡನೆ ಸಾಮೋಪಚಾರವನ್ನು ನಡಿಸಿದನು. ಆದರೆ ಅದರಿಂದ ಸಹ ಏನೂ ಉಪಯೋಗವಾಗಲಿಲ್ಲ. ಆಗ ಬಾದಶಹನು ತನ್ನೊಬ್ಬ ಬಲಾಢ್ಯ ಸರದಾರನನ್ನು ಶಿವಾಜಿ ಮಹಾರಾಜರ ಪಾರಿಪತ್ಯ ಮಾಡುವದಕ್ಕಾಗಿ ಒಂದು ದೊಡ್ಡ ಸೈನ್ಯದೊಂದಿಗೆ ಕಳುಹಿಕೊಟ್ಟನು. ಬಾದಶಹನ ಅಪ್ಪಣೆಯನ್ನನುಸರಿಸಿ ಅಫಝುಲಖಾನನು ತನ್ನ ಸೈನ್ಯವನ್ನು ಕರೆದುಕೊಂಡು ತುಳಜಾಪುರ ಪಂಢರಪುರಗಳ ಮೇಲಿಂದ ಬಂದನು. ಆಗ ಅವನು ಮಾರ್ಗದಲ್ಲಿಯ ಅನೇಕ ದೇವಸ್ಥಾನಗಳನ್ನು ನೆಲಸಮ ಮಾಡಿ ಅವುಗಳಲ್ಲಿಯ ಮೂರ್ತಿಗಳನ್ನು ಒಡೆದು ಹಾಕಿದನು. ಶಿವಾಜಿ ಮಹಾರಾಜರ ಕಡೆಗೆ ಅಫಝುಲ್‌ಖಾನನ ಕಡೆಯ ವಕೀಲನು ಮೇಲಿಂದ ಮೇಲೆ ಟಪಾಲು ಕಳಿಸಹತ್ತಿದನು. ಆಗ ಶಿವಾಜಿ ಮಹಾರಾಜರು ಮುಂದೆ ಏನು ಮಾಡಬೇಕೆಂಬ ಬಗ್ಗೆ ಸಮರ್ಥರ ಕೂಡ ಆಲೋಚನೆ ಮಾಡುವದಕ್ಕಾಗಿ ಒಂದೆರಡು ಸಾರೆ ಸಮರ್ಥರ ಭೆಟ್ಟಿಗೆ ಹೋದರು. ಆದರೆ ಸಮರ್ಥರ ಭೆಟ್ಟಿಯಾಗಲಿಲ್ಲ. ಆಗ ಮಹಾರಾಜರು ಇದೇ ವಿಷಯವನ್ನು ಕುರಿತು ಆಲೋಚನೆ ಮಾಡುವದಕ್ಕಾಗಿ ದರಬಾರವನ್ನು ಕೂಡಿಸಿದರು. ಆಗ ಎಷ್ಟೋ ಮಂದಿ ಸರದಾರರು "ನಾವು ಸೈನ್ಯ ತೆಗೆದುಕೊಂಡು ಶತ್ರುಗಳ ಕೂಡ ಯುದ್ಧ ಮಾಡುವದಕ್ಕೆ ಹೋಗುವೆವು" ಎಂದು ಹೇಳಿದರು. ಅದಕ್ಕೆ ಮಹಾರಾಜರು, ಸಮರ್ಥರ ಅಪ್ಪಣೆಯು ದೊರಕದಹೊರತಾಗಿ ತಾವು ಏನೂ ನಿಶ್ಚಯವಾಗಿ ಹೇಳಲಾರೆವೆಂದು ಉತ್ತರವನ್ನು ನುಡಿದರು. ಮಹಾರಾಜರ ಕಾರಭಾರಿಗಳು "ಜೀವ ಹೋಗುವ ಹೊತ್ತು ಬಂದು ಒದಗಿರುವಾಗ ಸಮರ್ಥರ ದಾರಿಯನ್ನು ಕಾಯುತ್ತ ತಟಸ್ಥರಾಗಿ ಕೂಡ್ರುವದು ಉಚಿತವಲ್ಲ." ಆದ್ದರಿಂದ ಶತ್ರುಗಳಿಗೆ ಎದುರಾಗಿ ಸೈನ್ಯ ಸಮೇತ ಸರದಾರರನ್ನು ಕಳುಹಿಸಿ ಕೊಡತಕ್ಕದ್ದು" ಎಂದು ತಮ್ಮ ಅಭಿಪ್ರಾಯಕೊಟ್ಟರು. ಆದರೆ ಮಹಾರಾಜರು "ಜೀವಹೋಗಲಿ ಅಥವಾ ಉಳಿಯಲಿ, ಆ ಸದ್ಗುರುಗಳಾದ ಸಮರ್ಥರ ಅಪ್ಪಣೆಯಿಲ್ಲದೆ ತಾವು ಯಾವದೂ ಅಪ್ಪಣೆ ಕೊಡಲಾರೆವು" ಎಂದು ಹೇಳಿದರು. "ವಿಶ್ವಾಸದಂತೆ ಫಲವು" ಎಂಬ ನುಡಿಯು ಸುಳ್ಳಲ್ಲ; ಮಹಾರಾಜರು ಈ ವೇಳೆಗೆ ಸಮರ್ಥರ ಚರಣ

ಗಳನ್ನು ಸ್ಮರಣ ಮಾಡುತ್ತ, ಸಮರ್ಥರು ಅಪ್ಪಣೆಯನ್ನು ಕೊಡದೆ ತಾವು ಯಾತ್ರ ನಲ್ಲಿ ಕಳಿಸುವದಿಲ್ಲವೆಂದು ಮನಸ್ಸಿನಲ್ಲಿ ನಿಶ್ಚಯಮಾಡಿ ಕೂತುಕೊಂಡಿರುವಾಗ ಸಮರ್ಥರು ಅಕಸ್ಮಾತ್ತಾಗಿ ದರಬಾರಕ್ಕೆ ಬಂದು ಮಹಾರಾಜರಿಗೆ ದರ್ಶನಕೊಟ್ಟು— "ಶಿವರಾಯಾ! ನೀನು ರಾಜ್ಯಕಾರಭಾರ ಮಾಡುವವನ; ನಾನು ಅರಣ್ಯವಾಸಿಯು. ಅದ್ದರಿಂದ ಈ ಕೆಲಸದಲ್ಲಿ ನನ್ನ ಅಪ್ಪಣೆಯನ್ನು ಕೇಳಬೇಡ. ನೀನು ಈಗಲೇ ಸ್ನಾನಮಾಡಿ ಶುಚಿರ್ಭೂತನಾಗಿ ನಿನ್ನ ಸಂಕಟವನ್ನು ಕಾಲೀಕಾದೇವಿಗೆ ನಿವೇದನ ಮಾಡು. ಅಂದರೆ ಅವಳು ನಿನ್ನ ಮೈಯಲ್ಲಿ ಬಂದು ನಿನ್ನ ಬಾಯಿಂದ ನೀನು ಮುಂದೆ ಏನು ಮಾಡಬೇಕೆಂಬದನ್ನು ಒಡನುಡಿಸುವಳು. ಅದನ್ನು ನೀನು ನಿನ್ನ ಮಂತ್ರಿ ಜನರ ಕಡೆಯಿಂದ ಬರೆಯಿಸಿ ಅದರಂತೆ ನಡೆಯಬೇಕು" ಎಂದು ಹೇಳಿದವರೇ ವಿದ್ಯುಲ್ಲತೆಯಂತೆ ಮಿಂಚಿ ಅದೃಶ್ಯರಾದರು. ಆ ವೇಳೆ ಶಿವಾಜಿ ಮಹಾರಾಜರು ಸಮರ್ಥರ ಅಪ್ಪಣೆಗನುಸರಿಸಿ ಕಾಲಿಕಾ ದೇವಿಯ ಮುಂದೆ ತಮ್ಮ ಸಂಕಟವನ್ನು ನಿವೇದನ ಮಾಡಲಾಗಿ ಅವಳು ಅವರ ಮೈಯಲ್ಲಿ ಸಂಚರಿಸಿ ಅವರು ಮುಂದೆ ಮಾಡತಕ್ಕ ಕ್ರಮವನ್ನು ಒಡನುಡಿದಳು. ಅದನ್ನು ಮಹಾರಾಜರ ಮಂತ್ರಿಗಳು ತಬ್ಬಾಗಿ ಬರೆದುಕೊಂಡು ಮುಂದಿನ ಸಿದ್ಧತೆಯನ್ನು ಮಾಡಿದರು. ಅದ್ದರಿಂದ ಮಹಾರಾಜರು ದೇವಿಯ ವರಕ್ಕನುಸರಿಸಿ ಅಫಝುಲಖಾನನನ್ನು ಬಹಳ ಹಂಚಿಕೆಯಿಂದ ಕೋಯನಾ ತೀರಕ್ಕೆ ತಂದು ಪ್ರತಾಪಗಡದಲ್ಲಿ ಏಕಾಂತ ಸ್ಥಳಕ್ಕೆ ಕರೆಯಿಸಿ ಅವನ ಮುಂದೆ ಬಹಳ ಅಂಜಿದವರಂತೆ ನಟಿಸಿ ಅವನನ್ನು ಪ್ರೀತಿಯಿಂದ ಅಪ್ಪಿಕೊಳ್ಳುವವರಂತೆ ಮಾಡಿ ವಾಘನಖ ವೆಂಬ ಹುಲಿಯುಗುರಿನ ಆಯುಧದಿಂದ ಅವನ ಹೊಟ್ಟೆಯನ್ನು ಸೀಳಿ ಕೊಂದರೆಂಬುವದು ಇತಿಹಾಸ ಪ್ರಸಿದ್ಧವದೆ. ಆ ಸಮಯಕ್ಕೆ ಶಿವಾಜಿ ಮಹಾರಾಜರಿಗೆ ಅಫಜುಲಖಾನನ ಸೈನ್ಯದೊಳಗಿನ ಅನೇಕ ಗಜ ತುರಗಗಳೂ ಅಪರಿಮಿತವಾದ ದ್ರವ್ಯವೂ ದೊರಕಿದ್ದಲ್ಲದೆ ಶಿವಾಜಿ ಮಹಾರಾಜರ ಜಾಣತನದ ಕೀರ್ತಿಯು ನಾಲ್ಕೂ ಕಡೆಗೆ ಹಬ್ಬಿಕೊಂಡಿತು. ಅಫಝುಲಖಾನನ ಪ್ರೇತವು ಬಿದ್ದ ಸ್ಥಳದಲ್ಲಿ ಮಹಾರಾಜರು ಒಂದು ಗೋಪುರವನ್ನು ಕಟ್ಟಿಸಿದ್ದು ಅದಕ್ಕೆ ವಡಿಕೆಯಾಗಿ "ಅಫಜುಲಬುರುಜ" ವೆಂದು ಕರೆಯುವರು. ಶಿವಾಜಿ ಮಹಾರಾಜರು ಅಫಜುಲಖಾನನನ್ನು ಕೊಂದ ನಂತರ ಪರಮಾನಂದಪಟ್ಟು ಸಮರ್ಥರ ಬಳಿಗೆ ಹೋಗಿ ಯಾವತ್ತೂ ವಿಸ್ತಾರವನ್ನು ಅವರಿಗೆ ತಿಳಿಸಿದರು. ಅದನ್ನು ಕೇಳಿ ಸಮರ್ಥರು ಮೋದಗೊಂಡು ಉತ್ತಮ ಪುರುಷಲಕ್ಷಣ ವೆಂಬ ವಿಷಯದ ಮೇಲೆ ಶಿವಾಜಿ ಮಹಾರಾಜರನ್ನುದ್ದೇಶಿಸಿ ಸ್ತುತಿಪರವಾದ ಕವಿತೆಗಳನ್ನು ಬರೆದು ಅವುಗಳನ್ನು ಮಹಾರಾಜರಿಗೆ ಓದಲಿಕ್ಕೆ ಕೊಟ್ಟು ಅವರನ್ನು ಬಹಳವಾಗಿ ಅಭಿನಂದಿಸಿದರು. (ಉತ್ತಮ ಪುರುಷ ಲಕ್ಷಣ ವೆಂಬ ವಿಷಯವು ದಾಸಬೋಧ ಗ್ರಂಥದಲ್ಲಿಯ ಒಂದು ಸ್ವತಂತ್ರ ಅಧ್ಯಾಯವಿರುವದು.)

ರಾಜಾಪುರದ ಸಾವುಕಾರನು— ಒಂದು ದಿವಸ ಚಾಫಳದ ಮಠದಲ್ಲಿ ಶಿವಾಜಿ ಮಹಾರಾಜರು ಸಮರ್ಥರೊಂದಿಗೆ ಮಾತಾಡುತ್ತ ಕೂತಿರುವಾಗ್ಗೆ ಸಮರ್ಥರ ಮೈಮೇಲಿನ ಯಾವತ್ತೂ ವಸ್ತ್ರಗಳು ತೋಯ್ದು ಒದ್ದೆಯಾದವು. ಆಗ ಸಮರ್ಥರು ಮೂರುನಾಲ್ಕು ಸಾರೆ ತಮ್ಮ ಕಣ್ಣುಗಳನ್ನು ಮುಚ್ಚಿ ತೆರೆದರು ಇದನ್ನು ನೋಡಿ ಶಿವಾಜಿ ಮಹಾರಾಜರು ಬಹಳ ಆಶ್ಚರ್ಯದಿಂದ “ಇದೇನು?” ಎಂದು ಸಮರ್ಥರಿಗೆ ಕೇಳಿದರು. ಆಗ ಸಮರ್ಥರು ರಾಜಶ್ರೀಗಳನ್ನು ತಮ್ಮ ಸಮೀಪಕ್ಕೆ ಕರೆದು ತಮ್ಮ ಶಾಲದರದ ಒಂದು ಚುಂಗನ್ನು ಹಿಂಡಿ ಅವರ ಕೈಯಮೇಲೆ ನೀರಿನ ಕೆಲವು ಹನಿಗಳನ್ನು ಸುರವಿ “ಈ ನೀರನ್ನು ನೆಕ್ಕು” ಎಂದು ಆಜ್ಞಾಪಿಸಿದರು. ಅದರಂತೆ ಮಹಾರಾಜರು ಮಾಡಲಾಗಿ ಅವು ಸಮುದ್ರದ ಉಪ್ಪಿನ ನೀರೆಂದು ತಿಳಿಯಬಂತು. ಆಗ ಮಹಾರಾಜರು ಮತ್ತಿಷ್ಟು ಆಶ್ಚರ್ಯವುಳ್ಳವರಾಗಿ ಸಮರ್ಥರಿಗೆ ಇದರ ಕಾರಣವನ್ನು ವಿಚಾರಿಸತೊಡಗಿದರು. ಆದರೆ ಸಮರ್ಥರು ಅದಕ್ಕೆ ಉತ್ತರವನ್ನು ಕೊಡದೆ “ಇನ್ನು ೧೫ ದಿವಸ ತಡಿ, ಅಂದರೆ ನಿನಗೆ ಯಾವತ್ತು ಸಂಗತಿಯು ತಾನೇ ಗೊತ್ತಾಗುವದು.” ಎಂದು ಮಾತ್ರ ಹೇಳಿದರು. ಇದನ್ನು ಕೇಳಿ ಮಹಾರಾಜರು ಸುಮ್ಮನಾದರು. ಮುಂದೆ ಹದಿನೈದು ದಿವಸಗಳು ತೀರಿದ ಮೇಲೆ ರಾಜಾಪುರದಿಂದ ಮುಂಜೆ ಎಂಬ ಅಡ್ಡ ಹೆಸರಿನ ಒಬ್ಬ ಸಾವುಕಾರನು ತನ್ನ ಕುಟುಂಬದ ಯಾವತ್ತು ಜನರೊಂದಿಗೆ ಸಮರ್ಥರ ದರ್ಶನಕ್ಕಾಗಿ ಬಂದು ಸಮರ್ಥರಿಗೆ ಸಾಷ್ಟಾಂಗ ಪ್ರಣಿಪಾತವಮಾಡಿ ಸಮರ್ಥರ ಅಜ್ಞೆಯಾದ ಮೇಲೆ ಕುಳಿತುಕೊಂಡನು. ಆ ಸಮಯಕ್ಕೆ ಸಮರ್ಥರ ಸನ್ನಿಧಾನದಲ್ಲಿ ಶಿವಾಜಿ ಮಹಾರಾಜರು ಸಹ ಕುಳಿತುಕೊಂಡಿದ್ದರು. ಮುಂಜೆ ಸಾವುಕಾರನು ಮತ್ತು ಅವನ ಮನೆಯವರು ಕುಳಿತುಕೊಂಡ ತರುವಾಯ ಸಮರ್ಥರು ಅವರಿಗೆ “ನೀವು ಯಾರು? ಎಲ್ಲಿಂದ ಬಂದಿರಿ?” ಎಂದು ವಿಚಾರಿಸಿದರು. ಆಗ ಮುಂಜೆ ಸಾವುಕಾರನು— “ಸ್ವಾಮೀ! ಈಗ ಹದಿನೈದು ದಿವಸಗಳ ಹಿಂದೆ ನಮ್ಮ ಹಡಗವು ಸಮುದ್ರದ ತುಫಾನಕ್ಕೆ ಸಿಕ್ಕು ಮುಳುಗುವ ಸಂಧಿಗೆ ಬಂದಿತ್ತು. ಆಗ ನಮಗೆ ಪಾರಾಗಲಿಕ್ಕೆ ಯಾವದೂ ಮಾರ್ಗವೇ ಇದ್ದಿಲ್ಲ ಆದ್ದರಿಂದ ನಾವು ತಮ್ಮ ಅದ್ಭುತ ಸಾಮರ್ಥ್ಯದ ಕೀರ್ತಿಯನ್ನು ಕೇಳಿ ತಮ್ಮ ಸ್ಮರಣವನ್ನು ಮಾಡಿ ಮನಸ್ಸಿನಲ್ಲಿ ತಮ್ಮ ಆರಾಧನೆಯನ್ನು ಮಾಡಿದೆವು. ಆಗ ನಮ್ಮ ಹಡಗವು ಆ ತುಫಾನದಿಂದ ಪಾರಾಗಿ ಸುರಕ್ಷಿತವಾಗಿ ಒಂದದಕ್ಕೆ ಒಂದು ತಲ್ಪಿತು. ಆದ್ದರಿಂದ ತಮ್ಮ ಪವಿತ್ರವಾದ ಪಾದಗಳ ದರ್ಶನವನ್ನು ಪಡೆದು ಕೃತಾರ್ಥರಾಗುವದಕ್ಕೆ ಇತ್ತ ಕಡೆಗೆ ಬಂದೆವು” ಎಂದು ಹೇಳಿದನು. ಆ ಮೇಲೆ ಮುಂಜೆ ಸಾವುಕಾರನು ಶಿವಾಜಿ ಮಹಾರಾಜರನ್ನು ಸಹ ಆಗ್ರಹದಿಂದ ಅಲ್ಲಿ ಇರಿಸಿಕೊಂಡು ಮೂರು ರಾತ್ರಿ ಸಮರ್ಥರ ಮಹಾಪೂಜೆಯನ್ನು ಮಾಡಿ ಬ್ರಾಹ್ಮಣರಿಗೆ ಅನ್ನಸಂತರ್ಪಣವನ್ನೂ ವಸ್ತ್ರದಾನವ

ನ್ನೂ ಮಾಡಿ ಸಮರ್ಥರಿಂದ ಅನುಗ್ರಹ ಪ್ರಸಾದವನ್ನು ಪಡೆದುಕೊಂಡು ಶಕ ೧೫೭೧ ನೇ ಪೌಷ್ಯ ವದ್ಯ ಷಷ್ಠಿಯು ಅಥವಾ ಸಪ್ತಮಿಯು ಸುಮಾರಕ್ಕೆ ರಾಜಾಪುರಕ್ಕೆ ಹೊರಟು ಹೋದನು.

ಹುಚ್ಚುತನದ ವೇಷವು— ಸಮರ್ಥರ ಬಳಿಯಲ್ಲಿ ಅನೇಕಮಂದಿ ಶಿಷ್ಯರು ಕೂಡಿದ್ದರು. ದಿನೇದಿನೇ ಶಿಷ್ಯಸಮೂಹವು ಬೆಳೆಯಹತ್ತಿತ್ತು. ಆದ್ದರಿಂದ ಸಮರ್ಥರು ಒಮ್ಮೊಮ್ಮೆ ಶಿಷ್ಯರ ಮೈಯಲ್ಲಿ ಎಷ್ಟು ನೀರಿರುತದೆ ಹಾಗೂ ಯಾವ ಶಿಷ್ಯರು ತನ್ನ ಕಂಡ ಸಂಪೂರ್ಣ ಪ್ರೇಮದಿಂದ ನಡೆಯುತ್ತಾರೆ ಎಂಬದನ್ನು ಪರೀಕ್ಷಿಸುವದಕ್ಕಾಗಿ ಹಲವು ಚಮತ್ಕಾರದ ಕೃತಿಗಳನ್ನು ಮಾಡುತ್ತಿದ್ದರು. ಅದರಂತೆ ಒಂದು ದಿವಸ ಬೆಳಿಗ್ಗೆ ಸಮರ್ಥರು ತನ್ನ ಹಣೆಗೆ ಭವ್ಯವಾಗಿ ಕುಂಕುಮವನ್ನು ಒರಸಿಕೊಂಡು, ತಲೆಯೊಳಗಿನ ಜಡೆಗಳನ್ನು ಬಿಚ್ಚಿ ಹರವಿಕೊಂಡು, ಶಿವಾಜಿಮಹಾರಾಜರು ತಮಗೆ ಅರ್ಪಣ ಮಾಡಿದ್ದ ಭವಾನೀತರವಾರವೆಂಬ ಶಸ್ತ್ರವನ್ನು ಕೈಯಲ್ಲಿ ಹಿಡಿದುಕೊಂಡು ಹೊಡಿ! ಬಡಿ! ತಿವಿ! ಕೊಲ್ಲು! ಎನ್ನುತ್ತಾ ಕಂಡಕಂಡವರ ಮೈಮೇಲೆ ಸಿಟ್ಟಿನಿಂದ ಏರಿ ಹೋಗಹತ್ತಿದರು. ಯಾರಿಗೂ ಅವರ ಸಮೀಪಕ್ಕೆ ಹೋಗಲಿಕ್ಕೆ ಧೈರ್ಯವಾಗಲಿಲ್ಲ. ಕೆಲವು ಶಿಷ್ಯರು ಮಠದ ಕೋಣೆಯೊಳಗೆ ಹೊಕ್ಕೊಂಡು ಬಾಗಿಲ ಇಕ್ಕಿಕೊಂಡರು! ಕೆಲವರು ಮಠವನ್ನೇ ಬಿಟ್ಟುಕೊಟ್ಟು ಓಡಿ ಹೋದರು! ಸಮರ್ಥರು ಈ ಮೇರೆಗೆ ಹುಚ್ಚುತನದ ವೇಷದಿಂದ ತಮ್ಮ ಕಣ್ಣುಗಳನ್ನು ಗಿರಿಗಿರಿತಿರವುತ್ತ ಕೈಯೊಳಗೆ ಶಸ್ತ್ರವನ್ನು ಹಿಡುಕೊಂಡು ಮಠದಿಂದ ಹೊರಬಿದ್ದು ಓಡುತ್ತೋಡುತ್ತ ಹೋಗಿ ಗುಡ್ಡವನ್ನು ಸೇರಿಕೊಂಡರು. ಕಲ್ಯಾಣಸ್ವಾಮಿಯು ಆ ಕಾಲಕ್ಕೆ ಮಠದಲ್ಲಿದ್ದಿಲ್ಲ. ಅವನು ಎರಡನೇ ಊರಿಗೆ ಹೋಗಿದ್ದನು. ಉಳಿದ ಯಾವತ್ತು ಶಿಷ್ಯರು ಸಮರ್ಥರಿಗೆ ಹುಚ್ಚು ಹಿಡಿದಿರುತ್ತದೆಂದು ತಮ್ಮ ಮನಸ್ಸಿನೊಳಗೆ ನಿಶ್ಚಯವಾಗಿ ತಿಳುಕೊಂಡರು. ಕೆಲಕೆಲವರು ಸಮರ್ಥರ ಶೋಧಹಚ್ಚಿ ಅವರನ್ನು ತಿರುಗಿ ಮಠಕ್ಕೆ ಕರೆದುಕೊಂಡು ಬರಬೇಕೆಂದು ಹೋಗಲು ಸಮರ್ಥರು ಅವರಿಗೆ ಕಲ್ಲೆಸೆದು ಅವರನ್ನು ತಿರುಗಿ ಕಳಿಸಿಕೊಟ್ಟರು. ಮೂರು ದಿವಸಗಳಾದರೂ ಮಠದಲ್ಲಿ ಯಾರೂ ಅನ್ನ ನೀರು ಬಾಯಲ್ಲಿ ಹಾಕಿಕೊಳ್ಳದೆ ಚಿಂತಾಕ್ರಾಂತರಾಗಿ ಸುಮ್ಮನೇ ಕುಳಿತುಬಿಟ್ಟಿದ್ದರು. ಮಠದಲ್ಲಿ ಯಾವತ್ತರು ಈ ಮೇರೆಗೆ ಚಿಂತಾಕ್ರಾಂತರಾಗಿರುವಾಗ ಕಲ್ಯಾಣಸ್ವಾಮಿಯು ಊರಿಂದ ತಿರುಗಿ ಬಂದನು. ಆಗ ಅವನಿಗೆ ಯಾವತ್ತರು "ಸ್ವಾಮಿಗಳಿಗೆ ಹುಚ್ಚು ಹಿಡಿದದ್ದರಿಂದ ಸ್ವಾಮಿಗಳು ಮಠವನ್ನು ಬಿಟ್ಟು ಹೋಗಿ ಅಡವಿಯನ್ನು ಸೇರಿಕೊಂಡರು!" ಎಂದು ತಿಳಿಸಿದರು. ಅದಕ್ಕೆ ಕಲ್ಯಾಣನು - "ಸ್ವಾಮಿಗಳಿಗೆ ಹುಚ್ಚು ಹಿಡಿಯುವ ಮಾತು ಅಸಂಭವವದೆ. ಅವರ ಶಿಷ್ಯರಿಗೆ ಮಾತ್ರ ಹುಚ್ಚು

ಹಿಡಿದಿರುವದು ನಿಜವು" ಎಂದು ಉತ್ತರಕೊಟ್ಟು ತಾನೂ ಸಮರ್ಥರ ಶೋಧ ಮಾಡುವದಕ್ಕಾಗಿ ಅಡವಿಯಲ್ಲಿ ಅಡ್ಡಾಡಿ ಒಂದು ಗುಹೆಯೊಳಗೆ ಸಮರ್ಥರು ಕೂತುಕೊಂಡದ್ದನ್ನು ತಿಳಿದು ಬಹಳ ಕಷ್ಟದಿಂದ ಅಲ್ಲಿಗೆ ಹೋದನು. ಸಮರ್ಥರು ಕಲ್ಯಾಣನನ್ನು ದೂರಿನಿಂದ ನೋಡಿದವರೇ "ಹಾ, ಮುಂದೆ ಕಾಲಿಡಬೇಕಾದರೆ ಬಹಳ ಎಚ್ಚರಿಕೆಯಿಂದಿಡು! ವ್ಯರ್ಥವಾಗಿ ನಿನ್ನ ಜೀವಕ್ಕೆ ಎರವಾದೀ!" ಎಂದು ಹೆದರಿಸಿ ಕಲ್ಯಾಣನ ಮೇಲೆ ಕಲ್ಲುಗಳ ಪ್ರಹಾರ ಮಾಡಿದರು. ಆದರೆ ಗುರು ಶಿಷ್ಯರ ಅಂತಃಕರಣವು ಬಹಳ ಆಶ್ಚರ್ಯವುಳ್ಳದ್ದಾದ್ದರಿಂದ ಸಮರ್ಥರ ಒಂದೂ ಕಲ್ಲು ಕಲ್ಯಾಣನಿಗೆ ತಾಕಲಿಲ್ಲ! ಸಮರ್ಥರು ಕಲ್ಯಾಣನಿಗೆ ಕಲ್ಲು ತಾಕದಂತೆ ಬಹಳ ಎಚ್ಚರಿಕೆಯಿಂದ ಒಗೆದರೋ ಅಥವಾ ಸಮರ್ಥರ ಪಾದಗಳ ಮೇಲೆ ಕಲ್ಯಾಣನ ದೃಢ ವಿಶ್ವಾಸವಿದ್ದದರಿಂದ ಕಲ್ಲುಗಳು ತಾವೇ ಚೆದರಿ ಹೋಗಲಾದವೋ ತಿಳಿಯದು!! ಕಲ್ಯಾಣನು ಮುಂದಿಟ್ಟ ಕಾಲು ಹಿಂದಕ್ಕೆ ಸರಿಸದೆ ತನ್ನ ಮೇಲೆ ಮುಸುಕಿಕೊಂಡ ಕಲ್ಲುಗಳೆಂಬ ಮೋಡಕ್ಕೆ ಎಳ್ಳಷ್ಟಾದರೂ ಎದೆ ಒಡೆಯದೆ ಸಮರ್ಥರು ಕೂತ ಸ್ಥಳಕ್ಕೆ ಜಿಗಿದು ಅವರ ಎರಡೂ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಅವುಗಳ ಮೇಲೆ ತನ್ನ ಮಸ್ತಕವನ್ನಿಟ್ಟನು. ಆಗ ಸಮರ್ಥರು ತಮ್ಮ ಕೈಯೊಳಗಿನ ಕತ್ತಿಯನ್ನು ಝಳಪಿಸಿ—"ಕಲ್ಯಾಣಾ! ಇಗೋ ನೋಡು. ಈ ಕತ್ತಿಯಿಂದ ನಿನ್ನನ್ನು ಕಡಿದು ನಿಮಿಷಾರ್ಧದಲ್ಲಿ ಯಮ ಸದನಕ್ಕೆ ಕಳುಹಿಸುತ್ತೇನೆ" ಎಂದು ನುಡಿದರು. ಅದಕ್ಕೆ ಕಲ್ಯಾಣನು—"ಬುದ್ಧೀ! ತಮ್ಮ ಕೈಯಿಂದ ನನಗೆ ಮರಣ ಒದಗಿದರೆ ನನ್ನಕಿಂತಲು ಹೆಚ್ಚಿನ ಪುಣ್ಯವಂತರು ಈ ಭೂತಳದಲ್ಲಿ ಯಾರಿರುವರು? ಮಹಾ ಚಿತ್ತಕ್ಕೆ ಬಂದಂತೆ ಆಗಲಿ. ಆದರೆ ತಮ್ಮ ಚರಣಗಳ ಮೇಲೆ ನನ್ನ ಮಸ್ತಕವಿರುವದರಿಂದ ಒಂದೇ ಹೊಡತಕ್ಕೆ ಎರಡು ತುಂಡುಗಳಾಗುವಂತೆ ಕಡಿಯು ಬೇಕಾಗಿ ನನ್ನ ಬಿನ್ನಹವುಂಟು" ಎಂದು ಪ್ರಾರ್ಥನೆ ಮಾಡಿದನು. ಅವನ್ನು ಕೇಳಿ ಸಮರ್ಥರು—"ನನಗೆ ಅಪ್ಪಣೆ ಮಾಡಲಿಕ್ಕೆ ನೀನೆಷ್ಟರವನು? ನಾನು ನನ್ನ ಮನ ಬಂದಂತೆ ನಿನಗೆ ನೂರೆಂಟು ತುಕ್ಕಡಿಯಾಗಿ ಕಡಿದು ಸುಣ್ಣನುರಿ ಮಾಡುತ್ತೇನೆ" ಎಂದು ಹೇಳಿದರು. ಅದಕ್ಕೆ ಕಲ್ಯಾಣನು ತಿರಿಗಿ—"ಮಹಾ ಸ್ವಾಮಿ! ತಮ್ಮ ಚಿತ್ತ ಬಂದಂತೆ ಆಗಲಿ ತಮ್ಮ ಚಿತ್ತ ಬಂದಂತೆ ಆಗುವದೇ ನನಗೆ ಸಂತೋಷವು" ಎಂದು ಉತ್ತರ ಕೊಟ್ಟನು. ಕಲ್ಯಾಣನ ಈ ಕೃತ ನಿಶ್ಚಯವನ್ನು ಕಂಡು ಸಮರ್ಥರು ಹಿರಿ ಹಿರಿ ಹಿಗ್ಗಿ ತಮ್ಮ ಕಣ್ಣುಗಳಿಂದ ಆನಂದಾಶ್ರುಗಳನ್ನು ಉದುರಿಸಿ ಪ್ರೇಮದಿಂದ ಕಲ್ಯಾಣನಿಗೆ ಆಲಿಂಗನ ಕೊಟ್ಟು ಅವನಿಗೆ—"ಕಲ್ಯಾಣಾ! ಎಲ್ಲರೂ ನನ್ನನ್ನು ಹುಚ್ಚನೆಂದು ನಿರ್ಣಯಿಸಿದ್ದಾರೆ. ಹೀಗಿದ್ದು ನೀನು ನನ್ನಂಥ ಹುಚ್ಚನ ಕಡೆಗೆ ಯಾಕೆ ಬಂದಿ?" ಎಂದು ಕೇಳಿದರು. ಅದಕ್ಕೆ ಕಲ್ಯಾಣನು—"ಸ್ವಾಮೀ! ತಮ್ಮನ್ನ ಹುಚ್ಚರೆಂದು ತಿಳಿಯುವವರೇ ಹುಚ್ಚಾದ

ಹುಚ್ಚರು! ಮಠದಲ್ಲಿ ಯಾವತ್ತರೂ ಅನ್ನ ನೀರು ಬಿಟ್ಟು ಚಿಂತೆಯಿಂದ ಕುಳಿತಿರುತ್ತಾರೆ. ಆದ್ದರಿಂದ ತಾವು ಮಠಕ್ಕೆ ದಯ ಮಾಡಿಸಬೇಕು" ಎಂದು ಬೇಡಿಕೊಂಡನು. ಆಗ ಸಮರ್ಥರು ಕಲ್ಯಾಣನ ವಿನಂತಿಗೆ ಮಾನ್ಯ ಮಾಡಿ ಕಲ್ಯಾಣನನ್ನೊಡಗೊಂಡು ಪರಳಿಯ ಮಠಕ್ಕೆ ಬಂದರು. ಅಲ್ಲಿ ಯಾವತ್ತು ಶಿಷ್ಯರು ಬಂದು ಸಮರ್ಥರಿಗೆ ನಮಸ್ಕರಿಸಿ ಆನಂದವನ್ನು ಪ್ರದರ್ಶಿಸಿದರು. ತರುವಾಯ ಯಾವತ್ತರೂ ಭೋಜನವನ್ನು ಮಾಡಿ ಆನಂದ ಪಟ್ಟರು. ಈ ಸಂಗತಿಯು ಶಕೆ ೧೫೮೦ನೇ ಮಾಘ ವದ್ಯ ೯ನೇ ದಿವಸ ವರ್ತಿಸಿತು. ಸಮರ್ಥರು ೧೫೮೦ನೇ ಮಾಘ ವದ್ಯ ಪಂಚಮಿಯಿಂದ ನವಮಿಯ ವರೆಗೆ ಮಠವನ್ನು ಬಿಟ್ಟು ಅಡವಿಯಲ್ಲಿ ವಾಸ ಮಾಡಿ ನವಮಿಯ ದಿವಸವೇ ಮಠಕ್ಕೆ ತಿರುಗಿ ಬಂದರು.

ಶಿವಾಜಿಮಹಾರಾಜರಿಗೆ ಶ್ರೇಷ್ಠರ ದರ್ಶನವಾದದ್ದು— ಒಂದು ಸಾರೆ ಶಿವಾಜಿ ಮಹಾರಾಜರು ಗಂಗಾ ತೀರದಲ್ಲಿದ್ದಾಗ್ಗೆ ರಾಕ್ಷಸಭವನದಲ್ಲಿಳುಕೊಂಡಿದ್ದರು. ಅಲ್ಲಿ ಅವರು ರಾತ್ರಿಯಕಾಲಕ್ಕೆ ಶ್ರೇಷ್ಠರ ಸಾಂಪ್ರದಾಯಿಕರು ಶ್ರೇಷ್ಠರು ರಚಿಸಿದಂಥ ಪದಗಳನ್ನೂ ಅಭಂಗಗಳನ್ನೂ ಹಾಡುವದನ್ನು ಕೇಳಿದರು. ಆಗ್ಗೆ ಶಿವಾಜಿಮಹಾರಾಜರ ಮನಸ್ಸಿನೊಳಗೆ, ತಾವು ಸಮರ್ಥರ ಬಾಯಿಂದ ಯಾವಾಗಲು ಶ್ರೇಷ್ಠರ ಬಗ್ಗೆ ಸ್ತುತಿಯನ್ನು ಕೇಳುತ್ತಿದ್ದ ಜಾಂಬ ಗ್ರಾಮವು ಇಲ್ಲಿಂದ ಸಮೀಪವಿರುವ ಕಾರಣ ಅಲ್ಲಿಗೆ ಹೋಗಿ ಶ್ರೇಷ್ಠರ ದರ್ಶನ ತೆಗೆದುಕೊಳ್ಳಬೇಕು ಎಂಬ ವಿಚಾರವು ಬಂತು. ಈ ಪ್ರಕಾರ ರಾತ್ರಿಯ ಹೊತ್ತಿನಲ್ಲಿ ಮಹಾರಾಜರು ತಮ್ಮ ಮನಸ್ಸಿನೊಳಗೆ ವಿಚಾರ ಮಾಡಿ ಮಲಗಿಕೊಳ್ಳಲು ಬೆಳಗಿನ ಜಾವಿನಲ್ಲಿ ಮಹಾರಾಜರ ಕನಸಿನೊಳಗೆ ಒಬ್ಬ ಸತ್ಪುರುಷರು ಕಾಲಲ್ಲಿ ಪಾದುಕೆಗಳನ್ನು ಮೆಟ್ಟಿಕೊಂಡು, ಮೈಯಲ್ಲಿ ಬಿಳೇ ಉಡುಪುಗಳನ್ನು ತೊಟ್ಟು ಮೋರೆಯ ಮೇಲೆ ಗೋಪೀ ಚಂದನದ ಮುದ್ರೆಗಳನ್ನು ಹಚ್ಚಿಕೊಂಡು ಕೈಯಲ್ಲಿ ಕರತಾಳಗಳನ್ನು ಹಿಡಿದು ದರ್ಶನವನ್ನು ಕೊಟ್ಟರು. ಅವರನ್ನು ನೋಡಿದವರೇ ಮಹಾರಾಜರು ಕನಸಿನೊಳಗೆ ಚಟಕ್ಕನೆ ಎದ್ದು ಅವರಿಗೆ ಸಾಷ್ಟಾಂಗ ನಮಸ್ಕಾರವನ್ನು ಹಾಕಿದರು. ಆಗ ಆ ಸತ್ಪುರುಷ ರೂಪೀ ಶ್ರೇಷ್ಠರು ಮಹಾರಾಜರ ಕೈಯಲ್ಲಿ ರಾಮಫಲವನ್ನೂ ಒಂದು ಸ್ಫಟಿಕದ ಮಾಲೆಯನ್ನೂ ಪ್ರಸಾದವಾಗಿ ಕೊಟ್ಟರು. ಅವುಗಳನ್ನು ಮಹಾರಾಜರು ತಕ್ಕೊಂಡು ಆ ಸತ್ಪುರುಷರಿಗೆ—"ತಮ್ಮ ದರ್ಶನದಿಂದ ನಾನು ಪವಿತ್ರನಾದೆನು. ಇನ್ನು ತಾವು ತಮ್ಮ ನಾಮ ನಿರ್ದೇಶದ ಅನುಗ್ರಹ ಮಾಡಬೇಕು" ಎಂದು ಬೇಡಿಕೊಂಡರು. ಅದಕ್ಕೆ ಶ್ರೇಷ್ಠರು ನಸುನಗುತ್ತ—"ತಂದೇ! ನಾನು ಉತ್ತರಗಂಗಾ ತೀರದಲ್ಲಿ ಜಂಬು ಗ್ರಾಮದೊಳಗೆ ಶ್ರೀ ರಘುಪತಿಯ ಸೇವೆಯನ್ನು ಮಾಡುತ್ತ ಗೃಹಸ್ಥಾಶ್ರಮದಿಂದ ವಾಸಿಸುವೆನು. ಈ ನನ್ನ ದೇಹಕ್ಕೆ ರಾಮಿಸಾಳೀ ರಾಮದಾಸನೆಂದು ಕರೆಯುವರು. ನೀ

ನು ನನ್ನ ಸ್ಮರಣ ಮಾಡಿದ್ದರಿಂದ ನಾನು ನಿನ್ನ ದರ್ಶನಕ್ಕೆ ಬಂದೆನು. ಇಲ್ಲಿಂದ ನಮ್ಮ ಆಶ್ರಮವು ಬಹಳ ಸಮೀಪವಿರುತ್ತದೆ. ನೀನು ಅಲ್ಲಿಗೆ ಒಂದು ಶ್ರೀಗಳ ದರ್ಶನ ತಕ್ಕೊಂಡು ನಿನ್ನ ಸ್ಥಾನಕ್ಕೆ ಹೋಗಬೇಕು" ಎಂದು ಹೇಳಿ ಅದೃಶ್ಯರಾದರು. ಆ ಮೇಲೆ ಮಹಾರಾಜರು ಎಚ್ಚರಾಗಿ ನೋಡುವಲ್ಲಿ ತಮ್ಮ ಕೈಯೊಳಗೆ ರಾಮಫಲವನ್ನೂ ಸ್ಫಟಿಕಮಾಲೆಯನ್ನೂ ಮಾತ್ರ ಕಂಡರು. ಸತ್ಪುರುಷರ ಮೂರ್ತಿಯು ಅಲ್ಲಿದ್ದಿಲ್ಲ. ಈ ಚಮತ್ಕಾರವನ್ನು ಅವಲೋಕಿಸಿ ಸಮರ್ಥರಂತೆಯೇ ಶ್ರೀಷ್ಠರ ಸಾಮರ್ಥ್ಯವುಂಟೆಂದು ಮನಸ್ಸಿನಲ್ಲಿ ನಿಶ್ಚಯವಾಗಿ ತಿಳಿದುಕೊಂಡು ಪ್ರಾತಃಕಾಲದಲ್ಲಿ ಸ್ನಾನ ಪೂಜಾದಿಗಳನ್ನು ತೀರಿಸಿಕೊಂಡು ಕಿಂಚಿತ್ತು ಫಲಹಾರವನ್ನು ಸೇವಿಸಿ ಶ್ರೀಷ್ಠರ ದರ್ಶನಕ್ಕಾಗಿ ಅಲ್ಲಿಂದ ೨೯ ಹರದಾರಿ ದೂರಿದ್ದ ಜಂಬು ಗ್ರಾಮಕ್ಕೆ ತಮ್ಮ ಕುದುರೆಯನ್ನೇರಿ ಬಂದರು. ಅವರ ಹಿಂದಿನಿಂದ ಅವರ ಯಾವತ್ತೂ ಪರಿವಾರದವರು ಸಹ ಒತ್ತರದಿಂದಲೇ ಬಂದರು. ಮಹಾರಾಜರು ಬಹಳ ಶೀಘ್ರವಾದ ಗತಿಯಿಂದ ತಮ್ಮ ಕುದುರೆಯನ್ನು ನಡಿಸಿದ್ದರಿಂದ ಮಧ್ಯಾಹ್ನದ ೨ ಘಂಟೆಗೆ ಜಂಬುಗ್ರಾಮಕ್ಕೆ ಬಂದು ತಲ್ಪಿ ಊರ ಹೊರಗಿರುವ ಮಾರುತಿಯ ದೇವಾಲಯಕ್ಕೆ ಹೋಗಿ ಮಾರುತಿಯ ದರ್ಶನವನ್ನು ತಕ್ಕೊಂಡು ಶ್ರೀ ರಘುಪತಿಯ ದರ್ಶನಕ್ಕಾಗಿ ಊರೊಳಗೆ ಹೋದರು. ಆಗ ಶ್ರೀಷ್ಠರು ಕಾಕಬಲಿ ಕೊಡಲಿಕ್ಕೆ ತಮ್ಮ ಮನೆಯ ಹೊರಗೆ ಒಂದು ಕಾಕಬಲಿಯನ್ನು ಚಲ್ಲಿ, ಹಸ್ತಪಾದ ಪ್ರಕ್ಷಾಲನ ಮಾಡಿಕೊಂಡು ತಮ್ಮ ಮನೆಯ ಬಾಗಿಲದ ಹೊಸ್ತಿಲದ ಹತ್ತರ ನಿಂತುಕೊಂಡಿದ್ದರು. ಅವರನ್ನು ಕಂಡು ಮಹಾರಾಜರು ಅವರ ಸಮೀಪಕ್ಕೆ ಹೋಗಿ ಅವರ ಕಾಲುಗಳಿಗೆ ನಮಸ್ಕರಿಸಿ ಕೈಜೋಡಿಸಿ ನಿಂತುಕೊಂಡರು. ಅದನ್ನು ಶ್ರೀಷ್ಠರು ನೋಡಿ ಮಹಾರಾಜರಿಗೆ "ಗುರುತು ಸಿಕ್ಕಿತೇನು? ಎಂದು ಕೇಳಿದರು. ಅದಕ್ಕೆ ಮಹಾರಾಜರು ವಿನಯದಿಂದ "ಹೌದು" ಎಂದು ಉತ್ತರ ಕೊಟ್ಟರು. ತರುವಾಯ ಶ್ರೀಷ್ಠರು ಮಹಾರಾಜರಿಗೆ—"ನೀವು ಬರುವದಕ್ಕೆ ಇಷ್ಟ್ಯಾಕೆ ತ್ವರೆ ಮಾಡಿದಿರಿ? ಇದು ಬಿಸಿಲುಗಾಲವಾದ್ದರಿಂದ ಒಂದೆರಡು ಕಡೆಗೆ ಉಳಿದುಕೊಂಡು ಬರಬಹುದಾಗಿತ್ತು" ಎಂದು ನುಡಿದರು. ಅದಕ್ಕೆ ಮಹಾರಾಜರು "ಚರಣದರ್ಶನಕ್ಕಾಗಿ ಬಹಳ ಉತ್ಕಂಠಿತನಾದ್ದರಿಂದ ಇಷ್ಟೊಂದು ತ್ವರೆ ಮಾಡುವ ಭಾಗಬಿತು" ಎಂದು ಉತ್ತರ ಕೊಟ್ಟರು. ಅದನ್ನು ಕೇಳಿ ಶ್ರೀಷ್ಠರು "ಒಳ್ಳೇದು" ಎಂದು ಹೇಳಿ ಅವರನ್ನು ಒಳಗೆ ಕರಕೊಂಡು ಹೋಗಿ ಶ್ರೀರಘುಪತಿಯ ದರ್ಶನ ಮಾಡಿಸಿ "ಪಾತ್ರೆಗಳು ಒಡಿಸಿ ಸಿದ್ಧವಾಗಿರುತ್ತವೆ. ಆದ್ದರಿಂದ ಬೇಗನೆ ಭೋಜನಕ್ಕೆ ಏಳಬೇಕು" ಎಂತ ಸೂಚಿಸಿದರು. ಆಗ ಮಹಾರಾಜರು ತಮ್ಮ ಸಂಗಡ ಬಂದಿದ್ದ ಐದು ಮಂದಿಯನ್ನು ಮಾತ್ರ ಭೋಜನಕ್ಕೆ ಎಬ್ಬಿಸಿದರು. ಅದನ್ನು ಶ್ರೀಷ್ಠರು ಕಂಡು ಮಹಾರಾಜರಿಗೆ—"ನಿಮ್ಮ ಸಂಗಡ ಬಂದಿದ್ದ ಯಾವತ್ತು ಪರಿವಾರದವರನ್ನು ನಿಮ್ಮ ಪಂಕ್ತಿಗೆ ಕರೆದುಕೊಳ್ಳಬಹುದು" ಎಂದು ಆಜ್ಞಾಪಿಸಿದರು. ಆಗ ಮಹಾರಾಜರು—

"ನನ್ನ ಸಂಗಡ ೨ ಸಾವಿರ ಮಂದಿ ಸ್ವಾರರು ಇರುತ್ತಾರೆ. ಅದ್ದರಿಂದ ಅವರೆಲ್ಲರ ತೊಂದರೆಯನ್ನು ನೀವು ಹಚ್ಚಿಕೊಳ್ಳಬೇಡಿರಿ. ನಾವು ಐದೇ ಮಂದಿ ಭೋಜನಕ್ಕೆ ಕೂಡ್ರುತ್ತೇವೆ. ಉಳಿದವರಿಗಾಗಿ ತಾವು ಪ್ರಸಾದವನ್ನು ಕೊಟ್ಟರೆ ಸಾಕು, ಆ ಪ್ರಸಾದವನ್ನು ಅವರೊಳಗೆ ಹಂಚಿಕೊಡುತ್ತೇವೆ" ಎಂದು ವಿನಯದಿಂದ ಹೇಳಿದರು. ಅದಕ್ಕೆ ಶ್ರೀಸ್ವರು "ರಘುಪತಿಯ ಪ್ರಸಾದವು ಎಲ್ಲರಿಗೂ ಪಙ್ಕ್ತಿಯಲ್ಲಿಯೇ ದೊರಕುವದು. ನೀವು ಯಾವದಕ್ಕೂ ಸಂಕೋಚ ಮಾಡಿಕೊಳ್ಳಬಾರದು. ಶ್ರೀ ರಘುಪತಿಯು ಸಮರ್ಥನಿರುತ್ತಾನೆ" ಎಂದು ನುಡಿದರು. ಅದನ್ನು ಕೇಳಿ ಮಹಾರಾಜರು "ಮಹದಾಜ್ಞೆ" ಎಂದು ಹೇಳಿ ತಮ್ಮ ಕೂಡ ಬಂದಂಥ ಯಾವತ್ತು ಸ್ವಾರರನ್ನು ಕೂಡಿಕೊಂಡು ಭೋಜನಕ್ಕೆ ಕುಳಿತರು. ಅವರೆಲ್ಲರದೂ ಯಥಾಸ್ಥಿತವಾಗಿ ಭೋಜನವಾಯಿತು. ಸಹ ಪಙ್ಕ್ತಿ ಭೋಜನವನ್ನು ಮಾಡದಿರುವ ಲಷ್ಕರಿ ಸಿಪಾಯರಿಗಾಗಿ ಶ್ರೀಸ್ವರು ತಮ್ಮೊಬ್ಬ ಶಿಷ್ಯನ ಸಂಗಡ ಪಾಕಸಾಹಿತ್ಯವನ್ನು ಕಳಿಸಿದರು. ಆ ಶಿಷ್ಯನು ಆ ಯಾವತ್ತರಿಗೂ ಪಾಕಸಾಹಿತ್ಯವನ್ನು ಮುಟ್ಟಿಸಿ ಒಬ್ಬನಿಗೆ ಸಾಕಾಗುವಷ್ಟು ಪಾಕ ಸಾಹಿತ್ಯವನ್ನು ತಿರುಗಿ ತಂದನು! ಇದರಂತೆ ಆ ಶಿಷ್ಯನು ಲಷ್ಕರದೊಳಗಿನ ಯಾವತ್ತು ಕುದುರೆಗಳಿಗೆ ಧಾನ್ಯ ಮೇವುಗಳನ್ನು ಒಯ್ದು ಮುಟ್ಟಿಸಿ ತಾನು ಒಯ್ದಷ್ಟೇ ತಿರುಗಿ ತಂದನು! ಇದನ್ನು ಮಹಾರಾಜರು ನೋಡಿ ಸಮರ್ಥರಷ್ಟೇ ಶ್ರೀಸ್ವರದು ಸಹಾ ಸಾಮರ್ಥ್ಯವುಂಟೆಂದು ಮನಸ್ಸಿನಲ್ಲಿ ನಿಶ್ಚಯವಾಗಿ ತಿಳಿದುಕೊಂಡು ಆ ದಿನ ರಾತ್ರಿ ಶ್ರೀರಘುಪತಿಗೆ ಪಂಚಾರತಿಯಾದನಂತರ "ಸ್ವಾಮೀ! ಈ ದಿನ ವಿಶೇಷವಾದ ಚಮತ್ಕಾರವನ್ನು ನೋಡಿದೆನು" ಎಂದು ಉದ್ಗಾರ ಹೊರಡಿಸಿದರು. ಆಗ ಶ್ರೀಸ್ವರು—"ಒಬ್ಬರನ್ನು ಇನ್ನೊಬ್ಬರಿಗೆ ಸರಿನೋಡುವದು ಸಮವಲ್ಲ" ಎಂದು ನುಡಿದರು. ಅದನ್ನು ಕೇಳಿ ಮಹಾರಾಜರು ಮನಸ್ಸಿನಲ್ಲಿ ಪಶ್ಚಾತ್ತಾಪ ಪಟ್ಟು "ಸ್ವಾಮೀ! ತಮ್ಮ ಮತ್ತು ಸಮರ್ಥರ ಪರೀಕ್ಷೆ ಮಾಡಲಿಕ್ಕೆ ನಾನೆಷ್ಟರವನು! ಆದರೂ ಅಜ್ಞಾನದಿಂದ ಒಮ್ಮೊಮ್ಮೆ ಮನಸ್ಸಿನಲ್ಲಿ ವಿಕಲ್ಪವುಂಟಾಗುತ್ತದೆ. ಅದನ್ನು ತಾವು ಕ್ಷಮಿಸಬೇಕು." ಎಂದು ಬೇಡಿಕೊಂಡರು. ಅದಕ್ಕೆ ಶ್ರೀಸ್ವರು—"ತಂದೇ! ಶ್ರೀರಘುಪತಿಯ ಅಪೇಕ್ಷೆಗನುಸರಿಸಿ ಯಾವತ್ತು ಸಂಗತಿಗಳು ವರ್ತಿಸುತ್ತವೆ. ಆದರೆ ಅವನಲ್ಲಿ ನಿಸ್ಸೀಮಭಕ್ತಿಯನ್ನಿಟ್ಟು ನಿಸ್ಸೀಮದಾಸನಾಗಿರುವವನಿಗೆ ಯಾವ ವಿಕಲ್ಪಗಳೂ ಉಂಟಾಗುವದಿಲ್ಲ" ಎಂದು ಹೇಳಿದರು. ಅದನ್ನು ಕೇಳಿ ಮಹಾರಾಜರು—"ಸ್ವಾಮೀ! ನಿಸ್ಸೀಮದಾಸನಾಗುವದು ಹ್ಯಾಗೆ?" ಎಂದು ವಿಚಾರಿಸಿದರು. ಅದಕ್ಕೆ ಶ್ರೀಸ್ವರು—"ಇದನ್ನು ನಿಮಗೆ ನಾರಾಯಣ ಬುವಾನವರು (ಸಮರ್ಥರು) ತಿಳಿಸುವರು" ಎಂದು ಉತ್ತರ ಕೊಟ್ಟರು. ಆಗಲಾ ಮಹಾರಾಜರು ಬಹು ವಿನಯದಿಂದ—"ಸ್ವಾಮೀ! ಈ ಪ್ರಕಾರದ ಆಜ್ಞೆಯನ್ನು

ಕೊಡಬಾರದು. ಅಲ್ಲಿ ನಾನು ಈ ಪ್ರಶ್ನೆಯನ್ನು ವಿಚಾರಿಸಿದರೆ ಅವರು ನನ್ನನ್ನು ಥೀಪಟ್ಟು ಮಾಡುವರು'' ಎಂದು ಹೇಳಿದರು. ಅದಕ್ಕೆ ಶ್ರೀಷ್ತ್ರರು ನಕ್ಕು—''ತಂದೇ! ನಿಮ್ಮ ಥೀಪಟ್ಟು ಆಗಬೇಕೆಂಬದು ಸರ್ವಥಾ ನನ್ನ ಅಪೇಕ್ಷೆ ಇಲ್ಲ. ನಾರಾಯಣ ಬುವಾನರವರೇ ಆ ವಿಷಯದ ರಹಸ್ಯವನ್ನು ನಿಮಗೆ ವಿಸ್ತಾರವಾಗಿ ತಿಳಿಸುವರು. ಹಿಂದಕ್ಕೆ ಅವರು ನಿಮ್ಮನ್ನು ತುಕಾರಾಮಬುವಾನ ಕಡೆಗೆ ಕಳಿಸಿಕೊಟ್ಟು ಥೀಪಟ್ಟು ಮಾಡಿದಂತೆ ಥೀಪಟ್ಟು ಮಾಡಲಾರರು. ಇದು ನನ್ನ ಪೂರ್ಣ ಆಶೀರ್ವಾದವಿರುತ್ತದೆ" ಎಂದು ಹೇಳಿದರು. ಆಗ ಮಹಾರಾಜರು ''ತಮ್ಮ ಆಜ್ಞೆಯೇ ನನಗೆ ಪ್ರಮಾಣವು" ಎಂದು ಹೇಳಿ ಸುಮ್ಮನಾದರು.

ಎರಡನೇ ದಿವಸ ಬೆಳಿಗ್ಗೆ ಮಹಾರಾಜರು ಶ್ರೀಷ್ತ್ರರ ಬಳಿಗೆ ಬಂದು ತಮಗೆ ಊರಿಗೆ ಹೋಗಲಿಕ್ಕೆ ಅಪ್ಪಣೆಯನ್ನು ದಯಪಾಲಿಸಬೇಕೆಂದು ಕೇಳಿಕೊಂಡರು. ಆಗ ಶ್ರೀಷ್ತ್ರರು—''ಶಿವರಾಯಾ! ನೀವೆಂದೂ ನಮ್ಮ ಕಡೆಗೆ ಬರುವವರಲ್ಲ. ಬಹಳ ಅಪರೂಪವಾಗಿ ಬಂದಿರುತ್ತೀರಿ. ಆದ್ದರಿಂದ ನಾಲ್ಕೆಂಟು ದಿವಸ ನಮ್ಮಲ್ಲಿ ಇದ್ದು ಹೋಗಬೇಕು'' ಎಂದು ಹೇಳಿದರು. ಶ್ರೀಷ್ತ್ರರವರ ಅಂತಃಕರಣವನ್ನೂ ಆದರವನ್ನೂ ನೋಡಿ ಮಹಾರಾಜರಿಗೆ ಅವರ ಮಾತು ಮೀರಲಿಕ್ಕಾಗಲಿಲ್ಲ. ಮಹಾರಾಜರು ಜಾಂಬ ಗ್ರಾಮದಲ್ಲಿ ತಮ್ಮ ಯಾವತ್ತು ಲಷ್ಕರ ಸಹಿತವಾಗಿ ೧೫ ದಿವಸ ಉಳಿದುಕೊಂಡರು. ದಿನಾಲು ಅವರೆಲ್ಲರಿಗೂ ಯಥಾಸ್ಥಿತವಾಗಿ ಸತ್ಕಾರವು ಮಾಡಲ್ಪಟ್ಟಿತು. ದಿನಾಲು ಮಹಾರಾಜರು ಶ್ರೀಷ್ತ್ರರ ಪೂಜೆಯನ್ನು ಮಾಡಿ ಪ್ರಸಾದಕ್ಕೆ ಕೂಡ್ರುತ್ತಿದ್ದರು. ಹಾಗೂ ಭೋಜನೋತ್ತರದಲ್ಲಿ ಪಾರಮಾರ್ಥಿಕ ಪ್ರಶ್ನೆಗಳನ್ನು ವಿಚಾರಿಸಿ ತಿಳಿದುಕೊಳ್ಳುತ್ತಿದ್ದರು. ಈ ಪ್ರಕಾರವಾದ ಮಹಾರಾಜರ ನಿಷ್ಠೆಯನ್ನು ಕಂಡು ಶ್ರೀಷ್ತ್ರರು ಬಹಳ ಸಂತೋಷಪಟ್ಟರು. ಹೀಗೆ ಮಹಾರಾಜರು ೧೫ ದಿವಸ ಇದ್ದ ಬಳಿಕ ಶ್ರೀಷ್ತ್ರರು ಅವರಿಗೆ ವಸ್ತ್ರ ಭೂಷಣಗಳನ್ನು ಕೊಟ್ಟು ಸನ್ಮಾನ ಮಾಡಿ ನಿರೋಪ ಕೊಟ್ಟರು. ಆಗ ಮಹಾರಾಜರು—''ಸ್ವಾಮೀ! ನನ್ನ ಕಡೆಯಿಂದ ಏನೂ ಸೇವೆಯಾಗದೆ ನನಗೆ ಇಷ್ಟೊಂದು ಭೂಷಣ ಮಾಡಿದ್ದು ನನ್ನ ಮೇಲೆ ಬೆಟ್ಟವನ್ನು ಹೊರಿಸಿದಂತಾಯಿತು'' ಎಂದು ವಿನಯದಿಂದ ನುಡಿದರು. ಅದಕ್ಕೆ ಶ್ರೀಷ್ತ್ರರು—''ನಿಮ್ಮ ಹತ್ತರ ಇರುವದೆಲ್ಲ ಶ್ರೀ ರಘುಪತಿಯದೇ ಇರುತ್ತದೆ. ನಿಮ್ಮ ಸಂರಕ್ಷಣಕ್ಕಾಗಿ ನೀವು ಶ್ರೀ ರಘುಪತಿಯ ಭಾಂಡಾರದೊಳಗಿಂದಲೇ ತೆಗೆದುಕೊಳ್ಳತಕ್ಕದ್ದು'' ಎಂದು ಸಮಾಧಾನ ಮಾಡಿದರು. ಅದನ್ನು ಕೇಳಿ ಮಹಾರಾಜರು ''ಮಹದಾಜ್ಞೆ" ಎಂದು ಹೇಳಿ ಶ್ರೀಷ್ತ್ರರ ನಿರೋಪ ತೆಗೆದುಕೊಂಡು ತಿರುಗಿ ಹೊರಟು ಬಂದರು. ಆ ಮೇಲೆ ಮಹಾರಾಜರು ಸಮರ್ಥರ ಭೆಟ್ಟಿಗೆ ಹೋಗಲು ಅವರನ್ನುದ್ದೇಶಿಸಿ ಸಮರ್ಥರು—''ಶಿವರಾಯಾ! ನೀವು ಶ್ರೀಷ್ತ್ರರ ಪರೀಕ್ಷೆ ಮಾಡುವದಕ್ಕೆ

ಚಾಂಚಿ ಗ್ರಾಮಕ್ಕೆ ಹೋಗಿದ್ದರಿ. ಅವರು ನಿಮ್ಮ ಪರೀಕ್ಷೆಯೊಳಗೆ ಇಳಿದರೋ ಇಲ್ಲವೋ! ನಿಮಗೆ ಚೇಷ್ಟೆ ಮಾಡುವದಕ್ಕಾಗಿ ಈ ಪ್ರಶ್ನೆಯನ್ನು ಕೇಳಲಿಲ್ಲ. ವಸ್ತುಸ್ಥಿತಿಯನ್ನು ತಿಳಿದುಕೊಳ್ಳುವದಕ್ಕಾಗಿ ಕೇಳುತ್ತೇನೆ'' ಎಂದು ಹೇಳಿದರು. ಇದನ್ನು ಕೇಳಿ ಮಹಾರಾಜರು—"ಸ್ವಾಮಿಯೋ! ನೀವು ಉಭಯತರೂ ಏಕಮೂರ್ತಿಯಾಗಿದ್ದೀರಿ. ನನ್ನಂಥ ಪತಿತನು ಅವರನ್ನು ಪರೀಕ್ಷಿಸುವದು ಹ್ಯಾಗೆ? ನಿಮ್ಮ ಕೃಪೆಯು ನನ್ನ ಮೇಲೆ ಇರುತ್ತಿದ್ದಾಗ್ಯೂ ನನ್ನ ಮಾನವೀದೇಹ ಬುದ್ಧಿಗೆ ಆಗಾಗ್ಗೆ ಚಾಂಚಲ್ಯವು ಪ್ರಾಪ್ತವಾಗುತ್ತದೆ. ಅದನ್ನು ತಾವು ದಯ ಮಾಡಿ ಕ್ಷಮಿಸಬೇಕು. ಹಾಗೂ ಶ್ರೀ ರಘುಪತಿಯ ನಿಸ್ಸೀಮ ದಾಸನಾಗುವ ಪ್ರಕಾರವನ್ನು ನಿಮ್ಮಿಂದ ತಿಳಿದುಕೊಳ್ಳಬೇಕೆಂದು ನನಗೆ ಶ್ರೇಷ್ಠರ ಅಪ್ಪಣೆಯಾಗಿರುತ್ತದೆ. ಅದನ್ನು ತಾವು ನನ್ನ ಮೇಲೆ ದಯವಿಟ್ಟು ವಿವರಿಸಿ ನನ್ನ ಮನೋರಥವನ್ನು ಪೂರ್ಣ ಮಾಡಬೇಕು'' ಎಂದು ಬೇಡಿಕೊಂಡರು. ಆಗ ಸಮರ್ಥರು ನಕ್ಕು—"ನೀವಂತೂ, ನನ್ನ ಕಡೆಯಿಂದ ನಿಮ್ಮ ಮಾನ ಖಂಡನವಾಗಲಿಕ್ಕಿಲ್ಲವೆಂದು ಶ್ರೇಷ್ಠರಿಂದ ವಚನವನ್ನು ಪಡೆದುಕೊಂಡು ಬಂದಿರುತ್ತೀರಿ. ಆದ್ದರಿಂದ ನಿಮ್ಮ ಇಚ್ಛೆಗನುಸರಿಸಿ ನಿಮ್ಮ ಶಂಕೆಯನ್ನು ನಿವಾರಣ ಮಾಡುತ್ತೇನೆ; ಕೇಳಿರಿ. ದೇಹ ಬುದ್ಧಿಯ ಕೈಯಿಂದ ಪಾರಾಗಿ ಜನ್ಮ ಮರಣಗಳಿಂದ ಮುಕ್ತನಾಗಬೇಕೆಂದು ಸದ್ಗುರುವಿಗೆ ಶರಣು ಹೋಗಿ ಸಾಂಪ್ರದಾಯಕ್ಕನುಸರಿಸಿ ಉಪಾಸನೆಯ ಆರಾಧನೆ ಮಾಡಲಿಕ್ಕೆ ಹತ್ತಿದ ಮೇಲೆ ವಿಶಿಷ್ಟಸಾಧನವಾಗಿ ಸಿದ್ಧಿಯು ಪ್ರಸನ್ನವಾಗುತ್ತದೆ. ಸಿದ್ಧಿಯಲ್ಲಿ ತೊಡಗಿಕೊಂಡರೆ ಮೂಲದಲ್ಲಿ ಅಂತರವಾಗುತ್ತದೆ. ಆದ್ದರಿಂದ ಸಿದ್ಧಿಗೆ ತೊಡಗಿಕೊಳ್ಳದೆ ಮೂಲದ ಕಡೆಗೆ ಲಕ್ಷ್ಯ ಕೊಟ್ಟು ಸಂಕಲ್ಪ ವೃತ್ತಿಯಿಂದ ಶ್ರೀ ಗುರುವಿನ ಆಜ್ಞೆಯ ಪ್ರಕಾರ ವರ್ತನ ಮಾಡಲಿಕ್ಕೆ ಹತ್ತಿದರೆ ಶ್ರೀ ಗುರುವಿನ ಕೃಪೆಯಿಂದ ಧನಿಕತನವು ಪ್ರಾಪ್ತವಾಗುತ್ತದೆ. ಧನಿಕತನವು ಪ್ರಾಪ್ತವಾದನಂತರ ಸೇವಕರ ಕಡೆಯಿಂದ ಸೇವೆಯನ್ನು ತೆಗೆದುಕೊಳ್ಳಲಿಕ್ಕೆ ಅಡ್ಡಿಯೇನು? ಧನಿಕತನವಿಲ್ಲದೆ ಸಿದ್ಧಿಯಲ್ಲಿ ತೊಡಗಿದರೆ ಮೂಲಕ್ಕೆ ಹಾನಿ ಬರುವದು. ಅಘಟಿತ ಚಮತ್ಕಾರಗಳು ಶ್ರೀ ಕೃಪೆಯಿಂದ ಸದ್ವೃತ್ತಿಯಿಂದಲೇ ಉಂಟಾಗುವವು." ಸಮರ್ಥರ ಈ ಭಾಷಣವನ್ನು ಕೇಳಿ ಮಹಾರಾಜರ ಸಂಶಯನಿವೃತ್ತಿಯಾಯಿತು. ಆ ಬಳಿಕ ಮಹಾರಾಜರು ಅಲ್ಲಿ ಕೆಲವು ದಿವಸ ನಿಂತುಕೊಂಡು ಮುಂದೆ ಸಮರ್ಥರ ಅಪ್ಪಣೆಯನ್ನು ಹೊಂದಿ ಪ್ರತಾಪಗಡಕ್ಕೆ ಹೊರಟು ಹೋದರು. ಈ ಸಂಗತಿಯು ಶಕೆ ೧೫೮೩ ರಲ್ಲಿ ವರ್ತಿಸಿತು.

ಪೈಠಣದ ಬ್ರಾಹ್ಮಣರು ಸಮರ್ಥರನ್ನು ಪರೀಕ್ಷೆ ಮಾಡಿದ್ದು—ಸಮರ್ಥರ ಕೀರ್ತಿಯು ನಾಲ್ಕೂ ಕಡೆಗೆ ಹಬ್ಬಿದ್ದನ್ನು ತಿಳಿದು ಪೈಠಣದ ೫೦ ಮಂದಿ ವಿದ್ವಾನ್ ಬ್ರಾಹ್ಮಣರು ಸಮರ್ಥರ ಸಾಮರ್ಥ್ಯವನ್ನು ಪರೀಕ್ಷಿಸುವದಕ್ಕಾಗಿ

ಅವರ ದರ್ಶನವನ್ನು ತೆಗೆದುಕೊಳ್ಳಬೇಕೆಂಣು ಅಪೇಕ್ಷಿಸಿ ಮಾಹುಲಿಗೆ ಬಂದು ಸಾತಾರೆಯಲ್ಲಿದ್ದ ಶ್ರೀ ಶಿವಾಜಿಮಹಾರಾಜರ ಕಡೆಗೆ "ನಮಗೆ ರಾಮದಾಸಸ್ವಾಮಿಗಳನ್ನು ಕಾಣುವ ಲವಲವಿಕೆಯುಂಟಾಗಿರುತ್ತದೆ. ಆದ್ದರಿಂದ ಅವರನ್ನು ಯಾವಾಗ್ಗೆ ಮತ್ತು ಎಲ್ಲಿ ಕಾಣಬಹುದೆಂಬದನ್ನು ಅವರಿಗೆ ಮುಂಚಿತವಾಗಿ ವಿಚಾರಿಸಿಕೊಂಡು ನಮಗೆ ತಿಳಿಸಬೇಕು. ಅಂದರೆ ಆ ಪ್ರಕಾರ ನಾವು ಅವರಿಗೆ ಬಂದು ಭೇಟಿ ಮಾಡುವೆವು" ಎಂದು ಹೇಳಿಕಳಿಸಿದರು. ಆ ಪ್ರಕಾರ ಶ್ರೀಶಿವಾಜಿಮಹಾರಾಜರು ಸಮರ್ಥರ ಬಳಿಗೆ ಹೋಗಿ ಪೈಠಣದ ಬ್ರಾಹ್ಮಣರ ನಿರೋಪವನ್ನು ತಿಳಿಸಿದರು. ಅದನ್ನು ಕೇಳಿ ಸಮರ್ಥರು "ಯಾಕಾಗಲೊಲ್ಲದು. ಆದರೆ ಅವರನ್ನು ಎದುರುಗೊಂಡು ಕರೆದು ತರಬೇಕಾಗುವದೋ ಹ್ಯಾಗೆ?" ಎಂದು ಶ್ರೀಶಿವಾಜಿ ಮಹಾರಾಜರಿಗೆ ವಿಚಾರಿಸಿದರು. ಅದಕ್ಕೆ ಮಹಾರಾಜರು—"ಅವರು ಬಹಳ ವಿದ್ವಾನ್ ಬ್ರಾಹ್ಮಣರಿರುತ್ತಾರೆ. ಆದ್ದರಿಂದ ಅವರನ್ನು ಎದುರುಗೊಂಡು ಕರೆದುತರುವದು ಸರಿಯಾದದ್ದೆಂದು ನೆನಿಸಿ ನಾನು ಈ ಹೊತ್ತು ಸಾಯಂಕಾಲದ ೪ ಘಂಟೆಗೆ ನನ್ನ ಪರಿವಾರ ಸಹಿತವಾಗಿ ಸಂಗಮಕ್ಕೆ ಹೋಗಬೇಕೆಂದು ನಿಶ್ಚಯಿಸಿರುತ್ತೇನೆ" ಎಂದು ತಿಳಿಸಿದರು. ಆಗ ಸಮರ್ಥರು—"ಬಹಳ ಉತ್ತಮವು. ನಾವು ಹ್ಯಾಗೂ ಈಗ ಬೇಟೆಯಾಡುವದಕ್ಕೆ ಹೊರಟಿರುತ್ತೇವೆ. ಆದ್ದರಿಂದ ನಾವೂ ತುಸು ಹೊತ್ತು ಬೇಟೆಯನ್ನಾಡಿಕೊಂಡು ಅತ್ತಿಂದತ್ತೇ ಸಂಗಮಕ್ಕೆ ಬರುವೆವು" ಎಂದು ಹೇಳಿದರು. ಅದನ್ನು ಕೇಳಿ ಮಹಾರಾಜರು ಆಶ್ಚರ್ಯದಿಂದ—"ಇದೇನು ಸ್ವಾಮಿ? ತಾವು ಈ ಹೊತ್ತು ಬೇಟೆಯನ್ನಾಡಲಿಕ್ಕೆ ಹೊರಡೋಣವಾಯಿತೇ!" ಎಂಬದಾಗಿ ಉದ್ಗಾರವನ್ನು ಹೊರಡಿಸಿದರು. ಅದಕ್ಕೆ ಸಮರ್ಥರು—"ನನಗೆ ಯಾವಾಗಾದರೊಮ್ಮೆ ಬೇಟೆಯಾಡಲಿಕ್ಕೆ ಹೋಗುವ ಔತ್ಸುಕ್ಯವು ಹುಟ್ಟುತ್ತದೆ. ನಾಲ್ಕುಗಳಿಗೆಯ ತನಕ ಅಡವಿಯಲ್ಲಿ ಆಡ್ಡಾಡಿಕೊಂಡು ಬರಲಿಕ್ಕೆ ನನಗೆ ಇದೊಂದು ಆಟವಾಗಿರುತ್ತದೆ" ಎಂದು ಉತ್ತರವನ್ನು ಕೊಟ್ಟರು. ಹೀಗಂದು ಸಮರ್ಥರು ಕಲ್ಯಾಣನನ್ನು ತನ್ನ ಸಂಗಡ ಕರೆದುಕೊಂಡು ಕೈಯಲ್ಲಿ ಬಿಲ್ಲುಬತ್ತಳಿಕೆಗಳನ್ನು ಹಿಡಿದು ಗುಡ್ಡಗಾಡಿನ ಕಡೆಗೆ ಹೊರಟುಹೋದರು. ಇತ್ತಲಾ ಮಹಾರಾಜರು ಸಾಯಂಕಾಲದ ೪ ಘಂಟೆಯ ಸುಮಾರಕ್ಕೆ ತಮ್ಮ ಪರಿವಾರವನ್ನು ಕರೆದುಕೊಂಡು ಪೈಠಣದ ಬ್ರಾಹ್ಮಣರನ್ನು ಎದುರುಗೊಂಡು ಕರೆದು ತರಲಿಕ್ಕೆ ಮಾಹುಲಿಯ ಸಂಗಮಕ್ಕೆ ಹೋಗಿ, ಅವರನ್ನು ಕಂಡು ಅವರಿಗೆ ಸಾಷ್ಟಾಂಗನಮಸ್ಕಾರ ಮಾಡಿ, ಅವರಿಗೆ ಆದರಪೂರ್ವಕವಾಗಿ ಸ್ವಾಗತಮಾಡಿ, ಅವರ ಕ್ಷೇಮಕುಶಲಗಳನ್ನು ವಿಚಾರಿಸುತ್ತ ಅವರ ಸಂಗಡ ಸ್ವಲ್ಪಹೊತ್ತು ಕುಳಿತಿರುವಷ್ಟರಲ್ಲಿ ಸಮರ್ಥರು ಕಲ್ಯಾಣನನ್ನು ಕರೆದುಕೊಂಡು ಅಲ್ಲಿಗೆ ಪ್ರಾಪ್ತವಾದರು. ಶಿರದಲ್ಲಿ ಜಟಾಭಾರವನ್ನುಬಿಟ್ಟು

ಮೈಯಲ್ಲಿ ಕಾವೀನಿಲುವಂಗಿಯನ್ನು ತೊಟ್ಟು, ಕಾಲಲ್ಲಿ ಪಾದುಕಗಳನ್ನು ಮೆಟ್ಟಿ, ಕೈಯಲ್ಲಿ ಬಿಲ್ಲುಬತ್ತಳಿಕೆಗಳನ್ನು ಹಿಡಿದಂಥ ಸಮರ್ಥರನ್ನು ಕಂಡು ಪೈಠಣದ ಬ್ರಾಹ್ಮಣರು ಕೌತುಕಪಟ್ಟರು. ಸಮರ್ಥರು ಅಲ್ಲಿ ಬಂದವರೇ ಆ ಬ್ರಹ್ಮವೃಂದಕ್ಕೆ ಸಾಷ್ಟಾಂಗನಮಸ್ಕಾರವನ್ನು ಮಾಡಿ, ತಮ್ಮ ಸ್ಥಳದಮೇಲೆ ಕುಳಿತು "ನಾನು ಈ ಹೊತ್ತು ಬೇಟೆಯನ್ನಾಡಲಿಕ್ಕೆ ಹೋಗಿದ್ದರಿಂದ ನನಗೆ ನಿಮ್ಮೆಲ್ಲರ ಭೆಟ್ಟಿಗೆ ಬರಲಿಕ್ಕೆ ಸ್ವಲ್ಪ ತಡವಾಯಿತು" ಎಂದು ಹೇಳಿದರು. ಆಗ ಮಹಾರಾಜರು—"ಹಾಗಾದರೆ ನೀವು ಈ ಹೊತ್ತು ಯಾವ ಪ್ರಕಾರದ ಬೇಟೆಯನ್ನು ಮಾಡಿಕೊಂಡು ಬಂದಿರಿ!" ಎಂದು ಕೇಳಿದರು. ಅದಕ್ಕೆ ಸಮರ್ಥರು ಕಲ್ಯಾಣನನ್ನುದ್ದೇಶಿಸಿ—"ನಾವು ಈ ಹೊತ್ತು ತಂದಂಥ ಬೇಟೆಯನ್ನು ಇವರಿಗೆ ತೋರಿಸು" ಎಂದು ಅವನಿಗೆ ಹೇಳಿದರು. ಆಗಲಾ ಕಲ್ಯಾಣನು ತನ್ನ ಬಗಲೊಳಗಿನ ಜೋಳಿಗೆಯಲ್ಲಿ ತುಂಬಿಕೊಂಡು ತಂದಂಥ ಸತ್ತ ಗುಬ್ಬಿಗಳನ್ನು ನೆಲದಮೇಲೆ ಸುರವಿದನು! ಈ ಸತ್ತ ಗುಬ್ಬಿಗಳ ರಾಶಿಯನ್ನು ನೋಡಿದವರೇ ಬ್ರಾಹ್ಮಣರು ಹೇಸಿಕೊಂಡು ಮೂಗುಮುರಿಯಹತ್ತಿದರು! ಮಹಾರಾಜರು ಮ್ಲಾನಮುಖವನ್ನು ಮಾಡಿದರು! ಆದರೆ ಇನ್ನೇನು ಚಮತ್ಕಾರವು ವರ್ತಿಸುವದೋ ನೋಡೋಣವೆಂದು ಮಹಾರಾಜರು ಬಾಯಿಂದ ಬ್ರ ಎಂಬ ಅಕ್ಷರವನ್ನು ಸಹ ನುಡಿಯದೆ ಸ್ವಸ್ಥವಾಗಿ ಕುಳಿತರು. ಆದರೆ ಆ ಬ್ರಾಹ್ಮಣರಲ್ಲಿ ಕೆಲವರು ತಮ್ಮ ತಮ್ಮೊಳಗೆ "ರಾಮಭಟ್ಟರೇ! ಗೋಪಾಳಭಟ್ಟರೇ! ಇವರೆಂಥ ಸಾಧುಗಳು! ಹೆಸರಿಗೆ ಮಾತ್ರ ಇವರು ಸಾಧುಗಳು! ಇವರ ಆಚಾರ ನೋಡಿದರೆ ಮ್ಲೇಂಛರಿಗೆ ಸರಿಯಾದದ್ದು! ಅಬ್ರಾಹ್ಮಣ್ಯ! ಅಬ್ರಾಹ್ಮಣ್ಯ!!" ವೆಂದು ಆಕ್ರೋಶ ಮಾಡಹತ್ತಿದರು. ಆದರೆ ಅವರಲ್ಲಿ ಕೆಲವು ವೃದ್ಧ ಮತ್ತು ಅನುಭವಿಕ ಜನರು—'ತಮ್ಮಗಳಿರಾ! ಬಾಯಿ ಮುಚ್ಚಿಕೊಂಡು ಸ್ವಲ್ಪ ಹೊತ್ತು ಸುಮ್ಮನೇ ಕುಳಿತುಕೊಳ್ಳಿರಿ. ಇವರು ಮಾಡುವದೆಲ್ಲ ಮುಗಿಯಲಿ. ಆ ಮೇಲೆ ಮಾತಾಡೋಣ" ಎಂದು ಹೇಳಿ ತರುಣರನ್ನು ಹಿಂದಕ್ಕೆ ಜಗ್ಗಿ ಸುಮ್ಮನೆ ಕೂಡ್ರಿಸಿದರು. ಈ ಸ್ಥಿತಿಯಲ್ಲಿಯೇ ಸಮರ್ಥರ ಮತ್ತು ಪೈಠಣದ ಬ್ರಾಹ್ಮಣರ ನಡುವೆ ಆದ ಕ್ಷೇಮಕುಶಲ ಪ್ರಶ್ನೋತ್ತರಗಳು ಮುಗಿದ ತರುವಾಯ ಸಮರ್ಥರು ಆ ಬ್ರಾಹ್ಮಣರನ್ನುದ್ದೇಶಿಸಿ—"ನೀವು ಇಲ್ಲಿಯತನಕ ಬಂದು ನಮಗೆ ದರ್ಶನಕೊಟ್ಟದ್ದರಿಂದ ನಾವು ಕೃತಾರ್ಥರಾದೆವು" ಎಂದು ನುಡಿದರು. ಆ ಮೇಲೆ ಮಹಾರಾಜರು ಎಲ್ಲ ಬ್ರಾಹ್ಮಣರಿಗೆ ಊರಲ್ಲಿ ಬರಬೇಕೆಂದು ಸನ್ಮಾನಪೂರ್ವಕವಾಗಿ ವಿನಂತಿ ಮಾಡಿಕೊಂಡರು. ಆಗ ಎಲ್ಲರೂ ಅಲ್ಲಿಂದ ಹೊರಡಲಿಕ್ಕೆ ಸಿದ್ಧರಾದರು. ತರುವಾಯ ಸಮರ್ಥರು ಕಲ್ಯಾಣನನ್ನುದ್ದೇಶಿಸಿ—"ಕಲ್ಯಾಣಾ! ಈಗ ಸೂರ್ಯಾಸ್ತವಾಯಿತು. ನಾವೆಲ್ಲರೂ ನಮ್ಮ ಮನೆಗೆ ಹೊರಟೆವು. ಇಷ್ಟೊತ್ತಿನ ತನಕ ನ

ಮ್ಮ ಆಟವಾಯಿತು. ಈ ಗುಬ್ಬಿಗಳ ಮರಿಗಳು ತಮ್ಮ ತಮ್ಮ ಮನೆಗಳಲ್ಲಿ ಇವುಗಳ ಮಾರ್ಗವನ್ನು ನಿರೀಕ್ಷಿಸುತ್ತ ಕುಳಿತಿರಬಹುದು. ಆದ್ದರಿಂದ ಇವುಗಳಿಗೆ ಅಪ್ಪಣೆ ಕೊಟ್ಟು ಕಳಿಸಿಕೊಡು" ಎಂದು ಹೇಳಿದರು. ಆಗ ಕಲ್ಯಾಣನು ಕೈಜೋಡಿಸಿ— "ಆಜ್ಞೆಯಂತೆ ನಡೆಯುತ್ತೇನೆ ಆದರೆ ಅವುಗಳನ್ನು ಹ್ಯಾಗೆ ಕಳಿಸಿಕೊಡಬೇಕೆಂಬ ವಿವರವನ್ನು ದಯವಿಟ್ಟು ಈ ದಾಸನಿಗೆ ತಿಳಿಸಬೇಕು" ಎಂದು ಬೇಡಿಕೊಂಡನು. ಅದಕ್ಕೆ ಸಮರ್ಥರು ಕಲ್ಯಾಣನಿಗೆ—"ಇಲ್ಲಿ ಬಿದ್ದಿದ್ದ ಸ್ವಲ್ಪ ಹುಲ್ಲನ್ನು ಕೂಡಿಸಿ ಈ ಗುಬ್ಬಿಗಳ ಮೇಲೆ ಹಾಕಿ ಬೆಂಕೆಯನ್ನು ಹಚ್ಚು" ಎಂದು ಹೇಳಿದರು. ಆಗ ಕಲ್ಯಾಣನು ಅದರಂತೆ ಮಾಡಲು ಆ ಗುಬ್ಬಿಗಳು ಒಂದೊಂದೇ ಹಾರಿ ಹೋದವು. ಈ ಚಮತ್ಕಾರವನ್ನು ಅವಲೋಕಿಸಿ ಪೈಠಣದ ಬ್ರಾಹ್ಮಣರು ತಾವು ಶ್ರೀರಾಮದಾಸರಿಗೆ ಕೊಟ್ಟ ದೂಷಣೆಯ ವಿಷಯದಲ್ಲಿ ಪಶ್ಚಾತ್ತಾಪಪಟ್ಟು "ನಾವು ನಿಮ್ಮನ್ನು ಪರೀಕ್ಷೆ ಮಾಡಲಿಕ್ಕೆ ಬಂದದ್ದು ನಮ್ಮ ದೊಡ್ಡ ಅಪರಾಧವಾಯಿತು. ದಯಮಾಡಿ ನಮ್ಮ ಅಪರಾಧವನ್ನು ಕ್ಷಮಿಸಬೇಕು." ಎಂದು ಸಮರ್ಥರಿಗೆ ಪ್ರಾರ್ಥನೆಯನ್ನು ಮಾಡಿದರು. ಆಗ ಶ್ರೀರಾಮದಾಸರು ನಕ್ಕು ಆ ಬ್ರಾಹ್ಮಣರನ್ನುದ್ದೇಶಿಸಿ—"ತಾವು ಭೂದೇವರು. ನಾನು ತಮ್ಮ ಯಃಕಶ್ಚಿತ ದಾಸನು. ಸಾಮರ್ಥ್ಯವೆಲ್ಲ ತಮ್ಮದೇ ಇರುತ್ತದೆ ತಮ್ಮ ಮುಂದೆ ಪರೀಕ್ಷೆ ಕೊಡುವಷ್ಟು ಯೋಗ್ಯತೆಯು ನನಗಿಲ್ಲ. ಆದಾಗ್ಯೂ ಶ್ರೀರಘುಪತಿಗೆ ತನ್ನ ದಾಸರ ಬಗ್ಗೆ ಸಂಪೂರ್ಣ ಅಭಿಮಾನವಿರುವದು. ಆದ್ದರಿಂದ ಇಂಥ ಸಂಗತಿಗಳು ವರ್ತಿಸುತ್ತವೆ" ಎಂದು ಹೇಳಿ ಆ ಬ್ರಾಹ್ಮಣರ ಸಮಾಧಾನ ಮಾಡಿ ಅವರನ್ನೊಡಗೊಂಡು ಸಾತಾರೆಗೆ ಬಂದರು. ಅಲ್ಲಿ ಶ್ರೀ ಶಿವಾಜಿ ಮಹಾರಾಜರು ಅವರೆಲ್ಲರನ್ನು ಬಹಳ ಆದರದಿಂದ ಕೆಲವು ದಿವಸ ಇಟ್ಟುಕೊಂಡು ಅವರನ್ನು ಸತ್ಕಾರ ಮಾಡಿ, ಅವರು ಹೋಗುವಾಗ್ಗೆ ಅವರಿಗೆಲ್ಲ ಉಚಿತವಾದ ಉಡಗರೆಗಳನ್ನೂ ದಕ್ಷಿಣವನ್ನೂ ಕೊಟ್ಟು ಅವರನ್ನು ಪೈಠಣಕ್ಕೆ ಕಳುಹಿಸಿಕೊಟ್ಟರು. ಈ ಸಂಗತಿಯು ಶಕೆ ೧೫೮೨ ರಲ್ಲಿ ಸಂಭವಿಸಿತು.

ವಾಸುದೇವ ಗೋಸಾವಿಯ ಬಾಯಿ ಹೋದದ್ದು—ವಾಸುದೇವ ಗೋಸಾವಿ ಯಾರೆಂಬುವದು ನಮ್ಮ ವಾಚಕರಿಗೆ ಗೊತ್ತಿರಬಹುದು. ಕಾಶಿಯಲ್ಲಿ ಅಧ್ಯಯನ ಮಾಡಿ, ಹಗಲುದೀವಟಿಗೆಯನ್ನು ಹಿಡಿಸಿಕೊಂಡು, ಯಜ್ಞೋಪವೀತಕ್ಕೆ ಚೂರಿಯನ್ನು ಕಟ್ಟಿಕೊಂಡು, ವಾದದಲ್ಲಿ ತನ್ನನ್ನು ಯಾರಾದರೂ ಸೋಲಿಸಿದರೆ ತಾನು ತನ್ನ ಚೂರಿಯಿಂದ ಕುತ್ತಿಗೆಯನ್ನು ಕೊಯ್ದುಕೊಂಡು ಪ್ರಾಣವನ್ನು ಕಳಕೊಳ್ಳುತ್ತೇನೆಂದು ಸಾರಿ ಹೇಳುತ್ತಲೂ ಎಲ್ಲರಿಗೆ ಅಂಜಿಸಿ ಜಯಪತ್ರಗಳನ್ನು ಪಡೆದುಕೊಳ್ಳುತ್ತಲೂ ಅಡ್ಡಾಡುತ್ತಿದ್ದ ವಾಸುದೇವ ಗೋಸಾವಿಯ ಬಗ್ಗೆ ಹಿಂದೆ ಒಂದು ಸಂದರ್ಭದಲ್ಲಿ ನಾವು ವಿವರಿಸಿರುತ್ತೇವೆ. ವಾಸುದೇವ ಗೋಸಾವಿಯು ವಿದ್ಯೆ

ಯಲ್ಲಿ ಪ್ರಬಲವಾಗಿದ್ದರೂ ಸಾಧುತ್ವದ ಲವಲೇಶವಾದರೂ ಅವನಿಗೆ ಇದ್ದಿಲ್ಲ. ಸಾಧುತ್ವದ ಮುಂದೆ ವಿದ್ವತ್ತೆಯು ಆಟವೇನು ನಡೆಯುವದು! ವಿದ್ವಾಂಸರಿಗೆ ಬರೇ ಗ್ರಂಥಗಳ ಹುಚ್ಚು ಇರುವದು. ಆದರೆ ಸಾಧುಗಳು ದೇಶಕಾಲ ವರ್ತಮಾನಗಳಿಗನುಸರಿಸಿ ಆಚಾರ ವಿಚಾರಗಳನ್ನು ಬದಲಿಸುವರು. ಸಾಧುಗಳಿಗೆ ಗ್ರಂಥಗಳ ಮಹತ್ವವೇನೂ ಇರುವದಿಲ್ಲ. ಸಮಾಜಕ್ಕೆ ಉಪಯುಕ್ತವಾದದ್ದೆಂದು ಸಾಧುಗಳಿಗೆ ಕಂಡುಬಂದದ್ದೇ ಶಾಸ್ತ್ರವಚನವು! ಅವರ ನಡೆಯೇ ವೇದಾಧಾರವು! ಹೀಗಿದ್ದು ವಾಸುದೇವ ಗೋಸಾವಿಯು ಒಂದುಸಾರೆ ತನ್ನ ಶಾಸ್ತ್ರಾಧ್ಯಯನದ ಹೆಮ್ಮೆಯಿಂದ "ಹರಿವರಾರ್ಜನ ಚಂದ್ರಿಕೆ" ಎಂಬ ಗ್ರಂಥದ ಆಧಾರದಿಂದ "ಜಪತಪಾದಿ ಅನುಷ್ಠಾನಗಳನ್ನು ವಿಧಿಪೂರ್ವಕವಾಗಿ ಹ್ಯಾಗೆ ಆಚರಿಸತಕ್ಕದ್ದು ಮತ್ತು ಈ ಕಾಲದಲ್ಲಿ ದೊಡ್ಡ ದೊಡ್ಡ ಬ್ರಾಹ್ಮಣರು ಮತ್ತು ಸಾಧುಗಳೆಂಬವರು ಸಹ ಆಚರಿಸುವ ಜಪತಪಾದಿ ಅನುಷ್ಠಾನಗಳಲ್ಲಿ ಯಾವಯಾವ ದೋಷಗಳಿರುತ್ತವೆ" ಎಂಬ ವಿಷಯವನ್ನು ಕುರಿತು ಒಂದು ದೊಡ್ಡ ಗ್ರಂಥವನ್ನು ಬರೆದು ತಂದು ಅದನ್ನು ಸಮರ್ಥರ ಮುಂದೆ ಒಯ್ದು ತೋರಿಸಿದನು. ಅದನ್ನು ಸಮರ್ಥರು ಓದಿ ನೋಡಿ—"ತಾವು ವಿದ್ವಾಂಸರಿದ್ದೀರಿ. ಈ ಗ್ರಂಥವು ತಮ್ಮ ವಿದ್ವತ್ತೆಗೂ ಯೋಗ್ಯತೆಗೂ ಒಪ್ಪುವಂಥಾದ್ದಿರುತ್ತದೆ. ಇದರಲ್ಲಿ ಹೇಳಿರುವ ವಿಧಿಗಳಂತೆ ಆಚರಣೆ ಮಾಡಲಿಕ್ಕೆ ತಮ್ಮಂಥ ದೊಡ್ಡ ಮನುಷ್ಯರೇ ಯೋಗ್ಯರು. ಆದ್ದರಿಂದ ಇದನ್ನು ಇಲ್ಲಿಂದ ಮೊದಲು ತೆಗೆದುಕೊಂಡು ಹೋಗಿರಿ. ನಮ್ಮ ಗ್ರಂಥಗಳ ಸಂಗಡ ಇದು ಇರತಕ್ಕದ್ದಲ್ಲ" ಎಂದು ಹೇಳಿದರು. ಆಗ ವಾಸುದೇವ ಗೋಸಾವಿಯು ತನ್ನ ಗ್ರಂಥವನ್ನು ಅಲ್ಲಿಂದ ಎತ್ತಿಕೊಂಡು ಒಳಗೆ ಒಯ್ದನು. ಅಷ್ಟರಲ್ಲಿ ಅವನ ಬಾಯಿಯೇ ಹೋಯಿತು! ಅವನಿಗೆ ಮಾತಾಡಲಿಕ್ಕೆ ಬರಲೊಲ್ಲದಾಯಿತು! ಆಗ ಅವನು ದೊಡ್ಡ ಧ್ವನಿಯಿಂದ ಅತ್ತು ಸಮರ್ಥರ ಪಾದದಮೇಲೆ ತಲೆಯನ್ನಿಟ್ಟು ಉರುಳಾಡ ಹತ್ತಿದನು. ಆದರೆ ಅದನ್ನು ನೋಡಿ ಸಮರ್ಥರು ಏನೂ ಮಾತಾಡದೆ ಸುಮ್ಮನೆ ಕುಳಿತು ಬಿಟ್ಟರು. ಆಗ ಕಲ್ಯಾಣಸ್ವಾಮಿ ಮೊದಲಾದ ಶಿಷ್ಯರು ವಾಸುದೇವ ಗೋಸಾವಿಯ ಅಪರಾಧವನ್ನು ಕ್ಷಮಿಸಬೇಕೆಂದು ಸಮರ್ಥರಿಗೆ ಬೇಡಿಕೊಂಡರು. ಅದಕ್ಕೆ ಸಮರ್ಥರು ಕಲ್ಯಾಣನಿಗೆ ಉತ್ತರ ಕೊಟ್ಟದ್ದೇನಂದರೆ—"ಕಲ್ಯಾಣಾ, ಇವನು ಹಾಡುಹಗಲೇ ದೀವಟಿಗೆಯನ್ನು ಹಿಡಿಸಿಕೊಂಡು ಅಡ್ಡಾಡುವ ಶಾಸ್ತ್ರಿಯು! ಶಾಸ್ತ್ರದಂತೆ ವ್ಯವಹಾರ ಮಾಡುವಲ್ಲಿ ಇವನು ಬಹಳ ಚತುರನು! ನಾವೇನು, ಮೂಢರಾದ ಹೆಂಗಸರಿಗೂ ಹುಡುಗರಿಗೂ ಕಥೆಗಳನ್ನು ಹೇಳುತ್ತ ಅಡ್ಡಾಡುವ ಬಡ ಗೋಸಾವಿಗಳು! ನಮಗೂ ಅವರಿಗೂ ಕೂಡುವ ಬಗೆ ಎಲ್ಲಿ!" ಈ ಮೇರೆಗೆ ಸಮರ್ಥರು ಉತ್ತರ ಕೊಟ್ಟ ತರುವಾಯ ಅವರೆಲ್ಲ ಶಿಷ್ಯರು ಅವರಿಗೆ ಬಹಳ ನಮ್ರಪೂರ್ವಕವಾಗಿ ಪ್ರಾರ್ಥಿಸಿದ್ದರಿಂದ ಅವರು ವಾಸುದೇವ ಗೋಸಾ

ವಿಯ ಮಸ್ತಕದ ಮೇಲೆ ತಮ್ಮ ವರದ ಹಸ್ತವನ್ನಿಟ್ಟರು. ಆ ಕ್ಷಣಕ್ಕೆ ವಾಸುದೇವ ಗೋಸಾವಿಗೆ ಬಾಯಿಬಂತು. ತರುವಾಯ ಸಮರ್ಥರು ಆತನನ್ನು ಕುರಿತು—"ತಂದೆ! ಕಲಿಯುಗದಲ್ಲಿ ಶಾಸ್ತ್ರದಂತೆ ನಡೆಯುವದು ಬಹಳ ಕಠಿಣವಾಗುವದು. ಅಂತೇ ಶ್ರೀ ರಾಮಚಂದ್ರನು ತನ್ನ ನಿರ್ವಾಣ ಸಮಯದಲ್ಲಿ ಮಾರುತಿಗೆ ಉಪದೇಶ ಮಾಡಿದಂಥ ಭಕ್ತಿ ಮಾರ್ಗದಿಂದ ನಡೆದರೆ ಸಾಕಾಗುತ್ತದೆ. ಆ ಭಕ್ತಿ ಮಾರ್ಗದ ವಿರುದ್ಧವಾಗಿ ನುಡಿಯುವದು ಮಹಾ ಅಪರಾಧವಿರುತ್ತದೆ. ಆದ್ದರಿಂದ ಶ್ರೀ ರಾಮಚಂದ್ರನ ಆಜ್ಞೆಯಂತೆ ನಾಮಸ್ಮರಣವನ್ನು ಮಾತ್ರ ಆಚರಿಸಿ ಜಗದುದ್ಧಾರ ಮಾಡಬೇಕು" ಎಂದು ಉಪದೇಶಿಸಿದರು. ಈ ಉಪದೇಶದಂತೆ ಮುಂದೆ ವಾಸುದೇವ ಗೋಸಾವಿಯು ತನ್ನ ಒಣ ಆಡಂಬರವನ್ನೂ ಶಾಸ್ತ್ರದ ಶಾಬ್ದಿಕ ವಿಧಿಗಳನ್ನೂ ಬಿಟ್ಟುಕೊಟ್ಟು ವ್ಯವಹಾರಕ್ಕೆ ಸರಿಯಾಗಿ ವರ್ತಿಸಹತ್ತಿದನು.

ಮಾಯಾ ಎಂಬುದು ಸತ್ಯವೋ ಮಿಥ್ಯವೋ?—ಒಂದಾನೊಂದು ದಿವಸ ಸಮರ್ಥರು ತಮ್ಮೆಲ್ಲರ ಶಿಷ್ಯರೊಂದಿಗೆ ಕುಳಿತು ವೇದಾಂತ ವಿಷಯವನ್ನು ಕುರಿತು ಪ್ರತಿಪಾದನ ಮಾಡುತ್ತಿರುವಾಗ್ಗೆ ಒಮ್ಮಿಂದೊಮ್ಮೆ ತಮ್ಮ ಶಿಷ್ಯರಿಗೆ "ಮಾಯಾ ಎಂಬದು ಸತ್ಯವೋ ಮಿಥ್ಯವೋ!" ಎಂದು ಪ್ರಶ್ನೆ ಮಾಡಿದರು. ಈ ಪ್ರಶ್ನೆಗೆ ಉತ್ತರ ಕೊಡಲಿಕ್ಕೆ ಯಾರಿಗೂ ಧೈರ್ಯವಾಗಲಿಲ್ಲ. ಯಾಕಂದರೆ ತಾವು ಯಾವ ಪ್ರಕಾರದಿಂದ ಉತ್ತರ ಕೊಟ್ಟಾಗ್ಯೂ ಸಮರ್ಥರು ತಮ್ಮ ಅಭಿಪ್ರಾಯವನ್ನು ಖಂಡನ ಮಾಡುವರೆಂದು ತಿಳಿದು ಎಲ್ಲರು ಉತ್ತರ ಕೊಡದೆ ಸುಮ್ಮನೆ ಕುಳಿತರು. ಇಷ್ಟರಲ್ಲಿ ವಾಸುದೇವ ಗೋಸಾವಿಯು "ಮಾಯಾ ಎಂಬದು ಮಿಥ್ಯವು" ಎಂದು ಉತ್ತರ ಕೊಟ್ಟನು. ಆಗ ಸಮರ್ಥರು ಅವನಿಗೆ—"ವಾಸುದೇವಾ! ಚನ್ನಾಗಿ ವಿಚಾರ ಮಾಡಿ ಉತ್ತರ ಕೊಟ್ಟಿಯಾ!" ಎಂದು ಅವನನ್ನು ಗದ್ದರಿಸಿ ಪುನಃ ಪ್ರಶ್ನೆ ಮಾಡಿದರು. ಸಮರ್ಥರು ಈ ಪ್ರಕಾರ ಅವನನ್ನು ಎರಡು ಮೂರು ಸಾರೆ ಕೇಳಿದಾಗ್ಯೂ ಅವನು ತಾನು ಮೊದಲು ಕೊಟ್ಟ ಉತ್ತರವೇ ಸರಿಯಾದದ್ದೆಂದು ಧಿಟವಾಗಿ ಹೇಳಿದನು. ಮುಂದೆ ಕೆಲವು ದಿವಸಗಳಾದ ತರುವಾಯ ಒಬ್ಬ ಗಾರುಡಿಗನು ಸಮರ್ಥರ ಬಳಿಗೆ ಬಂದು ಕೆಲ ಹೊತ್ತು ತನ್ನ ಆಟವನ್ನು ನೋಡಲಿಕ್ಕೆ ದಯ ಮಾಡಿ ಬರಬೇಕೆಂದು ಅವರನ್ನು ಪ್ರಾರ್ಥಿಸಿದನು. ಆಗ ಸಮರ್ಥರು ಅವನ ಮಾತಿಗೆ ಒಡಂಬಟ್ಟು ಕಲ್ಯಾಣಸ್ವಾಮಿ, ವಾಸುದೇವ ಗೋಸಾವಿ ಮೊದಲಾದ ತಮ್ಮ ಯಾವತ್ತು ಶಿಷ್ಯರನ್ನು ಕೂಡಿಕೊಂಡು ಅವನ ಆಟವನ್ನು ನೋಡಲಿಕ್ಕೆ ಹೋಗಿ ಕುಳಿತರು. ಆ ಗಾರುಡಿಗನು ತನ್ನ ಆಟವನ್ನು ಮಾಡುತ್ತಿರುವಾಗ್ಗೆ ಒಂದು ತೊಗಲನ್ನು ಹಾವು ಮಾಡಿ ತೋರಿಸಿದನು. ಅದನ್ನು ನೋಡಿ ಸಮರ್ಥರು ವಾಸುದೇವ ಗೋಸಾವಿಗೆ—"ವಾಸುದೇವಾ! ಈ ಹಾವು ಯಾತರಿಂದ ಆಯಿತು?" ಎಂದು ಕೇಳಿದರು. ಅದಕ್ಕೆ

ವಾಸುದೇವ ಗೋಸಾವಿಯು "ಮಾಯೆಯಿಂದ" ಎಂದು ಉತ್ತರ ಕೊಟ್ಟನು. ಆಗ ಸಮರ್ಥರು ಅವನಿಗೆ—"ಮಾಯೆಯು ಸತ್ಯವೋ? ಮಿಥ್ಯವೋ?" ಎಂದು ತಿರುಗಿ ಕೇಳಿದರು. ಅದಕ್ಕೆ ಅವನು "ಮಿಥ್ಯವು" ಎಂತಲೇ ತಿರುಗಿ ನುಡಿದನು. ಆ ಬಳಿಕ ಸಮರ್ಥರು ಗಾರುಡಿಗನಿಗೆ ಆ ಹಾವನ್ನು ತಮ್ಮ ಬಳಿಗೆ ತೆಗೆದುಕೊಂಡು ಬಾ ಎಂದು ಸೂಚಿಸಿ ಅದರಂತೆ ಅವನು ತರಲಾಗಿ ಅದನ್ನು ಕೈಯಿಂದ ಹಿಡಿ ಎಂದು ವಾಸುದೇವ ಗೋಸಾವಿಗೆ ಹೇಳಿದರು. ಅದರಂತೆ ವಾಸುದೇವ ಗೋಸಾವಿಯು ಆ ಹಾವಿನ ಬಾಯಿಯನ್ನು ಗಟ್ಟಿಯಾಗಿ ಮುಚ್ಚಿ ತನ್ನ ಮುಷ್ಟಿಯಿಂದ ಹಿಡಿದನು. ಆಗ ಆ ಹಾವು ತನ್ನ ಬಾಲದಿಂದ ವಾಸುದೇವ ಗೋಸಾವಿಯನ್ನು ಗಟ್ಟಿಯಾಗಿ ಸುತ್ತಿಕೊಂಡಿತು. ಅದರಿಂದ ವಾಸುದೇವ ಗೋಸಾವಿಯು ಬಹಳ ಕಸವಿಸಿಪಡಹತ್ತಿದನು. ಅದನ್ನು ನೋಡಿ ಸಮರ್ಥರು ವಾಸುದೇವ ಗೋಸಾವಿಗೆ—"ಎಲೋ! ಅದರ ಬಾಯಿ ಬಿಡು" ಎಂದು ಹೇಳಿದರು. ಅದಕ್ಕೆ ವಾಸುದೇವ ಗೋಸಾವಿಯು "ಸ್ವಾಮಿ, ಹಾಗೆ ಮಾಡಿದರೆ ಅದು ನನ್ನನ್ನು ಕಚ್ಚಲಿಕ್ಕಿಲ್ಲವೇ?" ಎಂದು ಕೇಳಿದನು. ಆಗ ಸಮರ್ಥರು—"ಅಪ್ಪಾ ವಾಸುದೇವಾ! ಮಾಯೆಯು ಮಿಥ್ಯವಾಗಿದ್ದಲ್ಲಿ ನಿನಗೆ ಭೀತಿಯಾಕೆ?" ಎಂದು ಸಮರ್ಥರು ಪರಿಹಾಸ್ಯ ಮಾಡಿದರು. ಅದಕ್ಕೆ ವಾಸುದೇವ ಗೋಸಾವಿಯು—"ಸ್ವಾಮಿ, ಮಾಯೆಯು ಮಿಥ್ಯವಾಗಿದ್ದರೂ ನನ್ನ ವೇದನೆಯು ಮಾತ್ರ ಸತ್ಯವಾಗಿರುತ್ತದೆ" ಎಂದು ನುಡಿದು ಬಹಳ ದುಃಖವನ್ನು ಪ್ರದರ್ಶಿಸಿದನು. ಆಗ ಸಮರ್ಥರು ಆ ಗಾರುಡಿಗನಿಗೆ ಆ ಹಾವನ್ನು ಪುನಃ ತೊಗಲು ಮಾಡಿ ತೋರಿಸೆಂದು ಅಪ್ಪಣೆ ಮಾಡಿದರು. ಆ ಬಳಿಕ ಗಾರುಡಿಗನು ಗೋಸಾವಿಯ ಕೈಯ ಮೇಲೆ ಧೋತರದ ಮುಸುಕು ಹಾಕಿ ತಿರುಗಿ ಅದನ್ನು ತೊಗಲು ಮಾಡಿ ಅಲ್ಲಿ ನೆರೆದ ಎಲ್ಲ ಜನರ ಮುಂದೆ ತೋರಿಸಿದನು. ಅದನ್ನು ನೋಡಿ ಸಮರ್ಥರು ತಿರುಗಿ ವಾಸುದೇವ ಗೋಸಾವಿಗೆ—"ಮಾಯಾ ಸತ್ಯವೋ ಮಿಥ್ಯವೋ ಈಗಾದರೂ ಹೇಳು" ಎಂದು ಕೇಳಿದರು. ಆಗ ವಾಸುದೇವ ಗೋಸಾವಿಯು ತನ್ನ ಎರಡೂ ಕೈ ಜೋಡಿಸಿ—"ಸ್ವಾಮಿ, ಅದು ಮಿಥ್ಯವೆಂಬುವದು ನಿಜವಾದದ್ದು. ಆದರೆ ಯಾವದೂ ಸದ್ಗುರುವಿಗೆ ಮಿಕ್ಕಿದ್ದಲ್ಲ" ಎಂದು ಲೀನತೆಯಿಂದ ಉತ್ತರ ಕೊಟ್ಟನು. ಅದನ್ನು ಕೇಳಿ ಸಮರ್ಥರು "ಈಗಾದರೂ ನಿನ್ನ ಮನಸ್ಸಿಗೆ ಒಡಂಬಡಿಕೆಯಾಯಿತೋ?" ಎಂದು ಪ್ರಶ್ನೆ ಮಾಡಿದರು. ಅದಕ್ಕೆ "ಆಯಿತು ಸ್ವಾಮಿ" ಎಂದು ಉತ್ತರ ಕೊಟ್ಟನು. ಈ ಸಂಗತಿಯು ಶಕೆ ೧೫೭೭ರಲ್ಲಿ ವರ್ತಿಸಿತು.

**ಖಂಡೋಬನ ದರ್ಶನ**—ಒಂದಾನೊಂದು ಸಾರೆ ಸಮರ್ಥರ ಸ್ವಾರಿಯು ಚಿಂಚವಡದ ರಾಮದೇವರ ದರ್ಶನಕ್ಕೆ ಹೋಗಿ ಜೆಜುರಿಯ ಮೇಲಿಂದ ಪರಳಿಗೆ

ಬರುವದಕ್ಕಾಗಿ ಹೊರಟು ಜೆಜೂರಿಯನ್ನು ದಾಟಿ ಸ್ವಲ್ಪ ಮುಂದೆ ಬಂದಿತ್ತು. ಜೇಜೂರಿಯು ಹತ್ತಿರ ಪಾಗ್ಲೋ ಊರಲ್ಲಿ ಹೋಗಿ ಖಂಡೋಬನ ದರ್ಶನ ತೆಗೆದುಕೊಂಡು ಹೋಗಬೇಕೆಂಬುವ ವಿಚಾರವು ಅವರ ಮನಸ್ಸಿನಲ್ಲಿ ಬರಲಿಲ್ಲ. ಇದರಿಂದ ಖಂಡೋಬನಿಗೆ ರಾಮದಾಸನಂಥ ಸತ್ಪುರುಷನೂ ಸದ್ಭಕ್ತನೂ ನನ್ನ ಊರಮೇಲಿಂದ ಹಾಯ್ದು ಹೋದಾಗ್ಯೂ ನನಗೆ ಭೇಟಿಯಾಗದೆ ಮುಂದಕ್ಕೆ ಸಾಗಿದ್ದು ಉಚಿತವಾಗಲಿಲ್ಲವೆಂದು ತಿಳಿದು ಹ್ಯಾಗಾದರೂ ಮಾಡಿ ಅವನನ್ನು ಮರಳಿ ತನ್ನ ಭೇಟಿಗೆ ತಿರುಗಿ ಕರೆದುಕೊಂಡು ಬರಬೇಕೆಂದು ಯೋಚಿಸಿ ತನ್ನ ಕಾಂಕ್ಷೆಯನ್ನು ಪೂರ್ಣ ಮಾಡಿಸಿಕೊಳ್ಳುವದಕ್ಕಾಗಿ ಶ್ರೀ ಶಿವಾಜಿಯ ಸ್ವರೂಪವನ್ನು ಧರಿಸಿ ಅಶ್ವಾರೂಢನಾಗಿ ಸಮರ್ಥರಿಗೆ ಮಾರ್ಗದಲ್ಲಿ ಕಾಣಿಸಿಕೊಂಡನು. ಆಗ ಸಮರ್ಥರು ಶ್ರೀ ಶಿವಾಜಿಯ ಸ್ವರೂಪವನ್ನು ಧರಿಸಿದ ಖಂಡೋಬನನ್ನು ಕಂಡು ಆಶ್ಚರ್ಯದಿಂದ "ಏನು ಶಿವರಾಯಾ! ನೀನೊಬ್ಬನೇ ಇತ್ತಕಡೆಗೆ ಎಲ್ಲಿ ಹೊರಟೆ!" ಎಂದು ಕೇಳಿದರು. ಅದಕ್ಕೆ ಖಂಡೋಬನು—"ನಾನು ಸಹಜವಾಗಿ ಆಡ್ಡಾಡುತ್ತ ಇತ್ತಕಡೆಗೆ ಬಂದೆನು. ಆದರೆ ಇಲ್ಲಿ ಸಮೀಪದಲ್ಲಿಯೇ ಖಂಡೋಬನ ಸ್ಥಾನವಿರುವದರಿಂದ ಅವನ ದರ್ಶನ ತೆಗೆದುಕೊಂಡು ಬರುವದಕ್ಕಾಗಿ ಹೊರಟಿರುತ್ತೇನೆ. ಅವನ ದರ್ಶನ ತೆಗೆದುಕೊಂಡು ಈಗಲೇ ಮರಳಿ ಬರುವಾ ನಡಿ" ಎಂದು ಹೇಳಿದನು. ಅದಕ್ಕೆ ಸಮರ್ಥರು ಒಪ್ಪಿಕೊಂಡು ಖಂಡೋಬನ ಬೆನ್ನು ಹತ್ತಿ ಖಂಡೋಬನ ದೇವಸ್ಥಾನದವರೆಗೆ ಹೋದರು. ಶಿವಾಜಿ ಮಹಾರಾಜರ ಸ್ವರೂಪವನ್ನು ಧರಿಸಿದ ಖಂಡೋಬನು ಇನ್ನೂ ಕುದುರೆಯ ಮೇಲಿಂದ ಇಳಿಯುತ್ತಿರುವಾಗಲೇ ಸಮರ್ಥರು ದೇವಸ್ಥಾನದ ಒಳಗೆ ಹೋಗಿ ಖಂಡೋಬನ ದರ್ಶನ ತೆಗೆದುಕೊಂಡು ಎಷ್ಟೋ ಹೊತ್ತು ಮಾರ್ಗಪ್ರತೀಕ್ಷೆ ಮಾಡಿದರೂ ಶಿವಾಜಿಮಹಾರಾಜರು ಒಳಗೆ ಬರಲೇ ಇಲ್ಲ. ಆಗ ಸಮರ್ಥರು ಶಿವಾಜಿಮಹಾರಾಜರಿಗೆ ಒಳಗೆ ಬರಲಿಕ್ಕೆ ಇಷ್ಟೊಂದು ತಡವಾದ ಕಾರಣವೇನೆಂದು ಶೋಧಿಸುವದಕ್ಕಾಗಿ ದೇವಸ್ಥಾನದ ಹೊರಗೆ ಬಂದು ನೋಡುವಲ್ಲಿ ಶಿವಾಜಿಮಹಾರಾಜರೂ ಇದ್ದಿಲ್ಲ, ಅವರ ಕುದುರೆಯೂ ಇದ್ದಿಲ್ಲ! ಈ ಚಮತ್ಕಾರವೇನಾಯಿತೆಂದು ಸಮರ್ಥರು ವಿಚಾರ ಮಾಡುತ್ತಿರುವಷ್ಟರಲ್ಲಿ "ಇದು ಖಂಡೋಬನ ಕೃತಿಯೇ ಹೌದು" ಎಂದು ತಮ್ಮ ಅಂತರ್ಜ್ಞಾನದಿಂದ ತಿಳಿದುಕೊಂಡು ಪುನಃ ಒಳಗೆ ಹೋಗಿ ಭಕ್ತಿಪುರಸ್ಸರವಾಗಿ ಖಂಡೋಬನ ಸ್ತವನವನ್ನು ಮಾಡಲಾರಂಭಿಸಿದರು. ಆ ಮೇಲೆ ಖಂಡೋಬನು ಅವರಿಗೆ ಪ್ರತ್ಯಕ್ಷವಾಗಿ ದರ್ಶನವನ್ನು ಕೊಟ್ಟು ಅವರಿಗೆ ದೃಢಾಲಿಂಗನವನ್ನು ಕೊಟ್ಟನು. ಆಗ ಸಮರ್ಥರು ಖಂಡೋಬನಿಗೆ—"ನಿಮ್ಮಂಥ ದೊಡ್ಡವರು ಈ ಮೇರೆಗೆ ಮೋಸ ಪಡಿಸತಕ್ಕದ್ದೇ!" ಎಂದು ವಿಚಾರಿಸಿದರು. ಅದಕ್ಕೆ ಖಂಡೋಬನು—"ನಿಮ್ಮಂಥವರು ನನ್ನ ನಗರದ ಮೇಲಿಂದ

ಹೋಗುತ್ತಿರಲು ನನಗೆ ಭೇಟಿಯಾಗದೆ ಹೋಗುವದು ಸರಿಯಾದದ್ದೇ?" ಎಂದು ತಿರುಗಿ ವಿಚಾರಿಸಿದರು. ಈ ಪ್ರಕಾರ ಪರಸ್ಪರ ಭಾಷಣವಾಗುವದಕ್ಕೆ ಖಂಡೋಬನು—"ನಾನಂತೂ ಭಕ್ತಪ್ರಿಯನು. ಭಕ್ತರ ಭೇಟಿಯನ್ನು ತೆಗೆದುಕೊಳ್ಳುವ ಕುತೂಹಲದಿಂದ ಈ ಪ್ರಕಾರ ಮಾಡಬೇಕಾಯಿತು" ಎಂದು ಹೇಳಿದನು. ಆ ಮೇಲೆ ಸಮರ್ಥರು ಖಂಡೋಬನಿಗೆ ಆರತಿಯನ್ನು ಮಾಡಿ ಒಂದೆರಡು ದಿವಸ ಅವನ ಸಾನ್ನಿಧ್ಯದಲ್ಲಿದ್ದು ಪರಳಿಗೆ ಮರಳಿ ಹೋದರು.

ರಂಗನಾಥಸ್ವಾಮಿಯು ಕೈಯಿಂದ ಸತ್ತ ಹದ್ದಿಗೆ ಪುನಃ ಜೀವ ತುಂಬಿಸಿದ್ದು—ನಿಜಾನಂದಸ್ವಾಮಿಗಳ ಪುಣ್ಯತಿಥಿಯ ಉತ್ಸವಕ್ಕಾಗಿ ಶಕೆ ೧೫೭೬ರಲ್ಲಿ ರಂಗನಾಥಸ್ವಾಮಿಯು ಸಮರ್ಥರನ್ನು ಕರಹಾಡಕ್ಕೆ ಕರೆದುಕೊಂಡು ಹೋಗುವದಕ್ಕಾಗಿ ಸಮರ್ಥರಿದ್ದಲ್ಲಿಗೆ ಹೋದನು. ಆಗ ಸಮರ್ಥರು ರಂಗನಾಥಸ್ವಾಮಿಯನ್ನು ಕಂಡು—"ರಂಗನಾಥಾ, ಯಾಕೆ ಬಂದಿ?" ಎಂದು ವಿಚಾರಿಸಿದರು. ಅದಕ್ಕೆ ರಂಗನಾಥಸ್ವಾಮಿಯು—"ನಿಜಾನಂದಸ್ವಾಮಿಗಳ ಪುಣ್ಯತಿಥಿಯ ಉತ್ಸವಕ್ಕಾಗಿ ತಮ್ಮನ್ನು ಕರೆದುಕೊಂಡು ಹೋಗಲಿಕ್ಕೆ ಬಂದಿರುತ್ತೇನೆ" ಎಂದು ಹೇಳಿದನು. ಆ ಕಾಲಕ್ಕೆ ರಂಗನಾಥಸ್ವಾಮಿಯು ನಿತ್ಯದಂತೆ ಕೈಯಲ್ಲಿ ಬಿಲ್ಲು ಬತ್ತಳಿಕೆಗಳನ್ನೂ ಪಂಚವಿಧವಾದ ಶಸ್ತ್ರಗಳನ್ನೂ ಧರಿಸಿ ಕುದುರೆಯ ಮೇಲೆ ಆರೂಢನಾಗಿ ಬಂದಿದ್ದನು. ಇದನ್ನು ನೋಡಿ ಸಮರ್ಥರು ರಂಗನಾಥಸ್ವಾಮಿಯನ್ನುದ್ದೇಶಿಸಿ—"ರಂಗನಾಥಾ! ನೀನು ಸಾಧುಪುರುಷನೆಂದು ಜನರು ಅನ್ನುವರು. ಹೀಗಿರಲು, ನೀನು ನಿನ್ನ ವೇಷವು ಸಾಧುಪುರುಷರಿಗೆ ಉಚಿತವಾದ ಸೌಮ್ಯ ಪ್ರಕಾರದ್ದು ಇರದೆ ನಿನ್ನ ಮೈಮೇಲೆ ತರತರದ ಬಣ್ಣದ ಬಟ್ಟೆಗಳೂ ಕೈಯಲ್ಲಿ ಬಿಲ್ಲು ಮೊದಲಾದ ಆಯುಧಗಳೂ ನಿನಗೆ ಕೂತುಕೊಳ್ಳಲಿಕ್ಕೆ ಕುದುರೆಯೂ ಯಾಕೆ ಇರುತ್ತವೆ? ಇದಕ್ಕೋಸ್ಕರ ನೀನು ನಿನ್ನ ಮನಸ್ಸಿಗೆ ನಾಚದಿದ್ದರೆ ಜನಕ್ಕಾದರೂ ನಾಚಬಾರದೇ?" ಎಂದು ನುಡಿದರು. ಅದಕ್ಕೆ ರಂಗನಾಥನು—"ಸ್ವಾಮಿ, ನನಗೆ ಜನಲಜ್ಜೆಯೇ ಇಲ್ಲ. ಅಂದಮೇಲೆ ಇನ್ನೇನು?" ಎಂದು ಉತ್ತರ ಕೊಟ್ಟನು. ಆಗ ಸಮರ್ಥರು—"ಅದೂ ಒತ್ತಟ್ಟಿಗಿರಲಿ. ನಿನಗೆ ಈ ಬಿಲ್ಲು ಬತ್ತಳಿಕೆಗಳ ಪ್ರಯೋಜನವಾದರೂ ಗೊತ್ತುಂಟೋ?" ಎಂದು ಕೇಳಿದರು. ಅದಕ್ಕೆ ರಂಗನಾಥನು—"ಸ್ವಾಮಿ, ತಮ್ಮ ಆಶೀರ್ವಾದದಿಂದ ಅವುಗಳ ಪ್ರಯೋಜನವು ತಕ್ಕಮಟ್ಟಿಗೆ ಗೊತ್ತುಂಟು" ಎಂದು ಉತ್ತರ ಕೊಟ್ಟನು. ಆ ಬಳಿಕ ಸಮರ್ಥರು ರಂಗನಾಥನಿಗೆ—"ಹಾಗಾದರೆ ಆಕೋ, ಆಕಾಶದಲ್ಲಿ ಅತ್ತಕಡೆಗೆ ಹಾರಾಡುವ ಹಾಳೇಹದ್ದನ್ನು ನಿನ್ನ ಬಿಲ್ಲಿನ ಒಂದೇ ಹೊಡತದಿಂದ ಹೊಡೆ ನೋಡುವಾ" ಎಂದು ಹೇಳಿದರು. ಅದಕ್ಕೆ ರಂಗನಾಥನು—"ಅಪ್ಪಣೆ" ಎಂದು ಹೇಳಿ ತನ್ನ ಬಿಲ್ಲಿಗೆ ಹೆದೆಯನ್ನೇರಿಸಿ ಗುರಿಯನ್ನು ಹಿಡಿದು ಒಂದೇ ಹೊಡತದಿಂದ

ಆಕಾಶಮಾರ್ಗದಲ್ಲಿ ಸಂಚರಿಸುತ್ತಿದ್ದ ಆ ಪಕ್ಷಿಯನ್ನು ಹೊಡೆದು ಕೊಂದು ಭೂಮಿಯ ಮೇಲೆ ಕೆಡವಿದನು. ಅದನ್ನು ಕಂಡು ಸಮರ್ಥರು—"ಏನಪ್ಪಾ ರಂಗನಾಥಾ! ನಿನ್ನಂಥ ಸಾಧುಪುರುಷನಿಗೆ ನಿರುಪದ್ರವಿ ಪಕ್ಷಿಗಳ ಪ್ರಾಣಹಿಂಸೆಯನ್ನು ಮಾಡುವದು ಧರ್ಮವೋ?" ಎಂದು ಕೇಳಿದರು. ಆಗ ರಂಗನಾಥನು—"ಸ್ವಾಮೀ! ನನ್ನ ಕೈಯಿಂದ ಹಿಂದಕ್ಕೆ ಕೋಣವನ್ನು ಕೊಲ್ಲಿಸಿದವರೂ ಈಗ ಹಾಳೇಹದ್ದನ್ನು ಕೊಲ್ಲಿಸಿದವರೂ ಲೋಕದಲ್ಲಿ ಎಲ್ಲರಿಗಿಂತಲೂ ಧರ್ಮವನ್ನು ಚನ್ನಾಗಿ ಬಲ್ಲರು" ಎಂದನು. ಅದನ್ನು ಕೇಳಿ ಸಮರ್ಥರು ರಂಗನಾಥನಿಗೆ—"ಲೋಕಾಚಾರಕ್ಕೆ ಪಶುಪಕ್ಷ್ಯಾದಿಗಳ ವಧವು ವಿರೋಧವಾದದ್ದು. ಆದ್ದರಿಂದ ಈ ಮೃತ ಪಕ್ಷಿಯನ್ನು ಪುನಃ ಜೀವಂತ ಮಾಡು" ಎಂದು ಹೇಳಿದರು. ಆಗ ರಂಗನಾಥನು—"ಸ್ವಾಮಿ, ತಮ್ಮ ಅಪ್ಪಣೆಯು ನನಗೆ ಶಿರಸಾವಮಾನ್ಯವದೆ" ಎಂದು ಹೇಳಿ ಆ ಹದ್ದಿನ ಬೆನ್ನ ಮೇಲೆ ಕೈಯಾಡಿಸಿ—"ಅವ್ವಾ ಮಗಳೇ, ನೀನು ಇಲ್ಲಿಂದ ಎದ್ದು ಪುನಃ ನಿನ್ನ ಸ್ಥಳಕ್ಕೆ ಹೋಗಬೇಕಾಗಿ ಸಮರ್ಥರ ಅಪ್ಪಣೆಯಾಗಿರುತ್ತದೆ. ಬೇಗ ಏಳು" ಎಂತ ನುಡಿದ ಕೂಡಲೆ ಅದು ಪುನಃ ಜೀವ ತುಂಬಿ ಛಟ್ ಛಟ್ ಎಂದು ರೆಕ್ಕೆಗಳನ್ನು ಒಡೆಯುತ್ತ ಮೇಲಕ್ಕೆ ಆಕಾಶದಲ್ಲಿ ಹಾರಿ ಹೋಯಿತು. ಆ ಮೇಲೆ ರಂಗನಾಥಸ್ವಾಮಿಯು ಸಮರ್ಥರ ಅಪ್ಪಣೆಯ ಮೇರೆಗೆ ತನ್ನ ಬಿಲ್ಲು ಬತ್ತಳಿಕೆಗಳನ್ನು ಮುರಿದು ಚೆಲ್ಲಿಕೊಟ್ಟು ಸಮರ್ಥರನ್ನೊಡಗೊಂಡು ಕರಹಾಡಕ್ಕೆ ಹೋದನು. ಸಮರ್ಥರು ನಿಜಾನಂದಸ್ವಾಮಿಗಳ ಪುಣ್ಯತಿಥಿಯ ಉತ್ಸವವು ಮುಗಿದ ಮೇಲೆ ಕೆಲವು ದಿವಸ ಅಲ್ಲಿ ನಿಂತುಕೊಂಡು ಮರಳಿ ಪರಳಿಗೆ ಹೊರಟು ಬಂದರು.

ಮೌನೀಬಬಾನ ಶಿಷ್ಯರಿಗೆ ಸಮರ್ಥರು ಮಾಡಿತೋರಿಸಿದ ಕೌತುಕವು—ಸಮರ್ಥರ ಕಾಲಕ್ಕೆ ಪಾಟಗಾಂವ ಎಂಬಲ್ಲಿ ಮೌನೀಬುವಾ ಎಂಬೊಬ್ಬ ಸನ್ಯಾಸಿಯು ಇರುತ್ತಿದ್ದನು. ಅವನು ಎಂದೂ ಮಾತಾಡುತ್ತಿದ್ದಿಲ್ಲ. ಅದಕ್ಕಾಗಿ ಅವನ ಹೆಸರು ಮೌನೀಬುವಾ ಎಂದು ಬಿದ್ದಿತು. ಅವನ ಹತ್ತರ ಅನೇಕ ಮಂದಿ ಶಿಷ್ಯರಿದ್ದರು. ಸಮರ್ಥರು ಮಾಡುವ ಚಮತ್ಕಾರಗಳ ಬಗ್ಗೆ ಸಮರ್ಥರ ಕೀರ್ತಿಯನ್ನು ಅವರು ಬಹಳವಾಗಿ ಕೇಳಿದ್ದರಿಂದ ತಾವು ಬೇಗನೆ ಒಮ್ಮೆ ರಾಮದಾಸ ಸ್ವಾಮಿಗಳ ದರ್ಶನಕ್ಕೆ ಹೋಗಬೇಕೆಂಬದಾಗಿ ಅತಿ ಉತ್ಕಂಠಿತರಾಗಿದ್ದರು. ಅವರು ಈ ಬಗ್ಗೆ ಮೌನೀಬುವಾನ ಮುಂದೆ ಒಂದೆರಡು ಸಾರೆ ಪ್ರಸ್ತಾಪ ತೆಗೆದಿದ್ದರು. ಆದರೆ ಅಗ್ಗೆ ಅವನು ಅವರಿಗೆ ಹೋಗಬೇಡೆಂದು ಸಂಜ್ಞೆ ಮಾಡಿ ತಿಳಿಸಿದನು. ಆಗಿನಿಂದಂತೂ ರಾಮದಾಸರನ್ನು ಕಾಣುವ ಅವರ ಉತ್ಕಂಠತೆ ಹೆಚ್ಚಾಯಿತು. ಹೀಗಿರಲು ಒಂದು ಸಾರೆ ಆಷಾಢಶುದ್ಧ ಏಕಾದಶಿಗೆ ಪಂಢರಪುರದಲ್ಲಿ ಆಗುವ ಯಾತ್ರೆಯಗೋಸ್ಕರ ಕೆಲವು ಜನ ಶಿಷ್ಯರು ಬುವಾನ ಅಪ್ಪಣೆಯನ್ನು ಪಡೆದುಕೊಂಡು ಹೊರಟರು. ಈ

ಯಾತ್ರೆಯನ್ನು ಮುಗಿಸಿಕೊಂಡು ತಮ್ಮ ಊರಿಗೆ ತಿರುಗಿ ಹೋಗುವಾಗ್ಗೆ ಅವರೆಲ್ಲರು ಮಾಹುಲಿಯ ಸಂಗಮದ ತೀರದಲ್ಲಿ ಇಳಿದುಕೊಂಡು ಸಂಗಮದೊಳಗೆ ಸ್ನಾನವನ್ನು ತೀರಿಸಿಕೊಂಡು ಅಲ್ಲಿ ನದಿಯ ತೀರಕ್ಕೆ ದಟ್ಟವಾಗಿ ಬೆಳೆದಿದ್ದ ಗಿಡಗಳ ನೆಳಲಿನಲ್ಲಿ ಅಡಗಿಯನ್ನು ಮಾಡಿಕೊಳ್ಳುತ್ತ ಕುಳಿತಿರಲು ಅವರ ಮನಸ್ಸಿನೊಳಗೆ ಒಮ್ಮಿಂದೊಮ್ಮೆ "ನಾವು ಹ್ಯಾಗೂ ಇಲ್ಲಿಯತನಕ ಬಂದಿದ್ದೇವೆ. ಇಲ್ಲಿಗೆ ಸಜ್ಜನಗಡವು ಸಮೀಪವಿರುವದು. ಆದ್ದರಿಂದ ಮಧ್ಯಾಹ್ನಕ್ಕೆ ಹೋಗಿ ರಾಮದಾಸರ ದರ್ಶನ ತೆಗೆದುಕೊಂಡು ಏನಾದರೂ ಚಮತ್ಕಾರಗಳು ದೃಷ್ಟಿಗೆ ಬಿದ್ದರೆ ಅವುಗಳನ್ನು ನೋಡಿಕೊಂಡು ತಿರಿಗಿ ಬಂದರಾಯಿತು. ಬೇಕಾಗಿಯೇ ಇಲ್ಲಿಗೆ ಬರಲಿಕ್ಕೆ ನಮ್ಮ ಮೌನೀಬುವಾನವರು ನಮಗೆ ಅಪ್ಪಣೆ ಕೊಡುವದಿಲ್ಲ." ಎಂಬ ವಿಚಾರಗಳು ಬಂದವು. ಸಮರ್ಥರು ಅಂತಜ್ಞಾನದಿಂದ ಇದನ್ನೆಲ್ಲ ಅರಿತು ತಾವು ಪರಳಿಯೊಳಗೆ ಇದ್ದಾಗ್ಗೆ ಅದೇ ದಿವಸ ಬೆಳಿಗ್ಗೆ ಕಲ್ಯಾಣನ ಮುಂದೆ—"ಕಲ್ಯಾಣಾ! ಈ ಹೊತ್ತು ನಾವು ಸ್ನಾನಕ್ಕಾಗಿ ಮಾಹುಲಿಯ ಸಂಗಮಕ್ಕೆ ಹೋಗೋಣ" ಎಂದು ಹೇಳಿದರು. ಆ ಮೇರೆಗೆ ಕಲ್ಯಾಣನು ಯಾವತ್ತು ಸಿದ್ಧತೆಯನ್ನು ಮಾಡಲಾಗಿ ಸಮರ್ಥರು ಕಲ್ಯಾಣನೊಂದಿಗೆ ಮಾಹುಲಿಗೆ ಬಂದು ತಲ್ಪಿ ಗಂಗೆಯಲ್ಲಿಳಿದು ಸ್ನಾನ ಮಾಡಲಾರಂಭಿಸಿದರು. ಸಮರ್ಥರು ತಮ್ಮ ಸ್ನಾನವು ಇನ್ನೂ ನಡೆದಿರುವಾಗ ನಡುವೇ ಮೈಯೆಲ್ಲಾ ಒದ್ದೆಯಾಗಿರುವಾಗ ಕಲ್ಯಾಣನನ್ನು ಕರೆದು—"ಕಲ್ಯಾಣಾ! ನನಗೆ ಹಸಿವೆ ಬಹಳಾಗಿರುತ್ತದೆ. ಏನಾದರೂ ತಿನ್ನಲಿಕ್ಕೆ ಸಿಕ್ಕೀತೇ?" ಎಂದು ಕೇಳಿದರು. ಆಗ ಕಲ್ಯಾಣನು "ಒಂದಿಷ್ಟು ತಂಗಳವಾದ ಥಾಲೀಪೆಟ್ಟು ಉಂಟು" ಎಂದು ಉತ್ತರ ಕೊಟ್ಟನು. ಅದಕ್ಕೆ ಸಮರ್ಥರು "ಒಳ್ಳೇದು. ಅದನ್ನೇ ತೆಗೆದುಕೊಂಡು ಬಾ" ಎಂದು ಕಲ್ಯಾಣನಿಗೆ ಅಪ್ಪಣೆಯನ್ನು ಮಾಡಿದರು. ಆ ಕೂಡಲೇ ಕಲ್ಯಾಣನು ತನ್ನ ಜೋಳಿಗೆಯೊಳಗಿಂದ ತೆಗೆದುಕೊಂಡು ಸಮರ್ಥರಿಗೆ ಒಯ್ದು ಕೊಟ್ಟನು. ಆಗ ಸಮರ್ಥರು ಆ ಥಾಲೀಪೆಟ್ಟನ್ನು ತಮ್ಮ ಎಡಗೈಯೊಳಗೆ ಹಿಡಿದುಕೊಂಡು ಬಲಗೈಯಿಂದ ಅದನ್ನು ಸ್ವಲ್ಪಸ್ವಲ್ಪೇ ಮುರಿದು ಒಂದೊಂದೇ ತುಕ್ಕು ಬಾಯೊಳಗೆ ಹಾಕಿಕೊಳ್ಳಹತ್ತಿದರು. ಮೌನೀಬುವಾನ ಶಿಷ್ಯರೆಲ್ಲರು ಸಮರ್ಥರ ಸಮೀಪದಲ್ಲಿ ನಿಂತುಕೊಂಡು ಈ ಯಾವತ್ತೂ ಕೃತ್ಯವನ್ನು ನೋಡಿದರು. ಅವರು ತಮ್ಮತಮ್ಮೊಳಗೆ "ಇವನಾರಿರಬಹುದು! ಇವನ ಮಸ್ತಕದಲ್ಲಿ ಜಟಾಭಾರವೂ ಮೈಯಲ್ಲಿ ಭಗವೀ ವಸ್ತ್ರಗಳೂ ಇರುತ್ತಿದ್ದು ಇವನು ಹುಚ್ಚನಂತೆ ನದಿಯಲ್ಲಿ ನಿಂತುಕೊಂಡು ಥಾಲೀಪೆಟ್ಟನ್ನು ತಿನ್ನುತ್ತಲಿದ್ದಾನೆ! ಸ್ನಾನದ ಕಾಲಕ್ಕೆ ಭಗವಂತನ ಧ್ಯಾನ ಮಾಡುವದು ಬಿಟ್ಟು ಹೊಟ್ಟೆಯ ಧ್ಯಾನ ಮಾಡುತ್ತಲಿರುವ ವಿಚಿತ್ರ ಪುರುಷನು ಯಾವನಿರಬಹುದು?" ಎಂದು ಪರಿಹಾಸ್ಯ ಮಾಡುತ್ತ ನಿಂತ

ರು. ಆಗ ಅವರು ಅಕಸ್ಮಾತ್ತಾಗಿ ತಮ್ಮ ನೆರೆಯಲ್ಲಿ ನಿಂತುಕೊಂಡಿದ್ದ ಒಬ್ಬ ಮನುಷ್ಯನಿಗೆ “ಇವನಾರು?” ಎಂದು ವಿಚಾರಿಸಿದರು. ಅದಕ್ಕೆ ಆ ಮನುಷ್ಯನು “ಇವರು ಸಮರ್ಥ ರಾಮದಾಸ ಸ್ವಾಮಿಗಳು” ಎಂದು ಹೇಳಿದನು. ಆಗ ಪೌರಾಣಿಕ ಬುವಾನ ಶಿಷ್ಯರೆಲ್ಲರು “ವ್ಹಾ! ಇವರು ಬಹಳ ಸರಸಾದ ಮಹಂತರು!” ಎಂದು ನುಡಿದು ಕೊಳ್ಳನೆ ನಕ್ಕರು.

ಇಷ್ಟರಲ್ಲಿ ಅಲ್ಲೊಂದು ಚಮತ್ಕಾರವು ಸಂಭವಿಸಿತು. ಅದರ ವಿವರವೇನೆಂದರೆ:—ಆ ಊರಲ್ಲಿ ಒಬ್ಬ ಬಡ ಬ್ರಾಹ್ಮಣನು ಒಂದು ಉತ್ತಮವಾದ ಆಕಳವನ್ನು ಸಾಕಿದ್ದನು. ಅದು ಪ್ರತಿದಿನವು ಮಿತಿಗೆಟ್ಟು ಹಾಲು ಕರೆಯುತ್ತಿತ್ತು. ಆದರೆ ಅದು ಬಹಳ ಇರಕಳವಿತ್ತು. ಅದನ್ನು ಕಟ್ಟಬೇಕಾದರೆ ಒಂದು ಹುಲಿಯನ್ನು ಕಟ್ಟಿದಂತೆ ಆಗುತ್ತಿತ್ತು. ಅದು ಆ ಬ್ರಾಹ್ಮಣನ ಹೊರತಾಗಿ ಯಾರಿಗೂ ಹಿಡಿಯಗೊಡುತ್ತಿದ್ದಿಲ್ಲ. ಆ ಬ್ರಾಹ್ಮಣನ ಹೆಂಡತಿ ಅಥವಾ ಹುಡುಗರು ಅದರ ಮುಂದೆ ಹೋಗಿ ಅದನ್ನು ಹಿಡಿಯಹತ್ತಿದರೆ ಮುಸ್ಸೆಂದು ತನ್ನ ಚೂಪಾದ ಕೋಡುಗಳಿಂದ ಅವರನ್ನು ಇರಿಯಲಿಕ್ಕೆ ಹೋಗುತ್ತಿತ್ತು. ಇಂಥ ಆಕಳವನ್ನು ತನ್ನ ಹೆಂಡತಿಯ ಕಾಳಜಿಗೆ ಒಪ್ಪಿಸಿ ಆ ಬ್ರಾಹ್ಮಣನು ತನ್ನ ಕೆಲಸದ ನಿಮಿತ್ತವಾಗಿ ಬೇರೆ ಊರಿಗೆ ಹೋಗಬೇಕಾಯಿತು. ಅವನು ಆ ಆಕಳದ ಮೇಲೆ ಬಹಳ ಪ್ರೀತಿಯನ್ನು ಮಾಡುತ್ತಿದ್ದದರಿಂದ ತಾನು ಊರಿಗೆ ಹೋಗುವಾಗ್ಗೆ ತನ್ನ ಹೆಂಡತಿಯನ್ನುದ್ದೇಶಿಸಿ—“ನಾನು ಒಂದೆರಡು ದಿವಸಗಳಲ್ಲಿ ತಿರಿಗಿ ಬರುತ್ತೇನೆ. ನಾನು ಬರುವವರೆಗೆ ಆಕಳವನ್ನು ಬಿಚ್ಚಿ ಹೊರಗೆ ಹೊಡೆಯಬೇಡ. ಅದು ನಾನು ಬರುವವರೆಗೂ ಗೋದನಿಯಲ್ಲಿಯೇ ಕಟ್ಟಿರಲಿ” ಎಂದು ಹೇಳಿ ಊರಿಗೆ ಹೊರಟುಹೋದನು. ಅಲ್ಲಿ ಅವನಿಗೆ ಅಕಸ್ಮಾತ್ತಾಗಿ ಎರಡನೇ ತೊಂದರೆಗಳು ಉಂಟಾದ್ದರಿಂದ ನಾಲ್ಕಾರು ದಿವಸ ಆ ಬ್ರಾಹ್ಮಣನು ಪರ ಊರಲ್ಲಿಯೇ ಉಳಿಯಬೇಕಾಯಿತು. ಆಗ ಆ ಬ್ರಾಹ್ಮಣನ ಹೆಂಡತಿಯು “ಬಹಳ ದಿವಸಗಳ ವರೆಗೆ ಆಕಳವನ್ನು ಕಟ್ಟಿದಲ್ಲಿಯೇ ಬಿಟ್ಟರೆ ದನವು ಕೆಟ್ಟುಹೋದೀತು. ಹ್ಯಾಗಾದರೂ ಮಾಡಿ ಎರಡನೇ ಗಂಡಸರ ಸಹಾಯದಿಂದ ಅದನ್ನು ಬಿಚ್ಚಿಸಿ ಹೊರಗೆ ಹೊಡೆದುಕೊಂಡುಹೋಗಿ ತುಸು ದೂರ ಅಡ್ಡಾಡಿಸಿಕೊಂಡು ಬಂದರೆ ಆಕಳ ಕಾಲು ಸೈಲಾದಾವು” ಎಂದು ನೆನಿಸಿ ನೆರೆಮನೆಯ ಒಬ್ಬಿಬ್ಬ ಗಂಡಸರನ್ನು ಕರೆದು ಅವರ ಕೈಯಿಂದಲೇ ಆ ಆಕಳವನ್ನು ಕಟ್ಟಿದ ಗೂಟದಿಂದ ಹಗ್ಗ ಸಹಿತವಾಗಿ ಬಿಚ್ಚಿಸಿ ಹೊರಗೆ ತಂದು ತನ್ನ ಒಂದು ಕೈಯಲ್ಲಿ ಕೋಲನ್ನೂ ಇನ್ನೊಂದು ಕೈಯಲ್ಲಿ ಆಕಳಕ್ಕೆ ಕಟ್ಟಿದ ಹಗ್ಗವನ್ನೂ ಹಿಡಿದು ಅದರ ಬೆನ್ನು ಹತ್ತಿದಳು. ಆ ಆಕಳವು ಈ ಪ್ರಕಾರ ತುಸು ದೂರ ಹೋದ ತರುವಾಯ ತನ್ನ ಹಗ್ಗ ಸಹಿತವಾಗಿ ಆ ಬ್ರಾಹ್ಮಣನ ಹೆಂಡತಿಯ ಕೈಯಿಂದ ಕೊಸರಿಕೊಂಡು ಹೋಯಿತು. ಆ ಬಡ ಹೆಂಗಸು

ಎಷ್ಟು ಪ್ರಯತ್ನ ಮಾಡಿದಾಗ್ಯೂ ಅದು ಆಕೆಯ ಕೈಗೆ ಸಿಕ್ಕಲಿಲ್ಲ. ಆಕಳವು ಮುಂದಮುಂದಕ್ಕೆ ಓಡುತ್ತಲೂ ಆಕೆಯು ಅದರ ಹಿಂದೆ ಹಿಂದೆ ಓಡುತ್ತಲೂ ಗ್ರಾಮ ಪ್ರದಕ್ಷಿಣವು ಮುಗಿದನಂತರ ಆ ಆಕಳವು ನದಿಯ ತೀರಕ್ಕೆ ಬಂತು. ಅಲ್ಲಿ ಆ ಹೆಂಗಸು ಆಕಳದ ಮುಂದೆ ಬರುತ್ತಿದ್ದ ಕೆಲವು ಗಂಡಸರನ್ನು ಒದರಿ "ಅಪ್ಪಗಳಿರಾ! ನನ್ನ ಆಕಳ ಹಿಡಿಯಿರಿ, ಅದಕ್ಕೆ ಮುಂದೆ ಹೋಗಗೊಡಬೇಡಿರಿ" ಎಂದು ಆರ್ತಸ್ವರದಿಂದ ಹೇಳಿಕೊಂಡಳು. ಆಗ ಅವರು ಆ ಆಕಳವನ್ನು ಅಡ್ಡಗಟ್ಟಲಿಕ್ಕೆ ಪ್ರಯತ್ನ ಮಾಡಲು ಅದು ಅವರ ಕೈಯಿಂದ ತಪ್ಪಿಸಿಕೊಂಡು ಹೋಗುವದಕ್ಕಾಗಿ ಒಂದು ದೊಡ್ಡ ಕಲ್ಲಿನ ಹಾಸಿಗೆಯ ಮೇಲೆ ಹತ್ತಿ ಅಲ್ಲಿಂದ ಕೆಳಗೆ ಹಾರಿಕೊಂಡಿತು. ಆ ಹೆಂಗಸು ಅದನ್ನು ಕಂಡು ಲಗುಬಗೆಯಿಂದ ಆಕಳದ ಸಮೀಪಕ್ಕೆ ಹೋಗಿ ನೋಡಲಾಗಿ ಆಕಳದ ಪ್ರಾಣವು ಹೋಗಿತ್ತು! "ಅಯ್ಯೋ! ನನ್ನ ಆಕಳವು ಸತ್ತಿತಲ್ಲಾ! ಇನ್ನೇನು ಗತಿ? ನಮ್ಮ ಭಟ್ಟರು ಊರಿಗೆ ಬಂದನಂತರ ಅವರಿಗೆ ಏನೆಂದು ಹೇಳಲಿ? ಅವರಿಗೆ ಆಕಳವನ್ನು ಎಲ್ಲಿಂದ ತಿರುಗಿ ಕೊಡಲಿ? ಆಕಳವನ್ನು ಬಿಚ್ಚಿ ಹೊರಗೆ ಒಯ್ಯಬೇಡೆಂದು ನನಗೆ ಅಪ್ಪಣೆಯನ್ನು ಮಾಡಿದ್ದರು. ಆ ಅಪ್ಪಣೆಯನ್ನು ಮೀರಿ ನಾನು ಅವರ ಪ್ರೀತ್ಯಾಸ್ಪದವಾದ ಆಕಳವನ್ನು ಕೊಂದದ್ದಕ್ಕಾಗಿ ಅವರು ನನಗೆ ಸುಚ್ಛನುರಿ ಮಾಡದೆ ಬಿಡರು. ಶಿವಶಿವಾ! ಏನು ಮಾಡಲಿ?" ಎಂದು ಆಕಳದ ಹತ್ತರ ಕುಳಿತು ದೊಡ್ಡ ಧ್ವನಿಯಿಂದ ಅಳಹತ್ತಿದಳು. ಸಮರ್ಥರೂ ಕಲ್ಯಾಣನೂ ಮಾನೀಬುವಾನ ಶಿಷ್ಯರೂ ಈ ಎಲ್ಲ ಸಂಗತಿಗಳನ್ನು ದೂರಿಂದಲೇ ನೋಡುತ್ತಲಿದ್ದರು. ಸಮರ್ಥರು ಇನ್ನೂ ತಮ್ಮ ಥಾಲೀಪಿಟ್ಟು ತಿನ್ನುವದನ್ನು ನಡಿಸಿದ್ದರು. ಇಷ್ಟರಲ್ಲಿ ಅವರ ಥಾಲೀಪಿಟ್ಟು ತಿನ್ನುವದು ಮುಗಿಯಿತು. ಒಣ ಥಾಲೀಪಿಟ್ಟು, ತುಪ್ಪ ಅಥವಾ ಮೊಸರು ಇಲ್ಲದೆ, ತಿಂದದ್ದರಿಂದ ಸಮರ್ಥರಿಗೆ ಬಿಕ್ಕು ಹತ್ತಿತು. ಆಗ ಸಮರ್ಥರು ಕಲ್ಯಾಣನನ್ನು ಕರೆದು—"ಕಲ್ಯಾಣಾ, ನಾನು ಒಣ ಥಾಲಿಪಿಟ್ಟು ತಿಂದದ್ದರಿಂದ ಬಿಕ್ಕು ಹತ್ತಿತು. ಆದ್ದರಿಂದ ಅಲ್ಲಿ ಎದುರಿಗೆ ಬಿದ್ದುಕೊಂಡಿರುವ ಆಕಳದ ಹಾಲು ಹಿಂಡಿಕೊಂಡು ಬಾ. ಹಾಲು ಕುಡಿದು ನನ್ನ ಬಿಕ್ಕು ಶಾಂತ ಮಾಡಿಕೊಳ್ಳುವೆನು" ಎಂದು ನುಡಿದರು. ಈ ಅಪ್ಪಣೆಯನ್ನು ಕೇಳಿ ಕಲ್ಯಾಣನು ಕೈಯಲ್ಲಿ ಒಂದು ಪಾತ್ರೆಯನ್ನು ತೆಗೆದುಕೊಂಡು ಆ ಆಕಳದ ಹತ್ತರ ಹೋಗಿ "ಅಮ್ಮಾ ಗೋಪತಾಯೀ! ನಮ್ಮ ಸ್ವಾಮಿಗಳಿಗೆ ಒಣ ಥಾಲಿಪಿಟ್ಟಿನಿಂದ ಬಿಕ್ಕು ಹತ್ತಿರುತ್ತದೆ. ಆದ್ದರಿಂದ ಅವರು ನಿನ್ನ ಹಾಲು ಬೇಡಿರುತ್ತಾರೆ. ಆದ್ದರಿಂದ ಬೇಗನೆ ಎದ್ದು ನಿನ್ನ ಹಾಲು ಕೊಡು!" ಎಂದು ಕೇಳಿದನು. ಇದನ್ನು ಕಂಡು ಆ ಆಕಳದ ಸ್ವಾಮಿನಿಯು ಅಳುವದನ್ನು ಬಿಟ್ಟು ನಗಹತ್ತಿದಳು. ಆಗ ಕಲ್ಯಾಣನು ಅವಳಿಗೆ—"ತಾಯಿ! ನನ್ನ ಮಾತಿಗೆ ನೀನು ಯಾಕೆ ನಗುತ್ತೀ?" ಎಂದು

ಕೇಳಿದನು. ಅದಕ್ಕೆ ಆ ಆಕಳದ ಯಜಮಾನತಿಯು—“ಅಪ್ಪಾ! ನಾನು ನನ್ನ ಆಕಳವು ಸತ್ತಿತೆಂದು ಅಳುತ್ತ ಕುಳಿತಿರುತ್ತೇನೆ. ಹೀಗಿರಲು ನೀನು ಆಕಳದ ಹಾಲು ಹಿಂಡಿಕೊಳ್ಳಲಿಕ್ಕೆ ಬಂದಿರುತ್ತೀ! ಅಂದವೇಳೆ ನಗದೆ ಇನ್ನೇನು ಮಾಡಲಿ!” ಎಂದಳು. ಆಗ ಕಲ್ಯಾಣನು ಅವಳಿಗೆ—“ತಾಯಿ! ನೀನು ಬೇಕಾದಷ್ಟು ನಗು. ನನಗೆ ನನ್ನ ಸ್ವಾಮಿಯ ಆಜ್ಞೆಯೇ ಪ್ರಮಾಣವು. ಅದರಂತೆ ನಾನು ಮಾಡತಕ್ಕವನೇ.” ಎಂದು ಹೇಳಿ ಆ ಗೋವನ್ನುದ್ದೇಶಿಸಿ—“ಅಕ್ಕಾ! ಬೇಗನೇ ಏಳು. ಸ್ವಾಮಿಗಳಿಗೆ ತಡವಾಗುವದು” ಎಂದು ನುಡಿದನು. ಅದನ್ನು ಕೇಳಿ ಆ ಆಕಳವು ಚಟಕ್ಕನೆ ಎದ್ದು ನಿಂತಿತು. ಆಗ ಕಲ್ಯಾಣನು ತನ್ನ ಪಾತ್ರೆಯ ತುಂಬ ಹಾಲನ್ನು ತೆಗೆದುಕೊಂಡು ಸ್ವಾಮಿಗಳ ಕಡೆಗೆ ಹೋಗುವದಕ್ಕೆ ಹೊರಟನು. ಆ ಆಕಳವು ಸಹ ಅವನ ಬೆನ್ನು ಹತ್ತಿತು. ಕಲ್ಯಾಣನು ಆ ಹಾಲು ಒಯ್ದು ಸಮರ್ಥರಿಗೆ ಕೊಟ್ಟನು. ಆಗ ಸಮರ್ಥರು ಆ ಹಾಲು ಕುಡಿದರು. ಅದರಿಂದ ಅವರ ಬಿಕ್ಕು ನಿಂತುಹೋಯಿತು. ಇಷ್ಟರಲ್ಲಿ ಆಕಳದ ಸ್ವಾಮಿನಿಯು ಸಮರ್ಥರೆಡೆಗೆ ಬಂದು ಅವರ ಪಾದಗಳನ್ನು ಗಟ್ಟಿಯಾಗಿ ಹಿಡಿದು, ಅವರನ್ನು ಬಹಳವಾಗಿ ಕೊಂಡಾಡಿ “ಸ್ವಾಮಿ ಹ್ಯಾಗಾದರೂ ಮಾಡಿ ಈ ಆಕಳವನ್ನು ನನ್ನ ಮನೆಯತನಕ ತಂದು ಕಟ್ಟಿಕೊಟ್ಟು ಹೋಗಲಿಕ್ಕೆ ನಿಮ್ಮ ಶಿಷ್ಯರಿಗೆ ಅಪ್ಪಣೆಯನ್ನು ಮಾಡಬೇಕು” ಎಂದು ಹೇಳಿಕೊಂಡಳು. ಆಗ ಸಮರ್ಥರು ಆಕಳದ ಸಮೀಪಕ್ಕೆ ಹೋಗಿ ಅದರ ಬೆನ್ನಮೇಲೆ ಕೈಯಾಡಿಸಿ—“ತಂಗೀ, ಹಟವನ್ನು ಬಿಟ್ಟುಬಿಡು. ನಿನ್ನ ಸ್ವಾಮಿಯು ಬ್ರಾಹ್ಮಣನಿರುತ್ತಾನೆ. ಸಭ್ಯಳಾಗಿ ಸುಮ್ಮನೇ ನಿನ್ನ ಮನೆಗೆ ಹೊರಟುಹೋಗು” ಎಂದು ಅದಕ್ಕೆ ಅಪ್ಪಣೆ ಮಾಡಿದರು. ಆ ಕೂಡಲೇ ಆಕಳವು ಆ ಬ್ರಾಹ್ಮಣ ಸ್ತ್ರೀಯ ಬೆನ್ನು ಹತ್ತಿ ತನ್ನ ಮನೆಗೆ ಹೊರಟುಹೋಯಿತು. ಈ ಯಾವತ್ತು ಲೀಲೆಯನ್ನು ಮೌನೀಬುವಾನ ಶಿಷ್ಯರು ಆದಿಯಿಂದ ಅಂತ್ಯದವರೆಗೆ ಈಕ್ಷಿಸಿ ತಾವು ಸಮರ್ಥರನ್ನುದ್ದೇಶಿಸಿ ಮಾಡಿದ ಪರಿಹಾಸ್ಯಕ್ಕಾಗಿ ಪಶ್ಚಾತ್ತಾಪಪಟ್ಟು ಸಮರ್ಥರಲ್ಲಿ ಭಕ್ತಿಯುಳ್ಳವರಾಗಿ ಸಮರ್ಥರ ಚರಣಗಳನ್ನು ಗಟ್ಟಿಯಾಗಿ ಹಿಡಿದರು. ಅವರನ್ನು ನೋಡಿ ಸಮರ್ಥರು ನಕ್ಕು—“ನಾವು ಯಾವ ಚಮತ್ಕಾರಗಳನ್ನು ಮಾಡಬಲ್ಲೆವು? ನಾವು ಹೀಗೇ ಹುಚ್ಚರಾಗಿ ಅಡ್ಡಾಡುತ್ತಿರುವದು ನಿಮಗೂ ನಿಮ್ಮ ಮೌನೀಬುವಾನಿಗೂ ಕೂಡಿಯೇ ಗೊತ್ತುಂಟು” ಎಂದು ಹೇಳಿದರು. ಆಗ ಮೌನೀಬುವಾನ ಶಿಷ್ಯರು ತಮ್ಮ ಅಪರಾಧವನ್ನು ಕ್ಷಮಿಸಬೇಕೆಂದು ಸಮರ್ಥರಿಗೆ ಬಹಳ ಪ್ರಕಾರವಾಗಿ ಹೇಳಿಕೊಂಡರು. ಆಮೇಲೆ ಸಮರ್ಥರು ಅವರನ್ನು ಸಮಾಧಾನ ಮಾಡಿ ಮೇಲಕ್ಕೆ ಎಬ್ಬಿಸಿ ತಮ್ಮ ಸಂಗಡ ಪರಳಿಗೆ ಬಂದು ನಾಲ್ಕು ದಿವಸ ಇದ್ದುಕೊಂಡು ಹೋಗಲಿಕ್ಕೆ ಹೇಳಿದರು. ಆಗ ಅವರೆಲ್ಲರು—“ಇಲ್ಲಿ ಪಾಕವು ಸಿದ್ಧವಾಗಿದೆ, ಆದ್ದರಿಂದ ತಾವು

ಕೃಪೆಯನ್ನಿಟ್ಟು ಈ ಮಧ್ಯಾಹ್ನದ ನೈವೇದ್ಯವನ್ನು ಇಲ್ಲಿಯೇ ಮುಗಿಸಿಕೊಂಡು ಹೋಗಬೇಕು" ಎಂದು ಸಮರ್ಥರಿಗೆ ವಿನಂತಿಯನ್ನು ಮಾಡಿದರು. ಅದಕ್ಕೆ ಸಮರ್ಥರು ಒಪ್ಪಿ ಸ್ನಾನವನ್ನು ಮಾಡಿ ಅಲ್ಲಿಯೇ ಭೋಜನವನ್ನು ತೀರಿಸಿಕೊಂಡು ಕೆಲವು ವೇಳೆಯ ನಂತರ ತಾವೂ ಕಲ್ಯಾಣನೂ ಮೌನೀಬುವಾನ ಯಾವತ್ತು ಶಿಷ್ಯರೂ ಕೂಡಿಕೊಂಡು ಪರಳಿಗೆ ಹೊರಟು ಹೋದರು. ಅಲ್ಲಿ ೩-೪ ದಿವಸಗಳ ಪರಿಯಂತರ ಸಮರ್ಥರು ಮೌನೀಬುವಾನ ಶಿಷ್ಯರಿಗೆ ಬಹುಪರಿಯಿಂದ ಉಪಚರಿಸಿ ತಮ್ಮ ಹತ್ತರ ಇಟ್ಟುಕೊಂಡು ಆ ನಂತರ ಅವರಿಗೆ ಸನ್ಮಾನ ಪೂರ್ವಕವಾದ ನಿರೋಪವನ್ನು ಕೊಟ್ಟು "ಮೌನೀಬುವಾನಿಗೆ ನಮ್ಮ 'ನಾರಾಯಣ'ವನ್ನು ತಿಳುಹಿಸಬೇಕು" ಎಂದು ಹೇಳಿದರು ಆ ಮೇರೆಗೆ ಶಿಷ್ಯರು ಪಾಲ್‌ಗಾವಕ್ಕೆ ಹೋದಬಳಿಕ ಸರ್ವ ವೃತ್ತಾಂತವನ್ನು ಮೌನೀಬುವಾನಿಗೆ ತಿಳುಹಿಸಿದರು. ಅದನ್ನು ಕೇಳಿ ಮೌನೀಬುವಾನು ತನ್ನ ಹೊಟ್ಟೆ ಕಟ್ಟಿ ಹಿಡಿಯುವಂತೆ ನಕ್ಕನು!

ಜಯರಾಮಸ್ವಾಮಿಯನ್ನು ಮುಳುಗಿಸಿದ್ದು:— ಒಂದುಸಾರೆ ಸಮರ್ಥರು ಜಯರಾಮಸ್ವಾಮಿಯ ಭೇಟಿಯಗೋಸ್ಕರ ಹೋಗಿ ವಡಗಾಂವದಲ್ಲಿ ಕೆಲವು ದಿವಸಗಳ ಮಟ್ಟಿಗೆ ಇದ್ದರು ಆಗ್ಗೆ ಒಂದು ದಿನ ಸಮರ್ಥರೂ ಜಯರಾಮಸ್ವಾಮಿಯೂ ಸ್ನಾನಕ್ಕಾಗಿ ನದಿಗೆ ಹೋಗುತ್ತಿರಲು ಮಾರ್ಗದಲ್ಲಿ ಒಬ್ಬ ಬ್ರಾಹ್ಮಣನ ತರುಣಮಗನು ಮರಣಪಟ್ಟದ್ದರಿಂದ ಅವನ ತರುಣ ಹೆಂಡತಿಯೂ ವೃದ್ಧ ತಾಯಿ ತಂದೆಗಳೂ ಆಪ್ತರಿಷ್ಟರೂ ಅತ್ಯಂತ ಶೋಕ ಮಾಡುತ್ತಿರುವದನ್ನು ನೋಡಿ ಜಯರಾಮ ಸ್ವಾಮಿಗೆ ಬಹಳ ಕನಿಕರಹುಟ್ಟಿತು. ಆಗ ಜಯರಾಮಸ್ವಾಮಿಯು ಅವರಿಗೆ—"ನೀವು ಹುಚ್ಚರಂತೆ ಯಾಕೆ ಅಳುತ್ತಲಿದ್ದೀರಿ? ನಿಮ್ಮ ಹುಡುಗನು ಜೀವದಿಂದಿದ್ದಾನೆ" ಎಂದು ಹೇಳಿ ಆ ಪ್ರೇತದ ಮೇಲೆ ತನ್ನ ಕೈಯಾಡಿಸಿದನು. ಆದರಿಂದ ಆ ಹುಡುಗನು ಕೂಡಲೇ ನಿದ್ರೆಯಿಂದೆಚ್ಚತ್ತವನಂತೆ "ರಾಮರಾಮ" ಅನ್ನುತ್ತ ಎದ್ದು ಕುಳಿತನು. ಇದರಿಂದ ಆ ಹುಡುಗನ [illegible] ತಾಯಿತಂದೆಗಳಿಗೂ ಆಪ್ತರಿಷ್ಟರಿಗೂ ಅತ್ಯಂತ ಸಂತೋಷವಾಗಿ ಅವರು ಜಯರಾಮಸ್ವಾಮಿಯನ್ನು ಬಹಳ ಕೊಂಡಾಡಿದರು. ಜಯರಾಮಸ್ವಾಮಿಯ ಈ ಕೃತಿಯು ಸಮರ್ಥರ ಮನಸ್ಸಿಗೆ ಬರಲಿಲ್ಲ. ಆದರೂ ಆ ಸಮಯದಲ್ಲಿ ಜಯರಾಮಸ್ವಾಮಿಗೆ ಏನೂ ಅನ್ನಲಿಲ್ಲ. ಮುಂದೆ ಎರಡನೇ ದಿವಸ ಅದೇ ಪ್ರಕಾರಕ್ಕೆ ಅವರೀರ್ವರೂ ನದಿಯ ಸ್ನಾನಕ್ಕಾಗಿ ಹೋಗುತ್ತಿರಲು ದಾರಿಯಲ್ಲಿ ಒಂದು ವಾಪಿ (ಭಾವಿ) ಯನ್ನು ಕಂಡು ಸಮರ್ಥರು ಜಯರಾಮಸ್ವಾಮಿಗೆ—"ಜಯರಾಮಾ! ಈ ಹೊತ್ತು ಇಲ್ಲಿಯೇ ಸ್ನಾನವನ್ನು ತೀರಿಸಿಕೊಳ್ಳುವಾ. ನದಿಯಕಿಂತಲು ಇದೇ ಪ್ರಶಸ್ತಸ್ಥಾನವಾಗಿದೆ" ಎಂದು ಹೇಳಿದರು. ಅದಕ್ಕೆ ಜಯರಾಮಸ್ವಾಮಿಯು—"ನನಗೆ ಈಸಲಿಕ್ಕೆ ಬರುವದಿಲ್ಲ. ಈ ಭಾ

ವಿಯು ಬಹಳ ಆಳವಿರುವಂತೆ ತೋರುತ್ತದೆ" ಎಂದು ಉತ್ತರಕೊಟ್ಟನು. ಇದನ್ನು ಕೇಳಿ ಸಮರ್ಥರು ಜಯರಾಮಸ್ವಾಮಿಗೆ—"ಜಯರಾಮಾ! ನಿನಗೆ ಈಸಲಿಕ್ಕೆ ಬರದಿದ್ದರೆ ಚಿಂತಿಲ್ಲ. ನಾನು ನಿನ್ನ ಹತ್ತರ ಇರಲಾಗಿ ನೀನ್ಯಾಕೆ ಹೆದರುತ್ತೀ? ನಿಸ್ಸಂದೇಹದಿಂದ ಇದರಲ್ಲಿ ಹಾರಿಕೋ" ಎಂದು ಅಪ್ಪಣೆ ಮಾಡಿದರು. ಆಗ ಜಯರಾಮಸ್ವಾಮಿಯು ಸಮರ್ಥರ ಅಪ್ಪಣೆಯಂತೆ ಆ ಭಾವಿಯಲ್ಲಿ ಹಾರಿಕೊಂಡನು. ಆ ಬಳಿಕ ಸಮರ್ಥರು ಅಲ್ಲಿ ಒಂದುಕ್ಷಣ ಸಹ ನಿಂತುಕೊಳ್ಳದೆ ಚಾಫಳದ ದಾರಿಯನ್ನು ಹಿಡಿದು ಚಾಫಳಕ್ಕೆ ಹೊರಟು ಹೋದರು. ಇಷ್ಟರಲ್ಲಿ ವಡಗಾಂವದ ಶಿಷ್ಯರೆಲ್ಲರು ಮಠದಲ್ಲಿ ಅಡಿಗೆಯನ್ನು ಸಿದ್ಧಮಾಡಿ ಒಹಳೊತ್ತಿನ ದಾರೀ ನೋಡುತ್ತ ಕುಳಿತು ತಾವೇ ಸಾಯಂಕಾಲದ ಕಡೆಗೆ ನದಿಯ ಕಡೆಗೆ ಹೋಗಿ ನೋಡಿದರು. ಅಲ್ಲಿ ಸಮರ್ಥರೂ ಇದ್ದಿಲ್ಲ. ಜಯರಾಮಸ್ವಾಮಿಯೂ ಇದ್ದಿಲ್ಲ. ಆಗ ಅವರು ಗಾಬರಿಗೊಂಡು "ಸಮರ್ಥರೂ ಜಯರಾಮಸ್ವಾಮಿಗಳೂ ಎಲ್ಲಿ ಹೋಗಿರಬಹುದು?" ಎಂದು ವ್ಯಸನಪಡುತ್ತ ಮತ್ತು ನಾಲ್ಕು ಕಡೆಗೆ ಶೋಧಿಸುತ್ತ ಸಮರ್ಥರಿದ್ದೆಡೆಗೆ ಚಾಫಳದ ಮಠಕ್ಕೆ ಹೋದರು. ಅಲ್ಲಿ ಸಮರ್ಥರೊಬ್ಬರೇ ಕುಳಿತಿದ್ದರು. ಜಯರಾಮಸ್ವಾಮಿಗಳ ಸಲ್ಲು ಎಲ್ಲಿಯೂ ಕೇಳಿಬರಲಿಲ್ಲ. ಆಗ ಆ ಶಿಷ್ಯರೆಲ್ಲರು ಅತ್ಯಂತಭಯಾಭೀತರಾಗಿ ಸಮರ್ಥರಿಗೆ ಸಾಷ್ಟಾಂಗವೆರಗಿ "ಮಹಾಸ್ವಾಮಿ, ನಮ್ಮ ಸ್ವಾಮಿಗಳು ಎಲ್ಲಿರುವರು?" ಎಂದು ವಿಚಾರಿಸಿದರು. ಇದನ್ನು ಕೇಳಿ ಸಮರ್ಥರು ಕ್ರೋಧಯುಕ್ತ ಮುದ್ರೆಯನ್ನು ತೋರ್ಪಡಿಸಿ—"ನಿಮ್ಮ ಸ್ವಾಮಿಗಳು ಎಲ್ಲಿದ್ದಾರೆಂಬುವದು ನಮಗೇನು ಗೊತ್ತು?" ಎಂದು ನುಡಿದರು. ಆಗ ಆ ಶಿಷ್ಯರು ಕಂಬನಿಗಳನ್ನು ಸುರಿಸುತ್ತ ಸಮರ್ಥರಿಗೆ—"ಬುದ್ಧೀ! ತಾವೂ ಅವರೂ ಕೂಡಿ ನದಿಯ ಸ್ನಾನಕ್ಕಾಗಿ ಹೊರಟುಹೋದಾಗ್ಯೂ ತಾವೊಬ್ಬರೇ ಬಂದು ಕುಳಿತಿದ್ದೀರಿ. ನಾವು ಎಷ್ಟು ಹುಡುಕಿದಾಗ್ಯೂ ನಮಗೆ ನಮ್ಮ ಸ್ವಾಮಿಗಳು ದೊರಿಯಲೊಲ್ಲರು. ತಮ್ಮನ್ನು ನಾವು ವಿಚಾರಿಸಿದರೆ ತಾವಂತೂ ನಮ್ಮ ಮೇಲೆ ಸಿಟ್ಟಿಗೇಳುತ್ತೀರಿ. ಅಂದ ಮೇಲೆ ಈ ದೀನ ದಾಸರು ಯಾರಿಗೆ ಶರಣು ಹೋಗುವದು?" ಎಂದು ಬಹಳ ನಮ್ರತೆಯಿಂದ ಪುನಃ ವಿಚಾರಿಸಿದರು. ಆಗ ಸಮರ್ಥರಿಗೆ ಆ ಶಿಷ್ಯರ ಬಗ್ಗೆ ದಯವು ಹುಟ್ಟಿ, ಅವರು ಆ ಶಿಷ್ಯರನ್ನು ಕೂಡಿಕೊಂಡು ವಡಗಾಂವದ ಭಾವಿಗೆ ಬಂದು ತಾವು ಆ ಭಾವಿಯ ಧಡದ ಮೇಲೆ ನಿಂತು "ಜಯರಾಮಾ! ಹೊರಗೆ ಬಾ" ಎಂದು ಒದರಿದರು. ಆಗ ಜಯರಾಮಸ್ವಾಮಿಯು "ಓ" ಎಂದು ಉತ್ತರ ಕೊಟ್ಟು "ನನ್ನನ್ನು ಮೇಲಕ್ಕೆತ್ತಿಕೊಳ್ಳಬೇಕು" ಎಂದು ಹೇಳಿದನು. ಆಗ ಜಯರಾಮಸ್ವಾಮಿಯ ಶಿಷ್ಯರೆಲ್ಲರು ತಮ್ಮ ಸ್ವಾಮಿಯನ್ನು ಬಹಳ ಪ್ರಯಾಸದಿಂದ ಮೇಲಕ್ಕೆತ್ತಿ ತೆಗೆದುಕೊಂಡರು. ಆ ಬಳಿಕ ಜಯರಾಮಸ್ವಾಮಿಯು ಸಮರ್ಥರ ಪಾದಗಳ ಮೇಲೆ

ಮಸ್ತಕವನ್ನಿಟ್ಟು "ಇಷ್ಟೊಂದು ಶಿಕ್ಷೆಯನ್ನು ನನಗೆ ಯಾವ ಅಪರಾಧದಗೋಸ್ಕರ ಮಾಡಿದಿರಿ?" ಎಂದು ಕೇಳಿದನು. ಅದಕ್ಕೆ ಸಮರ್ಥರು— "ಎಲೋ! ನೀನು ಮೊನ್ನೆ ಆ ಬ್ರಾಹ್ಮಣ ಹುಡುಗನನ್ನು ಸಜೀವ ಮಾಡಿದಂತೆ ಎಲ್ಲರನ್ನು ಮಾಡುತ್ತಾ ಹೋದಲ್ಲಿ ಜಗತ್ತಿನಲ್ಲಿ ಯಮಧರ್ಮನ ಕರ್ತವ್ಯಕ್ಕೆ ವಿಘ್ನವನ್ನು ತಂದಂತೆ ಆದೀತು. ಸೃಷ್ಟಿನಿಯಮದಂತೆ ಜನನಮರಣಗಳು ಸರ್ವದಾ ಆಗುತ್ತಿರುವವು. ಅದನ್ನು ನೀನು ಭಂಗಪಡಿಸಬಾರದು" ಎಂದು ಹೇಳಿದರು. ಇದನ್ನು ಕೇಳಿ ಜಯರಾಮ ಸ್ವಾಮಿಯು "ಮಹಾಸ್ವಾಮಿಗಳೇ! ನನ್ನಿಂದ ನಿಜವಾಗಿಯೂ ಅಪರಾಧವಾಯಿತು. ದಯಮಾಡಿ ಕ್ಷಮಿಸಬೇಕು" ಎಂದು ಬೇಡಿಕೊಂಡನು. ಆ ಮೇಲೆ ಇಬ್ಬರೂ ಕೂಡಿ ಶಿಷ್ಯರೊಂದಿಗೆ ವಡಗಾಂವದ ಮಠಕ್ಕೆ ಹೋದರು. ಆ ಮಠದಲ್ಲಿ ಸಮರ್ಥರು ಕೆಲವು ದಿವಸಗಳ ವರೆಗೆ ಇದ್ದುಕೊಂಡು ಮುಂದೆ ಚಾಫಳಕ್ಕೆ ಹೊರಟುಹೋದರು ಈ ಸಂಗತಿಯು ಶಕೆ ೧೫೭೮ ರಲ್ಲಿ ವರ್ತಿಸಿತು.

ಶಿವಾಜಿ ಮಹಾರಾಜರನ್ನು ವರಿಗೆ ಹಚ್ಚಿದ್ದು—ಅದೇ ವರ್ಷ (ಶಕೆ ೧೫೭೮ ರಲ್ಲಿ) ಒಂದು ದಿವಸ ಛತ್ರಪತಿ ಶಿವಾಜಿ ಮಹಾರಾಜರು ಪ್ರತಾಪಗಡದಿಂದ ಹೊರಟು ಮಹಾಬಳೇಶ್ವರಕ್ಕೆ ಹೋದರು. ಆಗ ಅವರಿಗೆ ಸಮರ್ಥರು ಅಲ್ಲಿಯೇ ನೆರೆಯ ಗುಡ್ಡದೊಳಗೆ ಇದ್ದ ಸಂಗತಿಯು ತಿಳಿಯಬಂತು. ಆದ್ದರಿಂದ ಅವರು ಸಮರ್ಥರ ದರ್ಶನ ತೆಗೆದುಕೊಳ್ಳುವದಕ್ಕಾಗಿ ಗುಡ್ಡಕ್ಕೆ ಹೋದರು. ಹಗಲೆಲ್ಲ ಎಷ್ಟು ಹುಡುಕಿದರೂ ಅವರಿಗೆ ಸಮರ್ಥರ ದರ್ಶನವೇ ಆಗಲಿಲ್ಲ ಆ ಮೇಲೆ ಅವರು ರಾತ್ರಿಯಲ್ಲಿ ದೀವಟಿಗೆಗಳನ್ನು ಹಿಡಿಸಿಕೊಂಡು ಹುಡುಕಲಿಕ್ಕೆ ಆರಂಭಿಸಿದರು. ಸಮರ್ಥರ ದರ್ಶನ ತೆಗೆದುಕೊಳ್ಳದೆ ಇರಬಾರದೆಂಬುವದು ಅವರ ದೃಢಾಪೇಕ್ಷೆಯಿತ್ತು. ಅಥವಾ ಸ್ವಾಮಿಪಾದದ ಮೇಲೆ ಶಿವಾಜಿ ಮಹಾರಾಜರ ಭಕ್ತಿಯು ಇಷ್ಟೊಂದು ದೃಢವಾದದ್ದು ಇತ್ತೆಂದರೂ ಚಿಂತಿಲ್ಲ. ಸಮರ್ಥರು ಯಾವಾಗ್ಗೆ ನೋಡಿದರೂ ಸಾಮಾನ್ಯ ಮನುಷ್ಯರ ಪ್ರವೇಶಕ್ಕೆ ಅಸಾಧ್ಯವಾದ ಕಲ್ಲಿನ ಹೊದರುಗಳಲ್ಲಿ, ಗವಿಗಳಲ್ಲಿ, ಅಥವಾ ಗಿಡಗಂಟೆಗಳ ಝುಡಪುಗಳಲ್ಲಿ ಕೂತಿರುತ್ತಿದ್ದರು. ಆದ್ದರಿಂದ ಅಂಥ ಯಾವತ್ತು ಸ್ಥಳಗಳನ್ನು ಶಿವಾಜಿ ಮಹಾರಾಜರು ಹುಡುಕುತ್ತಲೇ ಗುಡ್ಡವನ್ನೆಲ್ಲ ಅಡ್ಡಾಡಿ ನೋಡಿದರು. ಹಾದಿಯಲ್ಲಿ ಕಲ್ಲುಮುಳ್ಳುಗಳು ತುಂಬಿದ್ದವು. ಆದ್ದರಿಂದ ದೀವಟಿಗೆಯವರೂ ಆಳುಮನುಷ್ಯರೂ ಕಲ್ಲು ಎಡವಿ ಇಲ್ಲವೆ ಮುಳ್ಳು ತುಳಿದು ಆಗಾಗ್ಗೆ ನೆಲಕ್ಕೆ ಮುಗ್ಗುಡಿಸಿ ಬೀಳುತ್ತಿದ್ದರು. ಈ ಪ್ರಕಾರ ಎಲ್ಲರು ಸಮರ್ಥರನ್ನು ಶೋಧಿಸುತ್ತಿರಲು ಬೆಳಗಾಯಿತು. ಆದರೂ ಮಹಾರಾಜರಿಗೆ ಸಮರ್ಥರ ದರ್ಶನವಾಗಲಿಲ್ಲ. ಆಗ ಮಹಾರಾಜರು ತಮ್ಮೆಲ್ಲ ಆಳುಮನುಷ್ಯರನ್ನು ಬತ್ತಟ್ಟಿಗೆ ಬಿಟ್ಟುಕೊಟ್ಟು ತಾವೊಬ್ಬರೇ ಅವರನ್ನು ಹುಡುಕುತ್ತ ಅಡವಿಯಲ್ಲಿ ಸಂಚರಿಸುತ್ತಿರುವಾಗ್ಗೆ ಅಲ್ಲಿ ಒಂದು

ಹುಲಿಯು ಗವಿಯೊಳಗೆ ಯಾರೋ ಒಬ್ಬರು ಕ್ಲೇಶದಿಂದ ಬಹಳವಾಗಿ ನರಳುತ್ತಿರುವದನ್ನು ಕೇಳಿ ಮಹಾರಾಜರು ಅಲ್ಲಿಗೆ ಹೋಗಿ ನೋಡಲು ಸಮರ್ಥರು ಬಹಳವಾಗಿ ಕಸವಿಸಿ ಪಡುತ್ತ ಅತ್ತಿಂದ ಇತ್ತ, ಇತ್ತಿಂದ ಅತ್ತ ಉರುಳಾಡುತ್ತಿರುವದನ್ನು ನೋಡಿ ಸಖೇದಾಶ್ಚರ್ಯಗೊಂಡರು ಆ ಮೇಲೆ ಮಹಾರಾಜರು ಅತ್ಯಂತ ಚಿಂತಾಯುಕ್ತರಾಗಿ ಸಮರ್ಥರ ಸವಿಾಪಕ್ಕೆ ಹೋಗಿ—"ಸ್ವಾಮಿವರ್ಯರೇ! ತಾವು ಕಸವಿಸಿ ಪಡುವ ಕಾರಣವೇನು? ತಮಗೆ ಯಾವ ವ್ಯಥೆಯಾಗಿರುವದು?" ಎಂದು ಬಹು ಮರ್ಯಾದೆಯಿಂದ ಕೇಳಿದರು. ಆಗ ಸಮರ್ಥರು ಮಹಾರಾಜರಿಗೆ—"ಅಪ್ಪಾ ಶಿವರಾಯಾ! ನಾನೇನು ಹೇಳಲಿ! ಈಗೆರಡು ದಿವಸಗಳಿಂದ ನನಗೆ ಭಯಂಕರವಾದ ಹೊಟ್ಟೆಶೂಲಿಯು ಎದ್ದಿರುತ್ತದೆ. ಆದ್ದರಿಂದ ನನಗೆ ಪ್ರಾಣಾಂತಿಕ ವೇದನೆಗಳು ಆಗಲಾರಂಭಿಸಿವೆ. ಈ ವೇದನೆಗಳಿಂದ ನಾನು ಉಳಿಯುವ ಆಶೆ ಇಲ್ಲ" ಎಂದು ಹೇಳಿದರು. ಅದನ್ನು ಕೇಳಿ ಮಹಾರಾಜರು—"ಸ್ವಾಮಿನ್, ಇದಕ್ಕೆ ನಾನು ಏನಾದರೂ ಔಷಧವನ್ನು ತರಿಸಿಕೊಡುತ್ತೇನೆ. ತಾವು ಚಿಂತೆ ಮಾಡಬಾರದು" ಎಂದು ನುಡಿದರು. ಅದಕ್ಕೆ ಸಮರ್ಥರು ತಿರುಗಿ ಮಹಾರಾಜರಿಗೆ—"ಶಿವರಾಯಾ! ನನಗೆ ಉಂಟಾಗಿರುವ ಹೊಟ್ಟೆಶೂಲೆಯು ಸಾಮಾನ್ಯವಾದದ್ದಲ್ಲ. ಈ ರೋಗವು ವಾಸಿಯಾಗುವದು ಪರಮ ಅಸಾಧ್ಯವು" ಎಂದು ಹೇಳಿದರು. ಅದನ್ನು ಕೇಳಿ ಶಿವಾಜಿ ಮಹಾರಾಜರು—"ಸ್ವಾಮಿವರ್ಯರೇ! ಇದಕ್ಕೆ ಯಾವದೂ ಔಷಧವಿಲ್ಲವೇ?" ಎಂದು ತಿರುಗಿ ಪ್ರಶ್ನೆ ಮಾಡಿದರು. ಅದಕ್ಕೆ ಸಮರ್ಥರು—"ಶಿವರಾಯಾ! ಇದಕ್ಕೆ ಒಂದು ಔಷಧ ಮಾತ್ರ ಉಂಟು ಆದರೆ ಅದು ಇದ್ದೂ ಇಲ್ಲದಂತೆಯೇ. ಯಾಕಂದರೆ ಆ ಔಷಧ ಸಿಗುವದು ಬಹಳ ಪ್ರಯಾಸವು" ಎಂದು ಉತ್ತರ ಕೊಟ್ಟರು. ಆಗ ಮಹಾರಾಜರು—"ಸ್ವಾಮಿಾ! ಅದೆಂಥ ಔಷಧವು? ಅದು ಯಾವದೂ ಇರಲಿ. ಅದನ್ನು ತಾವು ದಯವಿಟ್ಟು ನನಗೆ ತಿಳುಹಿಸಿದರೆ ಪ್ರಯತ್ನ ಮಾಡಿ ತಂದುಕೊಡುವೆನು" ಎಂದು ನುಡಿದರು. ಅದಕ್ಕೆ ಸಮರ್ಥರು—"ಶಿವರಾಯಾ! ಹೆಣ್ಣು ಹುಲಿಯ ಹಾಲು ದೊರಕಿದರೆ ಮಾತ್ರ ನನಗೆ ಅದರಿಂದ ಕಿಂಚಿತ್ತು ಗುಣವಾದೀತು. ಹೆಣ್ಣು ಹುಲಿಯು ಅಡವಿಯಲ್ಲಿ ಆಡ್ಯಾಡುವಾಗ್ಗೆ ಕಲ್ಲಿನ ಮೇಲೆ ಕೆಡವಿದ ಹಾಲಿನ ಹನಿಗಳು ಹೆಪ್ಪುಗಟ್ಟಿದ ತರುವಾಯ ಎಷ್ಟೋ ಜನರು ಆ ಹಾಲನ್ನು ಔಷಧಕ್ಕಾಗಿ ತಂದು ಉಪಯೋಗಿಸುವರು. ಅಂಥ ಹಾಲು ಮಾತ್ರ ನನ್ನ ಹೊಟ್ಟೆಶೂಲಿಗೆ ಉಪಯೋಗ ಬೀಳಲಾರದು. ಹುಲಿಯ ಮೊಲೆಯೊಳಗಿಂದ ಈಗಲೇ ತೆಗೆದ ಹಾಲನ್ನು ತಂದುಕೊಟ್ಟಲ್ಲಿ ಅದು ನನಗೆ ಉಪಯೋಗವಾಗುವ ಆಶೆಯುಂಟು" ಎಂದು ಹೇಳಿದರು. ಅದನ್ನು ಕೇಳಿ ಮಹಾರಾಜರು—"ಸ್ವಾಮಿಾ! ನಾನು ತಮ್ಮ ಕೃಪೆಯಿಂದ ಹ್ಯಾಗಾದರೂ ಮಾಡಿ ತಮಗೆ ತಮ್ಮ ಉಪಯೋಗಕ್ಕೆ ಬೀಳುವಂಥ

ಹಾಲನ್ನು ಈಗಲೇ ಹುಲಿಯ ಮೊಲೆಯೊಳಗಿಂದ ಹಿಂಡಿಕೊಂಡು ತರುವೆನು" ಎಂದು ನುಡಿದು ಸಮರ್ಥರ ಸಮೀಪದಲ್ಲಿ ಬಿದ್ದಂಥ ಒಂದು ಪಾತ್ರೆಯನ್ನು ಕೈಯಲ್ಲಿ ತೆಗೆದುಕೊಂಡು ಹೊರಟರು. ಇದನ್ನು ಕಂಡು ಸಮರ್ಥರು—"ಅಪ್ಪಾ ಶಿವರಾಯಾ! ನನ್ನಗೋಸ್ಕರ ನಿನ್ನ ಜೀವವನ್ನು ಗಂಡಾಂತರಕ್ಕೆ ಯಾಕೆ ಗುರಿಮಾಡುತ್ತೀ?" ಎಂದು ಕೇಳಿದರು. ಆಗ ಶಿವಾಜಿ ಮಹಾರಾಜರು—"ಸ್ವಾಮಿನ್, ತಮ್ಮ ಸೇವೆಯಗೋಸ್ಕರ ನನ್ನ ಜೀವವನ್ನು ಅರ್ಪಣ ಮಾಡುವದಕ್ಕಿಂತ ಹೆಚ್ಚಿನ ಸದ್ಗತಿಯು ನನಗೆ ಯಾವದುಂಟು?" ಎಂದು ನುಡಿದು ಅಡವಿಯಲ್ಲಿ ಹೊರಟುಹೋದರು. ಅಡವಿಯಲ್ಲಿ ಬೇಕಾದಷ್ಟು ಹುಡುಕಿದಾಗ್ಯೂ ಹೆಣ್ಣು ಹುಲಿಯು ಕಣ್ಣಿಗೆ ಬೀಳಲೇ ಇಲ್ಲ. ಅದೇನು ದಾರಿಯ ಮೇಲೆ ಬಿದ್ದಿರುವ ಸಾಮಾನ್ಯ ಪ್ರಾಣಿಯೇ? ಬಿದ್ದರೂ ಅದು ಹಾಲು ಕೊಡುವ ಬಗೆ ಎಲ್ಲಿ? ಶಿವಾಜಿ ಮಹಾರಾಜರು ಬಹಳ ಶೂರರೆಂಬುವದು ನಿರ್ವಿವಾದವು. ಒಂದು ವೇಳೆ ಬೇಕಾದಂಥ ಹುಲಿಯನ್ನು ಕೊಂದು ತರುವದು ಅವರಿಗೆ ಅಸಾಧ್ಯವಿದ್ದಿಲ್ಲ. ಆದರೆ ಜೀವಂತ ಹೆಣ್ಣು ಹುಲಿಯ ಮೊಲೆಯೊಳಗೆ ಕೈ ಹಾಕಿ ಅದರ ಹಾಲು ಹಿಂಡಿಕೊಂಡು ಬರುವ ಕೆಲಸವು ಎಷ್ಟು ದುಸ್ಸಾಧ್ಯವೆಂಬುವದು ಎಲ್ಲರಿಗೂ ಸಹಜವಾಗಿ ತಿಳಿಯಬಹುದು. ಆದಾಗ್ಯೂ ಶಿವಾಜಿ ಮಹಾರಾಜರು ಸಮರ್ಥರಲ್ಲಿ ಅಪೂರ್ವ ಭಕ್ತಿಯುಳ್ಳವರಾದ ಕಾರಣ ಯಾವ ತರದ ಶಂಕೆಗಳನ್ನೂ ಮನಸ್ಸಿನಲ್ಲಿ ತರದೆ ಸ್ವಂತ ಜೀವದ ಹಂಗು ತೊರೆದು ಯಾವತ್ತು ಗಿಡಗಂಟೆಗಳಲ್ಲಿಯೂ ಗಿರಿಗವ್ಹರಗಳಲ್ಲಿಯೂ ಹೆಣ್ಣು ಹುಲಿಯನ್ನು ಶೋಧಿಸುತ್ತ ಹೊರಟರು. ಅದು ಸಿಗುವ ನಿರಾಶೆಯಾಗುತ್ತ ಹೋದಂತೆ ಅವರಿಗೆ ಅತ್ಯಂತ ವ್ಯಸನವಾಗಹತ್ತಿತು. ಆದರೆ ಇಷ್ಟರಲ್ಲಿ ಒಂದು ಗಿಡಗಂಟಿಯೊಳಗೆ ಆಡುತ್ತಿದ್ದ ಎರಡು ಸಣ್ಣ ಹುಲಿಯ ಮರಿಗಳು ಅವರ ಕಣ್ಣಿಗೆ ಬಿದ್ದವು. ಆಗ ಅವರಿಗೆ ಅತ್ಯಂತ ಆನಂದವಾಯಿತು. ಬಳಿಕ ಅವರು ಅಲ್ಲೆಲ್ಲಿಯಾದರೂ ಅವುಗಳ ತಾಯಿಯು ಇರಲಿಕ್ಕೇಬೇಕೆಂದು ಧಿಟವಾಗಿ ತಿಳಿದು ಆ ಗಿಡಗಂಟೆಯ ಹತ್ತರ ಅದರ ಮಾರ್ಗವನ್ನು ನೋಡುತ್ತ ಕುಳಿತುಕೊಂಡರು. ಸ್ವಲ್ಪ ಹೊತ್ತಿನ ತರುವಾಯ ಅವುಗಳ ತಾಯಿಯು ಆ ಗಿಡಗಂಟೆಯ ಸಮೀಪಕ್ಕೆ ಬಂದು ತನ್ನ ಮರಿಗಳ ಹತ್ತರ ಯಾವನೋ ಒಬ್ಬ ಮನುಷ್ಯನು ಕುಳಿತಿರುತ್ತಾನೆಂದು ನೋಡಿ ಅತ್ಯಂತ ಕೋಪಾಯಮಾನವಾಯಿತು. ಮೊದಲೇ ಹುಲಿಗಳ ಜಾತಿಯು ಕ್ರೂರವಾದದ್ದು! ಅದರಲ್ಲಿ ಇದು ಹೆಣ್ಣು ಹುಲಿಯು! ತನ್ನ ಮರಿಗಳ ಮೇಲೆ ಅತ್ಯಂತ ಪ್ರೇಮ ಮಾಡುವ ಪ್ರಾಣಿಯು! ಅಂದಮೇಲೆ ಕೇಳುವದೇನದೆ? ಅದು ಒಮ್ಮೆಲೇ ಬಂದು ಶಿವಾಜಿ ಮಹಾರಾಜರ ಮೇಲೆ ಹಾರಿ ತನ್ನ ಭಯಂಕರವಾದ ಪಂಜರಗಳಿಂದ ಮಹಾರಾಜರ ಸರ್ವಾಂಗಕ್ಕೆಲ್ಲ ಘಾಯವನ್ನು ಮಾಡಿ ಅವರ ಕುತ್ತಿಗೆಯನ್ನು ಬಾಯಿಂದ ಹಿಚುಕಿ ಹಿಡಿದು ಅವರನ್ನು ಹಣ್ಣುಗಾಯ ಮಾಡಿ ಬಿಟ್ಟಿತು. ಮಹಾ

ರಾಜರು ಶೂರರಾದಾಗ್ಯೂ ಅವರ ಶೌರ್ಯದ ಪ್ರಯೋಜನವು ಆಗುವ ಮಾರ್ಗವೆಲ್ಲಿ? ಅವರು ಶೌರ್ಯದಿಂದ ಅದರ ಮೇಲೆ ತಮ್ಮ ಶಸ್ತ್ರಪ್ರಹಾರ ಮಾಡಿ ಅದನ್ನು ಆಗಲೇ ಕೊಲ್ಲಬಹುದಾಗಿತ್ತು. ಆದರೆ ಅದನ್ನು ಹೀಗೆ ಕೊಂದುಬಿಟ್ಟಿದ್ದರೆ ಅವರು ಸಮರ್ಥರಿಗೆ ಮಾಡಿಬಂದ ವಾಗ್ದಾನವು ಸಫಲವಾಗುವ ಆಶೆಯೇ ಉಳಿಯುತ್ತಿದ್ದಿಲ್ಲ. ಆದ್ದರಿಂದ ಮಹಾರಾಜರು ತಮ್ಮ ಮೇಲೆ ಬಂದ ಈ ಸಂಕಟವನ್ನು ನುಂಗಿ ನೀರು ಕುಡಿದು ಸಮರ್ಥರ ಪಾದಾರವಿಂದಗಳನ್ನು ಭಕ್ತಿಪೂರ್ವಕವಾಗಿ ನೆನೆದು, ಧೈರ್ಯದಿಂದ ಆ ಹುಲಿಯ ಮೈಮೇಲೆ ಕೈಯಾಡಿಸಿ ಅದನ್ನು ಕುರಿತು—" ತಾಯಿಯಾ! ಈ ಪ್ರಕಾರ ಸುಮ್ಮನೆ ನನ್ನ ಮೇಲೆ ಸಿಟ್ಟಿಗೇಳಬೇಡ. ನಾನು ನಿನ್ನ ಮರಿಗಳನ್ನು ತೆಗೆದುಕೊಂಡು ಹೋಗುವದಕ್ಕಾಗಲೀ, ನಿನಗೆ ಘಾಯ ಪಡಿಸುವದಕ್ಕಾಗಲೀ ಇಲ್ಲಿಗೆ ಬಂದವನಲ್ಲ. ನನ್ನ ಸ್ವಾಮಿಗಳಾದ ರಾಮದಾಸರಿಗೆ ನಿನ್ನ ಹಾಲು ಸ್ವಲ್ಪ ಬೇಕಾಗಿರುತ್ತವೆ. ಅವನ್ನಷ್ಟು ನೀನು ನನಗೆ ದಯಮಾಡಿ ಕೊಟ್ಟ ತರುವಾಯ ನನ್ನನ್ನು ಬೇಕಾದರೆ ಕೊಂದು ತಿನ್ನು" ಎಂದು ಬೇಡಿಕೊಂಡರು. ಸದ್ಗುರು ಭಕ್ತಿಯ ಪ್ರಭಾವವನ್ನು ಕೇಳುವದೇನದೆ? ಕೂಡಲೇ ಆ ಉಗ್ರವಾದ ಹುಲಿಯು ಶಿವಜಿಮಹಾರಾಜರನ್ನು ತನ್ನ ಬಂಧನದೊಳಗಿಂದ ವಿಮೋಚನ ಮಾಡಿ ಅವರೊಡನೆ ಸಫ್ರವಾದ ಆಕಳದಂತೆ ವರ್ತಿಸಹತ್ತಿತು. ಅದು ಮಹಾರಾಜರ ಮೇಲಿನ ತನ್ನ ಮಮತೆಯನ್ನು ತೋರಿಸುವದಕ್ಕಾಗಿ ಅವರ ಕೈಯನ್ನು ನೆಕ್ಕಿ ಅವರ ಸಂಗಡ ಸ್ನೇಹ ಸಲ್ಲಾಪಗಳಿಂದ ನಡೆದು ತನ್ನ ಹಾಲನ್ನು ತೆಗೆದುಕೊಳ್ಳುವದಕ್ಕೆ ಅವರಿಗೆ ತಕ್ಕ ಅನುಕೂಲವನ್ನು ಮಾಡಿಕೊಟ್ಟಿತು. ಆಗ ಮಹಾರಾಜರು ಬಹಳ ಹರ್ಷಪಟ್ಟು ತಾವು ತಮ್ಮ ಸಂಗಡ ತಂದಿದ್ದ ಪಾತ್ರೆಯು ತುಂಬ ಹಾಲನ್ನು ಹಿಂಡಿಕೊಂಡು ಆ ಹುಲಿಗೆ ನಮಸ್ಕರಿಸಿ ಅದರ ನಿರೋಪವನ್ನು ತೆಗೆದುಕೊಂಡು ಸ್ವಲ್ಪ ದೂರ ಬರುವಷ್ಟರಲ್ಲಿ ಸಮರ್ಥರು ಅವರಿಗೆ ಅಕಸ್ಮಾತ್ತಾಗಿ ದರ್ಶನ ಕೊಟ್ಟು—"ಶಿವರಾಯಾ! ನೀನು ಧನ್ಯನು! ನನ್ನ ಔಷಧವನ್ನು ನೀನು ಕಡೆಗೆ ಸಂಪಾದಿಸದೆ ಬಿಡಲಿಲ್ಲ!" ಎಂದು ಆನಂದಮುದ್ರೆಯಿಂದ ಅವರಗೂಡ ಭಾಷಣ ಮಾಡಿದರು. ಆಗ ಮಹಾರಾಜರು ಅವರಿಗೆ ನಮಸ್ಕರಿಸಿ ಅವರ ಮುಂದೆ ಹುಲಿಯ ಹಾಲು ತುಂಬಿದ ಪಾತ್ರೆಯನ್ನು ಇಟ್ಟು—" ಸ್ವಾಮಿಯಾ! ತಮ್ಮ ಅಪೇಕ್ಷೆಯಂತೆ ಈ ಔಷಧವನ್ನು ತಂದಿದ್ದೇನೆ. ದಯಮಾಡಿ ಸ್ವೀಕರಿಸಬೇಕು" ಎಂದು ವಿನಂತಿ ಮಾಡಿಕೊಂಡರು. ಈ ಭಾಷಣವನ್ನು ಕೇಳಿ ಸಮರ್ಥರು ಮಹಾರಾಜರನ್ನು ಎಬ್ಬಿಸಿ ಆನಂದದಿಂದ ತಬ್ಬಿಕೊಂಡು ಮಹಾರಾಜರ ಮೈಮೇಲೆ ಹುಲಿಯ ಪಂಜರಗಳಿಂದ ಉಂಟಾದ ಘಾಯಗಳನ್ನು ನೋಡಿ ಬಹಳ ವಿಸ್ಮಯಪಟ್ಟರು. ಆ ಮೇಲೆ ಮಹಾರಾಜರು ಸಮರ್ಥರಿಗೆ—" ಸ್ವಾಮಿಮಹಾರಾಜರೇ! ತಮ್ಮ ಹೊಟ್ಟೆಶೂಲಿಯು ಇನ್ನೂ ಯಥಾ

ಪ್ರಕಾರವಿದ್ದೀತು. ಬೇಗನೆ ಈ ಹಾಲಿನ ಉಪಯೋಗ ಮಾಡಿಕೊಳ್ಳಿರಿ" ಎಂದು ಪುನಃ ವಿನಂತಿ ಮಾಡಿಕೊಂಡರು. ಆಗ ಸಮರ್ಥರು ಮಹಾರಾಜರಿಗೆ—"ಶಿವರಾಯಾ! ನಿನ್ನಂಥ ಭಕ್ತಶಿರೋಮಣಿಯು ನನಗೆ ಪ್ರಾಪ್ತವಾಗಿರಲು ನನ್ನ ಹೊಟ್ಟೆಶೂಲಿಯು ಇನ್ನೂ ಹ್ಯಾಗೆ ಉಳಿದೀತು! ಅದು ಓಡಿ ಹೋಗಿ ಬಹಳ ಕಾಲವಾಯಿತು. ಅದಂತೂ ಈಗಿರಲಿ. ನಿನಗೆ ಬಹಳ ಶ್ರಮವಾಗುತ್ತದೆ. ಆದ್ದರಿಂದ ಈಗಲೇ ಇಲ್ಲಿ ಸ್ನಾನ ಮಾಡು. ನಾವಿಬ್ಬರೂ ಇಲ್ಲಿ ಭೋಜನ ತೀರಿಸಿಕೊಂಡು ನಮ್ಮ ನಮ್ಮ ಸ್ಥಳಕ್ಕೆ ಹೋಗುವಾ" ಎಂದು ನುಡಿದರು. ಅದಕ್ಕೆ ಮಹಾರಾಜರು—"ಸ್ವಾಮಿನ್! ಇಲ್ಲಿ ಅಡವಿಯಲ್ಲಿ ಭೋಜನದ ಸಿದ್ಧತೆಯು ಆಗುವ ಅನುಕೂಲವೆಲ್ಲಿ?" ಎಂದು ವಿಚಾರಿಸಿದರು. ಅದಕ್ಕೆ ಸಮರ್ಥರು—"ಅದಕ್ಕೆ ನೀನ್ಯಾಕೆ ಚಿಂತೆ ಮಾಡುತ್ತೀ? ಶ್ರೀರಘುಪತಿಯ ಮನಸ್ಸಿಗೆ ಬಂದರೆ ಬೇಕಾದ್ದು ಸಿದ್ಧವಾಗುತ್ತದೆ. ಸ್ನಾನ ತೀರಿಸಿಕೊಂಡು ಬರುವಾ ನಡೆ" ಎಂದು ಹೇಳಿ ಅವರನ್ನು ತಮ್ಮ ಸಂಗಡ ಕರೆದುಕೊಂಡು ಹೋಗಿ ಇಬ್ಬರೂ ನದಿಯಲ್ಲಿ ಸ್ನಾನವನ್ನು ತೀರಿಸಿಕೊಂಡು ತಿರಿಗಿ ಬರುವಷ್ಟರಲ್ಲಿ ೪-೫ ಜನ ಅಡಿಗೆಯವರು ಅಡಿಗೆಯನ್ನು ಮಾಡಿಕೊಂಡು ದಾರಿಯನ್ನು ನೋಡುತ್ತ ಕುಳಿತಿದ್ದರು. ಅಡಿಗೆಯವರು ಮಾತ್ರ ಶಿವಾಜಿ ಮಹಾರಾಜರ ಪರಿಚಯದವರಿದ್ದಿಲ್ಲ. ಇದನ್ನು ನೋಡಿ ಮಹಾರಾಜರಿಗೆ ಅತ್ಯಂತ ಆಶ್ಚರ್ಯವಾಯಿತು. ಆಗ ಶ್ರೀರಘುಪತಿಗೆ ನೈವೇದ್ಯವನ್ನು ಅರ್ಪಿಸಿ ಸಮರ್ಥರು ಮಹಾರಾಜರೂ ಭೋಜನವನ್ನು ತೀರಿಸಿಕೊಂಡರು. ಭೋಜನದ ಕಾಲಕ್ಕೆ ಸಮರ್ಥರು ಆ ಹುಲಿಯ ಹಾಲನ್ನು ಬಿಸಿ ಮಾಡಿಸಿಕೊಂಡು "ಹುಲಿಯ ಹಾಲು ಜಿಜಾಬಾಯಿಯ ಹಾಲು" ಎಂದು ನುಡಿದು ತಾವು ಕೆಲವನ್ನು ಪ್ರಾಶನ ಮಾಡಿ ಕೆಲವನ್ನು ಮಹಾರಾಜರಿಗೆ ಪ್ರಾಶನ ಮಾಡಲಿಕ್ಕೆ ಕೊಟ್ಟರು. ಭೋಜನೋತ್ತರದಲ್ಲಿ ಉಭಯತರು ತಾಂಬೂಲವನ್ನು ಮೆದ್ದು ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಹೊಂದಿ ತಮ್ಮ ತಮ್ಮ ಸ್ಥಳಕ್ಕೆ ಅಂದರೆ ಮಹಾರಾಜರು ತಮ್ಮ ಸೈನ್ಯದ ರಾಣ್ಯಕ್ಕೂ, ಸಮರ್ಥರು ಮಹಾಬಳೇಶ್ವರಕ್ಕೂ ಹೊರಟು ಹೋದರು.

**ಆನಂದಮೂರ್ತಿಯ ದರ್ಶನವು:**—ಒಂದಾನೊಂದು ದಿವಸ ಸಮರ್ಥರು ಶಿರಾಳೆಯಿಂದ ಹೊರಟು ಕರವೀರಪುರ ಕಡೆಯಿಂದ ಬ್ರಹ್ಮಕ್ಷೇತ್ರಕ್ಕೆ ಆನಂದ ಮೂರ್ತಿಯ ದರ್ಶನ ತೆಗೆದುಕೊಳ್ಳುವದಕ್ಕಾಗಿ ಹೋದರು. ಆಗ ಆನಂದ ಮೂರ್ತಿಗಳು ಸ್ನಾನ ಸಂಧ್ಯಾದಿಗಳನ್ನು ಮಾಡುವಲ್ಲಿ ತೊಡಗಿದ್ದರು. ಆದಾಗ್ಯೂ ಅವರು ಸಮರ್ಥರು ತಮ್ಮ ದರ್ಶನಕ್ಕೆ ಬಂದಿರುತ್ತಾರೆಂದು ಕೇಳಿದ ಮಾತ್ರದಿಂದ ಸ್ನಾನ ಸಂಧ್ಯಾದಿಗಳನ್ನು ಅಷ್ಟಕ್ಕೇ ಬಿಟ್ಟು ಕೊಟ್ಟು ಸಮರ್ಥರ ಎದುರಿಗೆ ಹೋಗಿ ಅವರಿಗೆ ಸಾಷ್ಟಾಂಗ ನಮಸ್ಕರಿಸಿ ಅವರನ್ನು ಕರೆದುಕೊಂಡು ಬಂದರು. ಸಮರ್ಥರು ರಘು

ನಾಥ ಸ್ವಾಮಿಯ ವೃಂದಾವನಕ್ಕೆ ಪ್ರದಕ್ಷಿಣೆಯನ್ನು ಹಾಕಿ ನಮಸ್ಕಾರ ಮಾಡಿದರು. ಆಗ ವೃಂದಾವನವು ತನ್ನಷ್ಟಕ್ಕೆ ತಾನೇ ಅಂದೋಲನವಾಗಹತ್ತಿತು! ಅದನ್ನು ಕಂಡು ಸಮರ್ಥರು ಆನಂದ ಮೂರ್ತಿಗೆ "ನಿನ್ನ ಗುರುಸೇವೆಯು ಅಪೂರ್ವವಾದದ್ದು" ಎಂದು ನುಡಿದು ಆನಂದ ಮೂರ್ತಿಯ ಮೇಲೆ ಸ್ತುತಿಪರವಾದ ಎರಡು ಶ್ಲೋಕಗಳನ್ನು ರಚಿಸಿ ಹಾಡಿದರು. ಆಗ ಆನಂದ ಮೂರ್ತಿಗಳು ಸಮರ್ಥರಿಗೆ— "ನಾನು ಇಷ್ಟೊಂದು ಸ್ತುತಿಗೆ ಯೋಗ್ಯನಲ್ಲ. ತಾವೂ ರಘುನಾಥ ಸ್ವಾಮಿಯೂ ಬೇರೆ ಬೇರೆ ಎಂದು ನಾನು ತಿಳಿಯುವದಿಲ್ಲ." ಎಂದು ಹೇಳಿ ಸಮರ್ಥರ ಮೇಲೆ ತಾವೂ ಸ್ವತಃ ಒಂದು ಸ್ತುತಿಪರವಾದ ಶ್ಲೋಕವನ್ನು ರಚಿಸಿ ಹಾಡಿದರು. ಆಮೇಲೆ ಆನಂದದಿಂದ ಅವರಿಬ್ಬರೂ ಭೋಜನವನ್ನು ಮಾಡಿ ಅಲ್ಲಿ ನಾಲ್ಕು ದಿವಸ ಸುಖದಿಂದ ಇದ್ದರು. ಮುಂದೆ ಸಮರ್ಥರು ವಡಗಾಂವಕ್ಕೆ ಹೋಗಿ ಅಲ್ಲಿ ಜಯರಾಮ ಸ್ವಾಮಿಯ ಭೇಟಿಯನ್ನು ತೆಗೆದುಕೊಂಡು ಚಾಫಳಕ್ಕೆ ಹೊರಟು ಹೋದರು.

ಕೆಚ್ಚಲಬಿಗಿದ ಎಮ್ಮೆ— ಶಕೆ ೧೫೯೦ ರಲ್ಲಿ ಸಮರ್ಥರು, ಜಯರಾಮ ಸ್ವಾಮಿಯು, ರಂಗನಾಥ ಸ್ವಾಮಿಯು ಆನಂದ ಮೂರ್ತಿಯು ಈ ಪ್ರಕಾರ ನಾಲ್ವರು ಬಾಹೆ ಎಂಬೂರಿಗೆ ಹೋಗಿ ಅಲ್ಲಿ ಕೆಲವು ದಿವಸ ಒಬ್ಬ ಜೋಯಿಸರ ಮುದಿಕೆಯ ಮನೆಯೊಳಗೆ ಇಳುಕೊಂಡಿದ್ದರು. ಪ್ರತಿನಿತ್ಯ ಅವರು ನಾಲ್ಕೂ ಮಂದಿ ಕೃಷ್ಣೆಯೊಳಗೆ ಸ್ನಾನವನ್ನು ಮಾಡಿ ಸಂಧ್ಯಾದಿ ಕರ್ಮಗಳನ್ನು ಮುಗಿಸಿಕೊಂಡು ಭೋಜನಕ್ಕಾಗಿ ಜೋಯಿಸರ ಮುದಿಕೆಯ ಮನೆಗೆ ಬರುತ್ತಿದ್ದರು. ಈ ಮುದಿಕೆಯು ಬಹಳ ಸಾತ್ವೀಕ ವಿಧವೆ ಇದ್ದು ಇವಳು ಒಂದು ಎಮ್ಮೆಯನ್ನು ಸಾಕಿದ್ದಳು, ಅದು ದಿನಾಲು ಬಹಳ ಹಾಲು ಕೊಡುತ್ತಿತ್ತು. ಆದ್ದರಿಂದ ಆ ಮುದಿಕೆಯ ಪ್ರೇಮವು ಆ ಎಮ್ಮೆಯ ಮೇಲೂ ಅದರ ಕರುವಿನ ಮೇಲೂ ಇತ್ತು. ಅದಕ್ಕಾಗಿ ಅವಳು ತನ್ನ ಎಮ್ಮೆಯೂ ಕರವೂ ನದಿಯ ತಟಾಕಕ್ಕೆ ತಾಗಿದ ಅಡವಿಯಲ್ಲಿ ಹಸರು ಮೇದು ಬರಲೆಂದು ಆಲೋಚಿಸಿ ಆ ನಾಲ್ವರಿಗೂ ತನ್ನ ಎಮ್ಮೆ ಕರಗಳನ್ನು ನಿಮ್ಮನಿಮ್ಮ ಸಂಗಡ ಒಯ್ದು ನಿಮ್ಮ ಸ್ನಾನ ಸಂಧ್ಯಾದಿಗಳು ತೀರುವ ತನಕ ಮೇಯಿಸಿಕೊಂಡು ನೀವು ಬರುವಾಗ್ಗೆ ಅವುಗಳನ್ನು ಅಟ್ಟಿಕೊಂಡು ಬರ್ರೆಂದು ವಿನಂತಿ ಮಾಡಿಕೊಂಡಳು. ಅದರಂತೆ ಅವರು ದಿನಾಲು ತಮ್ಮ ಸಂಗಡ ಅವುಗಳನ್ನು ಹೊಡೆದುಕೊಂಡು ಒಯ್ದು ಅವುಗಳನ್ನು ಚನ್ನಾಗಿ ಮೇಯಿಸಿ ತಾವು ತಿರಿಗಿ ಬರುವಾಗ್ಗೆ ಪುನಃ ತಮ್ಮ ಸಂಗಡ ತಂದು ಮನೆಗೆ ಮುಟ್ಟಿಸುತ್ತಿದ್ದರು ಆದರೆ ಒಂದು ದಿವಸ ಈ ಪ್ರಕಾರ ಅವುಗಳನ್ನು ಒಯ್ದು ಅಡವಿಯಲ್ಲಿ ಮೇಯಲಿಕ್ಕೆ ಬಿಟ್ಟು ತಮ್ಮ ಸ್ನಾನ ಸಂಧ್ಯಾದಿ ಕರ್ಮಗಳಲ್ಲಿ ತೊಡಗಿರಲಾಗಿ ಒಂದು ಕ್ರೂರವಾದ ಮೃಗವು ಎಮ್ಮೆಯ ಕರವನ್ನು ಕಚ್ಚಿಕೊಂಡು ಒಯ್ದಿತು. ಅದನ್ನು ಅವರು ತಾವು ಮನೆಗೆ ಬರುವಾಗ್ಗೆ ಕಂಡರು!

ಆಗ್ಗೆ ಸಮರ್ಥರು ರಂಗನಾಥ ಸ್ವಾಮಿಗೆ—"ಏನು ರಂಗನಾಥಾ, ಇಷ್ಟು ದಿವಸ ಆ ಮುದಿಕೆಯ ಮನೆಯಲ್ಲಿ ಬೆಣ್ಣೆ ಭಕ್ಕರಿಗಳನ್ನು ಯಥಾಸ್ಥಿತವಾಗಿ ಭುಂಜಿಸಿ ಈಗ ಆ ಮುದಿಕೆಯ ಕರವನ್ನು ಕೊಂದಿಯಲ್ಲಾ! ಇನ್ನೇನುಗತಿ? ಆ ಮುದಿಕೆಗೆ ಇನ್ನೇನು ಹೇಳುತ್ತೀ?" ಎಂದು ಕೇಳಿದರು. ಅದಕ್ಕೆ ರಂಗನಾಥ ಸ್ವಾಮಿಯು ಸಮರ್ಥರಿಗೆ—"ನಾನೊಬ್ಬನೇ ಆ ಮುದಿಕೆಯ ಮನೆಯ ಹಾಲು-ಮೊಸರು-ಬೆಣ್ಣೆಗಳನ್ನು ತಿಂದವನಲ್ಲ. ಎಲ್ಲರೂ ತಿಂದಿರುತ್ತೇವೆ. ಆದ್ದರಿಂದ ಎಲ್ಲರೂ ಈ ಬಗ್ಗೆ ಸಮವಾಗಿ ವಿಚಾರ ಮಾಡಬೇಕು." ಎಂದು ಹೇಳಿದನು. ಈ ಪ್ರಕಾರ ಇವರೊಳಗೆ ಸಂವಾದವಾದ ತರುವಾಯ ಎಮ್ಮೆಯೊಂದನ್ನೇ ಹೊಡಕೊಂಡು ನಾಲ್ವರ ... ಹೊರಟು ಬಂದರು. ಆ ಮುದಿಕೆಗೆ ತನ್ನ ಎಮ್ಮೆಯ ಕರವು ಸತ್ತು ಹೋಯಿತೆಂದು ಗೊತ್ತಾದ ಕೂಡಲೆ ವಳು ದುಃಖದಿಂದ ಬಹಳ ಅಳಹತ್ತಿದಳು. ಇಷ್ಟರಲ್ಲಿ ಸಾಯಂಕಾಲವಾಯಿತು. ಎಮ್ಮೆಯ ಕೆಚ್ಚಲವು ಬಿಗಿದು ಹೋಯಿತು. ಅದು ತನ್ನ ನಿತ್ಯ ಸಾಂಪ್ರದಾಯದಂತೆ ಕರುವಿಗೆ ಮೊದಲು ಮೊಲೆ ಕುಡಿಸದೆ ಆ ಮುದಿಕೆಗೆ ಹಿಂಡಿಕೊಳ್ಳಲಿಕ್ಕೆ ಕೈ ಹಾಕಿಕೊಡಲಿಲ್ಲ. ಆಗ ಆಮುದಿಕೆಗೆ ಅತ್ಯಂತ ದುಃಖವುಂಟಾಗಿ ಅವಳು ಅವರಿಗೆಲ್ಲ ನಿಷ್ಠುರದಿಂದ ಮಾ ಾಡಹತ್ತಿದಳು. ಅದನ್ನು ನೋಡಿ ಸಮರ್ಥರು ತಮ್ಮ ಜೊತೆಗಾರರಿಗೆ—"ಅಪ್ಪಗಳಿರಾ! ನೀವು ಇಷ್ಟು ದಿವಸ ಉಂಡ ಹಾಲು ಮೊಸರನ್ನು ನೆನಪಿಗೆ ತಂದು ಮುದಿಕೆಗೆ ಈ ಎಮ್ಮೆಯು ಹಾಲು ಕೊಡುವಂತೆ ಏನಾದರೂ ಉಪಾಯವನ್ನು ಯೋಚಿಸರಿ" ಎಂದು ಹೇಳಿದರು. ಅದಕ್ಕೆ ಆ ತ್ರಿವರ್ಗರು—"... ಹಿರಿಯರ ಕೆ ಲಸವು. ಆದ್ದರಿಂದ ಹಿರಿಯರೇ ಇದನ್ನು ಮಾಡತಕ್ಕದ್ದು" ಎಂದು ಉತ್ತರಕೊಟ್ಟರು. ಆಗ ಸಮರ್ಥರು ಆ ಎಮ್ಮೆಯುಮೇಲೆ ತಮ್ಮ ಕೈಯಾಡಿಸಿ ಆ ಎಮ್ಮೆಗೆ—"ಅವ್ವಾ! ಇದು ಮೃತ್ಯು ಲೋಕವು. ಹುಟ್ಟಿದ ಪ್ರಾಣಿಯು ಎಂದಾದರೊಮ್ಮೆ ಸಾಯಲೇಬೇಕು. ಆದ್ದರಿಂದ ನೀನು ನಿನ್ನ ಕರವು ಸತ್ತಿತೆಂದು ಶೋಕಿಸಬೇಡ. ನಿನ್ನ ಸ್ವಾಮಿನಿಗೆ ನೀನು ನಿತ್ಯದಂತೆ ಹಾಲು ಕೊಡು. ನೀನು ಇನ್ನು ಮುಂದೆ ಬದಕೊಳ್ಳಲೂಬೇಡ, ಈಯಲೂ ಬೇಡ. ಈ ಮುದಿಕೆಯು ಇರುವ ತನಕ ಇದರಂತೆ ಯಾವಾಗಲೂ ಹಾಲು ಕೊಡುತ್ತಿರು" ಎಂದು ಹೇಳಿ ಆ ಮುದಿಕೆಗೆ—"ನೀನು ಯಥಾಪ್ರಕಾರ ಹಿಂಡಿಕೋ" ಎಂದು ಅಪ್ಪಣೆಯನ್ನು ಮಾಡಿದರು. ಆಗ ಅಮುದಿಕೆಯು ಹಿಂಡಲಾಗಿ ಆ ಎಮ್ಮೆಯು ದಿನದ ಇಮ್ಮಡಿ ಹಾಲನ್ನು ಕೊಟ್ಟಿತು. ಈ ಚಮತ್ಕಾರವನ್ನು ಅವಲೋಕಿಸಿ ಆ ಮುದಿಕೆಯು ಅವರೆಲ್ಲರಿಗೂ ಸಾಷ್ಟಾಂಗ ನಮಸ್ಕಾರವನ್ನು ಹಾಕಿದಳು. ಆ ಮೇಲೆ ಆ ಮುದಿಕೆಯು ಇರುವತನಕ ಅವಳ ಎಮ್ಮೆಯು ಎಂದೂ ಈಯದೆ ಅಥವಾ ಬದಕೊಳ್ಳದೆ ಯಥಾಸ್ಥಿತವಾಗಿ ಹಾಲು ಕರೆಯಿತು !!

ಉಂಬ್ರಜದಲ್ಲಿಯ ಚಮತ್ಕಾರವು:—ಅದೇ ವರ್ಷ ಒಂದು ದಿವಸ ಸಮರ್ಥರು ಉಂಬ್ರಜದಲ್ಲಿರುವಾಗ್ಗೆ ತಮ್ಮ ಶಿಷ್ಯರೊಂದಿಗೆ ಪ್ರಾತಃಕಾಲಕ್ಕೆ ನದಿಯ ಸ್ನಾನಕ್ಕೆ ಹೋಗಿದ್ದರು. ಆಗ ಸಮರ್ಥರು ಕಾಲು ತಪ್ಪಿ ನದಿಯೊಳಗೆ ಮುಳುಗಿ ನೆಲಕ್ಕೆ ಮುಟ್ಟಿ ಮೇಲೆದ್ದವರೇ "ಮುಳುಗಿದೆನೆರೋ ಮುಳುಗಿದೆ. ಓಡಿಬರ್ರಿ" ಎಂದು ತಮ್ಮ ಶಿಷ್ಯ ಮಂಡಳಿಗೆ ಒದರಿ ಹೇಳಿದರು. ಅದನ್ನು ಕೇಳಿ ಅವರ ಶಿಷ್ಯರು ಓಡಿ ಬಂದು ಅವರನ್ನು ಹಿಡಿಯುವಷ್ಟರಲ್ಲಿ ಶ್ರೀಮಾರುತಿಯು ತಾನಾಗಿ ಓಡಿಬಂದು ಸಮರ್ಥರಿಗೆ ತನ್ನ ಕೈ ಕೊಟ್ಟು ಅವರನ್ನು ತನ್ನ ಹೊಟ್ಟೆಗೆ ತಬ್ಬಿಕೊಂಡು ಮೇಲಕ್ಕೆ ತೆಗೆದುಕೊಂಡು ಬಂದನು. ಇದನ್ನು ನೋಡಿ ಸಮರ್ಥರು ಶ್ರೀಮಾರುತಿಗೆ—"ನೀವು ಇಷ್ಟ್ಯಾಕೆ ಶ್ರಮ ತೆಗೆದುಕೊಂಡಿರಿ? ನನ್ನ ಶಿಷ್ಯ ಜನರು ಈಗಲೇ ಬರುತ್ತಿದ್ದರು. ಇದಲ್ಲದೆ ನಾನೂ ಮುಳುಗುತ್ತಿದ್ದಿಲ್ಲ" ಎಂದು ಹೇಳಿದರು. ಅದಕ್ಕೆ ಶ್ರೀಮಾರುತಿಯು "ನಿನ್ನ ಶಿಷ್ಯರು ಬರುವತನಕ ನಾನು ಸುಮ್ಮನೇ ಹ್ಯಾಗೆ ಕೂಡ್ರಬೇಕು?" ಎಂದು ಕೇಳಿದನು. ಆಗ ಸಮರ್ಥರು ಶ್ರೀಮಾರುತಿಗೆ—"ನಾನು ನಿಮ್ಮ ಚರಣದಾಸನು. ತಮ್ಮ ಕೃಪಾಕಟಾಕ್ಷವು ನನ್ನ ಮೇಲೆ ಯಾವಾಗಲೂ ಇದ್ದೇ ಇರುವದು" ಎಂದು ನುಡಿದರು. ಇದನ್ನು ಕೇಳಿ ಶ್ರೀಮಾರುತಿಯು ಅದೃಶ್ಯನಾದನು. ಶ್ರೀಮಾರುತಿಯು ತನ್ನ ಹೆಜ್ಜೆಯನ್ನು ಊರಿ ಸಮರ್ಥರನ್ನು ನದಿಯಿಂದ ಮೇಲಕ್ಕೆತ್ತಿ ತೆಗೆದುಕೊಂಡ ಸ್ಥಳದ ಮೇಲೆ ಇನ್ನೂ ಶ್ರೀಮಾರುತಿಯ ಒಂದು ಹೆಜ್ಜೆಯು ಚನ್ನಾಗಿ ಕಾಣಿಸುತ್ತಿರುವದು, ಇನ್ನೊಂದು ಹೆಜ್ಜೆಯು ಮಾತ್ರ ಅರ್ಧಮರ್ಧ ಕಾಣುತ್ತಿರುವದು.

ಭಾಗವಗರದೊಳಗಿನ ಚಮತ್ಕಾರವು:— ಪ್ರತಿ ವರ್ಷದಂತೆ ರಂಗನಾಥ ಸ್ವಾಮಿಗಳು ಜಯರಾಮ ಸ್ವಾಮಿಯ ಭೇಟಿಯ ಗೋಸ್ಕರ ಭಾಗನಗರಕ್ಕೆ ಹೋದಾಗ್ಗೆ ಅಲ್ಲಿ ಒಂದು ಸಾರೆ ಎರಡು ತಿಂಗಳಗಳ ವರೆಗೆ ಇದ್ದರು. ದಿನಾಲು ಜಯರಾಮ ಸ್ವಾಮಿಯ ಮಠದಲ್ಲಿ ರಂಗನಾಥ ಸ್ವಾಮಿಗಳ ಕೀರ್ತನವು ನಡೆಯುತ್ತಿತ್ತು. ಈ ಕೀರ್ತನವನ್ನು ಕೇಳಲಿಕ್ಕೆ ದಿನಾಲು ಸಾವಿರಾರು ಜನರು ನೆರೆಯುತ್ತಿದ್ದರು. ಕೀರ್ತನವನ್ನು ಕೇಳಲಿಕ್ಕೆ ಬಂದವರಲ್ಲಿ ಎಷ್ಟೋ ಜನರು ರಂಗನಾಥ ಸ್ವಾಮಿಗಳನ್ನು ತಮ್ಮ ಮನೆಗೆ ಭೋಜನಕ್ಕೆ ಕರೆಯುತ್ತಿದ್ದರು. ಹಾಗೂ ಎಷ್ಟೋ ಜನರು ಅನ್ಯ ರೀತಿಯಿಂದ ಅದರ ಸತ್ಕಾರ ಮಾಡುತ್ತಿದ್ದರು. ಈ ಮೇರೆಗೆ ರಂಗನಾಥ ಸ್ವಾಮಿಗಳ ಲೌಕಿಕವು ಆ ಊರಲ್ಲಿ ದಿನೇ ದಿನೇ ಹೆಚ್ಚಾಗಹತ್ತಿತು. ರಂಗನಾಥ ಸ್ವಾಮಿಗಳು ಊರಿಗೆ ಹೊರಡುವ ದಿವಸವು ಸಮೀಪಬಂದ ಹಾಗೆ ಕೀರ್ತನವನ್ನು ಕೇಳಲಿಕ್ಕೆ ಜನರು ಹೆಚ್ಚೆಚ್ಚು ನೆರೆಯುತ್ತಿದರು. ಇವರ ಕೀರ್ತನವನ್ನು ಕೇಳಿ ಇವರ ಮೇಲೆ ಭಕ್ತಿಯುಂಟಾಗಿದ್ದಂಥ ಒಬ್ಬ ಬಡ ಮುದಿಕೆಯು ಇವರನ್ನು ತನ್ನ ಮನೆಗೆ ಭೋಜನಕ್ಕೆ ಕರೆದುಕೊಂಡು ಹೋದರೆ ತಾನು ಧನ್ಯಳಾಗುವೆನೆಂದು ಆಲೋಚಿಸಿ ತನ್ನ ಎ

ನಂತಿಯನ್ನು ಸ್ವಾಮಿಗಳ ಮುಂದೆ ಮಾಡಿಕೊಳ್ಳಲಿಕ್ಕೆ ಧೈರ್ಯವಿಲ್ಲದೆ ಸುಮ್ಮನೇ ಒಂ
ದು ಮೂಲಿಯಲ್ಲಿ ಕೈಜೋಡಿಸಿಕೊಂಡು ನಿಂತಿದ್ದಳು. ಕೀರ್ತನ ಕೇಳಲಿಕ್ಕೆ ಬಂದ
ವರೆಲ್ಲರೂ ಹೊರಟು ಹೋದಾಗ್ಯೂ ಇವಳು ತಾನೊಬ್ಬಳೇ ಹಿಂದೆ ಉಳಿದು ತನ್ನ
ಮನಸ್ಸಿನೊಳಗೆ " ಪರಮೇಶ್ವರಾ! ನನ್ನಂಥ ದರಿದ್ರ ಮುಂಡೇ ಮಗಳನ್ನು ಈ ಜಗ
ತ್ತಿನಲ್ಲಿ ಯಾಕೆ ಹುಟ್ಟಿಸಿದಿ? ನನ್ನ ಭಕ್ತಿಗೆ ತಕ್ಕಂತೆ ಈ ಸ್ವಾಮಿಗಳನ್ನೂ ಅವರ ಯಾ
ವತ್ತು ಶಿಷ್ಯರನ್ನೂ ನನ್ನ ಮನೆಗೆ ಕರೆದುಕೊಂಡು ಹೋಗಿ ಅವರನ್ನು ಉಣ್ಣಿಸುವ
ಷ್ಟು ಶಕ್ತಿಯನ್ನು ಸಹ ನನಗೆ ಕೊಡಬಾರದಿತ್ತೇ? " ಎಂದು ಖೇದ ಪಡುತ್ತ ಕ
ಣ್ಣೀರು ಉದರಿಸುತ್ತ ನಿಂತಿದ್ದಳು. ರಂಗನಾಥ ಸ್ವಾಮಿಗಳು ಸ್ವತಃ ಒಂದೆರಡು ಸಾ
ರೆ ಇನ್ನು ಹೋಗೆಂದು ಅವಳಿಗೆ ಸೂಚಿಸಿದರು. ಅವಳು "ಹೋಗುತ್ತೇನೆ" ಎಂದು
ಹೇಳಿ ಪುನಃ ಅಲ್ಲಿಯೇ ನಿಂತುಕೊಂಡಳು. ಆಗ ರಂಗನಾಥ ಸ್ವಾಮಿಗಳು ಅವಳ
ಮನೋಭಿಪ್ರಾಯವನ್ನು ತಿಳಿದು "ಅಮ್ಮಾ! ನಿನ್ನ ಮನೆಗೆ ನಾಳೆ ಭೋಜನಕ್ಕೆ ಬ
ರುತ್ತೇನೆ. ಇದರಿಂದ ನಿನಗೆ ಆನಂದವಾಯಿತಷ್ಟೇ? ಇನ್ನು ನೀನು ಹೋಗು" ಎಂ
ದು ಹೇಳಿದರು. ಆಗ ಮುದಿಕೆಯು ರಂಗನಾಥ ಸ್ವಾಮಿಗಳ ಚರಣದ ಮೇಲೆ ತ
ನ್ನ ಮಸ್ತಕವನ್ನಿಟ್ಟು " ನನ್ನ ಬಡಿವೆಯ ಮೇಲೆ ಬಹಳ ಕೃಪೆಯನ್ನು ಮಾಡಿದಿರಿ"
ಎಂದು ನುಡಿದಳು. ಇಷ್ಟಾದರೂ ಆಕೆಯ ಮನಸ್ಸಿನ ಸಮಾಧಾನವಾಗಲಿಲ್ಲ.
"ಸ್ವಾಮಿಗಳ ಸಂಗಡ ಅವರ ಶಿಷ್ಯರೆಲ್ಲರು ನನ್ನ ಮನೆಗೆ ಭೋಜನಕ್ಕೆ ಬಂದರೆ ನಾನು
ಎಲ್ಲಿಂದ ತಂದು ಇಕ್ಕಲಿ?" ಎಂಬ ಎದೆಗುದಿಯು ಅವಳಿಗೆ ಹತ್ತಿತು. ಆದ್ದರಿಂದ
ಅವಳು ಅಲ್ಲಿಂದ ತನ್ನ ಕಾಲು ಮೇಲಕ್ಕೆಬ್ಬಿಸದೆ ಹಾಗೇ ನಿಂತುಕೊಂಡಳು. ಇದರ
ಇಂಗಿತವನ್ನು ರಂಗನಾಥ ಸ್ವಾಮಿಗಳು ಜ್ಞಾನದೃಷ್ಟಿಯಿಂದ ತಿಳಿದು ಅವಳಿಗೆ—
"ಅವ್ವಾ! ನಾನೊಬ್ಬನೇ ನಿನ್ನ ಮನೆಗೆ ಬರುತ್ತೇನೆ. ನನ್ನ ಶಿಷ್ಯರೆಲ್ಲರು ಇಲ್ಲಿಯೇ
ಉಣ್ಣುವರು" ಎಂದು ಹೇಳಿದರು. ಆಗ ಅದನ್ನು ಕೇಳಿ ಆ ಮುದಿಕೆಯು ಬಹಳ
ಸಂತೋಷಪಟ್ಟು ತನ್ನ ಮನೆಗೆ ಹೋಗಲಿಕ್ಕೆ ಹೊರಟಳು ಅದನ್ನು ನೋಡಿ ರಂಗ
ನಾಥ ಸ್ವಾಮಿಗಳು ಅವಳ ಹಿಂದಿಂದೆ ಅವಳ ಮನೆಯನ್ನು ನೋಡಿಕೊಂಡು ಬರುವ
ದಕ್ಕಾಗಿ ತಮ್ಮೊಬ್ಬ ಶಿಷ್ಯನನ್ನು ಕಳುಹಿಸಿದರು. ಅದರಂತೆ ಆ ಶಿಷ್ಯನು ಅವಳ
ಮನೆಯನ್ನು ನೋಡಿಕೊಂಡು ಬಂದನು. ಮಾರನೇ ದಿವಸ ಬೆಳಿಗ್ಗೆ ರಂಗನಾಥ
ಸ್ವಾಮಿಗಳು ತಮ್ಮೆಲ್ಲ ಶಿಷ್ಯರಿಗೆ—"ನಾನೊಬ್ಬನೇ ಈ ಹೊತ್ತು ನಿನ್ನೆ ಬಿನ್ನಮಾಡಿದ
ಮುದಿಕೆಯ ಮನೆಗೆ ಊಟಕ್ಕೆ ಹೋಗುತ್ತೇನೆ. ನೀವು ಯಾವತ್ತು ಶಿಷ್ಯರು ಇಲ್ಲಿಯೇ
ಅಡಿಗೆ ಮಾಡಿಕೊಂಡು ಊಟ ಮಾಡಿರಿ" ಎಂದು ಹೇಳಿದರು. ಅದರಂತೆ ಅವರ ಯಾ
ವತ್ತು ಶಿಷ್ಯರು ತಮ್ಮ ತಮ್ಮ ಅಡಿಗೆಯ ಸಿದ್ಧತೆಯನ್ನು ಮಾಡಿಕೊಳ್ಳವಲ್ಲಿ ತೊಡ
ಗಿದರು. ರಂಗನಾಥ ಸ್ವಾಮಿಗಳು ತಮ್ಮ ಪೂಜಾ ಸಾಹಿತ್ಯಗಳನ್ನೂ ತಮ್ಮ ಇ
ಷ್ಟ ಮೂರ್ತಿಗಳನ್ನೂ ಒಂದೇ ಪೆಟ್ಟಿಗೆಯಲ್ಲಿ ಹಾಕಿ ಆ ಮುದಿಕೆಯ ಮನೆಗೆ ಕಳುಹಿ

ಸಿ ಕೊಟ್ಟರು. ಮಧ್ಯಾಹ್ನಕ್ಕೆ ರಂಗನಾಥ ಸ್ವಾಮಿಗಳು ಅವಳ ಮನೆಗೆ ಹೋದರು. ಸ್ವಾಮಿಗಳು ತಮ್ಮ ಪೂಜೆಯನ್ನು ಮುಗಿಸಿದ ತರುವಾಯ ಅವಳಿಗೆ ನೈವೇದ್ಯವನ್ನು ಬಡಿಸಲಿಕ್ಕೆ ಹೇಳಿದರು. ಆ ಮುದಿಕೆಯು ಮೂರು ಪತ್ರಾವಳಿಎಲೆಯನ್ನು ತಂದು ಮೂರು ಜನರ ಭೋಜನದ ಸಿದ್ಧತೆಯನ್ನು ಮಾತ್ರ ಮಾಡಿದ್ದಳು. ಅವಳು ಬಹಳ ಬಡವೆ ಇದ್ದಳು. ಆದರೆ ಅವಳಿಗೆ ದೇವರಲ್ಲಿಯೂ ಗುರುಗಳಲ್ಲಿಯೂ ನಿಸ್ಸೀಮ ಭಕ್ತಿ ಇತ್ತು. ಅವಳು ಅರ್ಧಶೇರು ಜೋಳ ಒಡೆದು ಮೂರು ಜನರಿಗೆ ಸಾಕಾಗುವಷ್ಟು ನುಚ್ಚು ಅಟ್ಟು, ಎರಡು ಛಕ್ಕರೆ ಮತ್ತು ಒಂದು ಹಿಡಿ ಕಡ್ಲೀ ಪಲ್ಲೆಯನ್ನು ಮಾಡಿದ್ದಳು. ಅದನ್ನು ನೈವೇದ್ಯದ ಗೋಸ್ಕರ ಒಂದು ಪತ್ರಾವಳಿ ಎಲೆಯ ಮೇಲೆ ಬಡಿಸಿ ಅನ್ನ ಶುದ್ಧಿಯ ದೆಸೆಯಿಂದ ಒಂದು ತುಲಸೀ ಪತ್ರವನ್ನು ಅದರ ಮೇಲೆ ಇಟ್ಟಿದ್ದಳು. ನೈವೇದ್ಯವು ಮುಗಿದ ತರುವಾಯ ಒಂದು ಗೇಣುದ್ದ ಮಣೆಯಮೇಲೆ ರಂಗನಾಥ ಸ್ವಾಮಿಗಳು ಹೋಗಿ ಕುಳಿತು ಬಡವಿಯಾಗಿದ್ದರೂ ಬಹಳ ಭಕ್ತಿವಂತಳಾಗಿದ್ದಾಳೆಂದು ಕಂಡು ಮತ್ತು ಅವಳು ಅಟ್ಟಂಥ ನುಚ್ಚನ್ನು ನೋಡಿ ಶ್ರೀಭಗವಂತನು ವಿದುರನ ಮನೆಯಲ್ಲಿ ಉಂಡ ನುಚ್ಚು ಅಮೃತಕ್ಕೆ ಸಮವಾಗಿತ್ತೆಂದು ನೆನಿಸಿಕೊಂಡು ಬಾಯಲ್ಲಿ ನೀರು ತಂದದ್ದಲ್ಲದೆ ಇಂಥ ಭೋಜನದ ಕಾಲಕ್ಕೆ ಸಮರ್ಥರು ಇದ್ದರೆ ಎಷ್ಟು ಲಾಭವಾಗುತ್ತಿತ್ತೆಂದು ಮನಸ್ಸಿನಲ್ಲಿ ಆಲೋಚಿಸುತ್ತ ಮಣೆಯ ಮೇಲೆ ಸ್ತಬ್ಧರಾಗಿ ಕುಳಿತುಕೊಂಡರು. ಇದನ್ನು ನೋಡಿ ಆ ಮುದಿಕೆಯು ರಂಗನಾಥ ಸ್ವಾಮಿಗಳಿಗೆ—“ಸ್ವಾಮೀ! ಇನ್ನು ವಿಲಂಬ ವ್ಯಾಕೆ? ಭೋಜನಕ್ಕೆ ಆರಂಭಿಸಬೇಕು” ಎಂದು ವಿನಂತಿ ಮಾಡಿದಳು. ಅದಕ್ಕೆ ರಂಗನಾಥ ಸ್ವಾಮಿಗಳು—“ಅಮ್ಮಾ! ಈ ಹೊತ್ತು ಸಮರ್ಥರೆಂಬೊಬ್ಬ ಹಿರಿಯರು ಭೋಜನಕ್ಕೆ ಬರತಕ್ಕವರಿದ್ದಾರೆ. ಅದ್ದರಿಂದ ಅವರ ಮಾರ್ಗವನ್ನು ನೋಡುತ್ತ ಕುಳಿತಿದ್ದೇನೆ” ಎಂದು ಉತ್ತರ ಕೊಟ್ಟರು. ಆಗ ಆ ಮುದಿಕೆಯು ರಂಗನಾಥ ಸ್ವಾಮಿಗಳಿಗೆ “ಸಮರ್ಥರು ಎಲ್ಲಿದ್ದಾರೆ?” ಎಂದು ವಿಚಾರಿಸಿದಳು. ಅದಕ್ಕೆ ಅವರು “ಚಾಫಳದಲ್ಲಿ” ಎಂದು ಹೇಳಿದರು. ಆಗ ಅವಳು ಪುನಃ “ಚಾಫಳವೆಲ್ಲಿ?” ಎಂದು ವಿಚಾರಿಸಿದಳು. ಅದಕ್ಕೆ ಸ್ವಾಮಿಗಳು “ಇನ್ನೂರು ಹರದಾರಿ” ಎಂದು ಉತ್ತರಕೊಟ್ಟರು. ಅದನ್ನು ಕೇಳಿ ಅವಳು “ಅವರು ಇನ್ನೂರುಹರದಾರಿ ದೂರಿದ್ದು ಇಲ್ಲಿ ಭೋಜನಕ್ಕೆ ಬರುವದು ಹ್ಯಾಗೆ?” ಎಂದು ಆಶ್ಚರ್ಯಚಕಿತಳಾಗಿ ಕುಳಿತಳು. ಇಷ್ಟರಲ್ಲಿ ಚಾಫಳದೊಳಗೆ ಸಮರ್ಥರು ಭೋಜನಕ್ಕೆ ಕೂಡ್ರುವ ಸಿದ್ಧತೆಯಲ್ಲಿದ್ದರು. ಆಗ ಅವರು ರಂಗನಾಥ ಸ್ವಾಮಿಗಳ ಇಚ್ಛೆಯನ್ನು ಅಂತರ್ಜ್ಞಾನದಿಂದ ಅರಿತು ತಮ್ಮೆಲ್ಲ ಶಿಷ್ಯರಿಗೆ—“ನಾವು ಈಗ ಭೋಜನಕ್ಕೆ ರಂಗನಾಥ ಸ್ವಾಮಿಯ ಪಙ್ಕ್ತಿಗೆ ಹೋಗತಕ್ಕದ್ದುಂಟು. ನೀವೆಲ್ಲರು ಭೋಜ

ನಕ್ಕೆ ಕುಳಿತುಕೊಳ್ಳಿರಿ" ಎಂದು ನಿರೋಪ ಮಾಡಿ ಕಾಲಲ್ಲಿ ಪಾದುಕಗಳನ್ನು ಮೆಟ್ಟಿಕೊಂಡು ಮಠದ ಹೊರಗೆ ಬರುವದಕ್ಕಾಗಿ ಹೊರಟರು. ಅವರನ್ನು ಕಳುಹಿಸಲಿಕ್ಕೆ ಅವರ ಶಿಷ್ಯನಾದ ಕಲ್ಯಾಣನು ಹೊರಗೆ ಬಂದು "ರಂಗನಾಥ ಸ್ವಾಮಿಗಳು ಎಲ್ಲಿಹರಾದರೆ!" ಎಂದು ವಿಚಾರಿಸಿದನು. ಅದಕ್ಕೆ ಸಮರ್ಥರು "ಅವರು ಭಾಗಾನಗರದಲ್ಲಿ" ಎಂದು ಉತ್ತರ ಕೊಟ್ಟವರೇ ಒತ್ತರದಿಂದ ಮಠದ ಪಾವಟಿಗೆಗಳನ್ನು ಇಳಿದು ಅಲ್ಲಿ ಅದೃಶ್ಯರಾಗಿ ಕೂಡಲೇ ಭಾಗಾನಗರಕ್ಕೆ ಬಂದು ತಲ್ಪಿ ಈ ಮುದಿಕೆಯ ಮನೆಯ ಮುಂದೆ ನಿಂತುಕೊಂಡರು. ಇದನ್ನು ರಂಗನಾಥ ಸ್ವಾಮಿಗಳು ತಿಳಿದು ಮನೆಯ ಹೊರಗೆ ಹೋಗಿ ಸಮರ್ಥರಿಗೆ ನಮಸ್ಕರಿಸಿ ಸಮರ್ಥರನ್ನು ಒಳಗೆ ಕರಕೊಂಡು ಬಂದು ಕೂಡಿಸಿದರು. ಆಗ ಸಮರ್ಥರು ರಂಗನಾಥ ಸ್ವಾಮಿಗಳ ಕಡೆಗೆ ನೋಡಿ ನಕ್ಕು:—"ಏನು ರಂಗನಾಥಾ, ಈ ಹೊತ್ತು ಏನು ಪಕ್ವಾನ್ನ ಮಾಡಿಸಿರುತ್ತೀ!" ಎಂದು ವಿಚಾರಿಸಿದರು. ಅದಕ್ಕೆ ರಂಗನಾಥ ಸ್ವಾಮಿಗಳು—"ಸ್ವಾಮೀ! ಈ ಹೊತ್ತು ವಿದುರನ ಮನೆಯನುಚ್ಚು ಸಿದ್ಧವಾಗಿರುತ್ತದೆ" ಎಂದು ಉತ್ತರ ಕೊಟ್ಟರು. ಅದನ್ನು ಕೇಳಿ ಸಮರ್ಥರು "ಬಹಳ ಉತ್ತಮವಾಯಿತು" ಎಂದು ನುಡಿದರು. ಆಗ ಆ ಮುದಿಕೆಯು ಸಮರ್ಥರ ಮುಂದೆ ಹಾಕಿದ್ದ ಪತ್ರಾವಳಿಯಲ್ಲಿ ನುಚ್ಚು, ಛಕ್ಕರಿ ಮತ್ತು ಪಲ್ಯ ಇವುಗಳನ್ನು ಬಡಿಸಿದಳು. ತರುವಾಯ ಸಮರ್ಥರು ರಂಗನಾಥಸ್ವಾಮಿಗೆ—"ಏನಪ್ಪಾ ರಂಗನಾಥಾ! ನಾವು ಕೇಶವಸ್ವಾಮಿಯು ಊರಿಗೆ ಬಂದಿರುತ್ತಿದ್ದು ಅವರನ್ನು ಬಿಟ್ಟುಕೊಟ್ಟು ನಾವೇ ಭೋಜನ ಮಾಡುವದು ಸರಿಯಲ್ಲ. ಆದ್ದರಿಂದ ಕೇಶವ ಸ್ವಾಮಿಯನ್ನೂ ಕರಿಸು" ಎಂದು ಹೇಳಿದರು. ಅದಕ್ಕೆ ರಂಗನಾಥ ಸ್ವಾಮಿಗಳು "ಹೌದೌದು" ಎಂದು ಒಪ್ಪಿಕೊಂಡರು. ಇಷ್ಟರಲ್ಲಿ ಕೇಶವ ಸ್ವಾಮಿಯು ಅಲ್ಲಿಗೆ ಬರಲಾಗಿ ಅವರಿಗೂ ಆ ಮುದಿಕೆಯು ತಾನು ಸಿದ್ಧಮಾಡಿಟ್ಟ ಪಾಕವನ್ನು ಅವರ ಮುಂದೆ ಮೂರನೇ ಪತ್ರಾವಳಿಯಲ್ಲಿ ಬಡಿಸಿದಳು. ಆಗ ಪುನಃ ಸಮರ್ಥರು "ನಮ್ಮ ಜಯರಾಮನೂ ಆನಂದ ಮೂರ್ತಿಯೂ ಈ ಹೊತ್ತಿನಲ್ಲಿ ಇದ್ದರೆ ಬಹಳ ನೆಟ್ಟಗಾಗುತ್ತಿತ್ತು" ಎಂಬದಾಗಿ ಉದ್ಗಾರವನ್ನು ಹೊರಗೆಡವಿದರು. ಇಷ್ಟರಲ್ಲಿ ಅವರಿಬ್ಬರೂ ಅಲ್ಲಿಗೆ ಪ್ರಾಪ್ತರಾದರು. ಅವರನ್ನು ಕಂಡು ಆ ಮುದಿಕೆಯು "ಇನ್ನೆರಡು ಪತ್ರಾವಳಿಗಳನ್ನು ಎಲ್ಲಿಂದ ತರಲಿ? ಇದ್ದ ಮೂರು ಪತ್ರಾವಳಿಗಳು ತೀರಿ ಹೋದವು. ಇನ್ನು ನನ್ನ ಮಾನ ಹೋಗುವ ಹೊತ್ತು ಬಂತಲ್ಲಾ!" ಎಂದು ಚಿಂತೆಮಾಡಹತ್ತಿದಳು. ಆಗ ರಂಗನಾಥ ಸ್ವಾಮಿಗಳು ಆ ಮುದಿಕೆಗೆ—"ಅವ್ವಾ! ಅಲ್ಲಿ ಒಲಿಯ ಮುಂದೆ ಇನ್ನೆರಡು ಪತ್ರಾವಳಿಗಳು ಕಾಣಿಸುತ್ತವೆ, ನೋಡು. ಅವುಗಳನ್ನು ತೆಗೆದುಕೊಂಡು ಬಾ" ಎಂದು ಹೇಳಿದರು. ಅದರಂತೆ ಆ ಮುದಿಕೆಯು ಹೋಗಿ ನೋಡಲಾಗಿ ಮತ್ತೆರಡು ಪತ್ರಾವಳಿಗಳು ಆವಳ ಕಣ್ಣಿಗೆ ಬಿದ್ದ

ವು. ಆಗ ಅವಳು ತನ್ನ ಮನಸ್ಸಿನಲ್ಲಿ "ಹೌದೌದು. ನನ್ನ ಕಣ್ಣು ತಪ್ಪಿ ಇವೆರಡು ಪತ್ರಾವಳಿಗಳು ಉಳಿದಿದ್ದವು. ಅವು ಸಿಕ್ಕದ್ದರಿಂದ ನೆಟ್ಟಗಾಯಿತು. ಇಲ್ಲದಿದ್ದರೆ ನನ್ನ ಅವಮಾನವಾಗುವ ಪ್ರಸಂಗವು ಬಂದಿತ್ತು" ಎಂದು ಅಂದುಕೊಂಡು ಸಂತೋಷದಿಂದ ಅವುಗಳನ್ನು ಜಯರಾಮಸ್ವಾಮಿ ಮತ್ತು ಆನಂದಮೂರ್ತಿ ಇವರ ಮುಂದೆ ಇಟ್ಟು ಅವರಿಗೂ ನುಚ್ಚು, ಭಕ್ಕರಿ, ಪಲ್ಯಗಳನ್ನು ಬಡಿಸಿದಳು. ಆಗ ಅವರೆಲ್ಲರು ಬಹಳ ಸಂತೋಷದಿಂದ ನುಚ್ಚು ಸುರಕೊಂಡು ಹಾಹಾ ಅನ್ನುವಷ್ಟರಲ್ಲಿ ಎಲೆಯಮೇಲೆ ಬಡಿಸಿದ್ದ ಯಾವತ್ತು ಪದಾರ್ಥಗಳನ್ನು ತಿಂದು ಮುಗಿಸಿದರು ಎಲೆಗಳಮೇಲೆ ಏನೂ ಪದಾರ್ಥವು ಉಳಿಯಲಿಲ್ಲ. ಆಗ ರಂಗನಾಥ ಸ್ವಾಮಿಯು ಆಮುದಿಕೆಯ ಕಡೆಗೆ ನೋಡಿ—"ಅವ್ವಾ, ಇನ್ನೂ ಏನಾದರೂ ಬಡಿಸುವದಿದ್ದರೆ ಬಡಿಸಿರಿ" ಎಂದು ಹೇಳಿದನು. ಆಗ ಆಮುದಿಕೆಯು ಮೋರೆಯನ್ನು ತಿರುವಿಕೊಂಡು ಅಳಹತ್ತಿದಳು. ಯಾಕಂದರೆ ತಪ್ಪೇಲಿಯೊಳಗಿನ ನುಚ್ಚು ಒಲಿಯ ಹಿಂದೆ ಇಟ್ಟಿದ್ದ ಭಕ್ಕರಿಗಳೂ ತೀರಿದ್ದವೆಂಬುವದು ಅವಳಿಗೆ ಮೊದಲೇ ಗೊತ್ತಿತ್ತು. ಅದನ್ನು ರಂಗನಾಥ ಸ್ವಾಮಿಯು ಕಂಡು ಆಮುದಿಕೆಗೆ "ಯಾಕೆ ಅಳುತ್ತಿಯಮ್ಮಾ?" ಎಂದು ಕೇಳಿದರು. ಅದಕ್ಕೆ ಅವಳು—"ಸ್ವಾಮೀ! ನಾನೇನು ಹೇಳಲಿ! ನಾನು ಮಾಡಿದ್ದ ಎಲ್ಲ ಅಡಿಗೆಯು ತೀರಿ ಹೋಯಿತು" ಎಂದಳು. ಆಗ ರಂಗನಾಥ ಸ್ವಾಮಿಯು ಅವಳಿಗೆ—"ಹಾಗೆ ಅನ್ನಬಾರದು. ಇನ್ನೊಮ್ಮೆ ತಿರುಗಿ ಹೋಗಿ ಚನ್ನಾಗಿ ಪರೀಕ್ಷಿಸು" ಎಂದು ಹೇಳಿದರು. ಅದರಂತೆ ಅವಳು ಹೋಗಿ ನೋಡಲಾಗಿ ಆತಪ್ಪೇಲಿಯಲ್ಲಿ ಇನ್ನೂ ನುಚ್ಚು ತುಂಬಿತ್ತು. ಒಲಿಯ ಹಿಂದೆ ಇನ್ನೂ ಎರಡು ಭಕ್ಕರಿಗಳು ಉಳಿದಿದ್ದವು. ಅವುಗಳನ್ನು ತೆಗೆದುಕೊಂಡು ಬಂದು ಆ ಮುದಿಕೆಯು ನಾಲ್ಕೈದು ಸಾರೆ ಬಡಿಸಿದಳು. ಅವರೆಲ್ಲರೂ ಸಾಕಾಗುವಷ್ಟು ಉಂಡರು. ಭೋಜನೋತ್ತರದಲ್ಲಿ ಆ ಮುದಿಕೆಯು ಅವರಿಗೆ ತುಳಸೀ ಪತ್ರವನ್ನು ಅರ್ಪಿಸಿದಳು. ಅದನ್ನು ಅವರು ಭಕ್ಷಿಸಿದರು. ಆ ಮೇಲೆ ಇನ್ನು ಆ ಮುದಿಕೆಯ ಸ್ವಂತ ಊಟಕ್ಕಾಗಿ ತಪೇಲಿಯೊಳಗೆ ಸಾಕಷ್ಟು ನುಚ್ಚು ಒಲಿಯಹಿಂದೆ ಎರಡು ಭಕ್ಕರಿಗಳೂ ಉಳಿದಿದ್ದವು. ಈ ಚಮತ್ಕಾರವನ್ನು ನೋಡಿ ಅವಳಿಗೆ ಅತ್ಯಂತ ಆನಂದವಾಗಿ ಅವಳೂ ತನ್ನ ಎಲೆಯಮೇಲೆ ಯಥೇಷ್ಟವಾಗಿ ಬಡಿಸಿಕೊಂಡು ಊಟಮಾಡಿದಳು. ನಂತರ ಅವರೆಲ್ಲರು ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ತೆಗೆದುಕೊಂಡು ತಮ್ಮ ತಮ್ಮ ಸ್ಥಳಕ್ಕೆ ಹೋಗಲು ಹೊರಟರು. ಆಗ ಸಮರ್ಥರು ರಂಗನಾಥ ಸ್ವಾಮಿಗೆ—"ರಂಗನಾಥಾ! ಈ ಮುದಿಕೆಯ ಮನೆಯಲ್ಲಿ ಉಂಡು ಅವಳಿಗೆ ಏನೂ ಆಶೀರ್ವಾದ ಕೊಡದೆ ಸುಮ್ಮನೇ ಹೋಗುವದು ಉಚಿತವೇ?" ಎಂದು ಕೇಳಿದರು. ಅದಕ್ಕೆ ರಂಗನಾಥ ಸ್ವಾಮಿಯು

'ಸ್ವಾಮಿಾ! ಅವೆಲ್ಲ ಹಿರಿಯರ ಕೆಲಸವು. ಉಣ್ಣುವದೊಂದೇ ನಮ್ಮ ಚಿಕ್ಕವರ ಕೆಲಸವು" ಎಂದು ನುಡಿದಳು ಆಗ ಸಮರ್ಥರು ಆ ಮುದಿಕೆಯನ್ನು ಕರೆದು ಅವಳ ಮಸ್ತಕದ ಮೇಲೆ ಕೈ ಇಟ್ಟರು. ಕೂಡಲೇ ಅವಳಿಗೆ ಸಮಾಧಿಯಾಗಿ ಭಗವದ್ದರ್ಶನದ ಲಾಭವಾಯಿತು. ಆ ಮೇಲೆ ಸಮರ್ಥರು ಪುನಃ ಅವಳ ಸಮಾಧಿಯನ್ನು ಇಳಿಸಿ "ನೀನು ಯಾವಾಗಲೂ ಇದೇ ಪ್ರಕಾರ ಆನಂದದಿಂದ ಇರು" ಎಂದು ಆಶೀರ್ವಾದ ಮಾಡಿ ಆ ವಳಿಗೆ "ಆನಂದೀಬಾಯಿ." ಎಂಬ ಹೆಸರಿಟ್ಟು ಹೊರಟುಹೋದರು. ಅಂದಿನಿಂದ ಜನರೆಲ್ಲರು ಆ ಮುದಿಕೆಗೆ "ಆನಂದೀಬಾಯಿ" ಎಂಬ ಹೆಸರಿನಿಂದ ಕರೆಯಹತ್ತಿದರು.

ಜಿದ್ದಿನ ಹಾಡುಗಳು:—ಸಮರ್ಥರು ಒಂದು ಸಾರೆ ಸಂಚರಿಸುತ್ತ ವಾಲೀ ಎಂಬಲ್ಲಿಗೆ ಬಂದರು ಅಲ್ಲಿ ಹರಿದಾಸರೊಳಗೂ ಲಾವಣೀ ಹಾಡುವವರೊಳಗೂ ಪಂಗಡವಾಗಿದ್ದವು. ಹರಿದಾಸರು ತಾವು ಗಾಯನಕುಶಲರೆಂತಲೂ ಲಾವಣೀಹಾಡುವವರು ತಾವು ಗಾಯನಕುಶಲರೆಂತಲೂ ಜಿದ್ದುಕಟ್ಟಿ ಹಾಡುತ್ತಿದ್ದರು. ಇಬ್ಬರೂ ಒಬ್ಬರಮೇಲೊಬ್ಬರು ಈರ್ಷೆಯಿಂದ ಹಾಡುತ್ತಿದ್ದರು. ಹಾಡುಗಳಿಂದಲೇ ಅವರ ಪ್ರಶ್ನೆಗೆ ಇವರು ಉತ್ತರ ಕೊಡುವದೂ ಇವರ ಉತ್ತರಕ್ಕೆ ಅವರು ಪ್ರತ್ಯುತ್ತರ ಕೊಡುವದೂ ನಡೆದಿದ್ದವು. ಅದನ್ನು ಸಮರ್ಥರು ಕಂಡು "ಇದೇನು?" ಎಂದು ಅವರಿಬ್ಬರಿಗೂ ಕೇಳಿದರು. ಅದಕ್ಕೆ ಅವರಿಬ್ಬರೂ "ನಾವು ಒಬ್ಬರಿಗೊಬ್ಬರನ್ನು ನಿರುತ್ತರ ಮಾಡುವದಕ್ಕಾಗಿ ಜಿದ್ದುಕಟ್ಟಿ ಹಾಡುತ್ತಲಿದ್ದೇವೆ" ಎಂದು ಉತ್ತರಕೊಟ್ಟರು. ಆಗ ಸಮರ್ಥರು ತಾವೂ ಒಂದು ಹಾಡನ್ನು ಹೊಸದಾಗಿ ರಚಿಸಿ ಹಾಡಿದರು. ಆ ಹಾಡಿನಲ್ಲಿ ಸಮರ್ಥರು ಅವರಿಗೆ—''ಪೃಥ್ವಿಯು ಭಾರವು ಎಷ್ಟಿರುತ್ತದೆ? ಬ್ರಹ್ಮಾಂಡದಲ್ಲಿ ವನಸ್ಪತಿಗಳು ಎಷ್ಟಿರುತ್ತವೆ? ಮೈಮೇಲಿರುವ ಕೂದಲುಗಳ ಸಂಖ್ಯೆಯು ಎಷ್ಟು?' ಎಂದು ಪ್ರಶ್ನೆ ಹಾಕಿದ್ದರು. ಆ ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೆ ಯಾರಿಂದಲೂ ಆಗಲಿಲ್ಲ. ಆಗ ಅವರಿಬ್ಬರೂ "ನಾವು ಸೋತೆವು" ಎಂದು ಒಪ್ಪಿಕೊಂಡು ಸಮರ್ಥರ ಕಾಲನ್ನು ಗಟ್ಟಿಯಾಗಿ ಹಿಡಿದರು. ಈ ಮೇರೆಗೆ ಸಮರ್ಥರು ಅವರೊಳಗಿನ ಕಲಹವನ್ನು ಶಾಂತ ಪಡಿಸಿ ಮುಂದಕ್ಕೆ ಸಾಗಿದರು.

ಕರ್ನಾಟಕ ಪ್ರಾಂತಕ್ಕೆ ಹೋಗಲು ಶಿವಾಜಿಮಹಾರಾಜರಿಗೆ ಅಪ್ಪಣೆಯನ್ನು ಕೊಟ್ಟದ್ದು: ಶಕ ೧೫೯೯ರಲ್ಲಿ ಶಿವಾಜಿಮಹಾರಾಜರು ಕರ್ನಾಟಕ ಪ್ರಾಂತಕ್ಕೆ ಹೋಗುವಗೋಸ್ಕರ ಯಾವತ್ತು ಸಿದ್ಧತೆಯನ್ನು ಮಾಡಿಕೊಂಡು ಸಮರ್ಥರ ಆಜ್ಞೆಯನ್ನು ತೆಗೆದುಕೊಳ್ಳುವದಕ್ಕಾಗಿ ಚಾಫಳಕ್ಕೆ ಹೋದರು. ಆಗ ಮಹಾರಾಜರು ತಾವು ಕರ್ನಾಟಕಕ್ಕೆ ಹೋಗಿ ತಿರುಗಿ ಬರುವವರೆಕ್ಕಾಗಿ ಬಹಳ ದಿವಸಗಳು ಹಿಡಿಯುವವೆಂದು ನೋಡಿ ತಾವು ತಿರುಗಿ ಬರುವಕಾಲ ಪರಿಯಂತರ ಮಠದ ಖರ್ಚಿಗಾಗಿ ಯೋಗ್ಯ ವ್ಯವಸ್ಥೆಯನ್ನು ಮಾಡಿ ಹೋಗಬೇಕೆಂದು ಆಲೋಚಿಸಿ ಮ

ಠದ ಪಾರುಪತ್ಯಗಾರನನ್ನು ಕರೆದು ಏನು ವ್ಯವಸ್ಥೆಯನ್ನು ಮಾಡಬೇಕೆಂದು
ವಿಚಾರಿಸಿದರು. ಆಗ ಆ ಪಾರುಪತ್ಯಗಾರನು ತಾನು ಸಮರ್ಥರ ಅಪ್ಪಣೆಯಿಲ್ಲದೆ
ಮಠದ ಆದಾಯವ್ಯಯಗಳ ಬಗ್ಗೆ ಏನೂ ತಿಳುಹಿಸುವದಿಲ್ಲೆಂದು ಉತ್ತರ ಕೊಟ್ಟ
ನು. ಆದಾಗ್ಯೂ ಮಹಾರಾಜರು ಮಠದ ಮೇಲಿನ ಭಕ್ತಿಯಿಂದ ಬಹಳ ವಶಾತ್ತಾ
ಯ ಮಾಡಿದಕಾರಣ "ಮಠದ ಉತ್ಪನ್ನವು ಮಠದ ವ್ಯಯಕ್ಕೆ ಸಾಕಾಗುವದಿಲ್ಲ.
ಕಳೆದ ಸಾರೆ ಸಮರ್ಥರು ಭಿಕ್ಷಾಟನದಿಂದ ಯಾವತ್ತು ವ್ಯಯವನ್ನು ಸಾಗಿಸಿದ
ರು" ಎಂದು ಆ ಪಾರುಪತ್ಯಗಾರನು ಹೇಳಿದನು. ಆಗ ಮಹಾರಾಜರು "ಇ
ದನ್ನು ನನಗೆ ಅದೇ ಕಾಲಕ್ಕೆ ತಿಳಿಸಿದ್ದರೆ ಸಮರ್ಥರಿಗೆ ಭಿಕ್ಷಾಟನದ ಶ್ರಮವನ್ನು
ತಪ್ಪಿಸುತ್ತಿದ್ದೆನು" ಎಂದು ಹೇಳಿ ಅವನಮೇಲೆ ಅಸಂತುಷ್ಟರಾಗಿ ಸಮರ್ಥರ ಕಡೆ
ಗೆ ಬಂದು "ಮಠಕ್ಕೆ ಹಣದ ಕೊರತೆಯಾದಾಗ್ಗೆ ನನಗ್ಯಾಕೆ ಅಪ್ಪಣೆ ಮಾಡು
ವದಿಲ್ಲ.? ಈ ನನ್ನ ರಾಜ್ಯವು ತಮ್ಮದಲ್ಲವೆಂತಲೋ? ಮಠದ ಸೇವೆಯನ್ನು ಮಾ
ಡಲಿಕ್ಕೆ ನಾನು ಅನಾಧಿಕಾರಿಯಾಗಿರುವೆನೆಂತಲೋ?" ಎಂದು ಬಹಳ ನಮ್ರತೆಯಿಂ
ದ ನುಡಿದರು. ಅದಕ್ಕೆ ಸಮರ್ಥರು "ಹಾಗೇನೂ ಅಲ್ಲ. ಶ್ರೀರಘುಪತಿಯ ಕೃ
ಪೆಯಿಂದ ಮಠಕ್ಕೆ ಯಾವ ತರದ ಕೊರತೆಯೂ ಬೀಳುವದಿಲ್ಲ. ನಿಮಗೆ ಯಾರಾ
ದರೂ ತಪ್ಪು ತಿಳಿಸಿರಬಹುದು." ಎಂದು ಉತ್ತರ ಕೊಟ್ಟರು. ಆಗ ಮಹಾರಾ
ಜರು ಬಹಳ ಆಗ್ರಹವನ್ನು ಹಿಡಿದದ್ದರಿಂದ ಸಮರ್ಥರು ಅವರಿಗೆ "ನಿನ್ನ ಮನಸ್ಸಿ
ಗೆ ಬಂದಂತೆ ಮಾಡು" ಎಂದು ನುಡಿದರು. ಆಗ ಮಹಾರಾಜರು ಮಠದ ಭೋಜ
ನ ಖರ್ಚಿಗಾಗಿ ಸಾತಾರಾ ಮತ್ತು ಕರ್ನಾಡ ಇವೆರಡೂ ಸ್ಥಳಗಳಿಂದ ಬರುವ
ಗೋಧಿ ಮತ್ತು ಕಡ್ಲಿಗಳನ್ನೂ ಅರಿವೆ ಮೊದಲಾದ ಖರ್ಚಿಗಾಗಿ ಏನಿಕೇನಗದಹಣವ
ನ್ನೂ ಮುಟ್ಟಿಸಬೇಕಾಗಿ ತಮ್ಮ ಕಾರಭಾರಿಗೆ ಅಪ್ಪಣೆಯನ್ನು ಮಾಡಿ ಸಮರ್ಥರ
ಅಪ್ಪಣೆಯನ್ನು ತೆಗೆದುಕೊಂಡು ಕರ್ನಾಟಕ ಪ್ರಾಂತಕ್ಕೆ ಹೊರಟು ಹೋದರು.

**ರಂಗೋಬಾಗೋಸಾವಿ:**—ಸಮರ್ಥರ ಶಿಷ್ಯರೊಳಗೆ ರಂಗೋಬಾಗೋಸಾ
ವಿ ಎಂಬೊಬ್ಬ ಶಿಷ್ಯನಿದ್ದನು. ಅವನು ಸಮರ್ಥರು ರಚಿಸಿದ ಅಭಂಗಗಳನ್ನೂ ಪ
ದ್ಯಗಳನ್ನೂ ಕಾಲಕ್ಕೆ ಸರಿಯಾಗಿ ಬಹಳ ಸು[illegible] ಅನ್ನುತ್ತಿದ್ದನು. ಆದರೆ
ಅವನು ವ್ಯಭಿಚಾರಿ ಇದ್ದನು. ಅವನು ಒಮ್ಮೊಮ್ಮೆ ತನ್ನ ತಲೆಯಲ್ಲಿ ಹುಳಗಳು
ಎದ್ದಾಗ ತನ್ನ ಕಾಮವಾಸನೆಯನ್ನು ತೃಪ್ತಪಡಿಸಿಕೊಂಡು ಮಠಕ್ಕೆ ಬರುತ್ತಿದ್ದನು.
ಇದು ಸಮರ್ಥರಿಗೆ ತಿಳಿದಾಗ ಅವರು ಅವನನ್ನು ಮಠ[illegible]ರಗೆ ಹಾಕುತ್ತಿ
ದ್ದರು. ಎಷ್ಟು ಅವನಿಗೆ ಛೀ ಥ ಕಿದರೂ ನಾಚಿಕೆಯೇ ಇದ್ದಿಲ್ಲ. ಅವನು ಪುರಾ
ಣವನ್ನು ಹೇಳುವಲ್ಲಿಯೂ ಕೀರ್ತನವನ್ನು ಮಾಡುವಲ್ಲಿಯೂ ಬಹಳ ಕುಶಲನಿದ್ದ
ನು. ಆದ್ದರಿಂದ ಪ್ರಸಂಗ ಬಿದ್ದಾಗ ಜನರು ಸಮರ್ಥರ ಹತ್ತಿರ ಮಧ್ಯಸ್ಥಿಕೆಯ

ನ್ನು ಮಾಡಿ ಅವನನ್ನು ಆಗಾಗ್ಗೆ ಮಠಕ್ಕೆ ತಿರುಗಿ ಕರಕೊಂಡು ಬರುತ್ತಿದ್ದರು. ಸಮರ್ಥರು ಅವನಿಗೆ ಮೇಲಿಂದ ಮೇಲೆ "ರಂಗೋಬಾ! ನೀನು ವಿದ್ಯೆಯಿಂದ ಚನ್ನಾಗಿದ್ದೀ. ಆದರೆ ನಿನ್ನ ಗುಣವು ಮಾತ್ರ ಚನ್ನಾಗಿಲ್ಲ. ನಿನ್ನ ರುಂಡವನ್ನು ಮಾತ್ರ ಕಾದಿಟ್ಟು ನಿನ್ನ ಧಡವನ್ನು ತುಂಡರಿಸಬೇಕೆಂಬದಾಗಿ ನನಗೆ ಅಪೇಕ್ಷೆಯು ಹುಟ್ಟುತ್ತದೆ" ಎಂದು ಅವನಿಗೆ ಮನೋದ್ಘಾಟನವಾಗುವಂತೆ ಮಾತಾಡುತ್ತಿದ್ದರು. ಒಂದುಸಾರೆ ಶಕೆ ೧೫೯೯ನೇದ್ದರ ರಾಮನವಮಿಯು ಉತ್ಸವದ ಪೂರ್ವದಲ್ಲಿ ಅಂದರೆ ಸಪ್ತಮಿಯು ದಿವಸ ಸಮರ್ಥರು ಅಡವಿಗೆ ಹೋಗಿ ತಿರುಗಿ ಬರುವಷ್ಟರಲ್ಲಿ ಅವನು ಮಠದೊಳಗೆ ಕೀರ್ತನವನ್ನು ಮಾಡುತ್ತಲಿದ್ದನು. ಸಮರ್ಥರು ಮಠದ ಹೊರಗಿನಿಂದಲೇ ಅವನ ಕೀರ್ತನವನ್ನು ಕೇಳಿ ಆನಂದಪಟ್ಟು ಒಳಗೆ ಬಂದರು. ಆಗ ರಂಗೋಬನು ಅವರ ಚರಣದ ಮೇಲೆ ಮಸ್ತಕವನ್ನಿಟ್ಟು ಪುನಃ ಎದ್ದು ಕೈಜೋಡಿಸಿ ನಿಂತುಕೊಂಡನು. ಅವನನ್ನು ನೋಡಿ ಸಮರ್ಥರು ಅವನಿಗೆ—"ನೀನು ಬಹಳ ಉತ್ಕೃಷ್ಟವಾಗಿ ಕೀರ್ತನವನ್ನು ಮಾಡಿದಿ. ಆದ್ದರಿಂದ ನಿನಗೆ ಏನು ಬೇಡಿಕೊಳ್ಳ ತಕ್ಕದ್ದದೆ ಬೇಡು" ಎಂದು ಅಪ್ಪಣೆ ಮಾಡಿದರು. ಆಗ ಅವನು—"ಸ್ವಾಮಿಾ! ನನ್ನ ದುರ್ವ್ಯಸನವು ನನ್ನನ್ನು ಬಿಟ್ಟು ಹೋಗಬೇಕೆಂಬದೇ ನನ್ನ ಪ್ರಾರ್ಥನೆಯು" ಎಂದು ಹೇಳಿದನು ಆದಕ್ಕೆ ಸಮರ್ಥರು—"ಇದೇನು ಬೇಡಿಕೊಂಡಿ? ಇನ್ನೇನಾದರೂ ಬೇಡಿಕೋ" ಎಂದು ಹಾಸ್ಯ ಮಾಡಿದರು. ಆಗ ಅವನು ಪುನಃ "ಸ್ವಾಮಿಾ, ನಾನು ಈಗ ಬೇಡಿದ್ದನ್ನು ದಯವಿಟ್ಟು ಅನುಗ್ರಹಿಸಬೇಕು" ಎಂದನು. ಹಾಗೂ ಆ ಕಾಲಕ್ಕೆ ಕಲ್ಯಾಣನು "ರಂಗೋಬನಿಗೆ ಉಪರತಿಯಾಯಿತು. ಇನ್ನು ತಾವು ಕೃಪೆಯನ್ನು ಮಾಡಬೇಕು" ಎಂದು ಸಮರ್ಥರಿಗೆ ಹೇಳಿಕೊಂಡನು. ಅದಕ್ಕೆ ಸಮರ್ಥರು "ಯಾಕಾಗವಲ್ಲದು" ಎಂದು ರಂಗೋಬನಿಗೆ ಅನುಗ್ರಹ ಮಾಡಿದರು. ಆಗಿನಿಂದ ಅವನ ದುರ್ವ್ಯಸನವು ದೂರಾಯಿತು. ತರುವಾಯ ಸಮರ್ಥರು ಅವನಿಗೆ "ಪ್ರಸೂತಿಕಾಲಕ್ಕೆ ನಿನ್ನ ಲಂಗೋಟಿಯನ್ನು ಎದ್ದಿ ನೀರು ಕುಡಿಸಿದರೆ ತತ್ಕಾಲ ಪ್ರಸೂತಿಯಾಗುವದು" ಎಂಬದಾಗಿ ಅವನಿಗೆ ವರವನ್ನು ಕೊಟ್ಟರು

ನಿರಂಜನಸ್ವಾಮಿ—ಶಕೆ ೧೫೯೯ನೇದ್ದರ ರಾಮನವಮಿಯು ಉತ್ಸವಕ್ಕೆ ಬರುವದಕ್ಕಾಗಿ ಕರ್ಹಾಡದಿಂದ ಕೆಲವು ಬ್ರಾಹ್ಮಣರು ಚಾಫಳಕ್ಕೆ ಹೋಗುವದಕ್ಕಾಗಿ ಸಂಗಮದ ಮೇಲಿಂದ ಹೊರಟಿದ್ದರು. ಆಗ ಸಂಗಮ ತೀರ್ಥದಲ್ಲಿ ಕಡಾಕರ ಎಂಬ ಅಡ್ಡ ಹೆಸರಿನ ಒಬ್ಬ ೧೩ ವರ್ಷದ ಜೋಯಿಸರ ಹುಡುಗನು ಸ್ನಾನ ಮಾಡುತ್ತಿದ್ದನು. ಅವನು ಈ ಬ್ರಾಹ್ಮಣ ಸಮುದಾಯವನ್ನು ನೋಡಿ "ನೀವು ಎಲ್ಲಿ ಹೋಗುತ್ತೀರಿ?" ಎಂದು ಕೇಳಿದನು. ಆಗ ಅವರು—"ನಾವು ಚಾಫಳಕ್ಕೆ ಶ್ರೀಸಮರ್ಥ ರಾಮದಾಸಸ್ವಾಮಿಗಳ ದರ್ಶನಕ್ಕೆ ಹೋಗುತ್ತೇವೆ" ಎಂದು ಹೇಳಿದರು. ಆ

ಹುಡುಗನು ಶ್ರೀ ಸಮರ್ಥರ ಕೀರ್ತಿಯನ್ನು ಕೇಳಿದ್ದನು. ಆದ್ದರಿಂದ ಅವನು ಅವರಿಗೆ ಬಹಳ ಉತ್ಕಂಠತೆಯಿಂದ—“ಅಪ್ಪಗಳಿರಾ! ಸ್ವಲ್ಪ ತಡೆಯಿರಿ. ನಿಮ್ಮ ಸಂಗಡ ನಾನೂ ಬರುವೆನು. ಮೊದಲು ನಮ್ಮ ಮನೆಗೆ ಹೋಗಿ ತಿಳಿಸಿ ಬರುತ್ತೇನೆ” ಎಂದನು. ಅದಕ್ಕೆ ಅವರು ಆ ಚಿಕ್ಕ ಬಾಲಕನ ತೇಜಸ್ಸನ್ನೂ ಉತ್ಕಂಠತೆಯನ್ನೂ ನೋಡಿ ಅವನನ್ನು ಬಿಟ್ಟು ಹೋಗಬಾರದೆಂದು ಸ್ವಲ್ಪ ಹೊತ್ತು ತಡೆದರು. ಅಷ್ಟರಲ್ಲಿ ಆ ಹುಡುಗನು ತನ್ನ ಮನೆಗೆ ಓಡಿ ಹೋಗಿ ತನ್ನ ತಂದೆಗೆ ಇದನ್ನು ತಿಳಿಸಲಾಗಿ ಅವನ ತಂದೆಯು ಅವನೊಬ್ಬನನ್ನೇ ಕಳಿಸಲಾರದೆ ತಾನೂ ಆ ಹುಡುಗನ ಸಂಗಡ ಹೊರಟು ಬಂದನು. ಆ ಮೇಲೆ ಎಲ್ಲರೂ ಕೂಡಿ ಚಾಫಳಕ್ಕೆ ಹೋಗಿ ರಾಮ ನವಮಿಯ ಉತ್ಸವವನ್ನು ನೋಡಿಕೊಂಡರು. ಈ ಉತ್ಸವವು ಮುಗಿದ ನಂತರ ಕರ್ಹಾಡದ ಜನರು ತಮ್ಮ ಊರಿಗೆ ಬರುವದಕ್ಕಾಗಿ ಹೊರಟರು. ಆದರೆ ಈ ಚಿಕ್ಕ ಬಾಲಕನಾದ ನಿರಂಜನನೂ ಅವನ ತಂದೆಯೂ ಮಾತ್ರ ಹಿಂದುಳಿದರು. ಚೈತ್ರ ವದ್ಯ ಪ್ರತಿಪದದ ದಿವಸ ಪ್ರಾತಃಕಾಲಕ್ಕೆ [illegible] ಸಮರ್ಥರು [illegible] ಪೂಜೆಯನ್ನು ತೀರಿಸಿಕೊಂಡು [illegible] ಳಿತಿದ್ದರು. [illegible] ಕಲ್ಯಾಣನೂ [illegible] ಹಾಗೆ [illegible] ಅಮಾತ್ಯರೂ ಚಾಮರಗಳನ್ನು ಬೀಸುತ್ತಿದ್ದರು. ಈ ವೇಳೆಗೆ ಸಭೆಯು [illegible] ಲಾಗಿ ನಿರಂಜನನು ಸಮರ್ಥರ ಮುಂದೆ ಬಂದು ಸಾಷ್ಟಾಂಗ ನಮಸ್ಕಾರ [illegible] “ಸ್ವಾಮಿ! ಪತಿತನಾದ ನಾನು ತಮಗೆ ಶರಣು ಬಂದಿದ್ದೇನೆ. ನನ್ನನ್ನು ತಾವು ಉದ್ಧಾರ ಮಾಡಬೇಕು” ಎಂದು ವಿನಂತಿ ಮಾಡಿಕೊಂಡನು. ಆಗ ಸಮರ್ಥರು ನಿರಂಜನನಿಗೆ “ಬಾಳಾ, ಮೇಲಕ್ಕೆ ಏಳು. ನೀನು ಎಲ್ಲಿಂದ ಬಂದಿ? ನಿನ್ನ ಹೆಸರೇನು?” ಎಂದು ನುಡಿದರು. ಸಮರ್ಥರು ಮಾಡಿದ ಪ್ರಶ್ನೆಗಳಿಗೆ ನಿರಂಜನನು ತಾನು ಬಿದ್ದುಕೊಂಡ ಸ್ಥಳದಿಂದಲೇ ಉತ್ತರಗಳನ್ನು ಕೊಟ್ಟನು. ಆದರೆ ಮೇಲಕ್ಕೇಳಲಿಲ್ಲ. “ತಾವು ನನ್ನ ಮಸ್ತಕದ ಮೇಲೆ ವರದ ಹಸ್ತವನ್ನಿಟ್ಟ ಹೊರತಾಗಿ ನಾನು ಏಳುವವನಲ್ಲ” ಎಂದು ನಿರಂಜನನು ಸಮರ್ಥರಿಗೆ ವಿನಯದಿಂದ ಹೇಳಿಕೊಂಡನು. ಈ ಬಾಲಕನ ತೇಜಸ್ಸನ್ನೂ ಧಿಟ್ಟತನವನ್ನೂ ಸ್ವಾಮಿನಿಷ್ಠೆಯನ್ನೂ ಕಂಡು ಸಭಿಕರೆಲ್ಲರು ಬೆರಗಾದರು. “ಇವನು ಯೋಗ್ಯನಾದ ಭೂದೇವನು. ಇಷ್ಟು ಅಲ್ಪ ವಯದಲ್ಲಿ ಇವನಿಗೆ ಸ್ವಾಮಿನಿಷ್ಠೆಯುಂಟಾದದ್ದು ಇವನ ಪೂರ್ವಜನ್ಮದ ಸುಕೃತವೇ ಹೌದು” ಎಂದು ನಾಲ್ಕೂ ಕಡೆಗೆ ಉದ್ಗಾರಗಳು ಹೊರಟವು. ಸಮರ್ಥರು ಅವನಿಗೆ ಮೇಲಕ್ಕೆ ಏಳೆಂದು ಎಷ್ಟು ರೀತಿಯಿಂದ ಹೇಳಿದರೂ ಅವನು ಕೇಳಲಿಲ್ಲ. ಆಗ ಕಲ್ಯಾಣನೇ ಮೊದಲಾದ ಶಿಷ್ಯರು ಸಮರ್ಥರಿಗೆ “ತಾವು ಬಾಲಕನ ಹಟವನ್ನು ನಡಿಸಬೇಕು” ಎಂದು ಬಹಳ ಪರಿಯಿಂದ ಹೇಳಿದರು. ಅದನ್ನು ಕೇಳಿ ಸಮರ್ಥ

ರು ನಿರಂಜನನ ಮಸ್ತಕದ ಮೇಲ ತಮ್ಮ ವರದ ಹಸ್ತವನ್ನಿಟ್ಟು ಆತನನ್ನು ಎಬ್ಬಿಸಿ "ನಿನಗೆ ವಸ್ತ್ರ ಪಾತ್ರಗಳು ಇರುತ್ತವಷ್ಟೇ?" ಎಂದು ಆತನಿಗೆ ಕೇಳಿದರು. ಅದಕ್ಕೆ ನಿರಂಜನನು—"ಸ್ವಾಮೀ! ನನಗೆ ನೀರು ಕುಡಿಯಲಿಕ್ಕೆ ಒಂದು ಪಂಚಪಾತ್ರೆಯು ಮತ್ತು ಹಾಕಿಕೊಳ್ಳಲಿಕ್ಕೆ ಒಂದು ಲಂಗೋಟಿಯು ಇವುಗಳ ಹೊರತಾಗಿ ಯಾವದೂ ಇಲ್ಲ" ಎಂದು ಉತ್ತರ ಕೊಟ್ಟನು. ಅದನ್ನು ಕೇಳಿ ಸಮರ್ಥರು ಕಲ್ಯಾಣನ ಕಡೆಯಿಂದ ನಿರಂಜನನಿಗೆ ಧೋತರಗಳನ್ನೂ ಪೂಜಾ ಮಾಡಿಕೊಳ್ಳಲಿಕ್ಕೆ ಆಸನವನ್ನೂ ಕಂಠದಲ್ಲಿ ಧರಿಸಲಿಕ್ಕೆ ರುದ್ರಾಕ್ಷಿಯ ಮಾಲೆಯನ್ನೂ ಕೊಡಿಸಿ "ನೀನು ಇನ್ನು ಸ್ನಾನ ಮಾಡಿ ದೇವಾಲಯದಲ್ಲಿ ಶ್ರೀ ರಘುಪತಿಯ ಮೂರ್ತಿಯನ್ನು ಅವಲೋಕನ ಮಾಡುತ್ತ ಕುಳಿತುಕೋ" ಎಂದು ಹೇಳಿ ಆತನನ್ನು ಕಳುಹಿಸಿದರು. ಆ ಮೇರೆಗೆ ನಿರಂಜನನು ಕುಳಿತಿರಲಾಗಿ ಒಂದು ಗಳಿಗೆಯೊಳಗೆ ಗಜಾನನ ಮೂರ್ತಿಯು ಅವನ ಕಣ್ಣು ಮುಂದೆ ಕಟ್ಟಿದಂತೆ ಆಗಿ ಆ ಮೂರ್ತಿಯು ಅವನ ಮೇಲೆ ಸಾಗಿ ಬರುವಂತೆ [illegible]. ಆಗ ಅವನು ಭಯಗೊಂಡು ಅಲ್ಲಿಂದ ಸಭಾಮಂಟಪಕ್ಕೆ ಬಂದು ಸಮರ್ಥರಿಗೆ ಆದರ ಸವಿಸ್ತಾರವನ್ನು ತಿಳುಹಿಸಲಾಗಿ ಸಮರ್ಥರು ಆತನಿಗೆ "ನೀನು ಕರ್ಹಾಡಕ್ಕೆ ಹೋಗಿ ಗಣಪತಿಯ ಉಪಾಸನವನ್ನು ನಡಿಸು" ಎಂದು ಅಪ್ಪಣೆಯನ್ನು ಕೊಟ್ಟರು. ಆ ಮೇರೆಗೆ ಅವನೂ ಅವನ ತಂದೆಯೂ ಕರ್ಹಾಡಕ್ಕೆ ಹೋದರು. ಮುಂದೆ ನಿರಂಜನನಿಗೆ ಮಾಘಶುದ್ಧ ಚತುರ್ಥಿಯ ದಿವಸ ಗಜಾನನು ಪ್ರತ್ಯಕ್ಷ ದರ್ಶನವನ್ನು ಕೊಟ್ಟನು. ನಿರಂಜನನು ಆ ಮೇಲೆ ನಿರಂಜನಸ್ವಾಮಿಯೆಂಬ ಹೆಸರಿನಿಂದ ಬಹಳ ಲೌಕಿಕವನ್ನು ಹೊಂದಿದನು.

**ಶಿವಾಜಿ ಮಹಾರಾಜರು ಪುನಃ ಕರ್ನಾಟಕಕ್ಕೆ ಹೋದದ್ದು:**—ಶಿವಾಜಿ ಮಹಾರಾಜರ ಮನಸ್ಸಿನಲ್ಲಿ ಪುನಃ ಕರ್ನಾಟಕಕ್ಕೆ ಹೋಗಬೇಕೆಂದು ಬಂದದ್ದರಿಂದ [illegible] ಅಪ್ಪಣೆಯನ್ನು [illegible]ವದಕ್ಕಾಗಿ ಪರಳಿಗೆ ಬಂದು [illegible] ಸಮರ್ಥರ ಪೂಜಾದಿ[illegible] ಎಂದು ತಮಗೆ ಅಪ್ಪಣೆಯನ್ನು ಕೊಡಬೇಕೆಂದು ಸಮರ್ಥರಿಗೆ [illegible]. ಆಗ ಸಮರ್ಥರು ಮಹಾರಾಜರಿಗೆ—"ಹೋಗಿ ಯಶಸ್ಸು ಸಂಪಾದಿಸಿಕೊಂಡು ಬೇಗನೆ ಬರಬೇಕು" ಎಂದು ಅಪ್ಪಣೆಯನ್ನು ಕೊಟ್ಟರು. ಆ ಮೇಲೆ ಮಹಾರಾಜರು ತಮ್ಮ ಕಾರಭಾರಿಗೆ ಮಠಕ್ಕೆ ಬೇಕಾದ ಸಾಮಗ್ರಿಯನ್ನು ವಿಳಂಬವಿಲ್ಲದೆ ಪೂರೈಸಿಕೊಡುತ್ತಿರಬೇಕೆಂದು ಅಪ್ಪಣೆಯನ್ನು ಮಾಡಿದನು. ತರುವಾಯ ಮಹಾರಾಜರು ಸಮರ್ಥರಿಗೆ "ಸ್ವಾಮೀ! ಇನ್ನು ನಿಮಗೆ ವೃದ್ಧಾವಸ್ಥೆ ಬಂತು. ಆದ್ದರಿಂದ ದಯಮಾಡಿ ಪರ್ಯಟನಕ್ಕೆ ಹೋಗಬಾರದು. ಒಂದು ವೇಳೆ ಹೋಗುವದೇ ಆದಲ್ಲಿ ತಮ್ಮ ಸಂಗಡ ಯಾವತ್ತೂ ಪರಿಚಾರಕರನ್ನು ಕರೆದುಕೊಂಡು ದಯಮಾಡಿಸಬೇಕು" ಎಂದು

ವಿನಂತಿಯನ್ನು ಮಾಡಿಕೊಂಡರು. ಆಗ ಸಮರ್ಥರು “ ಅಪ್ಪಾ ಒಳ್ಳೇದು. ನಿನ್ನ ಇಷ್ಟದಂತೆಯೇ ನಡೆಯುವೆನು ” ಎಂದು ಹೇಳಿದರು. ಆ ಮೇಲೆ ಮಹಾರಾಜರು ಅಲ್ಲಿಂದ ಹೊರಟು ತಮ್ಮ ಅಸಂಖ್ಯ ಸೈನ್ಯವನ್ನು ಕೂಡಿಕೊಂಡು ಕರ್ನಾಟಕಕ್ಕೆ ಹೋದರು. ಆಗ ಅಲ್ಲಿಯ ಕಿಲ್ಲೆಯ ಅಧಿಕಾರಿಗಳೆಲ್ಲ ಶರಣು ಬಂದರು. ಮಹಾರಾಜರು ಶರಣು ಬಂದವರ ಕಡೆಯಿಂದ ಕಪ್ಪ ತೆಗೆದುಕೊಳ್ಳುತ್ತ, ಶರಣು ಬಾರದೆ ಇದ್ದವರ ಪಾರಿಪತ್ಯವನ್ನು ಮಾಡುತ್ತ ಸೋರಸ ಎಂಬಲ್ಲಿಗೆ ಬಂದು ಮುಟ್ಟಿದರು. ಆ ಮೇಲೆ ವೇರೂಳದ ಕಿಲ್ಲೆಯನ್ನು ಕಟ್ಟಿಸಿ ಅಲ್ಲಿಯ ಅಧಿಕಾರವನ್ನು ರಘುನಾಥರಾವ ಹಣಮಂತ ಎಂಬವನಿಗೆ ಒಪ್ಪಿಸಿ ಶ್ರೀಶೈಲ್ಯ ಮಲ್ಲಿಕಾರ್ಜುನನ ದರ್ಶನಕ್ಕೆ ಹೋದರು. ಮಹಾರಾಜರು ಪಾತಾಳಗಂಗಾ ಮತ್ತು ಕದಳೀ ವನ ಎಂಬಲ್ಲಿ ಬಹಳ ದಾನಧರ್ಮವನ್ನು ಮಾಡಿದರು. ಮಹಾರಾಜರು ಸಂಪೂರ್ಣ ಒಂದು ತಿಂಗಳವನ್ನು ಅಲ್ಲಿ ಕಳೆದರು. ಕದಳೀ ವನದ ಏಕಾಂತ ಮತ್ತು ರಮಣೀಯ ಸ್ಥಾನವನ್ನು ನೋಡಿ “ ಇಲ್ಲಿ ತಪಶ್ಚರ್ಯ ಮಾಡುತ್ತ ಕೂಡ್ರಬೇಕು. ರಾಜ್ಯಕ್ಕೆ ಹೋಗಬಾರದು. ತಮ್ಮ ಪುತ್ರನಿಗೆ ರಾಜ್ಯಾಭಿಷೇಕವನ್ನು ಮಾಡಿಸಬೇಕು ” ಎಂಬ ವಿಚಾರವು ಹುಟ್ಟಿತು. ಇವರಂತೆ ಅವರು ತಮ್ಮ ಕಾರಭಾರಿ ಮಂಡಳಿಗೆ ತಿಳಿಸಿದರು. ಇದನ್ನು ಕೇಳಿ ಅವರು ಬಹಳ ವ್ಯಸನ ಪಟ್ಟು ನಾನಾ ಪರಿಯಿಂದ ಮಹಾರಾಜರಿಗೆ ಹೇಳಿಕೊಂಡರು. ಆದಾಗ್ಯೂ ಮಹಾರಾಜರ ಮನಸ್ಸು ಬದಲಾಗಲಿಲ್ಲ. “ ಮನೆಯಲ್ಲಿ ವೃದ್ಧ ಮಾತಾಪಿತೃಗಳ ಸೇವೆಯನ್ನು ಮಾಡುವದು ಬಿಟ್ಟುಕೊಟ್ಟು ಅಡವಿಯಲ್ಲಿ ತಪಶ್ಚರ್ಯ ಮಾಡಿ ಪಾರಮಾರ್ಥ ಸಾಧಿಸುವದು ಯಾವ ಧರ್ಮವು?” ಎಂದು ಕಾರಭಾರಿಗಳು ಮಹಾರಾಜರಿಗೆ ಮರ್ಯಾದೆಪೂರ್ವಕವಾಗಿ ಕೇಳಿದರು. ಅದಕ್ಕೆ ಮಹಾರಾಜರು “ ಸಮರ್ಥರ ಇಚ್ಛೆಯ ಮೇಲಿಂದಲೇ ನನಗೆ ಈ ತರದ ಬುದ್ಧಿಯು ಹುಟ್ಟಿರುತ್ತದೆ ” ಎಂದು ಹೇಳಿದರು. ಆಗ ಆ ಕಾರಭಾರಿಗಳು—“ ರಾಜನ್! ತಮಗೆ ಈ ಪ್ರಕಾರ ವಿನಂತಿ ಮಾಡಿಕೊಳ್ಳಬೇಕೆಂದು ಅದೇ ಸಮರ್ಥರು ನಮ್ಮಲ್ಲಿಯೂ ಬುದ್ಧಿಯನ್ನು ಹುಟ್ಟಿಸಿರುತ್ತಾರೆ ” ಎಂದು ಉತ್ತರ ಕೊಟ್ಟರು. ಈ ಪ್ರಕಾರ ಅವರವರೊಳಗೆ ಬಹಳ ಹೊತ್ತಿನ ತನಕ ಭವತಿನಭವತಿಯಾಗಿ ಕಡೆಗೆ ಚತುರ ಕಾರಭಾರಿಯಾದ ರಘುನಾಥರಾಯನು “ ಮಹಾರಾಜರೇ! ನಾವು ಏನು ಹೇಳಿದರೂ ನಮ್ಮ ಮಾತು ತಮಗೆ ಮಹತ್ವವೆನಿಸುವದಿಲ್ಲ. ಹಾಗೂ ತಾವು ಎಷ್ಟು ಕಾರಣಗಳನ್ನು ತೋರಿಸಿದರೂ ತಮ್ಮ ಉತ್ತರವು ನಮ್ಮ ಮನಸ್ಸಿಗೆ ಬರುವದಿಲ್ಲ. ಅದ್ದರಿಂದ ನಮ್ಮಿಬ್ಬರಿಗೂ ಸಮಾಧಾನವಾಗುವಂತೆ ಒಂದು ಯುಕ್ತಿಯನ್ನು ಹೇಳುತ್ತೇನೆ. ದಯಮಾಡಿ ಚಿತ್ತೈಸಬೇಕು. ಅದೇನಂದರೆ—ಮಹಾರಾಜರು ದೇವಿಯ ಪ್ರಾರ್ಥನೆಯನ್ನು ಮಾಡಿ ದೇವಿಯ ಆಜ್ಞೆಯಂತೆ ನಡೆಯಬೇಕು ” ಇದನ್ನು ಕೇಳಿ ಮಹಾರಾ

ಜರು ಸಂತೋಷದಿಂದ “ ಬಹಳ ಉತ್ತಮವಾದ ಯುಕ್ತಿಯು” ಎಂದು ಒಪ್ಪಿಕೊಂಡರು. ಆ ಮೇಲೆ ಮಹಾರಾಜರು ದೇವಿಯನ್ನು ಭಕ್ತಿಪೂರ್ವಕವಾಗಿ ಪ್ರಾರ್ಥಿಸಿದರು. ಅದರಿಂದ ಆಗಲೇ ದೇವಿಯು ಮಹಾರಾಜರ ಮೈಯಲ್ಲಿ ಪ್ರವೇಶಿಸಿ ಶಕೆ ೧೫೭೫ ನೇ ಚೈತ್ರ ವದ್ಯ ೧೩ ನೇ ದಿವಸ ಕೆಳಗೆ ಬರೆದ ಪ್ರಕಾರ ಒಡನುಡಿದಳು:- “ ಮಹಾರಾಜರು ತಪಶ್ಚರ್ಯ ಮಾಡುತ್ತ ಅಡವಿಯಲ್ಲಿ ಕೂಡ್ರಬಾರದು. ರಾಜ್ಯಕ್ಕೆ ಹೋಗಿ ಸಿಂಹಾಸನಾರೂಢರಾಗಬೇಕು ” ಮಹಾರಾಜರ ವಂಶದಲ್ಲಿ ೨೨ ಮಂದಿ ಧೀರಪುರುಷರು ಹುಟ್ಟುವರು. ಮಹಾರಾಜರ ಶಕವು ೧೦೦೦ ವರ್ಷಗಳ ಮಟ್ಟಿಗೆ ಇರುವದು ” ಈ ಆಜ್ಞೆಯನ್ನು ರಘುನಾಥರಾವ ಕಾರಭಾರಿ ಇವ ಶಬ್ದಶಃ ಬರಕೊಂಡು ಮಹಾರಾಜರಿಗೆ ತೋರಿಸಿದನು. ಅದರಂತೆ ಮಹಾರಾಜರು ಪರಿವಾರ ಸಹಿತವಾಗಿ ತಮ್ಮ ರಾಜ್ಯಕ್ಕೆ ಹೋಗಿ ನಂತರ ಸಮರ್ಥರ ದರ್ಶನ ತೆಗೆದುಕೊಳ್ಳುವದಕ್ಕಾಗಿ ಚಾಫಳಕ್ಕೆ ಹೋದರು ಅಲ್ಲಿ ಮಹಾರಾಜರು ಸಮರ್ಥರ ದರ್ಶನವನ್ನು ತೆಗೆದುಕೊಂಡು ಅವರಿಗೆ ಯಾವತ್ತು ಸಂಗತಿಯನ್ನು ತಿಳಿಸಿದರು. ತಪಶ್ಚರ್ಯ ಮಾಡಬೇಕೆಂದು ತಾವು ನಿಶ್ಚಯ ಮಾಡಿದ್ದನ್ನು ಮಹಾರಾಜರು ಹೇಳಿದ ಕೂಡಲೇ ಸಮರ್ಥರು ಹೊಟ್ಟೆ ಹಿಡಿದಿಡದು ನಕ್ಕರು. ಸಮರ್ಥರು ಮಹಾರಾಜರ ಭಾಷಣವು ಮುಗಿದ ತರುವಾಯ “ ಶಿವರಾಯಾ! ನಿನ್ನ ಗೋಸ್ಕರ ತಪಶ್ಚರ್ಯ ಮಾಡುವವರು ಮಾಡೇಮಾಡುತ್ತಾರೆ. ಅಂದಮೇಲೆ ನಿನಗೆ ಸ್ವತಃ ಅದರ ಚಿಂತೆಯು ಯಾಕೆ ಉಂಟಾಗಿತ್ತು! ” ಎಂದು ನುಡಿದರು ಅಲ್ಲಿ ಮಹಾರಾಜರು ೧।೨ ದಿವಸ ಇದ್ದು ಪ್ರತಾಪಗಡಕ್ಕೆ ಹೋಗಲು ಹೊರಟರು. ಆಗ ಸಮರ್ಥರು ಮಹಾರಾಜರಿಗೆ “ ನೀವು ಶಾಸ್ತ್ರಿಯನ್ನು ಕೂಡಿಕೊಂಡು ಗಂಗಾಭಟ್ಟನನ್ನು ಕರೆಯಿಸಿ ರಾಜ್ಯಾಭಿಷೇಕ ಮಾಡಿಸಿಕೊಳ್ಳಬೇಕು ” ಎಂದು ಅಪ್ಪಣೆಯನ್ನು ಕೊಟ್ಟರು. ಅದಕ್ಕೆ ಮಹಾರಾಜರು “ ತಮ್ಮ ಆಜ್ಞೆಯಂತೆ ನಡೆಯುವೆನು ” ಎಂದು ಹೇಳಿ ಪ್ರತಾಪಗಡಕ್ಕೆ ಹೋಗಿ ಮುಟ್ಟಿ ಅಲ್ಲಿಂದ ರಾಯಗಡಕ್ಕೆ ಹೋದರು.

ಕಳ್ಳರ ತಂಡು:—ಶಕೆ ೧೫೭೫ ರಲ್ಲಿ ಒಂದು ದಿವಸ ರಾತ್ರಿ ಕೆಲವು ಕಳ್ಳರು ಒಟ್ಟಾಗೂಡಿ ಚಾಫಳದ ಮಠದಲ್ಲಿ ಕಳವು ಮಾಡಬೇಕೆಂದು ಆಲೋಚಿಸಿ ಆ ಮಠದೊಳಗೆ ಬಂದು ಅಲ್ಲಿಯ ಕೆಲವು ಸಾಮಾನುಗಳನ್ನು ಎತ್ತಿಹಾಕಿ ಇನ್ನೂ ಕೆಲವು ಸಾಮಾನುಗಳನ್ನು ಎತ್ತಿ ಹಾಕುವ ಯತ್ನದಲ್ಲಿದ್ದರು. ಆಗ ಮಠದಲ್ಲಿಯ ಶಿಷ್ಯರಿಗೆ ಎಚ್ಚರಿಕೆಯಾಯಿತು. ತರುವಾಯ ಅವರು ಆ ಕಳ್ಳರನ್ನು ಹಿಡಿದು ದಂಡಿಸಬೇಕೆಂಬ ಉದ್ಯೋಗ ನಡಿಸಿದರು. ಇದನ್ನು ಸಮರ್ಥರು ಕಂಡು ಆ ಶಿಷ್ಯರಿಗೆ—“ ನೀವು ಏನೂ ಶ್ರಮ ತೆಗೆದುಕೊಳ್ಳಬೇಡರಿ. ಗೋಸಾವಿಗಳಾದ ನಮ್ಮ ಸಾಮಾನುಗಳನ್ನು ಕಳ್ಳರೇನು ಒಯ್ಯುವರು ! ” ಎಂದು ಹೇಳಿದರು. ಅದನ್ನು ಕೇಳಿ ಶಿಷ್ಯರು

ಆಶ್ಚರ್ಯ ಪಟ್ಟು ಸಮರ್ಥರಿಗೆ—" ಸ್ವಾಮಿಾ! ನಮ್ಮಲ್ಲಿ ಸ್ವತಃ ಏನು ಸಾಮಾನ ಗಳಿಲ್ಲದಿದ್ದರೂ ದೇವರ ಸಾಮಾನುಗಳನ್ನು ಕಳ್ಳರು ಒಯ್ಯುವದಿಲ್ಲವೇ?" ಎಂದು ಉತ್ತರ ಕೊಟ್ಟರು. ಅದಕ್ಕೆ ಸಮರ್ಥರು—" ಅಪ್ಪಗಳಿರಾ! ಇದು ನಿಮ್ಮ ತಪ್ಪು. ನೀವು ಮಾತ್ರ ದೇವರವರು. ಆದರೆ ಕಳ್ಳರು ದೇವರವರಲ್ಲವೇ? ಅದ್ದರಿಂದ ಕಳ್ಳರಿಗೆ ಒಯ್ಯಲಿಕ್ಕೆ ಏನೂ ಪ್ರತಿಬಂಧ ಮಾಡಬೇಡರಿ" ಎಂದು ಅಪ್ಪಣೆ ಮಾಡಿದರು. ಅದನ್ನು ಕೇಳಿ ಎಲ್ಲ ಶಿಷ್ಯರು ಸ್ತಬ್ಧರಾದರು. ಆ ಮೇಲೆ ಕಳ್ಳರು ಹಾರಗೆ ಎಲ್ಲ ಸಾಮಾನುಗಳ ಗಂಟನ್ನು ಕಟ್ಟಿಕೊಂಡು ಮಠದ ಹೊರಗೆ ಹೋದರು. ತರುವಾಯ ಶಿಷ್ಯರು " ಇಷ್ಟೊಂದು ಬೆಲೆಯುಳ್ಳ ವಸ್ತುಗಳನ್ನು ಕಳ್ಳರಿಗೆ ಹೈಗ್ಯ ಗೊಟ್ಟದ್ದು ವಿಹಿತವಾಗಲಿಲ್ಲ. ಅದ್ದರಿಂದ ಆ ರೀಗೇನಾದರೂ ಪ್ರತಿಬಂಧ ಮಾಡ ತಕ್ಕದ್ದು" ಎಂದು ಪುನಃ ಸಮರ್ಥರಿಗೆ ಆಗ್ರಹ ಮಾಡಿದ್ದರಿಂದ ಅವರು ಶಿಷ್ಯರನ್ನು ಅಸಂತೋಷ ಪಡಿಸಲಾರದೆ— ನಿಮ್ಮ ಮನಸ್ಸಿಗೆ ಬಂದದು ಮಾಡಿಕೊಳ್ಳಿರಿ. ಆದರೆ ಆ ಕಳ್ಳರಿಗೆ ಯಾವ ರೀತಿಯಿಂದ ಹಿಂಸೆಯನ್ನುಂಟು ಮಾಡಬೇಡಿರಿ" ಎಂದು ನುಡಿದರು. ಕೂಡಲೇ ಕಲ್ಯಾಣ ಮೊದಲಾದ ಶಿಷ್ಯರು ಓಡಿಹೋಗಿ ಕಳ್ಳ ರನ್ನು ಮುಕ್ಕಟ್ಟು ಕಟ್ಟಿ ಅವರ ಮುಂದೆ ಒಂದು ಗೆರೆಯನ್ನು ಕೊರೆದು ನೀವು ಬೆಳ ಗಾಗುವ ಮುಂಚೆ ಈ ಗೆರೆ ದಾಟಿ ಹೋಗಬೇಡಿರೆಂದು ಪ್ರತಿಬಂಧ ಮಾಡಿ ತಿರುಗಿ ಮಠಕ್ಕೆ ಬಂದು ಯಥಾವತ್ತು ಸಂಗತಿಯನ್ನು ಸಮರ್ಥರಿಗೆ ತಿಳುಹಿಸಿದರು. ಆದರೆ ಇತ್ತಲಾ ಆ ಕಳ್ಳರು ಕಲ್ಯಾಣನ ಅಪ್ಪಣೆ ಎನ್ನು ವಿಾರಿ ಆ ಗೆರೆಯನ್ನು ದಾಟಿ ಹೋದರು. ಆದರೆ ಅವರ ಕಣ್ಣಿಗೆ ಕತ್ತಲುಗೂಡಿಸಿದಂತೆ ಆಗಿ ಮುಂದೆ ದಾರಿಯೇ ಕಾಣದಂತಾಯಿತು. ಅದ್ದರಿಂದ ಬೆಳಗಾಗುವ ತನಕ ಅಲ್ಲಿಯೇ ಉಳಿದರು. ಆಗ ಪುನಃ ಕಲ್ಯಾಣನು ಆ ಕಳ್ಳರು ಇಳಿದಿದ ಠಾವಿಗೆ ಹೋಗಿ ಅವ ರನ್ನು ಅವರು ಕದ್ದೊಯ್ದ ಸಾಮಾನು ಸಹಿತವಾಗಿ ಮಠಕ್ಕೆ ಕರೆದುಕೊಂಡು ಬಂದ ಸಮರ್ಥರ ಪಾದದ ಮೇಲೆ ಆ ಕಳ್ಳರನ್ನು ಕೆಡವಿದನು. ಕಳ್ಳರು ತಮ್ಮದು ಸರ್ವಸ್ವೀ ಅಪರಾಧವಾಯಿತೆಂದು ಒಪ್ಪಿಕೊಂಡು ತಮ್ಮ ಅಪರಾಧವನ್ನು ಕ್ಷಮಿಸ ಬೇಕಾಗಿ ಸಮರ್ಥರಿಗೆ ಬಹಳ ಪರಿಯಿಂದ ಬೇಡಿಕೊಂಡರು. ಆಗ ಸಮರ್ಥರು ಅವರ ಕಣ್ಣುಗಳ ಮೇಲೆ ತಮ್ಮ ರುದ್ರಾಕ್ಷಿಯ ಮಾಲಿಯನ್ನು ಆಡಿಸಲಾಗಿ ಅವರು ಕಣ್ಣು ತೆರೆದು ಮುಂಚಿನಂತೆ ನೋಡಲಾರಂಭಿಸಿದರು. ಆ ಮೇಲೆ ಮಧ್ಯಾಹ್ನದಲ್ಲಿ, ಸಮರ್ಥರು ಅವರನ್ನು ಮಠದಲ್ಲಿ ಉಣ್ಣಿಸಿ, ಅವರ ಶಸ್ತ್ರಗಳನ್ನು ಅವರಿಗೆ ಒಪ್ಪಿಸಿ ಅವರಿಗೆ ವಸ್ತ್ರಪಾತ್ರೆಗಳನ್ನು ಕೊಟ್ಟು ಅವರಿಗೆ ನಿರೋಪ ಕೊಟ್ಟರು. ಆಗ ಕಳ್ಳರು ತಮಗೆ ಕಳವು ಮಾಡುವ ಬುದ್ಧಿಯು ಎಂದೂ ಹುಟ್ಟದಂತೆ ಆಶೀರ್ವಾದವನ್ನು ಮಾಡಬೇಕಾಗಿ ಬೇಡಿಕೊಂಡರು. ಆ ಮೇರೆಗೆ ಸಮರ್ಥರು ಕಳ್ಳರಿಗೆ ಆಶೀರ್ವಾದ ಮಾಡಿ ಕಳುಹಿಸಿದರು.

**ಸಮರ್ಥರ ಟಗರು**—ಸಮರ್ಥರು ಪರಳಿಯಲ್ಲಿರುವಾಗ್ಗೆ ಒಂದು ಟಗರನ್ನು ಸಾಕಿದ್ದರು. ಅದಕ್ಕೆ ಅವರು "ರಾಮ" ಎಂಬ ಹೆಸರಿನಿಂದ ಕರೆಯುತ್ತಿದ್ದರು. ಅದಕ್ಕೆ ಅವರು ದಿನಾಲು ಭೋಜನಕ್ಕೆ ಕೂಡ್ರುವ ಮುಂಚೆ ತುಪ್ಪ ಅನ್ನ, ಹಾಲು ಅನ್ನ, ಮತ್ತು ಮೊಸರು ಅನ್ನ ತಿನ್ನಲಿಕ್ಕೆ ಹಾಕಿ ಅದಕ್ಕೆ ನೀರು ಕುಡಿಸಿ "ರಾಮಾ, ತೃಪ್ತಿಯಾದಿಯಾ?" ಎಂದು ಕೇಳುತ್ತಿದ್ದರು. ಅದಕ್ಕೆ ಊಟ ಮಾಡಿಸದೆ ಸಮರ್ಥರು ಎಂದೂ ಊಟಕ್ಕೆ ಹೋಗುತ್ತಿದ್ದಿಲ್ಲ. ಒಂದು ದಿವಸ ಈ ಟಗರು ಮಠದಲ್ಲಿಯ ಹಿಂಡುವ ಎಮ್ಮೆ ಆಕಳುಗಳಿಗೆ ಇರಿದು ಬಹಳ ಉಪದ್ರವ ಕೊಟ್ಟದ್ದಕ್ಕಾಗಿ ಆ ಮಠದಲ್ಲಿಯ ಸೇವಕನೊಬ್ಬನು ಆ ಟಗರನ್ನು ಹಿಡಿದು ಅದರ ಕಣ್ಣೊಳಗೆ ಮೆಣಸಿನ ಪುಡಿಯನ್ನು ತುಂಬಿದನು. ಅದರಿಂದ ಆ ಟಗರು ಬಹಳ ತ್ರಾಸಗೊಂಡು ಓಡಿ ಹೋಗಿ ಎಲ್ಲಿಯೋ ಒಂದು ಗಲ್ಲಿಯೊಳಗೆ ಅಡಿಗಿಕೊಂಡಿತು. ಸಮರ್ಥರು ನಿತ್ಯ ಸಾಂಪ್ರದಾಯದಂತೆ ತಾವು ಭೋಜನಕ್ಕೆ ಕೂಡ್ರುವ ಮುಂಚೆ "ರಾಮಾ ಬಾ," ಎಂದು ಎಷ್ಟು ಸಾರೆ ಒದರಿದಾಗ್ಯೂ ಆ ಟಗರು ಬರಲಿಲ್ಲ. ಆಗ ಸಮರ್ಥರು ಅದನ್ನು ಶೋಧ ಮಾಡಿಕೊಂಡು ಬರಲಿಕ್ಕೆ ತಮ್ಮೊಬ್ಬ ಭೃತ್ಯನನ್ನು ಕಳುಹಿಸಿಕೊಟ್ಟರು. ಆದಾಗ್ಯೂ ಅದು ಬೇಗನೆ ಸಿಗಲಿಲ್ಲ. ಆಗ ಸಮರ್ಥರು "ನಮ್ಮ ರಾಮನಿಗೆ ಯಾರೋ ಉಪದ್ರವ ಕೊಟ್ಟಿದ್ದಾರೆ. ಅಂತೇ ಅವನು ಬರಲೊಲ್ಲನು" ಎಂದು ನುಡಿದರು. ಅಷ್ಟರಲ್ಲಿ ಯಾವನೋ ಒಬ್ಬನು ಗಲ್ಲಿಯೊಳಗೆಲ್ಲ ಹುಡುಕಿ ಅದನ್ನು ಸಮರ್ಥರ ಬಳಿಗೆ ತೆಗೆದುಕೊಂಡು ಬಂದನು. ಆಗ ಅದರ ಕಣ್ಣೊಳಗಿಂದ ನೀರು ಸುರಿಯುತ್ತಿದ್ದವು. "ಯಾರು ನನ್ನ ರಾಮನಿಗೆ ಪೀಡಿಸಿದರು?" ಎಂದು ಸಮರ್ಥರು ಮಠದೊಳಗಿನ ಯಾವತ್ತು ಜನರಿಗೆ ಕೇಳಿದಾಗ್ಯೂ ಯಾರೂ ಉತ್ತರ ಕೊಡಲಿಲ್ಲ. ಆದರೂ ಅವರಿಗೆ ಅದರ ನಿಜವೃತ್ತಾಂತವು ಗೊತ್ತಾಯಿತು. ಆ ಮೇಲೆ ಸಮರ್ಥರು ಮಠದೊಳಗಿನ ಯಾವತ್ತು ಜನರನ್ನು ಕರೆದು "ನೀವು ಮಾತ್ರ ದೇವರವರು ಮತ್ತು ದೇವರಡಸು ತಿನ್ನುವವರು. ಇವನು ನಾಸ್ತಿಕ್ಯನೇನು? ಎಲ್ಲರೂ ಶ್ರೀ ರಘುಪತಿಯ ಕೃಪೆಗೆ ಪಾತ್ರರು. ಆದ್ದರಿಂದ ನನ್ನ ರಾಮನಿಗೆ ಇನ್ನು ಮುಂದೆ ಯಾರೂ ಉಪದ್ರವ ಕೊಡಬೇಡಿರಿ" ಎಂದು ನಿಷ್ಠುರವಾಗಿ ಹೇಳಿ ತಾವೇ ತಮ್ಮ ಕೈಯಿಂದ ಆ ಟಗರಿನ ಕಣ್ಣಿಗೆ ತುಪ್ಪವನ್ನು ತಳಿದು ಅದಕ್ಕೆ ನಿತ್ಯದಂತೆ ಊಟಕ್ಕೆ ಹಾಕಿ ನೀರು ಕುಡಿಸಿ "ರಾಮಾ ತೃಪ್ತಿಯಾದಿಯಾ?" ಎಂದು ಕೇಳಿ ತಾವು ಭೋಜನ ಮಾಡುವದಕ್ಕೆ ಹೋದರು. ಇದರ ಮೇಲಿಂದ ಶ್ರೀ ಸಮರ್ಥರಿಗೆ ಯಾವತ್ತೂ ಪ್ರಾಣಿಮಾತ್ರ ವಿಷಯದಲ್ಲಿ ಎಷ್ಟು ಭೂತದಯವಿತ್ತೆಂಬುದು ಸ್ಪಷ್ಟವಾಗಿ ಕಾಣುವದು.

**ಶಿವಾಜಿ ಮಹಾರಾಜರ ರಾಜ್ಯಾಭಿಷೇಕವು**—ದೇವಿಯ ಮತ್ತು ಸಮರ್ಥರ ಆಜ್ಞೆಯಾದ ಮೇರೆಗೆ ಶಿವಾಜಿ ಮಹಾರಾಜರು ಪಟ್ಟಾಭಿಷೇಕದ ಸಿದ್ಧತೆಯನು

ಮಾಡಿದರು. ಪ್ರಸಿದ್ಧ ಗಂಗಾಶಾಸ್ತ್ರಿಗಳು ಗಂಗಾಸ್ನಾನಕ್ಕಾಗಿ ಪೈಠಣಕ್ಕೆ ಹೋಗಿ ೨ ವರ್ಷಗಳಾದಾಗ್ಯೂ ಬಂದಿದ್ದಿಲ್ಲ. ಅವರನ್ನು ಕರೆಯಿಸಿಕೊಂಡು ಪಟ್ಟಾಭಿಷೇಕ ಮಾಡಿಸಿಕೊಳ್ಳಬೇಕೆಂದು ಸಮರ್ಥರ ಅಪ್ಪಣೆಯಾದ ಪ್ರಕಾರ ಮಹಾರಾಜರು ತಮ್ಮ ರಾಜ್ಯದೊಳಗಿನ ಒಬ್ಬ ದೊಡ್ಡ ಮನುಷ್ಯನನ್ನು ಅವರ ಕಡೆಗೆ ಕಳುಹಿಸಿಕೊಟ್ಟರು. ಆದರೆ ಗಂಗಾಶಾಸ್ತ್ರಿಯು "ಸಮರ್ಥರು ತಾವಾಗಿ ಕರೆಯಿಸುವವರೆಗೆ ನಾನು ರಾಜ್ಯದಲ್ಲಿ ಪ್ರವೇಶಿಸುವದಿಲ್ಲ" ಎಂದು ಹೇಳಿದರು. ಆಗ ಅವರನ್ನು ಕರೆಯಲಿಕ್ಕೆ ಹೋಗಿದ್ದ ದೊಡ್ಡ ಮನುಷ್ಯನು "ಸಮರ್ಥರು ಯಾರಗೂಡವೂ ದ್ವೇಷ ಮಾಡುವವರಲ್ಲ. ಅವರ ಅಪ್ಪಣೆಯ ಮೇಲಿಂದಲೇ ಮಹಾರಾಜರು ನಿಮ್ಮನ್ನು ಕರೆದುಕೊಂಡು ಬರಲಿಕ್ಕೆ ನನ್ನನ್ನು ಕಳುಹಿಸಿದ್ದಾರೆ" ಎಂದು ಗಂಗಾಶಾಸ್ತ್ರಿಯನ್ನು ಸಮಾಧಾನ ಮಾಡಿ ಕರೆದುಕೊಂಡು ಬಂದನು. ಗಂಗಾಶಾಸ್ತ್ರಿಯನ್ನು ಎದುರುಗೊಂಡು ಕರೆದು ತರಲಿಕ್ಕೆ ಶಿವಾಜಿ ಮಹಾರಾಜರು ಸ್ವತಃ ಹೋಗಿ ಕರೆದು ತಂದರು. ಆ ಮೇಲೆ ಉಭಯತರೂ ಕೂಡಿ ಪರಳಿಗೆ ಸಮರ್ಥರಿದ್ದೆಡೆಗೆ ಹೋಗಿ ಅವರ ದರ್ಶನ ತೆಗೆದುಕೊಂಡರು. ಆಗ ಸಮರ್ಥರು ಗಂಗಾಶಾಸ್ತ್ರಿಗೆ "ನೀವು ಶುಭಮುಹೂರ್ತ ನೋಡಿ ಆ ದಿವಸ ರಾಜಶ್ರೀಗಳಿಗೆ ಯಥಾವಿಧಿಪೂರ್ವಕವಾಗಿ ರಾಜ್ಯಾಭಿಷೇಕ ಮಾಡತಕ್ಕದ್ದು" ಎಂದು ಅಪ್ಪಣೆ ಮಾಡಿದರು. ಅದರಂತೆ ಮಹಾರಾಜರೂ ಗಂಗಾಶಾಸ್ತ್ರಿಯೂ ರಾಯಗಡಕ್ಕೆ ಹೋಗಿ ಒಂದು ಶುಭಮುಹೂರ್ತವನ್ನು ಗೊತ್ತುಪಡಿಸಿ ಯಾವತ್ತೂ ಸಿದ್ಧತೆಯನ್ನು ಮಾಡಿದರು. ಆ ಮೇಲೆ ಮಹಾರಾಜರು ಪರಳಿಗೆ ಹೋಗಿ ಯಾವತ್ತು ಸಂಗತಿಯನ್ನು ತಿಳುಹಿಸಿ ಸಮರ್ಥರನ್ನು ದ್ದೇಶಿಸಿ— "ಸ್ವಾಮಿವರ್ಯರೇ, ನನ್ನದೊಂದು ಅಪೇಕ್ಷೆಯುಂಟು. ಅದನು ತಾವು ಪೂರ್ಣ ಪಡಿಸಬೇಕು" ಎಂದು ವಿನಂತಿ ಮಾಡಿಕೊಂಡರು. ಅದಕ್ಕೆ ಸಮರ್ಥರು "ಇಂಥ ಕಠಿಣವಾದದ್ದೇನದೆ?" ಎಂದರು. ಆಗ ಮಹಾರಾಜರು- "ಸ್ವಾಮಿಗಳ ಕೃಪೆ ಇದ್ದಬಳಿಕ ಕಠಿಣವಾದದ್ದು ಯಾವದೂ ಇಲ್ಲ" ಎಂದು ಉತ್ತರ ಕೊಟ್ಟರು. ಅದಕ್ಕೆ ಸಮರ್ಥರು ತಿರುಗಿ "ಯಾಕಾಗಲೊಲ್ಲದು ಅದೇನು ಹೇಳಿರಿ" ಎಂದು ಕೇಳಿದರು. ಆಗ ಮಹಾರಾಜರು —"ಸ್ವಾಮಿನ್, ನೀವು ಈ ಸಮಯಕ್ಕೆ ಜಟಾಭಾರವನ್ನು ತೆಗಿಸಬೇಕೆಂದು ನನ್ನ ವಿನಂತಿಯುಂಟು" ಎಂದು ಹೇಳಿದರು. ಅದಕ್ಕೆ ಸಮರ್ಥರು-- "ಅಪ್ಪಾ ಶಿವರಾಯಾ! ಇಷ್ಟು ವರ್ಷಗಳ ವರೆಗೆ ಅವ್ಯಾಹತವಾಗಿ ನಡೆಯುತ್ತಬರುವ ನಡತೆಯಲ್ಲಿ ಯಾಕೆ ವ್ಯತ್ಯಯವನ್ನುಂಟು ಮಾಡುವಿ?" ಎಂದು ಕೇಳಿದರು. ಆಗ ಮಹಾರಾಜರು "ತಾವು ಭಕ್ತರ ಅಭಿಮಾನಿಗಳು. ಭಕ್ತರ ಅಪೇಕ್ಷೆಯನ್ನು ಪೂರ್ಣ ಪಡಿಸಿ ಅವರನ್ನು ಸಂತೋಷ ಪಡಿಸುವ ಭಾರವು ತಮ್ಮ ಕಡೆಗೇ ಇರುತ್ತದೆ" ಎಂದು ಹೇಳಿದರು. ಅದಕ್ಕೆ ಸಮರ್ಥರು "ಯಾಕಾಗಲೊಲ್ಲದು" ಎಂದು

ಒಡಂಬಟ್ಟರು. ಆ ಮೇಲೆ ಮಹಾರಾಜರು ಸಮರ್ಥರ ಜಟಾಭಾರವನ್ನು ತೆಗೆಯಿಸಿ ಅವರಿಗೆ ಮಂಗಲ ಸ್ನಾನವನ್ನು ಮಾಡಿಸಿ ಅವರನ್ನು ಸಿಂಹಾಸನದ ಮೇಲೆ ಕೂಡ್ರಿಸಿ ಅವರಿಗೆ ಯಾವತ್ತು ರಾಜಮುದ್ರೆಗಳನ್ನು ಅರ್ಪಿಸಿ ಅವರನ್ನು ಯಥಾವಿಧಿಯಿಂದ ಪೂಜಿಸಿದರು. ಆ ಮೇಲೆ ಮಹಾರಾಜರು ಸಮರ್ಥರ ಆಜ್ಞೆಯನ್ನು ಪಡೆದುಕೊಂಡು ರಾಯಗಡಕ್ಕೆ ಹೋಗಿ ಶಕೆ ೧೫೯೬ ಜೇಷ್ಠ ಶುದ್ಧ ತ್ರಯೋದಶಿಯ ದಿವಸ ಮೊದಲು ಮುಂಜಿಯನ್ನು ಮಾಡಿಸಿಕೊಂಡು ತದನಂತರ ರಾಜ್ಯಾಭಿಷೇಕವನ್ನು ಹೊಂದಿ ಸಿಂಹಾಸನಾರೂಢರಾದರು. ಆವೊತ್ತಿನದಿವಸ ಮಹಾರಾಜರು ಬಹಳ ದಾನಧರ್ಮವನ್ನು ಮಾಡಿದರು. ಈ ಯಾವತ್ತು ಸಮಾರಂಭವು ಮುಗಿದ ತರುವಾಯ ಮಹಾರಾಜರು ತಮ್ಮ ಕುಟುಂಬವನ್ನೂ ತಮ್ಮ ಇಬ್ಬರು ಮಕ್ಕಳನ್ನೂ ಅಷ್ಟಪ್ರಧಾನರನ್ನೂ ಕೂಡಿಕೊಂಡು ಪರಳಿಗೆ ಬಂದು ಸಮರ್ಥರ ದರ್ಶನ ತೆಗೆದುಕೊಂಡು ಅವರನ್ನು ಪುನಃ ಪೂಜೆ ಮಾಡಿ ತಮ್ಮ ರಾಜಧಾನಿಗೆ ಹೊರಟು ಹೋದರು. ಈ ಸಂಗತಿಯು ಶಕೆ ೧೫೯೭ ರಲ್ಲಿ ಉಂಟಾಯಿತು.

ಸಜ್ಜನಗಡದಲ್ಲಿ ನೆರೆದಿದ್ದ ಸಜ್ಜನ ಸಮ್ಮೇಲನವು—ಸಮರ್ಥರು ಪರಳಿಯಲ್ಲಿ ಶ್ರೀರಾಮದೇವರ ಮಠವನ್ನು ಸ್ಥಾಪಿಸಿದ ತರುವಾಯ ಮೊದಲನೇ ರಾಮನವಮಿಯ ಉತ್ಸವದ ನಿಮಿತ್ತವಾಗಿ ಮುಕ್ತದ್ವಾರ ಬ್ರಾಹ್ಮಣಭೋಜನವನ್ನು ಮಾಡಿಸಬೇಕೆಂತಲೂ ಕೃಷ್ಣಾತೀರದ ಯಾವತ್ತು ಸಾಧು ಸಂತ ಮಂಡಳಿಯನ್ನು ಅಲ್ಲಿ ನೆರೆಯಿಸಬೇಕೆಂತಲೂ ನಾಲ್ಕು ದಿವಸ ಕಥಾ ಕೀರ್ತನಗಳನ್ನು ಶ್ರವಣ ಮಾಡಬೇಕೆಂತಲೂ ಶಿವಾಜಿ ಮಹಾರಾಜರಿಗೆ ಇಚ್ಛೆಯು ಉತ್ಪನ್ನವಾಗಿ ಅವರು ತಮ್ಮ ಇಚ್ಛೆಯನ್ನು ಸಮರ್ಥರ ಮುಂದೆ ತಿಳುಹಿಸಿದರು. ಆಗ ಸಮರ್ಥರು ಅದಕ್ಕೆ "ಬಹಳ ಉತ್ತಮ" ವೆಂದು ಹೇಳಿ ಯಾವತ್ತು ಸಾಧು ಸಂತ ಮಂಡಳಿಗೆ ಆಮಂತ್ರಣ ಕೊಡಲಿಕ್ಕೆ ಮಹಾರಾಜರಿಗೆ ಅಪ್ಪಣೆಯನ್ನು ಮಾಡಿದರು. ಆ ಮೇಲೆ ಮಹಾರಾಜರು ಸಮರ್ಥರ ಮುಂದೆ ಇದೇ ವಿಷಯದಲ್ಲಿ ಮಾತಾಡುತ್ತಿರುವಾಗ್ಗೆ "ಉಳಿದ ಯಾವತ್ತು ಸಾಧು ಸಂತ ಜನರು ಬಂದರು, ಆದರೆ ತುಕಾರಾಮನು ಮಾತ್ರ ಬರುವ ಚಿನ್ಹ ತೋರುವದಿಲ್ಲ" ಎಂದರು. ಆಗ ಸಮರ್ಥರು ಮಹಾರಾಜರಿಗೆ "ನೀನು ಹೀಗೆ ಸಂಶಯ ತೆಗೆದುಕೊಳ್ಳುವ ಕಾರಣವೇನು?" ಎಂದು ಕೇಳಿದರು. ಅದಕ್ಕೆ ಮಹಾರಾಜರು "ನಾನು ಹಿಂದಕ್ಕೊಮ್ಮೆ ತುಕಾರಾಮನ ದರ್ಶನ ತೆಗೆದುಕೊಳ್ಳಬೇಕೆಂಬ ಅಪೇಕ್ಷೆಯಿಂದ ನನ್ನ ಕಾರಕೂನನನ್ನು ಪಾಲಖಿ ಮೇಣೆಗಳ ಸಹಿತ ಕಳುಹಿಸಿದ್ದೆನು. ಆದರೆ ತುಕಾರಾಮನು ಬರದೆ ನನ್ನ ಕಾರಕೂನನನ್ನು ಹಾಗೇ ಕಳಿಸಿಕೊಟ್ಟನು. ಮತ್ತೊಮ್ಮೆ ನಾನೇ ಸ್ವತಃ ದರ್ಶನಕ್ಕೆ ಹೋದಾಗ್ಗೆ ಅವನ ಮುಂದೆ ಏನಿಕೆ ಹೊನ್ನುಗಳನ್ನು ಕಾಣಿಕೆಯಾಗಿ ಇಟ್ಟಿದ್ದೆನು. ಆದರೆ

ಅವುಗಳನ್ನು ಅವನು ಸ್ವೀಕರಿಸಲಿಲ್ಲ. ಆದ್ದರಿಂದ ಅವನು ಇಲ್ಲಿಗೆ ಬರಲಿಕ್ಕಿಲ್ಲವೆಂದು ನನಗೆ ಕಾಣುತ್ತದೆ'' ಎಂದು ಉತ್ತರ ಕೊಟ್ಟರು. ಅದನ್ನು ಕೇಳಿ ಸಮರ್ಥರು ನಕ್ಕು “ಸಾಧು ಸಜ್ಜನರಿಗೆ ಎಂದೂ ದ್ರವ್ಯದ ಆಶೆ ಇರುವದಿಲ್ಲ. ಆದರೆ ಅವರಿಗೆ ಇರತಕ್ಕ ಮುಖ್ಯ ಆಶೆಗಳೆಂದರೆ—ಸತ್ಸಂಗತಿ ಮತ್ತು ಭಕ್ತಿ. ಆದ್ದರಿಂದ ನೀನು ಅವನಿಗೆ ಕಳುಹಿಸುವ ಆಮಂತ್ರಣದಲ್ಲಿ ನಾವೆಲ್ಲ ಸಾಧು ಸಂತರು ಈ ಉತ್ಸವಕ್ಕೆ ಕೂಡುತ್ತೇವೆಂದು ತಿಳಿಸು. ಅಂದರೆ ಅವನು ನಿಜವಾಗಿಯೂ ಹೊರಟು ಬರುವನು” ಎಂದು ಹೇಳಿದರು. ಇದರಂತೆ ಮಹಾರಾಜರು ಎಲ್ಲರಿಗೂ ಆಮಂತ್ರಣಗಳನ್ನು ಕಳುಹಿಸಲಾಗಿ ತುಕಾರಾಮ ಮೊದಲ್ಗೊಂಡು ಯಾವತ್ತು ಸಾಧು ಸಂತರು ಸಂತೋಷದಿಂದ ಅಲ್ಲಿ ಕಲೆತರು. ಮಹಾರಾಜರ ಆಮಂತ್ರಣವು ಮುಟ್ಟಿದ ಕೂಡಲೇ ತುಕಾರಾಮಬುವಾನು ತನ್ನ ಹದಿನಾಲ್ಕು ಜನ ಶಿಷ್ಯರನ್ನು ಕರಕೊಂಡು ಹೊರಟು ಬಂದನು. ತುಕಾರಾಮಬುವಾನು ಬಂದನಂತರ ಸಮರ್ಥರು ಬಹಳ ಪ್ರೇಮದಿಂದ ಅವನ ಭೇಟಿಯನ್ನು ತೆಗೆದುಕೊಂಡು ಅವನಿಗೆ ಬಹಳ ಸನ್ಮಾನ ಮಾಡಿದರು. ತುಕಾರಾಮಬುವಾನು ಸಹ ಸಮರ್ಥರಿಗೆ ಸನ್ಮಾನಪೂರ್ವಕವಾಗಿ ನಮಸ್ಕರಿಸಿ ತನ್ನ ಪ್ರೇಮವನ್ನೂ ಸಚ್ಛೀಲವನ್ನೂ ವ್ಯಕ್ತಗೊಳಿಸಿದನು. ಮುಂದೆ ಸಂತ ಜನರ ಸಭೆಯು ಕೂಡಿದ ಮೇಲೆ ಜ್ಞಾನವಾದವು ಬಹಳ ನಡೆಯಿತು. ಸಮರ್ಥರು ತುಕಾರಾಮಬುವಾನಿಗೂ ತುಕಾರಾಮಬುವಾನು ಸಮರ್ಥರಿಗೂ ಜ್ಞಾನಪ್ರಾಪ್ತಿಯ ಪ್ರಶ್ನೆಗಳನ್ನು ಮಾಡಿದರು. ಉಭಯತರೂ ಅವರವರ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಕೊಟ್ಟರು. ಉಭಯತರು ಮಹಾ ಪ್ರಬಲ ಸಂತರು! ಕೇವಲ ಈಶ್ವರ ವಿಭೂತಿಗಳು! ಅಂದಮೇಲೆ ಅವರ ಭಾಷಣದ ಮಹತ್ವವನ್ನು ಪ್ರಶಂಸೆ ಮಾಡುವದು ನಮ್ಮಂಥ ಪಾಮರರಿಗೆ ಅಸಾಧ್ಯವೇ ಸರಿ. ಅದಿರಲಿ. ಈಶ್ವರೀ ಮೂರ್ತಿಗಳು ಭಾಷಣ ಮಾಡುತ್ತಿರುವಾಗ್ಗೆ ಇನ್ನೊಂದು ಕಡೆಗೆ ಮುಕ್ತದ್ವಾರ ಬ್ರಾಹ್ಮಣಭೋಜನವು ನಡೆದಿತ್ತು. ಆ ಭೋಜನವು ಮುಗಿದ ಮೇಲೆ ಅವರೆಲ್ಲರಿಗೂ ತಾಂಬೂಲವನ್ನೂ ಒಂದೊಂದು ರುಪಾಯಿ ದಕ್ಷಿಣೆಯನ್ನೂ ಕೊಟ್ಟು ಮಹಾರಾಜರು ಅವರನ್ನು ಕಳುಹಿಸಿದರು. ಆ ಮೇಲೆ ಸಮರ್ಥರು ಯಾವತ್ತು ಸಂತ ಮಂಡಳಿಯನ್ನು ತಮ್ಮ ಪಂಕ್ತಿಗೆ ಕರೆದುಕೊಂಡು ಭೋಜನ ಮಾಡಿದರು. ಆ ಮೇಲೆ ಕೀರ್ತನವು ಆರಂಭವಾಯಿತು. ಮೊದಲಿಗೆ ಶಿವಾಜಿ ಮಹಾರಾಜರು ಸ್ವತಃ ಸಮರ್ಥರ ಅಭಂಗಗಳನ್ನೂ ಉಳಿದವರ ಅಭಂಗಗಳನ್ನೂ ಪದ್ಯಗಳನ್ನೂ ಹಾಡಿ ನೃತ್ಯಯುಕ್ತ ಕೀರ್ತನ ಮಾಡಿದರು. ಶಿವಾಜಿ ಮಹಾರಾಜರ ಕೀರ್ತನವು ಮುಗಿದ ತರುವಾಯ ವೇಣೂಬಾಯಿ, ಅಕ್ಕಾಬಾಯಿ, ಬಹಿಣಾಬಾಯಿ ಮೊದಲಾದ ಸ್ತ್ರೀ ವರ್ಗದ ಶಿಷ್ಯರು ಸಮರ್ಥರ ಅಪ್ಪಣೆಯ ಮೇರೆಗೆ ಕೀರ್ತನ ಮಾಡಿದರು. ತರುವಾಯ ವಾಮ

ನಸ್ವಾಮಿಯು ಕೀರ್ತನ ಮಾಡಿದನು. ಈ ಪ್ರಕಾರ ಮೊದಲನೇ ದಿವಸದ ಸಮಾರಂಭವು ಮುಗಿದ ನಂತರ ಎರಡನೇ ದಿವಸ ಮಧ್ಯಾಹ್ನಕ್ಕೆ ನಿಂಬರಾಜಬಾಬಾ ಪೈಠಣಕರ ಎಂಬವನು ಏಕನಾಥೀ ಪಂಥದ ಅಭಂಗಗಳನ್ನು ಹಾಡಿ ಕೀರ್ತನ ಮಾಡಿದನು. ಆಗ ಸೂರ್ಯಾಸ್ತವಾದ್ದರಿಂದ ಎಲ್ಲರು ಸಂಧ್ಯಾದಿ ಕರ್ಮಗಳನ್ನು ತೀರಿಸಿಕೊಂಡರು. ಆ ಮೇಲೆ ರಂಗನಾಥಸ್ವಾಮಿ, ಜಯರಾಮಸ್ವಾಮಿ, ಕಲ್ಯಾಣ, ಪರಶುರಾಮ, ಮೊದಲಾದವರ ಕೀರ್ತನವು ಸ್ವಲ್ಪ ಸ್ವಲ್ಪ ನಡೆಯಿತು. ತರುವಾಯ ತುಕಾರಾಮಬುವಾನು ತಾನು ಸ್ವತಃ ರಚಿಸಿದ ಅನೇಕ ಅಭಂಗಗಳನ್ನು ಹಾಡಿ ಕೀರ್ತನವನ್ನು ಮಾಡಿದನು, ತುಕಾರಾಮಬುವಾನ ಕೀರ್ತನಕ್ಕೆ ಬಹಳ ರಂಗು ತುಂಬಿತ್ತು. ಈ ಮಹಾತ್ಮನ ಕೀರ್ತನವು ನಡೆದಾಗ್ಗೆ ಯಾವತ್ತೂ ಶ್ರೋತೃಜನರ ಮನಸ್ಸು ಪ್ರೇಮರಸದಿಂದಲೂ ಭಕ್ತಿರಸದಿಂದಲೂ ಪರಿಪ್ಲುತವಾಗಿ ಯಾವತ್ತೂ ಜನರು ತುಕಾರಾಮಬುವಾನ ಸಂಗಡಲೇ ಕುಣಿಯುತ್ತಿದ್ದರು! ಮೂರನೇ ದಿವಸ ಸಮರ್ಥರು ಕೀರ್ತನವನ್ನು ಮಾಡಿದರು. ಸ್ವತಃ ಸಮರ್ಥರ ಮನಸ್ಸಿನಲ್ಲಿ ತುಕಾರಾಮಬುವಾನ ಕೀರ್ತನವನ್ನೇ ಕೇಳಬೇಕೆಂಬದು ಇತ್ತು. ಇದಲ್ಲದೆ ಅನೇಕ ಜನರ ಮನಸ್ಸಿನಲ್ಲಿ ಅದೇ ಇತ್ತು. ಆದರೂ ಈ ಮಹೋತ್ಸವದಲ್ಲಿ ಸಮರ್ಥರ ಕೀರ್ತನವು ಆಗದೇ ಇರಬಾರದೆಂಬ ನಿಮಿತ್ಯದ ದೆಸೆಯಿಂದ ಅವರ ಕೀರ್ತನವು ಕೆಲವು ಹೊತ್ತು ನಡೆದು ಪುನಃ ತುಕಾರಾಮಬುವಾನ ಕೀರ್ತನವೇ ನಡೆಯಿತು. ಹಗಲು ಹೊತ್ತು ಅನ್ನ ಸಂತರ್ಪಣವು, ರಾತ್ರಿಯು ಹೊತ್ತು ಹರಿಕೀರ್ತನವು ಇವುಗಳಿಂದ ಶ್ರೀರಾಮದೇವರ ಮಠವು ಮಾತ್ರವಲ್ಲ, ಇಡೀ ಪರಳಿ ಗ್ರಾಮವು ಸಮಗ್ರ ಒಂದು ತಿಂಗಳವರೆಗೆ ದುಮದುಮಿಸುತ್ತಿತ್ತು. ಶಿವಾಜಿ ಮಹಾರಾಜರು ಈ ಒಂದು ತಿಂಗಳಲ್ಲಿ ೧ ಲಕ್ಷ ಬ್ರಾಹ್ಮಣರ ಭೋಜನವನ್ನು ಮಾಡಿಸಿ ಅವರಿಗೆ ಉತ್ತಮ ದಕ್ಷಿಣೆಯನ್ನು ಕೊಟ್ಟರು. ಹಾಗೂ ಯಾವತ್ತು ಸಾಧು ಸಂತ ಜನರ ಚರಣಕ್ಕೆ ಕ್ರಮದಿಂದ ಪೂಜಾ ಅರ್ಚಾ ಮಾಡಿ ಎಲ್ಲರಿಗೂ ಹೆಚ್ಚೆಚ್ಚಿನ ವಸ್ತ್ರಗಳನ್ನು ಕೊಟ್ಟು ಸನ್ಮಾನ ಮಾಡಿದರು. ತುಕಾರಾಮಬುವಾನ ಪೂಜೆಯ ದೆಸೆಯಿಂದ ಮಹಾರಾಜರು ಅನೇಕ ಮೋಹರುಗಳನ್ನೂ ಹೊನ್ನುಗಳನ್ನೂ ತರಿಸಿದ್ದರು! ಆದರೆ ಈ ವರ್ತಮಾನವು ತುಕಾರಾಮಬುವಾನಿಗೆ ಮುಂಚಿತವಾಗಿ ಗೊತ್ತಿದ್ದರಿಂದ ಅವನು ಯಾರಿಗೂ ಹೇಳದೆ ಕೇಳದೆ ಅಲ್ಲಿಂದ ಹೊರಟು ಹೋದನು! ಆಗ ಮಹಾರಾಜರು ಮ್ಲಾನಮುಖದಿಂದ ಸಮರ್ಥರ ಮುಂದೆ ಬಂದು ನಿಂತು "ನನ್ನ ಮನೋರಥವು ಪೂರ್ಣವಾಗಲಿಲ್ಲ. ತುಕಾರಾಮಬುವಾನಿಗೆ ನಾಲ್ಕು ಊರು ಇನಾಮು ಹಾಕಿಕೊಡಬೇಕೆಂದು ನನ್ನ ಮನಸ್ಸಿನಲ್ಲಿ ನಿಶ್ಚೈಸಿ ಸನದುಗಳನ್ನು ಬರೆದು ಇಟ್ಟಿದ್ದೆನು. ಅವುಗಳನ್ನು ಅವನಿಗೆ ಅರ್ಪಣ ಮಾಡಿದ್ದರೆ ಸಮಾರಂಭದ ಕೆಲಸವು ನನ್ನ ಮನಸ್ಸಿನ ಪ್ರಕಾರ ಸಂಪೂರ್ಣವಾದಂತೆ

ಆಗುತ್ತಿತ್ತು" ಎಂದು ನುಡಿದರು. ಅದನ್ನು ಕೇಳಿ ಸಮರ್ಥರು ನಕ್ಕು "ಸಾಧು ಸಂತರಿಗೆ ತ್ರೈಲೋಕಾಧಿಪತ್ಯವು ಸಹ ತೃಣಕ್ಕೆ ಸಮಾನವಾಗಿರುವದು" ಎಂದು ಹೇಳಿದರು. ಈ ಮೇರೆಗೆ ತುಕಾರಾಮಬುವಾನು ಒಮ್ಮಿಂದೊಮ್ಮೆ ಹೊರಟು ಹೋದ್ದರಿಂದ ಎಲ್ಲರಿಗೂ ವ್ಯಸನವಾಯಿತೆಂಬುವದು ನಿಜವು. ಆದರೆ ತುಕಾರಾಮನ ಈ ಸ್ವಾರ್ಥತ್ಯಾಗವನ್ನು ನೋಡಿ ಸಮರ್ಥರಿಗೆ ಬಹಳ ಆನಂದವಾಯಿತು. ಈ ಸಮ್ಮೇಲನವು ಶಕೆ ೧೫೭೧ ರಲ್ಲಿ ಕೂಡಿತ್ತು.

ಕಲ್ಲು ಭಂಗಾರಾದದ್ದು:—ಶಕೆ ೧೫೯೭ ರಲ್ಲಿ ಕಪಿಲಾಷಷ್ಠಿಯು ಯೋಗವು ಬಂದಿತ್ತು. ಅದ್ದರಿಂದ ಸಮರ್ಥರು ಪರಳಿಯಲ್ಲಿರುವಾಗ ಮಾಹುಲಿಯ ಸಂಗಮಕ್ಕೆ ಸ್ನಾನಕ್ಕೆ ಹೋದರು. ಅಲ್ಲಿ ಅವರು ಸ್ನಾನ ಮಾಡುವಾಗ್ಗೆ ಕ್ಷೇತ್ರಸ್ಥ ಬ್ರಾಹ್ಮಣರು ಅವರಿಗೆ ಸಂಕಲ್ಪ ಹೇಳಿದರು. ಆ ಮೇಲೆ ಅವರು (ಸಮರ್ಥರು) ಸ್ನಾನ ಸಂಧ್ಯಾದಿಗಳನ್ನು ತೀರಿಸಿಕೊಂಡು ಹೋಗಲಿಕ್ಕೆ ಹೊರಟರು. ಅಷ್ಟರಲ್ಲಿ ಆ ಕ್ಷೇತ್ರಸ್ಥ ಬ್ರಾಹ್ಮಣರು ಸಮರ್ಥರಿಗೆ—"ಸ್ವಾಮಿ, ತಾವು ಸಮರ್ಥರು ಮತ್ತು ರಾಜಗುರುಗಳು ಇದ್ದೀರಿ. ತಮಗೆ ಸಂಕಲ್ಪ ಹೇಳಿದ್ದರಿಂದ ನಮಗೆ ತಮ್ಮ ಕಡಿಂದ ಏನಾದರೂ ವಿಶೇಷ ದಕ್ಷಿಣವು ಸಿಗುವದೆಂಬ ಆಶೆ ಇತ್ತು. ಆದರೆ ತಾವು ಹಾಗೇ ಹೊರಟಿರಿ. ಅಲ್ಪಸ್ವಲ್ಪ ದಕ್ಷಿಣವಾದರೂ ದೊರಕಬೇಕು" ಎಂದು ವಿನಂತಿ ಮಾಡಿಕೊಂಡರು. ಅದನ್ನು ಕೇಳಿ ಸಮರ್ಥರು ಕೃಷ್ಣಾ ನದಿಯೊಳಗಿನ ಬೆನಕಗಳನ್ನು ತೆಗೆದುಕೊಂಡು ಒಂದೊಂದು ಬೆನಕವನ್ನು ಒಬ್ಬೊಬ್ಬರಿಗೆ ಕೊಟ್ಟು ತಾವು ಮುಂದೆ ನಡೆದರು. ಕ್ಷೇತ್ರದಲ್ಲಿಯ ಬ್ರಾಹ್ಮಣರನ್ನು ಕೇಳುವದೇನದೆ? ಅವರು ಮೊದಲೇ ತಾಮಸಸ್ವಭಾವದವರು! ಅದಲ್ಲದೆ ಸಮರ್ಥರು ದಕ್ಷಿಣವೆಂದು ಒಂದೊಂದು ಕಲ್ಲು ಅವರ ಕೈಯಲ್ಲಿ ಇಟ್ಟರು! ಇದರಿಂದ ಆ ಬ್ರಾಹ್ಮಣರು ಸಮರ್ಥರಿಗೆ ಅನೇಕ ದುರ್ಭಾಷಣಗಳನ್ನು ಮಾಡಿ ಅವರು ಕೊಟ್ಟದ್ದ ಬೆನಕಗಳನ್ನು ನದಿಯೊಳಗೆ ಬಿಸಾಟಿದರು. ಅವರಲ್ಲಿ ಚಾವಕಿ ಎಂಬ ಅಡ್ಡ ಹೆಸರಿನ ಒಬ್ಬ ಭಕ್ತಿವಂತ ಬ್ರಾಹ್ಮಣನಿದ್ದನು. ಅವನು ತನಗೆ ಕೊಟ್ಟ ಬೆನಕವನ್ನು ನದಿಯೊಳಗೆ ಒಕ್ಕೊಡದೆ "ಸಮರ್ಥರ ಕೈಯಿಂದ ಬಂದಂಥ ಕಲ್ಲನ್ನು ದೇವರ ಮನೆಯಲ್ಲಿ ನಿದಾನ ಶಾಲಿಗ್ರಾಮದಂತೆ ಉಪಯೋಗ ಮಾಡಲಿಕ್ಕೆ ಬಂದೀತು" ಎಂಬ ವಿಚಾರದಿಂದ ಅದನ್ನು ತನ್ನ ಧೋತರದ ಶರಗಿನಲ್ಲಿ ಕಟ್ಟಿಕೊಂಡನು. ಬಳಿಕ ಅವನು ಮಧ್ಯಾಹ್ನದ ೨ ಘಂಟೆಯತನಕ ಸಂಕಲ್ಪವನ್ನು ಹೇಳಿ ಸ್ನಾನವನ್ನು ಮಾಡಿ ಮನೆಗೆ ಬಂದನು. ಅಲ್ಲಿ ಅವನು ಒದ್ದಿಯ ಧೋತರವನ್ನು ಬಿಟ್ಟು ಬೇರೆ ಒಂದು ಮಡಿಯ ಧೋತರವನ್ನು ಉಟ್ಟುಕೊಂಡನು. ಬಳಿಕ ಅವನ ಹೆಂಡತಿಯು ಆ ಧೋತರವನ್ನು ಒಗೆಯಲಿಕ್ಕೆ ನದಿಗೆ ಒಯ್ದಾಗ್ಗೆ ಅವಳ ಕೈಗೆ ಏನೋ ಜಡ ಹತ್ತಿತು. ಆಗ ಅವಳು ಆಶ್ಚರ್ಯ

ದಿಂದ ಧೋತರಕ್ಕೆ ಕಟ್ಟಿದ ಗಂಟನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ಭಂಗಾರದ ಕಲ್ಲು ಇದ್ದದ್ದು ಕಂಡಿತು! ಅದನ್ನು ಅವಳು ಸಾನಂದಾಶ್ಚರ್ಯದಿಂದ ತನ್ನ ಗಂಡನಿಗೆ ಒಯ್ದು ತೋರಿಸಿದಳು. ಅದನ್ನು ಅವನು ಸಾಯಂಕಾಲದಲ್ಲಿ ಉಳಿದ ಯಾವತ್ತು ಬ್ರಾಹ್ಮಣರಿಗೆ ತೋರಿಸಿ ನಡೆದ ಯಾವತ್ತು ವೃತ್ತಾಂತವನ್ನು ತಿಳುಹಿಸಿದನು. ಆಗ ಅವರೆಲ್ಲರು "ನಾವು ಎಂಥಾ ದುರ್ದೈವಿಗಳು! ನಮ್ಮ ಹಣೇಬರಹವು ಎಷ್ಟು ಖೊಟ್ಟಿಯದೆ! ನಾವು ಸುಮ್ಮಸುಮ್ಮನೇ ನಮ್ಮ ಕಲ್ಲುಗಳನ್ನು ನದಿಯಲ್ಲಿ ಒಗೆಯ್ಯುವಲ್ಲಾ!" ಎಂದು ಹಣೆಹಣೆ ಬಡಕೊಂಡು ಅಳಹತ್ತಿದರು. ಹಾಗೂ ಅವರು ಕೆಲವು ಹೊತ್ತಿನಮೇಲೆ "ಸಮರ್ಥರು ಸಾಕ್ಷಾತ್ ಮಾರುತಿಯ ಅವತಾರವು. ಹೀಗಿದ್ದು ನಾವು ವ್ಯರ್ಥವಾಗಿ ಅವರನ್ನು ಜರಿದು ಮಾತಾಡಿದೆವು. ಆದ್ದರಿಂದ ನಾವು ಪುನಃ ಕಲ್ಲುಗಳನ್ನು ಹೊತ್ತುಕೊಂಡು ಅವರ ಬಳಿಗೆ ಹೋಗಿ ಅವರ ಕ್ಷಮೆಯನ್ನು ಬೇಡಿಕೊಳ್ಳುವಾ. ಹಾಗೂ ನಮ್ಮ ಕಲ್ಲುಗಳಿಗೆ ನಿಮ್ಮ ಹಸ್ತಸ್ಪರ್ಶ ಮಾಡರಿ ಎಂದು ಹೇಳಿಕೊಳ್ಳುವಾ. ಅಂದರೆ ನಮ್ಮ ಯಾವತ್ತು ಕಲ್ಲುಗಳು ಭಂಗಾರವಾಗುವವು" ಎಂದು ಆಲೋಚನೆ ಮಾಡಿದರು. ಇದು ಅವರೆಲ್ಲರ ಮನಸ್ಸಿಗೂ ಬಂತು. ಆಗ ಅವರು ಮರುದಿವಸ ನದಿಗೆ ಹೋಗಿ ಅಲ್ಲಿ ಬಿದ್ದಿದ್ದ ದೊಡ್ಡ ದೊಡ ಕಲ್ಲುಗಳನ್ನು ಆರಿಸಿಕೊಂಡು ಪ್ರತಿಯೊಬ್ಬರು ಅವುಗಳ ಒಂದೊಂದು ಮೊಟ್ಟೆಯನ್ನು ಕಟ್ಟಿ ತಮ್ಮ ತಲೆಯಮೇಲೆ ಹೊತ್ತುಕೊಂಡು ಸಮರ್ಥರು ಇರುವಲ್ಲಿಗೆ (ಪರಳಿಯ ಕಿಲ್ಲೆಗೆ) ಒಯ್ದರು. ಇವರು ಮಠದ ಬಾಗಿಲಿಗೆ ಈ ಪ್ರಕಾರ ಕಲ್ಲುಗಳ ಮೊಟ್ಟೆಯನ್ನು ಕಟ್ಟಿಕೊಂಡು ಬಂದದ್ದನ್ನು ಮಠದ ಒಬ್ಬ ಸೇವಕನು ನೋಡಿ "ಏನರಿಪ್ಪಾ! ಈ ಕಲ್ಲಿನ ಹೊರೆಗಳನ್ನು ಯಾಕೆ ತಂದಿರುತ್ತೀರಿ?" ಎಂದು ಕೇಳಲಾಗಿ ಅವರು "ನಾವೇನು ತಂದಿಲ್ಲ ಆದರೆ ನಮ್ಮ ಪ್ರಾರಬ್ಧವು ತಂದಿರುತ್ತದೆ. ಆದ್ದರಿಂದ ಬೇಗನೆ ಒಳಗೆ ಹೋಗಿ ಈ ವರ್ತಮಾನವನ್ನು ಸಮರ್ಥರಿಗೆ ತಿಳಿಸಿ ನಮ್ಮನ್ನು ಒಳಗೆ ಬರುವಂತೆ ಮಾಡು" ಎಂದು ಹೇಳಿದರು. ಅದರಂತೆ ಆ ಸೇವಕನು ಸಮರ್ಥರಿಗೆ ತಿಳುಹಿಸಲಾಗಿ ಸಮರ್ಥರು ಬಡ ಬ್ರಾಹ್ಮಣರ ಮೇಲೆ ಏನು ಸಂಕಟ ಬಂದಿರುತ್ತದೆಂಬುವದನ್ನು ತಿಳಿಯುವದಕ್ಕಾಗಿ ತಾವೇ ಸ್ವತಃ ಗಾಬರಿಗೊಂಡು ಹೊರಗೆ ಬಂದು ನೋಡಿ "ನಿಮಗೆ ಇವ್ಯಾರು ಉಪದ್ರವ ಕೊಟ್ಟರು!" ಎಂದು ವಿಚಾರಿಸಿದರು. ಆಗ ಅವರು ತಮ್ಮ ಯಾವತ್ತು ಸಂಗತಿಯನ್ನು ತಿಳುಹಿಸಿದರು. ಅದನ್ನು ಕೇಳಿ ಸಮರ್ಥರು-"ಅಪ್ಪಗಳಿರಾ! ಅದೆಲ್ಲ ಶ್ರೀಕೃಪೆಯ ಯೋಗಾಯೋಗವು. ಇಂಥ ಯೋಗಾಯೋಗವು ಬರುವದು ಬಹಳ ಅಪರೂಪವು. ನಿನ್ನಿನ ದಿವಸ ಕಪಿಲಾಷಷ್ಠಿ ಇತ್ತು. ಕೃಷ್ಣೆಯ ಸಂಗಮದ ಯೋಗವಿತ್ತು. ಅದೆಲ್ಲ ಈ ಹೊತ್ತು ಬಾ ಎಂದರೆ ಹ್ಯಾಗೆ ಬಂದೀತು? ಆದರೂ ಚಿಂತಿಲ್ಲ, ಈಗ ಮಧ್ಯಾಹ್ನವಾಗಿರುತ್ತದೆ, ಎಲ್ಲರೂ

ಮುಂಚೆ ಭೋಜನ ಮಾಡಿಕೊಳ್ಳಿರಿ. ಮುಂದೆ ಆಗತಕ್ಕದ್ದು ಆದೀತು" ಎಂದು ಉತ್ತರ ಕೊಟ್ಟು ಆ ಬ್ರಾಹ್ಮಣರಿಗೆ ಅವರು ತಂದಿದ್ದ ಕಲ್ಲುಗಳನ್ನು ಚಲ್ಲಿಕೊಡ ಲಿಕ್ಕೆ ಹೇಳಿ ಅವರನ್ನು ಪಂಗ್ತಿಗೆ ಕರಕೊಂಡು ಭೋಜನ ಮಾಡಿದರು. ತರು ವಾಯ ಸಮರ್ಥರು ಅವರಿಗೆ ತಾಂಬೂಲವನ್ನೂ ಪ್ರತಿಯೊಬ್ಬರಿಗೆ ಒಂದೊಂದು ಸುವರ್ಣದ ಮೋಹರು ದಕ್ಷಿಣವನ್ನೂ ಕೊಟ್ಟು—"ನೀವು ಸಾಕ್ಷಾತ್ ಭೂದೇವರು. ನಿಮ್ಮ ಇಚ್ಛೆಯನ್ನು ತೃಪ್ತಪಡಿಸುವ ಸಾಮರ್ಥ್ಯವು ಯಾರಿಗೆ ಉಂಟು? ಆದರೂ ಶ್ರೀ ರಘುಪತಿಯ ಆಜ್ಞೆಯು—ನೀವು ಉರ್ವಸಿ ನದಿಯೊಳಗಿಂದ ನಿಮ್ಮ ನಿಮ್ಮ ಕೈ ಹಿಡಿಸುವಂಥ ಕಲ್ಲನ್ನು ತೆಗೆದುಕೊಂಡು ಹೋಗಬೇಕೆಂದು ಆಗಿರುವದು" ಎಂದು ಅವರಿಗೆ ಹೇಳಿ ಕಿಲ್ಲೆಯ ಕೆಳಗಿನ ಗುಡ್ಡಕ್ಕೆ ಹೊರಟುಹೋದರು. ಆ ಬ್ರಾಹ್ಮಣರು ಸಮರ್ಥರ ಮಾತಿನಮೇಲೆ ವಿಶ್ವಾಸವಿಟ್ಟು ತಮ್ಮ ಕೈಗೆ ಹಿಡಿಸುವಂಥ ಕಲ್ಲನ್ನು ತೆಗೆ ದುಕೊಂಡು ತಮ್ಮ ಧೋತರದ ಶೆರಗಿನಲ್ಲಿ ಕಟ್ಟಿಕೊಂಡು ತಮ್ಮ ತಮ್ಮ ಮನೆಗೆ ಹೊರಟುಹೋದರು. ಆ ಮೇಲೆ ತಮ್ಮ ತಮ್ಮ ಮನೆಯೊಳಗೆ ಅವರು ಧೋತರದ ಶರಗು ಬಿಚ್ಚಿ ನೋಡಲಾಗಿ ಅದೆಲ್ಲ ಭಂಗಾರವಾಗಿತ್ತು.

ದೈವಬಲವು:—ಒಂದಾನೊಂದು ದಿವಸ ಸಮರ್ಥರ ಬಳಿಯಲ್ಲಿ ಅವರ ಶಿಷ್ಯ ರೆಲ್ಲರು ಕುಳಿತು "ಪ್ರಾರಬ್ಧದಿಂದ ಸುಖದುಃಖಗಳು ಪ್ರಾಪ್ತವಾಗುತ್ತವೋ ಅಥ ವಾ ಪ್ರಯತ್ನದಿಂದ ಪ್ರಾಪ್ತವಾಗುತ್ತವೊ?" ಎಂಬ ವಿಷಯದ ಬಗ್ಗೆ ವಾದವಿವಾದ ವನ್ನು ನಡಿಸಿದ್ದರು. ಆಗ ಸಮರ್ಥರು ಅವರಿಗೆ "ಅಪ್ಪಗಳಿರಾ! ಪ್ರಯತ್ನದ ವಿಷಯವು ಪ್ರಾರಬ್ಧದ ವಿಷಯದಿಂದ ಸ್ವತಂತ್ರವಾಗಿರುವದು. ಪ್ರಾರಬ್ಧಯೋಗ ವು ಪ್ರಯತ್ನ ಮಾಡಿ ಅಥವಾ ಪ್ರಯತ್ನ ಮಾಡದೆ ಸಹ ಪ್ರಾಪ್ತವಾಗುತ್ತದೆ" ಎಂದು ಹೇಳಿದರು. ಅದಕ್ಕೆ ಕಲ್ಯಾಣನು—"ಸ್ವಾಮಿಾ! ಪ್ರಾರಬ್ಧಯೋಗವು ಪ್ರಯತ್ನದಿಂದ ಪ್ರಾಪ್ತವಾಗಬಹುದು. ಪ್ರಯತ್ನವಿಲ್ಲದೆ ಅದು ಹ್ಯಾಗೆ ಪ್ರಾಪ್ತ ವಾದೀತು?" ಎಂದು ಪ್ರಶ್ನೆ ಮಾಡಿದನು. ಆಗ ಸಮರ್ಥರು—"ಯಾತಾಗ ಲೊಲ್ಲದು. ಈ ಸಂಗತಿಯ ಅನುಭವವನ್ನು ನಿನಗೆ ನಾನು ಬೇಗನೆ ತಂದುಕೊಡು ತ್ತೇನೆ. ಸ್ವಲ್ಪ ತಡಿ" ಎಂದು ಹೇಳಿದರು. ಆಮೇಲೆ ಕೆಲವು ದಿವಸಗಳು ಕಳೆ ದುಹೋಗಲಾಗಿ ಸಮರ್ಥರು ಕಲ್ಯಾಣನಿಗೆ--"ಕಲ್ಯಾಣಾ! ರಂಗನಾಥಸ್ವಾಮಿ ಯ ಭೇಟಿಯಾಗದೆ ಬಹಳ ದಿವಸಗಳಾದವು. ನಾವಿಬ್ಬರೂ ಹೋಗಿಬರುವಾ ನಡಿ" ಎಂದು ಅಪ್ಪಣೆ ಮಾಡಿದರು. ಅದರಿಂದ ಕಲ್ಯಾಣನು ಅವರ ಸಂಗಡ ನಿಗಡಿಗೆ ಹೋಗುವದಕ್ಕಾಗಿ ಹೊರಟನು. ಸಮರ್ಥರು ಕಾಲಲ್ಲಿ ಪಾದುಕಗಳನ್ನೂ ಕೊರ ಳಲ್ಲಿ ರುದ್ರಾಕ್ಷಿ ಮಾಲೆಯನ್ನೂ ಜಡೆಯಲ್ಲಿ ಪಾವುಡವನ್ನೂ ಕೈಯಲ್ಲಿ ಕುಂಜಳ ಕಾಯಿಯ ಪಾತ್ರೆಯನ್ನೂ ಬಗಲಲ್ಲಿ ದಂಡಯೋಗವನ್ನೂ ತೆಗೆದುಕೊಂಡು ಹೊರಟ

ರು. ಅವರ ಹಿಂದಿಂದೆ ಕಲ್ಯಾಣನು ಕೊರಳಲ್ಲಿ ರುದ್ರಾಕ್ಷಿ ಮಾಲೆಯನ್ನೂ ಬಗಲಲ್ಲಿ ಜೋಳಿಗೆ ಮತ್ತು ಸಮರ್ಥರ ಪೂಜಾಸಾಮಾನುಗಳನ್ನೂ ತೆಗೆದುಕೊಂಡು ಹೊರಟನು. ಇವರಿಬ್ಬರೂ ವೆರ್ಧಾ ನದಿಯ ಧಡಕ್ಕೆ ಬಂದಿರಲು ರಂಗನಾಥಸ್ವಾಮಿಯು ಅವರಿಗೆ ಭೇಟಿಯಾದನು. ರಂಗನಾಥಸ್ವಾಮಿಯಾದರೂ ಸಮರ್ಥರ ದರ್ಶನಕ್ಕಾಗಿ ಬರುತ್ತಲಿದ್ದನು. ಅವನ ವೇಷವೆಲ್ಲ ಸರದಾರನ ವೇಷವೇ ಇತ್ತು. ಅವನ ಕೈಯಲ್ಲಿ ಐದು ಜಾತಿಯ ಶಸ್ತ್ರಗಳು ಇದ್ದವು. ಅವನ ತಲೆಯಮೇಲೆ ಪಾಗೋಟಿಗೆ ಸುವರ್ಣದ ಶಿರಪೇಚು ಇತ್ತು. ಅವನಿಗೆ ಕೂಡ್ರಲಿಕ್ಕೆ ಒಂದು ದೊಡ್ಡ ಕುದುರೆಯು ಇತ್ತು. ಇದಲ್ಲದೆ ಆ ಕುದುರೆಯ ಮುಂದೆ ಲಂಗೋಟಿಯನ್ನು ಹಾಕಿದಂಥ ಹತ್ತು ಇಪ್ಪತ್ತು ಮಂದಿ ಶಿಷ್ಯರು ಇದ್ದರು. ಇಂಥ ವೈಭವದಿಂದ ಬರುತ್ತಲಿದ್ದ ರಂಗನಾಥಸ್ವಾಮಿಯು ದೂರಿಂದ ಸಮರ್ಥರನ್ನೂ ಕಲ್ಯಾಣಸ್ವಾಮಿಯನ್ನೂ ಕಂಡು ತನ್ನ ಕುದುರೆಯಿಂದ ಕೆಳಗೆ ಜಿಗಿದು ಸಮರ್ಥರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಕಾಲಿನಿಂದಲೇ ನಡೆಯುತ್ತ ಮುಂದಕ್ಕೆ ಬಂದನು. ಇದನ್ನು ಸಮರ್ಥರು ನೋಡಿ ತಾವೂ ಒತ್ತರದಿಂದ ಮುಂದಕ್ಕೆ ಬಂದರು. ಈ ಮೇರೆಗೆ ಅವರಿಬ್ಬರೂ ಒಂದು ಅಡವಿಯಲ್ಲಿ ಭೇಟಿಯಾಗಿ "ನಿಮ್ಮ ದರ್ಶನಕ್ಕೆ ನಾವು ಬರುತ್ತಿದ್ದೆವು" ಎಂದು ಒಬ್ಬರಿಗೊಬ್ಬರು ಹೇಳಿ ಕ್ಷೇಮಕುಶಲಗಳನ್ನು ಮಾತಾಡುತ್ತ ಸ್ವಲ್ಪ ದೂರ ಬಂದರು. ಆಗ ಸಮರ್ಥರು ರಂಗನಾಥಸ್ವಾಮಿಗೆ—"ನೀನೂ ಸಾಧುವು. ನಾನೂ ಸಾಧುವು. ನಿನ್ನ ವ್ಯವಹಾರದಲ್ಲಿಯೂ ನನ್ನ ವ್ಯವಹಾರದಲ್ಲಿಯೂ ಯಾಕೆ ಭೇದವಿರುತ್ತದೆ? ನಿನಗೆ ಇಂಥ ಸುಂದರವಾದ ಅರಿವೆಗಳೂ ಬೆಲೆಯುಳ್ಳ ಆಭರಣಗಳೂ ಪಂಚಆಯುಧಗಳೂ ಕುದುರೆಯೂ ಇರುತ್ತಿದ್ದು ನನಗೆ ಬರೇ ಒಂದು ಲಂಗೋಟಿಯು ಇರುತ್ತದೆ. ಇದರ ಕಾರಣವೇನು?" ಎಂದು ಕೇಳಿದರು. ಅದಕ್ಕೆ ರಂಗನಾಥಸ್ವಾಮಿಯು ಸಮರ್ಥರಿಗೆ "ನಿಮ್ಮ ಅಪೇಕ್ಷೆಗೆ ಅಧೀನವಾಗಿಯೇ ನಾನು ಈ ಪ್ರಕಾರ ಇದ್ದೇನೆ" ಎಂದು ಉತ್ತರ ಕೊಟ್ಟನು. ಆಗ ಸಮರ್ಥರು ತಿರುಗಿ ರಂಗನಾಥನಿಗೆ—"ನನ್ನ ಇಚ್ಛೆಗೆ ಅಧೀನವಾಗಿ ನೀನು ಇರುವದಾದರೆ ನೀನು ಇಲ್ಲಿಯೇ ಇಳಿದುಕೊಳ್ಳಬೇಕು. ನಾನೂ ಕಲ್ಯಾಣನೂ ಬಸರಿಯ ಊರಲ್ಲಿ ಹೋಗಿ ಭಿಕ್ಷೆ ಬೇಡಿಕೊಂಡು ಬರುತ್ತೇವೆ. ನಾವೆಲ್ಲರೂ ಇಲ್ಲಿಯೇ ಭೋಜನ ಮಾಡಿಕೊಂಡು ರಾತ್ರಿ ವಸ್ತೀ ಮಾಡಿ ಮುಂದೆ ಹೊರಟುಹೋಗೋಣ" ಎಂದು ಹೇಳಿದರು. ಅದಕ್ಕೆ ರಂಗನಾಥನು ಒಪ್ಪಿಕೊಂಡು ಅಲ್ಲಿಯೇ ತನ್ನ ಯಾವತ್ತು ಶಿಷ್ಯರೊಡನೆ ಇಳಿದುಕೊಂಡನು. ಆಗ ಸಮರ್ಥರೂ ಕಲ್ಯಾಣನೂ ಅಲ್ಲಿ ಸಮೀಪದಲ್ಲಿದ್ದ ಬಸರಿಯೆಂಬ ಊರೊಳಗೆ ಭಿಕ್ಷೆಯನ್ನು ಬೇಡಿಕೊಂಡು ಬರಲಿಕ್ಕೆ ಹೊರಟುಹೋದರು. ಈ ಪ್ರಕಾರ ರಂಗನಾಥಸ್ವಾಮಿಯು ಅಡವಿಯಲ್ಲಿ ಬಿಸಿಲೊಳಗೆ ಸಮರ್ಥರ ಮತ್ತು ಕಲ್ಯಾಣನ ದಾರಿಯನ್ನು

ನೋಡುತ್ತ ಸ್ವಲ್ಪ ಹೊತ್ತು ಕುಳಿತಿರಲಾಗಿ ರಾಮಚಂದ್ರಪಂತ ಅಮಾತ್ಯ ಎಂಬ ಸೇನಾಧಿಪತಿಯು ಅಲ್ಲಿಗೆ ಬಂದು ರಂಗನಾಥಸ್ವಾಮಿಯ ದರ್ಶನ ತೆಗೆದುಕೊಂಡು ಅವರ ಬಾಯಿಂದ ಸಮರ್ಥರು ಬರುತ್ತಾರೆಂಬ ಸಂಗತಿಯನ್ನು ಕೇಳಿಕೊಂಡು ಅವರ ದರ್ಶನವನ್ನು ತೆಗೆದುಕೊಳ್ಳುವ ಮತ್ತು ಕೃಷ್ಣಾವೇಣೀ ಸಂಗಮದಲ್ಲಿ ಸ್ನಾನ ಮಾಡುವ-ಯೋಗವನಷ್ಟ ಕಳೆದುಕೊಳ್ಳಬಾರದೆಂದು ಆಲೋಚಿಸಿ ಅಲ್ಲಿ ತನ್ನ ಡೇರೆಗಳನ್ನು ಹೊಡಿಸಿ ತನ್ನ ಸೈನಿಕರನ್ನೆಲ್ಲ ಇಳಿಸಿಕೊಂಡು ತಾನು ಅಲ್ಲಿಯೇ ಮುಕ್ಕಾಮು ಮಾಡಿದನು. ಆದ್ದರಿಂದ ಅನಾಯಾಸದಿಂದ ರಂಗನಾಥಸ್ವಾಮಿಗೆ ಉಂಟಾಗಿದ್ದ ಬಿಸಲಿನ ತಾಪವೂ ಪ್ರಯಾಣದ ಶ್ರಮವೂ ಪರಿಹಾರವಾಗಿ ಅವನು ಸೌಖ್ಯದಿಂದ ಡೇರೆಯೊಳಗೆ ಮೃದುತಲ್ಪದ ಮೇಲೆ ಪವಡಿಸಿದನು. ಇಷ್ಟರಲ್ಲಿ ಸಮರ್ಥರೂ ಕಲ್ಯಾಣನೂ ಅಲ್ಲಿಗೆ ಬಂದು ರಂಗನಾಥಸ್ವಾಮಿಯನ್ನು ಕಂಡು ಬಹಳ ಆಶ್ಚರ್ಯಪಟ್ಟರು. ಆಗ ಸಮರ್ಥರು ಕಲ್ಯಾಣನ ಸಮಕ್ಷ ರಂಗನಾಥಸ್ವಾಮಿಗೆ—“ಏನಪ್ಪಾ! ನಿನ್ನನ್ನು ನಾನು ಬೇಕಂತೇ ಬಿಸಲಲ್ಲಿ ಅಡವಿಯೊಳಗೆ ಬಿಟ್ಟುಹೋದಾಗ್ಯೂ ನಿನ್ನ ದೈವಬಲದಿಂದ ನಿನ್ನ ಅಪೇಕ್ಷೆಯಂತೆ ಸೌಖ್ಯವೂ ವಿಶ್ರಾಂತಿಯೂ ದೊರಕಿದವಲ್ಲ! ಇದು ನಿನ್ನ ಪ್ರಯತ್ನದ ಫಲವೋ ಅಥವಾ ಪ್ರಾರಬ್ಧಯೋಗವೋ?” ಎಂದು ಕೇಳಿದರು. ಅದಕ್ಕೆ ರಂಗನಾಥಸ್ವಾಮಿಯು ಅದೆಲ್ಲ ನಿಮ್ಮ ಇಚ್ಛಾನುಸಾರವಾಗಿ ನನಗೆ ದೊರೆಕಿರುತ್ತದೆ. ನನ್ನ ಪ್ರಾರಬ್ಧವು ನಾನು ಬೇಡಬೇಡೆಂದರೂ ನನ್ನ ಬೆನ್ನು ಹತ್ತಿರುತ್ತದೆ” ಎಂದು ಉತ್ತರ ಕೊಟ್ಟನು. ಇದನ್ನು ಕಲ್ಯಾಣನು ನೋಡಿ ಸಮರ್ಥರಿಗೆ—“ಸ್ವಾಮೀ! ತಾವು ಹಿಂದಕ್ಕೆ ಹೇಳಿದ್ದು ಈಗ ನನ್ನ ನಿದರ್ಶನಕ್ಕೆ ಸಂಪೂರ್ಣವಾಗಿ ಬಂತು. ದೈವಬಲವು ಹೆಚ್ಚಿನದು ಎಂಬದರಲ್ಲಿ ಸಂದೇಹವಿಲ್ಲ” ಎಂದು ಒಡಂಬಟ್ಟನು. ಇದರ ಯಾವತ್ತು ವಿವರವನ್ನು ಅವರಿಬ್ಬರೂ ರಂಗನಾಥಸ್ವಾಮಿಗೆ ತಿಳುಹಿಸಿದರು. ನಂತರ ಸಮರ್ಥರೊಂದಿಗೆ ಯಾವತ್ತರು ಡೇರೆಯಲ್ಲಿ ಉಳಿದು ಭೋಜನವನ್ನು ತೀರಿಸಿಕೊಂಡು ಸುಖದಿಂದ ಒಂದು ಹಗಲು ಮತ್ತು ಒಂದು ರಾತ್ರಿ ಕಳೆದರು. ಆ ದಿನ ರಾತ್ರಿ ರಂಗನಾಥಸ್ವಾಮಿಯು ಕೀರ್ತನವನ್ನು ಮಾಡಿದನು. ಮಾರನೇ ದಿವಸ ರಾಮಚಂದ್ರಪಂತನು ತನ್ನ ಸೈನ್ಯಸಹಿತವಾಗಿ ಸಮರ್ಥರ ಅಪ್ಪಣೆಯನ್ನು ಪಡೆದುಕೊಂಡು ಪನ್ಹಾಳಾವಿಶಾಲಗಡದ ಕಡೆಗೆ ಹೊರಟುಹೋದನು. ಆಮೇಲೆ ಸಮರ್ಥರು ಕಲ್ಯಾಣಸ್ವಾಮಿಯನ್ನೂ ರಂಗನಾಥಸ್ವಾಮಿಯನ್ನೂ ಕೂಡಿಕೊಂಡು ನಿಗಡಿಗೆ ಹೋಗಿ ಕೆಲವು ದಿವಸ ಇದ್ದರು. ಅಲ್ಲಿಂದ ಎಲ್ಲರೂ ಪರಳಿಗೆ ಹೊರಟುಬಂದರು. ರಂಗನಾಥಸ್ವಾಮಿಯು ಪರಳಿಯಲ್ಲಿ ಕೆಲವು ದಿವಸ ಇದ್ದು ಮರಳಿ ಬಂದನು.

ಕುಪ್ಪದ ಕೊಡವು—ಸಮರ್ಥರ ಬಂಧುಗಳಾದ ಶ್ರೇಷ್ಠರು ಜಾಂಬೇ ಎಂಬ ಊರಲ್ಲಿ (ಜಂಬು ಗ್ರಾಮದಲ್ಲಿ) ಭಕ್ತಿರಹಸ್ಯ ಇತ್ಯಾದಿ ಗ್ರಂಥಗಳನ್ನು ರಚಿಸಿ ಉಪಾ

ಸನವನ್ನು ಬೆಳಸಿ ಜಗದುದ್ಧಾರ ಮಾಡಿದರು. ಇಂಥ ಶ್ರೀಧರರು ಈಗ ತಮ್ಮ ನಿಜ ಧಾಮಕ್ಕೆ ಹೋಗುವ ಕಾಲವು ಸಮೀಪಿಸಿರುತ್ತದೆಂದು ನೋಡಿ ಸಮರ್ಥರ ಭೇಟಿಯಾಗಬೇಕೆಂದು ಅಪೇಕ್ಷಿಸಿದರು. ಇದನ್ನು ಸಮರ್ಥರು ಅಂತರ್ಜ್ಞಾನದಿಂದ ತಿಳಿದುಕೊಂಡು ಶಕೆ ೧೬೦೩ನೇ ಫಾಲ್ಗುಣಕೃಷ್ಣ ಪಕ್ಷದಲ್ಲಿ ಶ್ರೀಧರರ ಭೇಟಿಯ ದೆಸೆಯಿಂದ ಚಾಫಳದಿಂದ ಹೊರಟರು. ಆ ವೇಳೆಗೆ ಸಮರ್ಥರು ಬಾಂಬೇ ಗ್ರಾಮಕ್ಕೆ ಹೋಗಿ ಮುಟ್ಟಿ ಶ್ರೀಧರರಿಗೆ ಭೇಟಿಯಾದರು. ಅದರಿಂದ ಉಭಯತರಿಗೂ ಬಹಳ ಆನಂದ ಉಂಟಾಯಿತು. ಸಮರ್ಥರು ಅಲ್ಲಿರುವಾಗಲೇ ಶಕೆ ೧೬೦೪ನೇ ರಾಮನವಮಿಯ ಉತ್ಸವವು ಪ್ರಾರಂಭವಾಯಿತು. ಆಗ ಒಂಭತ್ತು ದಿವಸ ಈ ಉತ್ಸವವು ಯಥಾಸಾಂಗವಾದ ಮೇಲೆ ದಶಮಿಯ ದಿವಸದ ಪಾರಣೆಗೆ ಅನೇಕ ಮಂದಿ ಬ್ರಾಹ್ಮಣರು ನೆರೆದರು. ಅಡಿಗೆಯು ಸಿದ್ಧವಾಗಿ ನೈವೇದ್ಯವನ್ನು ಬಡಿಸತಕ್ಕ ಸಮಯವು ಬರಲು ಶ್ರೀಧರರು ನೈವೇದ್ಯವನ್ನು ತೆಗೆದುಕೊಂಡು ಬರ್ರೆಂದು ಅಪ್ಪಣೆ ಮಾಡಿದರು. ಆದರೆ ತುಪ್ಪವನ್ನು ತರಲಿಕ್ಕೆ ನೆರೆಯ ಹಳ್ಳಿಗೆ ಹೋಗಿದ್ದಂಥ ಮನುಷ್ಯನು ಇನ್ನೂ ಮರಳಿ ಬಂದಿದ್ದಿಲ್ಲ. ಆದ್ದರಿಂದ ಶ್ರೀಧರರ ಚಿರಂಜೀವರಾದ ರಾಮಚಂದ್ರಬುವಾನು ಹೊರಗಿಂದ ಒಳಗೆ, ಒಳಗಿಂದ ಹೊರಗೆ, ಆ ಮನುಷ್ಯನ ಮಾರ್ಗವನ್ನೀಕ್ಷಿಸುತ್ತ ಅಡ್ಡಾಡುತ್ತಿದ್ದನು. ಇದನ್ನು ನೋಡಿ ಸಮರ್ಥರು ಆ ಹುಡುಗನನ್ನು ತಮ್ಮ ಹತ್ತರ ಕರೆದು "ತಮ್ಮಾ! ನೀನು ಇಷ್ಟ್ಯಾಕೆಂದು ಮ್ಲಾನ ಮುಖದಿಂದೆ ಯಾಕೆ ಓಡಾಡುತ್ತಿರುವಿ? ನಿನಗೆ ಯಾರೇನೆಂದರು?" ಎಂದು ಕೇಳಿದರು. ಅದಕ್ಕೆ ರಾಮಚಂದ್ರಬುವಾನು ಕೈಜೋಡಿಸಿ—"ತಾತಾ! ನನಗೆ ಯಾರೂ ಏನೂ ಅಂದಿಲ್ಲ. ಶ್ರೀಧರರು ನೈವೇದ್ಯವನ್ನು ಬಡಿಸಿರೆಂದು ಒತ್ತರವನ್ನು ನಡಿಸಿರುತ್ತಾರೆ. ಬ್ರಾಹ್ಮಣರೆಲ್ಲರು ನೆರೆದಿರುತ್ತಾರೆ. ತುಪ್ಪವನ್ನು ತರಲಿಕ್ಕೆ ಹೋದ ಮನುಷ್ಯನು ಇನ್ನೂ ಬಂದಿಲ್ಲ. ಆದ್ದರಿಂದ ಇನ್ನು ಮುಂದೇನು ಮಾಡಬೇಕೆಂಬ ಚಿಂತೆಯಲ್ಲಿರುವೆನು" ಎಂದು ಉತ್ತರ ಕೊಟ್ಟನು. ಅದಕ್ಕೆ ಸಮರ್ಥರು "ಒಳ್ಳೇದು. ಏನೂ ಚಿಂತೆ ಮಾಡಬೇಡ" ಎಂದು ಹೇಳಿ ಶ್ರೀಧರರ ಶಿಷ್ಯನಾದ ಮುಂಜೇ ಎಂಬವನನ್ನು ಒದರಿ, ಒಂದು ಮಣ್ಣಿನ ಕೊಡವನ್ನು ತಂದು ಅದನ್ನು ಸ್ವಚ್ಛವಾಗಿ ತೊಳೆದು ಭಾವಿಯ ಮೇಲಿನ ಸ್ವಚ್ಛ ನೀರಿನಿಂದ ತುಂಬಿಕೊಂಡು ಬರಬೇಕೆಂದು ಅಪ್ಪಣೆ ಮಾಡಿದನು. ಆ ಪ್ರಕಾರ ಅವನು ತರಲಾಗಿ ಅದಕ್ಕೆ ಸಮರ್ಥರು ತಮ್ಮ ಕೈಯಿಂದ ಮುಟ್ಟಿ "ಈ ಕೊಡದಲ್ಲಿಯ ತುಪ್ಪವನ್ನು ತೆಗೆದು ನೈವೇದ್ಯಕ್ಕಾಗಿ ಉಪಯೋಗಿಸಬೇಕು" ಎಂದು ಹೇಳಿ ರಾಮಚಂದ್ರಬುವಾನಿಗೆ "ಮುಂಜೇ ಇವನ ಕಡೆಯಿಂದ ಈ ಕೊಡದೊಳಗಿನ ತುಪ್ಪವನ್ನು ಪಂಕ್ತಿಗೆಲ್ಲ ಬಡಿಸಬೇಕು" ಎಂದು ಅಪ್ಪಣೆಯನ್ನು ಮಾಡಿದರು. ಅದರಂತೆ ಮುಂಜೇ ಇವನು ತುಪ್ಪವನ್ನು ಯಥೇಷ್ಟವಾಗಿ

ಬಡಿಸಿದನು. ಬ್ರಾಹ್ಮಣರ ಪಂಕ್ತಿಯೆಲ್ಲಾ ಮುಗಿದು ಶೂದ್ರಾದಿಗಳಿಗೆಲ್ಲ ಬಡಿಸಿದರೂ ಆ ಕೊಡದೊಳಗಿನ ತುಪ್ಪವು ಕಡೆತನಕ ತುಂಬಿದಂತೆಯೇ ಇತ್ತು. ಇದನ್ನು ರಾಮಚಂದ್ರಬುವಾನು ಸಮರ್ಥರಿಗೆ ತಿಳುಹಿಸಲಾಗಿ ಅವರು ಕಿಂಚಿತ್ತು ನಕ್ಕು, "ವತ್ಸಾ, ಈ ತುಪ್ಪದ ಕೊಡವನ್ನು ಬಹಳ ಎಚ್ಚರಿಕೆಯಿಂದ ಕಾಪಾಡಿ ಪ್ರತಿವರ್ಷ ಇದನ್ನು ಸ್ವಚ್ಛವಾಗಿ ತೊಳೆದು ತುಪ್ಪದಿಂದ ತುಂಬಿ ಇದನ್ನೇ ಪ್ರತಿವರ್ಷ ಉತ್ಸವದ ಕಾಲಕ್ಕೆ ಮುಂಜೇ ಇವನ ಕಡೆಯಿಂದ ಬಡಿಸುತ್ತ ಹೋಗು. ಅಂದರೆ ನಿನಗೆ ಎಂದೆಂದಿಗೂ ತುಪ್ಪವು ಕಡಿಮೆಯಾಗಲಾರದು" ಎಂದು ಆಶೀರ್ವಾದವನ್ನು ಮಾಡಿದರು. ಈ ಯಾವತ್ತು ಸಂಗತಿಯನ್ನು ರಾಮಚಂದ್ರಬುವಾನು ಶ್ರೇಷ್ಠರಿಗೆ ತಿಳಿಸಲಾಗಿ ಅವರು "ಈ ಕೊಡವು ನಿನಗೊಬ್ಬನಿಗೇ ಮಾತ್ರವಲ್ಲ, ನಿನ್ನ ವಂಶಕ್ಕೆಲ್ಲ ಸಾಕಾಗುವದು" ಎಂದು ಹೇಳಿದರು. ಆ ಕೊಡವನ್ನು ಇನ್ನೂ ಕಾಯ್ದಿಟ್ಟಿದ್ದಾರೆ. ರಾಮನವಮಿಯ ಉತ್ಸವವು ಮುಗಿದ ಕೆಲವು ದಿವಸಗಳ ತರುವಾಯ ಸಮರ್ಥರು ಶ್ರೀಕೃಷ್ಣಾತೀರಕ್ಕೆ ಹೋಗುವದಕ್ಕಾಗಿ ಶ್ರೇಷ್ಠರ ಅಪ್ಪಣೆಯನ್ನು ಬೇಡಿಕೊಳ್ಳಲು ಅವರಿಬ್ಬರೂ ಏಕಾಂತದಲ್ಲಿ ಕುಳಿತು ಬಹಳೊತ್ತು ಭಾಷಣ ಮಾಡಿದರು. ಆ ಭಾಷಣವು ಏನಾಯಿತೆಂಬುವದು ಅವರಿಬ್ಬರಿಗೇ ಮಾತ್ರ ಗೊತ್ತು. ಅವರ ಪರಸ್ಪರ ಭಾಷಣವು ಮುಗಿದ ತರುವಾಯ ಅವರು ಪರಸ್ಪರರಿಗೆ ಆಲಿಂಗನ ಕೊಟ್ಟರು. ಆಗ ಉಭಯತರ ಕಣ್ಣೊಳಗಿಂದ ಆನಂದಾಶ್ರುಗಳು ಹರಿದವು. ಈ ಪ್ರಕಾರ ಸಮರ್ಥರು ಶ್ರೇಷ್ಠರ ಅಪ್ಪಣೆಯನ್ನು ತೆಗೆದುಕೊಂಡು ಚಾಫಳಕ್ಕೆ ಹೊರಟು ಹೋದರು.

**ಶ್ರೇಷ್ಠರ ಅಂತ್ಯಕಾಲವು**—ಸಮರ್ಥರು ಹೊರಟು ಹೋದ ತರುವಾಯ ಶ್ರೇಷ್ಠರ ಒಬ್ಬ ಪರಮಪ್ರಿಯ ಶಿಷ್ಯನಾದ ಶೇವಲೆಯ ದೇಶಮುಖನ ಮನೆಯಲ್ಲಿ ಲಗ್ನಸಮಾರಂಭವು ನಡೆಯಿತು. ಆ ಸಮಾರಂಭದ ನಿಮಿತ್ತ್ಯದಿಂದ ಶ್ರೇಷ್ಠರನ್ನು ತನ್ನ ಮನೆಗೆ ಕರೆದುಕೊಂಡು ಬರಬೇಕೆಂದು ಆ ದೇಶಮುಖನು ಆಲೋಚಿಸಿ ಶ್ರೇಷ್ಠರ ಬಳಿಗೆ ಹೋಗಿ ಅದರಂತೆ ವಿನಂತಿ ಮಾಡಿಕೊಂಡನು. ಶ್ರೇಷ್ಠರ ಮನಸ್ಸಿನೊಳಗೆ ಅಲ್ಲಿಗೆ ಹೋಗುವದು ಇದ್ದಿಲ್ಲ. ಆದರೂ ತಮ್ಮ ಶಿಷ್ಯನ ಭಕ್ತಿಯನ್ನು ನೋಡಿ ಅವನ ಮನಸ್ಸು ನೋಯಿಸಲಾರದೆ ಯಾಕಾಗಲೊಲ್ಲದು ಎಂದು ಒಡಂಬಟ್ಟು ಅವನ ಮನೆಗೆ ಹೋದರು. ಅದರಿಂದ ಅವನಿಗೆ ಅತ್ಯಂತ ಆನಂದವುಂಟಾಯಿತು. ಲಗ್ನಸಮಾರಂಭವು ಮುಗಿದ ಮೇಲೆ ಅವನು ಶ್ರೇಷ್ಠರನ್ನು ಆಗ್ರಹದಿಂದ ಒಂದು ತಿಂಗಳದವರೆಗೆ ತನ್ನ ಮನೆಯಲ್ಲಿಟ್ಟುಕೊಂಡನು. ತರುವಾಯ ಶ್ರೇಷ್ಠರು ಜಾಂಬೇ ಗ್ರಾಮಕ್ಕೆ ಮರಳಿ ಹೋಗುವದಕ್ಕಾಗಿ ಹೊರಟು ದಾರಿಯಲ್ಲಿ ಶಕೆ ೧೫೩೯ನೇ ಫಾಲ್ಗುಣ ವದ್ಯ ಚತುರ್ದಶಿಯ ದಿವಸ ದಹಿಲವಾಡಾ ಎಂಬಲ್ಲಿಯ ಒಂದು ಮಾವಿನ ತೋಪಿನೊಳಗೆ ಇಳಿದುಕೊಂಡರು. ಅಲ್ಲಿ ಶ್ರೇಷ್ಠರು ಸ್ನಾನಸಂಧ್ಯಾದಿ ನಿತ್ಯಕರ್ಮಗಳನ್ನು

ಮುಗಿಸಿದ ತರುವಾಯ ತಮ್ಮ ಯಾವತ್ತು ಶಿಷ್ಯರನ್ನೂ ತಮ್ಮ ಚಿರಂಜೀವನಾದ ರಾಮಚಂದ್ರಬುವ ನನ್ನೂ ತಮ್ಮ ಹತ್ತರ ಕರೆದು ತಾವು ದರ್ಭಾಸನದ ಮೇಲೆ ಕುಳಿತು "ನಾನು ಇನ್ನು ನಿಜಧಾಮಕ್ಕೆ ಹೋಗುತ್ತೇನೆ" ಎಂದು ಹೇಳಿ ಶ್ವಾಸ ಬಿಡಲಿಕ್ಕೆ ಆರಂಭಿಸಿದರು. ಆಗ ರಾಮಚಂದ್ರಬುವಾ ಮೊದಲಾದ ಯಾವತ್ತು ಜನರು ಅಳಹತ್ತಿದರು. ಅದನ್ನು ಶ್ರೀಯವರು ನೋಡಿ ಅವರೆಲ್ಲರಿಗೆ—"ನನ್ನ ಅಂತ್ಯವನ್ನು ನೋಡಿ ನೀವು ದುಃಖಿಸಹತ್ತಿದ ಬಳಿಕ ಇಷ್ಟು ದಿವಸ ನೀವು ನನ್ನ ಸಹವಾಸದಲ್ಲಿದ್ದದ್ದರ ಸಾರ್ಥಕವೇನಾಯಿತು! ಇದು ಮೃತ್ಯುಲೋಕವು. ಇಲ್ಲಿಗೆ ಬಂದ ಮನುಷ್ಯನು ಎಂದಾದರೊಮ್ಮೆ ಹೋಗತಕ್ಕವನು. ಆದ್ದರಿಂದ ನೀವು ಇದಕ್ಕಾಗಿ ದುಃಖಿಸಬಾರದು. ನೀವು ಶ್ರೀರಘುಪತಿಯ ಸೇವೆಯನ್ನು ಮಾಡಿ ಜಗದುದ್ಧಾರ ಮಾಡಿರಿ ಎಂದು ಹೇಳಿದನು. ಆಗ ಅವರು "ನೀವು ದೇಹವಿಸರ್ಜನ ಮಾಡುವದಿದ್ದರೆ ಗಂಗಾತೀರದಲ್ಲಿ ಮಾಡಬೇಕು" ಎಂದು ಹೇಳಿಕೊಂಡರು. ಅದಕ್ಕೆ ಶ್ರೀಯವರು "ಶ್ರೀ ರಘುಪತಿಯ ಇಚ್ಛೆಯೇ ಪ್ರಮಾಣವು. ಅನ್ಯ ಇಚ್ಛೆಯಿಂದ ಉಪಯೋಗವೇನು!" ಎಂದು ಉತ್ತರ ಕೊಟ್ಟು ಪರಮೇಶ್ವರನ ಭಜನೆಯನ್ನು ಮಾಡಲಿಕ್ಕೆ ಆರಂಭಿಸಿ ಮಧ್ಯಾಹ್ನಕ್ಕೆ ಹನ್ನೊಂದು ಸಾರೆ "ಹರಹರ" ಎಂದು "ರಾಮ" ಎಂಬ ಶಬ್ದವನ್ನು ಕಡೆಗೆ ನುಡಿದು ದೇಹವನ್ನು ಬಿಟ್ಟರು!! ಈ ಯಾವತ್ತು ವರ್ತಮಾನವನ್ನು ತಿಳಿಸುವದಕ್ಕಾಗಿ ಜಾಂಬೀ ಊರಿಗೆ ಒಬ್ಬ ಮನುಷ್ಯನು ಹೋದನು. ಅವನ ಸಂಗಡ ಶ್ರೀಯವರ ಪತ್ನಿಯಾದ ಪಾರ್ವತೀಬಾಯಿಯೂ ಇನ್ನೊಬ್ಬ ಕುಮಾರನಾದ ರಾಮಜೀಬುವಾ ಎಂಬವನೂ ಹೊರಟು ಬಂದರು. ಅವರು ಇಲ್ಲಿಗೆ ಬಂದು ಮುಟ್ಟಿದಾಗ್ಗೆ ಮಧ್ಯರಾತ್ರಿಯಾಗಿತ್ತು. ಆಗ ಅವರು ಮಾಡಿದ ಶೋಕವನ್ನು ಬಣ್ಣಿಸಲಿಕ್ಕೆ ಶಬ್ದಗಳೇ ಸಾಲವು. ಪಾರ್ವತೀಬಾಯಿಯು ಸಹಗಮನದ ನಿಶ್ಚಯವನ್ನು ಮಾಡಿದಳು. ಶೇವಲೇಕರ ದೇಶಮುಖನು ಎಷ್ಟು ಪರಿಯಿಂದ ಆ ಸಾಧ್ವಿಗೆ ಹೇಳಿಕೊಂಡಾಗ್ಯೂ ಅವಳು ಕೇಳಲಿಲ್ಲ. ಮಾರನೇ ದಿವಸ ಅಮವಾಸ್ಯೆಯಲ್ಲಿ ಶ್ರೀಯವರ ದೇಹಸಾಥ್ಕವು ಆಗಿ ಅವರ ಪತ್ನಿಯು ಸಹಗಮನವನ್ನು ಮಾಡಿದಳು. ಆ ಸ್ಥಳದಲ್ಲಿ ಶೇವಲೇಕರ ದೇಶಮುಖನು ಒಂದು ವೃಂದಾವನವನ್ನು ಕಟ್ಟಿಸಿರುತ್ತಿದ್ದು ಅಲ್ಲಿ ಅವನ ವಂಶಜರು ಇನ್ನೂವರೆಗೆ ನಂದಾದೀಪ ಮೊದಲಾದ ವ್ಯವಸ್ಥೆಯನ್ನು ಇಟ್ಟಿರುವರು. ಶ್ರೀಯವರ ದೇಹವಿಸರ್ಜನದ ಕಾಲಕ್ಕೆ ಅವರ ಹಿರಿಯ ಮಗನಾದ ರಾಮಚಂದ್ರಬುವಾನು ೧೨ ವರ್ಷದವನಿದ್ದನು. ಶ್ರೀಯವರ ಅಂತ್ಯವಿಧಿಯು ತೀರಿದ ಬಳಿಕ ಶ್ರೀಯವರ ಶಿಷ್ಯರು ಸಮರ್ಥರ ಕಡೆಗೆ ಈ ಯಾವತ್ತು ಸಂಗತಿಯನ್ನು ಲಖಿಸಿ ಒಂದು ವಿನಂತಿ ಪತ್ರಿಕೆಯನ್ನು ಕಳುಹಿಸಿದರು. ಅಲ್ಲಿ ಸಮರ್ಥರು ಶ್ರೀಯವರ ದೇಹವಿಸರ್ಜನದ ದಿವಸ ಸ್ನಾನಸಂಧ್ಯಾದಿಗಳನ್ನು ಮುಗಿಸಿಕೊಂಡು ಮಧ್ಯಾಹ್ನದ ೨ ಘಂಟೆಯ ತನಕ ಉದ್ಧವ ಗೋಸ್ವಾಮಿಯ ಕಡೆಯಿಂದ ಕೀರ್ತನವನ್ನು ಮಾಡಿಸಿ ಮುಂದೆ

ಆ ಕೀರ್ತನವು ಮುಗಿದ ಬಳಿಕ ತಾವು ತಮ್ಮ ಯಾವತ್ತು ಶಿಷ್ಯಮಂಡಳಿಯನ್ನು ಕೂಡಿ ನದಿಗೆ ಸ್ನಾನಕ್ಕೆ ಹೋದರು. ಆಗ ಅವರ ಶಿಷ್ಯರೆಲ್ಲರು ಅವರಿಗೆ— "ಸ್ವಾಮಿಗಳೇ! ಇಂಥ ಬಿಸಿಲ ಹೊತ್ತಿನಲ್ಲಿ ತಾವು ಸ್ನಾನಕ್ಕೆ ಯಾಕೆ ಹೊರಟು ಬಂದಿರಿ?" ಎಂದು ವಿಚಾರಿಸಿದರು. ಅದಕ್ಕೆ ಅವರು (ಸಮರ್ಥರು)—"ಶ್ರೇಷ್ಠನು ಈ ಹೊತ್ತು ನಿರ್ಯಾಣಕ್ಕೆ ಹೋದನು. ಈ ಹೊತ್ತಿಗೆ ನಮ್ಮ ಛತ್ರವು ಇಲ್ಲದಂತಾಯಿತು" ಎಂದು ಹೇಳಿದರು. ಇದನ್ನು ಕೇಳಿ ಯಾವತ್ತು ಜನರಿಗೆ ದುಃಖವಾಯಿತು. ಈ ಸಂಗತಿಯನ್ನು ಸಮರ್ಥರ ಆರಾಭ್ಯಾಯಿಯ ಜಾನು ಪ್ರತಿದಿನ ಕಳಿಸುವ ಸುದ್ದೀಪತ್ರದಲ್ಲಿ ಶಿವಾಜಿ ಮಹಾರಾಜರಿಗೆ ಬರೆದು ತಿಳುಹಿಸಿದನು. ಅದನ್ನು ಓದಿ ಮಹಾರಾಜರು ಸಮರ್ಥರ ದರ್ಶನಕ್ಕೆ ಬಂದು ವಿಚಾರಿಸಲಾಗಿ ಇನ್ನೂ ಜಾಂಬೆಯಿಂದ ನಿರೋಪವೇ ಬಂದಿಲ್ಲವೆಂಬುವದು ಅವರಿಗೆ ತಿಳಿಯಬಂತು. ಆಗ ಅವರು ಆಶ್ಚರ್ಯದಿಂದ "ಸ್ವಾಮಿಗಳೇ! ಇನ್ನೂ ತಮಗೆ ಅತ್ತಕಡೆಯಿಂದ ನಿರೋಪವು ಬಾರದೆ ತಾವು ಸ್ನಾನ ಹೇಗೆ ಮಾಡಿಬಿಟ್ಟಿರಲ್ಲ? ಎಂದು ಕೇಳಿದರು. ಅದಕ್ಕೆ ಸಮರ್ಥರು "ನಮ್ಮ ಮಾತೋಶ್ರೀಯ ದೇಹವಿಸರ್ಜನದ ಕಾಲಕ್ಕೆ ನಾವು ಅಲ್ಲಿಗೆ ಹೋಗಿದ್ದೆವು. ಈಗ ಮಾತ್ರ ಹೋಗಲಿಲ್ಲ. ಆದ್ದರಿಂದ ಶ್ರೇಷ್ಠರ ದೇಹವಿಸರ್ಜನವೇ ಸುಳ್ಳೆಂದು ಹೇಳಬಹುದೋ?" ಎಂದು ನುಡಿದರು. ಅದನ್ನು ಕೇಳಿ ಮಹಾರಾಜರು ಸುಮ್ಮನಾದರು. ಆ ಮೇಲೆ ಸಮರ್ಥರು ಶ್ರೇಷ್ಠರ ಮಕ್ಕಳವರುಗಳನ್ನು ಉದ್ಧವಗೋಸಾವಿಯ ಕಡೆಯಿಂದ ತಮ್ಮಲ್ಲಿಗೆ ಕರೆಯಿಸಿಕೊಂಡರು. ಅವರು ಒಂದನಂತರ ಸುಮಾರು ಒಂದು ವರ್ಷದ ತನಕ ಸಮರ್ಥರ ಬಳಿಯಲ್ಲಿಯೇ ಇದ್ದರು. ಸಮರ್ಥರ ಶ್ರೇಷ್ಠರ ವಾಕ್ಯಗಳನ್ನು ದಿನಾಲು ತಮ್ಮ ಸಂಗತಿಯಲ್ಲಿ ಕರೆಕೊಂಡು ಭೋಜನ ಮಾಡುತ್ತಿದ್ದರು. ಹಾಗೂ ರಾತ್ರಿ ಅವರನ್ನು ತಮ್ಮ ಬಳಿಯಲ್ಲಿಯೇ ಕರೆಕೊಂಡು ಮಲಗಿಕೊಳ್ಳುತ್ತಿದ್ದರು.

ಗೊಬ್ಬರಗಳ ಹರಿಕೆಯು:—ಒಂದಾನೊಂದು ದಿವಸ ಪರಳಿಯಲ್ಲಿ ಸಮರ್ಥರು ಭೋಜನೋತ್ತರದಲ್ಲಿ ತಮ್ಮ ಶಿಷ್ಯರ ಸಂಗಡ ಮಾತಾಡುತ್ತ ಕುಳಿತಿರುವಾಗ, ಅವರ ಮೈಮೇಲೆ ಒಮ್ಮಿಂದೊಮ್ಮೆ ಗೊಬ್ಬರಗಳು ಎದ್ದವು. ಇದನ್ನು ಕಂಡು ಸಮರ್ಥರು "ನೋವಿಯು ಕಟ್ಟವು ಸಮಗ್ರ್ಯಕ!" ಎಂದು ನುಡಿದರು. ಆಮೇಲೆ ತುಸು ಹೊತ್ತಿನ ಮೇಲೆ ನೆನಪು ಮಾಡಿಕೊಂಡು ವೇಣಾಬಾಯಿಯನ್ನುದ್ದೇಶಿಸಿ— "ವೇಣೂ, ನಮ್ಮ ತಾಯಿಯು ತನಗೆ ಗಂಡು ಮಕ್ಕಳು ಆದರೆ ಮಾತಾಪುರದ ದುರ್ಗಾದೇವಿಗೆ ಬಂಗಾರದ ಹೂವು ಮಾಡಿಸಿಕೊಡುತ್ತೇನೆಂದು ಹರಿಕೆಯನ್ನು ಬೇಡಿಕೊಂಡಿದ್ದಳು. ಆ ಹರಿಕೆಯು ಆಕೆಯ ಕೈಯಿಂದ ತೀರದೆ ಉಳಿದದ್ದು ನಿಜವು. ಆದರಿಂದ ದೇವಿಯು ನನಗೆ ಅದರ ನೆನಪು ಮಾಡಿಕೊಟ್ಟಳು. ಇನ್ನುಮೇಲೆ ಬೇ

ಗನೆ ನಾವು ಆ ಹರಿಕೆಯನ್ನು ತೀರಿಸಬೇಕು. ಆದರೆ ಮಾತ ಪುಸಕ್ಕೆ ಯಾರು ಹೋಗಬೇಕು?" ಎಂಬದಾಗಿ ಉದ್ಗಾರವನ್ನು ತೆಗೆದರು. ಆಗ ವೇಣಾಬಾಯಿಯು "ಹಾಗಾದರೆ ತುಳಜಾಪುರಕ್ಕೆ ಹೋಗಬೇಕು" ಎಂದು ಹೇಳಿದಳು. ಅದಕ್ಕೆ ಸಮರ್ಥರು "ಅಷ್ಟಿಯವರೆಗಾದರೂ ಯಾರು ಹೋಗುವರು?" ಎಂದು ನುಡಿದರು. ಆಮೇಲೆ ವೇಣಾಬಾಯಿಯು "ಅದೂ ಇಲ್ಲವಿದ್ದರೆ ಪ್ರತಾಪಗಡದಲ್ಲಿಯೇ ಶಿವಾಜಿ ಮಹಾರಾಜರು ದೇವಿಯ ಸ್ಥಾಪನೆಯನ್ನು ಮಾಡಿರುತ್ತಾರೆ. ಅಲ್ಲಿಯಾದರೂ ಹೋಗಿ ಹರಿಕೆಯನ್ನು ತೀರಿಸಬೇಕು" ಎಂದು ಉತ್ತರ ಕೊಟ್ಟಳು. ಇದನ್ನು ಸಮರ್ಥರು ಕೂಡಲೇ ಒಪ್ಪಿಕೊಂಡು ಒಬ್ಬ ಅಕ್ಕಸಾಲಿಗನನ್ನು ಕರೆಯಿಸಿ ಅವನಿಗೆ ಒಂದು ತೊಲಿ ಭಂಗಾರವನ್ನು ಕೊಟ್ಟು ಒಂದು ಹೂವನ್ನು ಮಾಡಿಸಿ ತರಿಸಿದರು. ಆಮೇಲೆ ರಾತ್ರಿ ಭೋಜನವಾದ ನಂತರ ಸಮರ್ಥರು ಕಲ್ಯಾಣನಿಗೆ— "ಕಲ್ಯಾಣಾ! ನಾವಿಬ್ಬರೂ ಪ್ರತಾಪಗಡಕ್ಕೆ ಹೋಗಿ ನಮ್ಮ ಹರಿಕೆಯನ್ನು ತೀರಿಸಿಬರೋಣ" ಎಂದು ಹೇಳಿದರು. ಅದಕ್ಕೆ ಕಲ್ಯಾಣನು "ಅಪ್ಪಾ" ಎಂದು ನುಡಿದು ಅವರ ಬೆನ್ನು ಹತ್ತಿದನು. ನಂತರ ಉಭಯತರೂ ಅಲ್ಲಿ ಗುಪ್ತವಾಗಿ, ಪ್ರತಾಪಗಡದ ದೇವಿಯ ಗುಡಿಯೊಳಗೆ ಹೋಗಿ ಪ್ರಗಟವಾದರು. ಶಿವಾಜಿ ಮಹಾರಾಜರ ಸ್ವಾರಿಯು ಪ್ರತಾಪಗಡದಲ್ಲಿಯೇ ಇದ್ದದರಿಂದ ಆ ದೇವಿಯ ಪೂಜಾರಿಯು ದೇವಿಯ ಗುಡಿಯ ಯಾವತ್ತು ಬಾಗಿಲುಗಳನ್ನು ಇಕ್ಕಿಕೊಂಡು ಕೀಲಿಗಳನ್ನು ಹಾಕಿ ಭದ್ರವಾಗಿ ಕಾದಿದ್ದನು. ಆದ್ದರಿಂದ ಸಮರ್ಥರು ಯಾವ ಬಾಗಿಲವನ್ನೂ ತೆರೆಯಿಸದೆ ದೇವಿಯ ಮುಂದೆ ಹೋಗಿ ನಿಂತುಕೊಂಡರು. ಸಮರ್ಥರನ್ನು ನೋಡಿ ದೇವಿಗೆ ಪರಮಾನಂದವಾಯಿತು. ಸಮರ್ಥರು ದೇವಿಯ ಚರಣದ ಮೇಲೆ ಮಸ್ತಕವನ್ನಿಟ್ಟು "ನಮ್ಮ ಹರಿಕೆಯು ಸಮ್ಮಂಧವಾಗಿ ಉಳಿದಿರುವ ಈ ಭಂಗಾರದ ಹೂವನ್ನು ಸ್ವೀಕರಿಸಬೇಕು" ಎಂದು ಬೇಡಿಕೊಂಡರು. ಆಗ ದೇವಿಯು "ನೀನು ಈ ನಿಮಿತ್ತದಿಂದಾದರೂ ನನ್ನ ದರ್ಶನಕ್ಕೆ ಬಂದಿ" ಎಂದು ನುಡಿದಳು. ದೇವಿಯ ಮೈಮೇಲೆ ಯಾವತ್ತು ಕಡೆಗೆ ಅಲಂಕಾರಗಳು ತುಂಬಿಹೋದ್ದರಿಂದ ಹೂವನ್ನು ಏರಿಸಲಿಕ್ಕೆ ಸ್ಥಳವೇ ಕಾಣಿಸಲಿಲ್ಲ. ಆಗ ದೇವಿಯು ತನ್ನ ಸಿರಸ್ಸನ್ನು ತೋರಿಸಿದಳು. ಆಮೇಲೆ ಸಮರ್ಥರು ತಾವು ಮಾಡಿಸಿ ತಂದಿದ್ದ ಹೂವನ್ನು ದೇವಿಯ ಶಿರಸ್ಸಿನ ಮೇಲೆ ಇಟ್ಟು ದೇವಿಗೆ ನಮಸ್ಕರಿಸಿ ದೇವಿಯ ಮೇಲೆ ಭಕ್ತಿಪರ ಸ್ತೋತ್ರವನ್ನು ರಚಿಸಿ ದೇವಿಯ ಮುಂದೆ ಅಂದರು. ಅದನ್ನು ಕೇಳಿ ದೇವಿಯು ಸುಪ್ರಸನ್ನಳಾಗಿ "ರಾಮದಾಸಾ! ಏನಾದರೂ ವರ ಬೇಡಿಕೋ" ಎಂದಳು. ಅದಕ್ಕೆ ಸಮರ್ಥರು—"ತಾಯೀ! ನಾನಂತೂ ಸನ್ಯಾಸಿಯು. ನಾನು ವರ ಬೇಡಿಕೊಂಡು ಏನು ಮಾಡತಕ್ಕದ್ದಿದೆ?" ಎಂದು ಉತ್ತರ ಕೊಟ್ಟರು. ಆಗ ದೇವಿಯು ಸಮರ್ಥರ ಬೆನ್ನಮೇಲೆ ಕೈಯಾಡಿಸಿ—"ಅದನ್ನು ನಾನು ಕೇಳುವದಿಲ್ಲ. ನೀನು ಏನಾದರೂ ವರವನ್ನು ಬೇಡಿಕೊಳ್ಳಬೇಕು"

ಎಂದು ತಿರುಗಿ ಹೇಳಿದಳು. ಆಮೇಲೆ ಸಮರ್ಥರು "ನನಗೆ ಏನಾದರೂ ವರ
ಕೊಡಬೇಕೆಂದು ನಿನ್ನ ಮನಸ್ಸಿದ್ದರೆ ಶಿವರಾಯನಿಗೆ ಕೊಟ್ಟ ಅವನನ್ನು ಸಂರಕ್ಷಿ
ಸು ಅಂದರೆ ತೀರಿತು" ಎಂದು ಹೇಳಿದರು. ಆಗ ದೇವಿಯು "ತಥಾಸ್ತು" ಎಂ
ದು ತನ್ನ ಕೊರಳೊಳಗಿನ ನವರತ್ನದ ಸರವನ್ನು ಸಮರ್ಥರ ಕೊರಳಲ್ಲಿ ಹಾಕಿದಳು.
ಅದನ್ನು ನೋಡಿ ಸಮರ್ಥರು "ಮಾತೇ! ಈ ನವರತ್ನದ ಸರವು ನನ್ನಂಥ ಸನ್ಯಾ
ಸಿಯ ಕೊರಳಲ್ಲಿ ಯಾತಕ್ಕೆ ಬೇಕು?" ಎಂದು ಪ್ರಶ್ನೆ ಮಾಡಿ ತಿರುಗಿ ಕೊಡಲಿಕ್ಕೆ
ಹೋದರು. ಅದಕ್ಕೆ ದೇವಿಯು—"ರಾಮದಾಸಾ! ನನ್ನ ಕೊರಳಲ್ಲಿದ್ದದ್ದು ನಿನ್ನ
ಕೊರಳಲ್ಲಿರಬಾರದೆಂಬುವದು ಆಶ್ಚರ್ಯವಲ್ಲವೇ?" ಎಂದು ನುಡಿದಳು. ಆದರಿಂ
ದ ಸಮರ್ಥರು ಆ ನವರತ್ನದ ಹಾರವನ್ನು ಸ್ವೀಕರಿಸಬೇಕಾಯಿತು. ಮುಂದೆ
ಸಮರ್ಥರು ಅದನ್ನು ಸ್ವೀಕರಿಸಿ ಪುನಃ ಕಲ್ಯಾಣ-ಸಹ ವರ್ತಮಾನ ಚಾಫಳಕ್ಕೆ
ಹೊರಟುಹೋದರು. ಮಾರನೇ ದಿವಸ ಪ್ರಾತಃಕಾಲಕ್ಕೆ ನಿತ್ಯ ಸಾಂಪ್ರದಾಯಕ್ಕ
ನುಸರಿಸಿ ಮಹಾರಾಜರು ದೇವಿಯ ಪೂಜೆಯನ್ನು ಮಾಡುವದಕ್ಕೆ ಹೋಗಿ ಕುಳಿತು
ದೇವಿಯ ಮೇಲಿನ ನಿರ್ಮಾಲ್ಯವನ್ನು ತೆಗೆಯುತ್ತಿರುವಾಗ ಆಕೆಯ ಕೊರಳೊಳಗಿನ
ನವರತ್ನದ ಹಾರವು ಇದ್ದಿಲ್ಲ. ಮಹಾರಾಜರು ಎಷ್ಟು ಶೋಧ ಮಾಡಿದಾಗ್ಯೂ ಯಾ
ರು ಒಯ್ದರು, ಹ್ಯಾಗೆ ಒಯ್ದರು ಎಂಬ ಸಂಗತಿಗಳು ಗೊತ್ತಾಗಲಿಲ್ಲ. ಮಹಾರಾಜ
ರು ಸಿಟ್ಟಿಗೆದ್ದರು. ರಾತ್ರಿ ದೇವಿಯ ಕೊರಳಲ್ಲಿದ್ದ ನವರತ್ನದ ಹಾರವು ಹ್ಯಾಗೆ
ಹೋಯಿತೆಂಬುವದು ಎಲ್ಲರಿಗೂ ಆಶ್ಚರ್ಯವಾಯಿತು. ರಾತ್ರಿ ಮುಚ್ಚಿದ್ದ ಬಾಗಿಲು
ಗಳು ಮುಂಜಾನೆ ಮುಚ್ಚಿದಂತೆ ಇದ್ದಾಗ್ಯೂ ನವರತ್ನದ ಹಾರವು ಹ್ಯಾಗೆ ಹೋಗಿ
ದ್ದೀತೆಂಬುವದು ಯಾರಿಗೂ ತಿಳಿಯಲಿಲ್ಲ. ಇತ್ತಲಾ ಸಮರ್ಥರು ಕಲ್ಯಾಣಸ್ವಾಮಿ
ಯನ್ನು ಕರೆದು—"ಕಲ್ಯಾಣಾ! ಶಿವಾಜಿ ಮಹಾರಾಜರು ದೇವಿಯ ಕೊರಳೊಳಗಿ
ನ ನವರತ್ನದ ಸರವು ಹ್ಯಾಗೆ ಹೋಯಿತೆಂಬ ಬಗ್ಗೆ ಸೇವಕರೆಲ್ಲರ ಮೇಲೆ ಸಿಟ್ಟಿಗೆದ್ದಿ
ದ್ದಾರೆ. ಸುಮ್ಮಸುಮ್ಮನೆ ಆ ಬಡವರಿಗೆ ಉಪದ್ರವವಾದೀತು. ಆದ್ದರಿಂದ ಈ
ಗಿಂದೀಗಲೇ ಇದನ್ನು ಪ್ರತಾಪಗಡಕ್ಕೆ ತೆಗೆದುಕೊಂಡು ಹೋಗಿ ಮಹಾರಾಜರಿಗೆ
ಮುಟ್ಟಿಸಿ ಬಾ" ಎಂದು ಹೇಳಿದರು. ಆಗ ಕಲ್ಯಾಣಸ್ವಾಮಿಯು "ಆಜ್ಞಾ",
ಎಂದವನೇ ಅಲ್ಲಿ ಒಮ್ಮಿಂದೊಮ್ಮೆ ಗುಪ್ತನಾಗಿ ಮಹಾರಾಜರು ಸಭಾಮಂದಿರದಲ್ಲಿರು
ವಾಗ ಅವರ ಮುಂದೆ ಪ್ರಗಟವಾದನು. ಮಹಾರಾಜರು ಕಲ್ಯಾಣಸ್ವಾಮಿಯ
ನ್ನು ನೋಡಿ ಆತನಿಗೆ ಯೋಗ್ಯವಾದ ಆದರಸತ್ಕಾರವನ್ನು ಮಾಡಿ ಅವನ ಮತ್ತು
ಸಮರ್ಥರ ಕ್ಷೇಮಕುಶಲಗಳನ್ನು ವಿಚಾರಿಸಿ ಯಾಕೆ ಅಕಸ್ಮಾತ್ ಬರೋಣವಾಯಿ
ತು?" ಎಂದು ಕೇಳಿದರು. ಅದಕ್ಕೆ ಕಲ್ಯಾಣನು ಮಹಾರಾಜರ ಮುಂದೆ ಯಾವ
ತ್ತು ಸಂಗತಿಯನ್ನು ವಿವರಿಸಿ ದೇವಿಯ ಕೊರಳೊಳಗಿನ ನವರತ್ನದ ಸರವನ್ನು ಮತ

ಳಿ ಕೊಟ್ಟುಬಿಟ್ಟನು. “ದೇವಿಯು ಪ್ರತ್ಯಕ್ಷಳಾಗಿ ತನ್ನ ಕೊರಳೊಳಗಿಂದ ತೆಗೆದು ಸಮರ್ಥರಿಗೆ ನಿನ್ನೆ ರಾತ್ರಿ ತನ್ನ ಪ್ರಸಾದವೆಂದು ಅರ್ಪಿಸಿದಳು” ಎಂದು ಕಲ್ಯಾಣನ ಬಾಯಿಂದ ಬಂದ ಶಬ್ದಗಳನ್ನು ಕೇಳಿದ ಕೂಡಲೆ ಮಹಾರಾಜರು ಆನಂದದಿಂದ ಮೈಯುಬ್ಬಿ “ನಾನು ಈಗಿಂದೀಗಲೇ ನಿಮ್ಮ ಸಂಗಡ ಸಮರ್ಥರ ದರ್ಶನಕ್ಕಾಗಿ ಬರುತ್ತೇನೆ” ಎಂದು ಹೇಳಿದರು. ಅದಕ್ಕೆ ಕಲ್ಯಾಣಸ್ವಾಮಿಯು “ನೀವು ಹಿಂದಿನಿಂದ ಬನ್ನಿ. ನನಗೆ ಇಲ್ಲಿ ನಿಲ್ಲಲಿಕ್ಕೆ ಅವಕಾಶವಿಲ್ಲ” ಎಂದು ಹೇಳಿ ಪ್ರತಾಪಗಡದಿಂದ ಗುಪ್ತನಾಗಿ ಚಾಫಳದ ಮಠದಲ್ಲಿ ಸಮರ್ಥರ ಮುಂದೆ ಪ್ರಗಟವಾದನು. ಆಮೇಲೆ ಕಲ್ಯಾಣಸ್ವಾಮಿಯು ಸಮರ್ಥರಿಗೆ ಯಾವತ್ತು ಸಂಗತಿಯನ್ನು ತಿಳಿಸಿದನು. ಅದನ್ನು ಕೇಳಿ ಸಮರ್ಥರು ಸಮಾಧಾನ ಪಟ್ಟರು. ಮಹಾರಾಜರು ಮಾರನೇ ದಿವಸ ಸಮರ್ಥರ ಬಳಿಗೆ ಬಂದು ಅವರಿಗೆ ನಮಸ್ಕರಿಸಿ ದೇವಿಯ ಕೊರಳೊಳಗಿನ ನವರತ್ನದ ಸರವನ್ನೂ ಅನ್ಯ ಅಲಂಕಾರಗಳನ್ನೂ ತಂದು ಸಮರ್ಥರಿಗೆ ಅರ್ಪಿಸಿದರು. ಸಮರ್ಥರು ಒಲ್ಲೆಂದು ಎಷ್ಟು ಹೇಳಿದಾಗ್ಯೂ ಮಹಾರಾಜರು ಕೇಳಲಿಲ್ಲ. ಮಹಾರಾಜರು ಸಮರ್ಥರಿಗೆ— “ಸ್ವಾಮಿ! ತಾವು ದೇವಿಗೆ ಸಹ ವಂದ್ಯರಿರುವಲ್ಲಿ ನನ್ನಂಥವನ ಪಾಡೇನು? ದೇವಿಯು ತಮಗೆ ಅರ್ಪಿಸಿದ್ದನ್ನೇ ನಾನು ತಿರುಗಿ ತಂದುಕೊಟ್ಟಿದ್ದೇನೆ. ನಾನು ಅಜ್ಞಾನದಿಂದ ನನ್ನ ಸೇವಕರ ಮೇಲೆ ಸಿಟ್ಟಿಗೆದ್ದ ಅಪರಾಧವನ್ನು ಕ್ಷಮಿಸಬೇಕು” ಎಂದು ಬೇಡಿಕೊಂಡರು. ಆಮೇಲೆ ಮಹಾರಾಜರು ಸಮರ್ಥರಿಗೆ ಈ ಪ್ರಸಂಗದಲ್ಲಿ ತಮ್ಮ ಕಡಿಂದ ಏನಾದರೂ ವಿಶೇಷ ಸೇವೆಯನ್ನು ಮಾಡಿಸಿಕೊಳ್ಳಬೇಕೆಂದು ಹೇಳಿಕೊಂಡದ್ದರಿಂದ ಸಮರ್ಥರು ಮಹಾರಾಜರಿಗೆ “ನೀನು ದೇವಿಯ ಗುಡಿಯನ್ನು ಸುಂದರವಾಗಿ ಕಟ್ಟಿಸಿ ಅದರ ಮುಂದೆ ಉತ್ತಮವಾದ ಎರಡು ದೀಪಮಾಲೆಯ ಕಂಭಗಳನ್ನು ನಿಲ್ಲಿಸಬೇಕು” ಎಂದು ಅಪ್ಪಣೆಮಾಡಿದರು. ತರುವಾಯ ಮಹಾರಾಜರ ವಿನಂತಿಯ ಮೇರೆಗೆ ಸಮರ್ಥರು ದೇವಿಯ ಗುಡಿಯನ್ನು ಶ್ರೇಷ್ಠರ ಚಿರಂಜೀವರಾದ ರಾಮಚಂದ್ರಬುವಾ ಮತ್ತು ಶಾಮಜೀಬುವಾ ಇವರಿಗೆ ಕೊಟ್ಟು ಅವರನ್ನು ತಮ್ಮ ಸಂಗಡ ಕರೆದುಕೊಂಡು ಮಹಾರಾಜರೊಡನೆ ಪ್ರತಾಪಗಡಕ್ಕೆ ಹೋದರು. ಅಲ್ಲಿ ಮಹಾರಾಜರು ರಾಮಚಂದ್ರಬುವಾ ಮತ್ತು ಶಾಮಜೀಬುವಾ ಇವರಿಬ್ಬರೂ ಸಮರ್ಥರ ಸಂಗಡ ಬಂದದ್ದಾಗಿ ದೊಡ್ಡ ಉತ್ಸವವನ್ನು ಮಾಡಿದರು. ಸಮರ್ಥರು ಪ್ರತಾಪಗಡದ ಅಗಸೀಬಾಗಿಲದಲ್ಲಿ ಮಾರುತಿಯ ಸ್ಥಾಪನೆಯನ್ನು ಮಾಡಿದರು. ಸಮರ್ಥರೂ ಶ್ರೇಷ್ಠರ ಪುತ್ರರೂ ಇರುವಾಗ್ಗೆ ಮಹಾರಾಜರು ಪ್ರತಾಪಗಡದಲ್ಲಿ ದೊಡ್ಡ ಉತ್ಸವವನ್ನು ಮಾಡಿ ಅವರ ಹತ್ತರವೇ ಆನಂದದಿಂದ ವೇಳೆಗಳೆದರು. ಹೋಗುವ ಮುಂದೆ ರಾಮಚಂದ್ರಬುವಾನಿಗೆ ಮತ್ತು ಶಾಮಜೀಬುವಾನಿಗೆ ಅಮೌಲ್ಯವಾದ ಆಭರಣಗಳನ್ನೂ ವಸ್ತ್ರಭೂಷಣ

ಗಳನ್ನೂ ಕೊಟ್ಟು ಕಳುಹಿಸಿದರು. ಇದು ಶಕೆ ೧೬೦೦ ರಲ್ಲಿ ಉಂಟಾಯಿತು.

ವೇಣೂಬಾಯಿಯ ಪ್ರಮಾಣವು:—ದಿಲೇಲಖಾನನು ಮಿರಜೆಯಲ್ಲಿ ಕೊಟ್ಟ ಸ್ಥಳದಮೇಲೆ ಮಠವನ್ನು ಕಟ್ಟಿಸಿ ಆ ಮಠದ ಅಧಿಪತ್ಯಕ್ಕೆ ವೇಣೂಬಾಯಿಯನ್ನು ನೇಮಿಸಿದ ಸಂಗತಿಯನ್ನು ಈ ಮೊದಲೇ ತಿಳಿಸಿರುತ್ತೇವೆ. ವೇಣೂಬಾಯಿಯು ಸಮರ್ಥರ ಅಪ್ಪಣೆಯ ಮೇರೆಗೆ ಪ್ರತಿವರ್ಷ ರಾಮನವಮಿಯ ಉತ್ಸವಕ್ಕಾಗಿ ಚಾಫಳಕ್ಕೆ ಬರುತ್ತಿದ್ದಳು. ಶಕೆ ೧೫೯೮ ರಲ್ಲಿ ವೇಣೂಬಾಯಿಯು ರಾಮನವಮಿಯ ಉತ್ಸವಕ್ಕಾಗಿ ಬಂದಿದ್ದಳು. ಅವಳು ತನ್ನ ಆಯುರ್ಮರ್ಯಾದೆಯು ಸಮಾಪಿಸಿತೆಂದು ತಿಳಿದುಕೊಂಡು ಸಮರ್ಥರಿಗೆ “ನನಗೆ ಇನ್ನು ಈ ಮೃತ್ಯುಲೋಕದಿಂದ ಹೋಗಲಿಕ್ಕೆ ಅಪ್ಪಣೆಯನ್ನು ಕೊಡಬೇಕು” ಎಂದು ಬೇಡಿಕೊಂಡಳು. ಆಗ ಸಮರ್ಥರು ನಕ್ಕು ವೇಣೂಬಾಯಿಗೆ:-“ಯಾಕೆ ವೇಣೂ! ನೀನು ಮರಣಕ್ಕೆ ಅಂಜದಂತೆ ಕಾಣುತ್ತದೆ” ಎಂದು ವಿನೋದಮಾಡಿದರು. ಅದಕ್ಕೆ ವೇಣೂಬಾಯಿಯು:- “ಸ್ವಾಮಿ! ತಮ್ಮ ಸೇವಕಳಾದ ನಾನು ಮರಣಕ್ಕೆ ಅಂಜುವದು ಹ್ಯಾಗೆ? ಈ ಹೊತ್ತಿಲ್ಲದಿದ್ದರೂ ನಾಳೆ ಹೋಗುವದದೆ” ಎಂದು ನುಡಿದಳು. ಆ ಮೇಲೆ ಸಮರ್ಥರು ಅವಳಿಗೆ “ನೀನು ಇನ್ನೂ ಎರಡು ವರ್ಷ ಇಲ್ಲಿ ಇರುವ ಅವಧಿಯುಂಟು. ಅದ್ದರಿಂದ ನೀನು ಈಗ ಸದ್ಯಕ್ಕೆ ಮಿರಜಿಯ ಮಠಕ್ಕೆ ಹೋಗು” ಎಂದು ಅಪ್ಪಣೆಮಾಡಿ ಅವಳನ್ನು ಕಳುಹಿಸಿಕೊಟ್ಟರು. ಮುಂದೆ ಅವಳು ಇದೇ ಪ್ರಕಾರ ಶಕೆ ೧೬೦೦ ನೇ ರಾಮನವಮಿಯ ಉತ್ಸವಕ್ಕೆ ಬಂದು ಸಮರ್ಥರಿಗೆ “ಸ್ವಾಮಿ! ತಾವು ಹಿಂದಕ್ಕೆ ಅಪ್ಪಣೆ ಮಾಡಿದ ಪ್ರಕಾರ ನನ್ನ ಕಾಲವು ಸಮಾಪ್ತಿಯಾಯಿತು. ಇನ್ನು ಬೇಗನೆ ನನಗೆ ಆಜ್ಞೆಯನ್ನು ಕೊಟ್ಟು ಮುಕ್ತಿಗೆ ಕೊಂದಿಸಬೇಕು” ಎಂದು ವಿನಂತಿಮಾಡಿಕೊಂಡಳು. ಸಮರ್ಥರು ಅದಕ್ಕೆ “ಈ ಹೊತ್ತು ನೋಡೋಣ—ನಾಳೆ ನೋಡೋಣ” ಎಂದು ಹೇಳುತ್ತ ಬಂದು ಒಂದು ದಿವಸ ಪ್ರಾತಃಕಾಲಕ್ಕೆ ಮುಖಪ್ರಕ್ಷಾಲನಮಾಡಿಕೊಳ್ಳುತ್ತ ಕುಳಿತಿರಲಾಗಿ ಪುನಃ ವೇಣೂಬಾಯಿಯು ಅವರ ಸಮೀಪದಲ್ಲಿ ಬಂದು “ಸ್ವಾಮಿ! ನನಗೆ ಇನ್ನು ವಿಲಂಬಮಾಡದೆ ಆಜ್ಞೆಯನ್ನು ಕೊಡಬೇಕು” ಎಂದು ಬಹಳ ವಿನಯದಿಂದ ವಿನಂತಿಯನ್ನು ಮಾಡಿಕೊಂಡಳು. ಅದಕ್ಕೆ ಸಮರ್ಥರು “ಒಳ್ಳೇದು” ಎಂದು ನುಡಿದು ತಮ್ಮ ಶಿಷ್ಯಮಂಡಳಿಯನ್ನು ಕರೆದು “ಈ ಹೊತ್ತು ವೇಣೂಬಾಯಿಗೆ ಅಪ್ಪಣೆಯನ್ನು ಕೊಡಬೇಕಾಗಿರುತ್ತದೆ. ಅದ್ದರಿಂದ ಈ ಹೊತ್ತು ಅವಳಿಗೆ ಸುಗ್ರಾಸವನ್ನು ಭೋಜನಮಾಡಿಸತಕ್ಕದ್ದು” ಎಂದು ಹೇಳಿ ಅದರಂತೆ ಅಡಿಗೆಯವರಿಗೆ ಅಪ್ಪಣೆಯನ್ನುಮಾಡಿ ಭೋಜನದ ಗೃಹವನ್ನು ಸುಂದರವಾದ ರಂಗೋಲಿಗಳಿಂದ ಅಲಂಕರಿಸಿ ತಮ್ಮ ಹತ್ತರವೇ ವೇಣೂಬಾಯಿಯ ಎಲೆಯನ್ನು ಬಡಿಸಲಿಕ್ಕೆ ಹೇಳಿದರು. ಆ ಮೇಲೆ ಸಮರ್ಥರು ಶ್ರೀರಘುಪತಿಯ ನೈವೇದ್ಯವನ್ನುಮಾಡಿಸಿ ಭೋಜನ

ಕ್ಕಾಗಿ ತಮ್ಮ ಹತ್ತಿರ ಬಂದು ಕೂಡ್ರಲಿಕ್ಕೆ ವೇಣೂಬಾಯಿಯನ್ನು ಕರೆದರು. ಆಗ ವೇಣೂಬಾಯಿಯು ಅಡಿಗೇ ಮನೆಯಲ್ಲಿ ಅಡಿಗೆ ಮಾಡುತ್ತ ಕುಳಿತಿದ್ದಳು. ಅದನ್ನು ಸಮರ್ಥರು ನೋಡಿ ವೇಣೂಬಾಯಿಗೆ-"ವೇಣೂ! ಈ ಹೊತ್ತು ಸಹ ನೀನು ಅಡಿಗೆ ಮಾಡುವದು ತಪ್ಪಿಲ್ಲವಲ್ಲ! ಅಲ್ಲಿಂದ ಎದ್ದು ಬಂದು ನನ್ನ ಜೊತೆಗೆ ಭೋಜನಕ್ಕೆ ಕೂಡ್ರು" ಎಂದು ಅಪ್ಪಣೆ ಮಾಡಿದರು. ಅದಕ್ಕೆ ಅವಳು "ಸ್ವಾಮಿ! ಈ ಹೊತ್ತು ಕಡೆಯ ಉಚ್ಛಿಷ್ಟ ಪ್ರಸಾದವನ್ನು ಸ್ವೀಕರಿಸಬೇಕೆಂಬ ಅಪೇಕ್ಷೆಯುಂಟು" ಎಂದು ಹೇಳಿದರು. ಅದನ್ನು ಕೇಳಿ ಸಮರ್ಥರು "ವೇಣೂ! ನಿನಗೆ ಪ್ರಸಾದಕ್ಕೆ ಏನು ಕೊರತೆಯುಂಟು? ನೀನು ನನ್ನ ಹತ್ತಿರವೇ ಬಂದು ಭೋಜನಕ್ಕೆ ಕೂಡ್ರಬೇಕು" ಎಂದು ತಿರುಗಿ ಅಪ್ಪಣೆ ಮಾಡಿದರು. ಅದರಂತೆ ಅವಳು ಸಮರ್ಥರ ಹತ್ತಿರವೇ ಸಮರ್ಥರ ಸಂಗ್ತಿಗೆ ಭೋಜನಕ್ಕೆ ಕುಳಿತು ಎದ್ದ ತರುವಾಯ ಅವಳು ತಾಂಬೂಲವನ್ನು ಮೆದ್ದಳು. ಆಮೇಲೆ ಸಮರ್ಥರು ಅವಳಿಗೆ ಹರಿಕೀರ್ತನವನ್ನು ಮಾಡಲಿಕ್ಕೆ ಹೇಳಿದರು. ಅವಳು ಸಾಯಂಕಾಲದ ಳತ್ತಿ ಘಂಟೆಯ ತನಕ ಅಪ್ರತಿಮವಾಗಿ ಅದ್ವೈತಪ್ರತಿಪಾದನವನ್ನು ಮಾಡಿ ಶ್ರೋತೃಜನರನ್ನು ತಲ್ಲಣಗೊಳಿಸಿದಳು. ಆಮೇಲೆ ವೇಣೂಬಾಯಿಯು ಭಕ್ತಿರಸದಿಂದ ಪರಿಪೂರ್ಣಳಾಗಿ ಕಣ್ಣೀರನ್ನು ಸುರಿಸುತ್ತ ಸಮರ್ಥರ ಪಾದದಮೇಲೆ ಮಸ್ತಕವನ್ನಿಟ್ಟು "ಇನ್ನು ನನಗೆ ಅಪ್ಪಣೆಯನ್ನು ಕೊಡಬೇಕು" ಎಂದು ಬೇಡಿಕೊಂಡಳು. ಆಗ ಸಮರ್ಥರು ಅವಳಿಗೆ "ಇನ್ನು ಮೇಲೆ ನೀನು ತವರಮನೆಗೆ ಹೋಗು" ಎಂದು ಅಪ್ಪಣೆಯನ್ನು [illegible]. ತರುವಾಯ ವೇಣೂಬಾಯಿಯು "ಜಯಜಯ ರಘುವೀರ ಸಮರ್ಥ" "ಸದ್ಗುರು ಮಹಾರಾಜಕೀಜಯ" ಎನ್ನುತ್ತ ದೇಹವನ್ನು ಬಿಟ್ಟಳು. ಆ ಮೇಲೆ ಸಮರ್ಥರು ತಮ್ಮ ಶಿಷ್ಯರಿಗೆ "ವೇಣೂಬಾಯಿಯ ದೇಹಸಾರ್ಥಕವನ್ನು ಮಾಡಿರಿ" ಎಂದು ಹೇಳಿದರು. ಅದರಂತೆ ಅವರು ವೇಣೂಬಾಯಿಯ ದೇಹಸಾರ್ಥಕವನ್ನು ಯಥಾವಿಧಿಪೂರ್ವಕವಾಗಿ ಮಾಡಿದರು. ಈ ಸಂಗತಿಯು ಶಕೆ [illegible] ಚೈತ್ರವದ್ಯ ಚತುರ್ದಶಿಯ ದಿವಸ ವರ್ತಿಸಿತು. ವೇಣೂಬಾಯಿಯ ದೇಹಸಾರ್ಥಕವಾದ ಸ್ಥಳದಲ್ಲಿ ಒಂದು ಚಂಪಕವೃಕ್ಷವು ಹುಟ್ಟಿತು. ಆಗಿಡದ ಹೂವುಗಳೇ ಸಮರ್ಥರ ಪೂಜೆಗೆ ಬಹು ದಿವಸ ಅರ್ಪಿಸಲ್ಪಟ್ಟವು. ಮುಂದೆ ಆಗಿಡವು ಹೋದನಂತರ ಅಲ್ಲಿ ಒಂದು ವೃಂದಾವನವನ್ನು ಮಾಡಿಸಿದರು. ಅದು ಇನ್ನೂ ಇರುತ್ತದೆ. ಶ್ರೀರಘುಪತಿಯ ದೇವಾಲಯದ ಅಗ್ನಿದಿಕ್ಕಿಗೆ ಈಗಲೂ ಕಾಣಿಸುವ ವೃಂದಾವನವು ಅದೇ.

ಶ್ರೀಷ್ಕರಚಿರಂಜೀವರು:—ಶ್ರೀಷ್ಕರ ಚಿರಂಜೀವರಾದ ರಾಮಚಂದ್ರಬುವಾ ಮತ್ತು ಶಾಮಜೀಬುವಾ ಇವರಿಬ್ಬರೂ ಒಂದು ಸಂವತ್ಸರದವರೆಗೆ ಸಮರ್ಥರ ಬಳಿ

ಯಲ್ಲಿದ್ದು ಸಮರ್ಥರ ಪ್ರೀತಿಗೆ ಬಹಳ ಪಾತ್ರರಾಗಿದ್ದರು. ಆಮೇಲೆ ಅವರು ಒಂದು ದಿವಸ ಸಮರ್ಥರಿಗೆ—"ನಾವು ಬಂದು ಬಹಳ ದಿವಸಗಳಾದವು. ಇನ್ನು ನಮಗೆ ಅಜ್ಞೆಯಾದಲ್ಲಿ ನಾವು ಜಾಂಬೇಗ್ರಾಮಕ್ಕೆ ತಿರುಗಿ ಹೋಗುವೆವು." ಎಂದು ಹೇಳಿಕೊಂಡರು. ಅದಕ್ಕೆ ಸಮರ್ಥರು "ಒಳ್ಳೇದು" ಎಂದು ಅವರಿಗೆ ಅಪ್ಪಣೆಯನ್ನು ಕೊಟ್ಟು ಅವರು ಹೋಗುವಾಗ್ಗೆ ಅವರಿಗೆ "ನೀವು ಯಾವಾಗಲೂ ಶ್ರೀಯ ಚರಣದಲ್ಲಿ ಭಕ್ತಿಯನ್ನಿಟ್ಟು ಶ್ರೀಯಸೇವೆಯನ್ನು ಮಾಡುತ್ತ ಜಗದುದ್ಧಾರಮಾಡಿರಿ" ಎಂದು ಉಪದೇಶಮಾಡಿ ಅವರಿಗೆ ವಸ್ತ್ರಭೂಷಣಗಳನ್ನು ಕೊಟ್ಟು ಉದ್ಧವ ಗೋಸಾವಿಯ ಕೂಡ ಅವರನ್ನು ಸನ್ಮಾನಪೂರ್ವಕವಾಗಿ ಕಳುಹಿಸಿ ಕೊಟ್ಟರು. ಉದ್ಧವಗೋಸಾವಿಯೂ ಅವರನ್ನು ಜಾಂಬೇಗ್ರಾಮಕ್ಕೆ ಮುಟ್ಟಿಸಿ ಶಕೆ ೧೬೦೦ನೇ ಮಾಘವದ್ಯ ಪ್ರತಿಪದೆಯ ದಿವಸ ಚಾಫಳಕ್ಕೆ ತಿರುಗಿ ಬಂದನು.

ಶಿವಾಜಿಮಹಾರಾಜರು ಇನಾಮು ಹಾಕಿ ಕೊಟ್ಟದ್ದು:— ಒಂದು ಸಾರೆ ಶಿವಾಜಿಮಹಾರಾಜರು ಪನ್ಹಾಳೆಯ ಕಡೆಗೆ ಹೋಗುತ್ತಿರುವಾಗ್ಗೆ ಸಮರ್ಥರ ದರ್ಶನಕ್ಕಾಗಿ ಶಕೆ ೧೬೦೦ನೇ ಅಶ್ವಿನಶುದ್ಧ ಪ್ರತಿಪದಿಯ ದಿವಸ ಚಾಫಳಕ್ಕೆ ಬಂದರು. ಆಗ್ಗೆ ಸಮರ್ಥರು ಅವರನ್ನು ವಿಜಯದಶಮಿಯು ಸಮೀಪ ಬಂದಿರುತ್ತದೆಂದು ಹೇಳಿ ಅಗ್ರಹಮಾಡಿ ಇಟ್ಟುಕೊಂಡರು. ಒಂದು ದಿವಸ ಮಹಾರಾಜರ ಮನಸ್ಸಿನಲ್ಲಿ ಚಾಫಳದಮಠಕ್ಕೂ ಜಾಂಬೆಯಮಠಕ್ಕೂ ನಿರಂತರನಡೆಯುವ ಸ್ವಾಸ್ತಿಯನ್ನು ಹಾಕಿಕೊಡಬೇಕೆಂಬ ವಿಚಾರವು ಬಂದು ೩೩ ಊರುಗಳನ್ನು ಇನಾಮಾಗಿ ಹಾಕಿಕೊಟ್ಟರು. ಹಾಗೂ ಕೆಲವು ಊರುಗಳಲ್ಲಿಯ ಭೂಮಿಗಳೂ ಪ್ರತಿವರ್ಷ ೧೨೧ ಹೇರು ಧಾನ್ಯವೂ ತಮ್ಮ ಸಂಸ್ಥಾನದಿಂದ ನಿರಂತರವಾಗಿ ನಡೆಯುವಂತೆ ವ್ಯವಸ್ಥೆಯನ್ನು ಮಾಡಿದರು. ವಿಜಯದಶಮಿಯು ತೀರಿದನಂತರ ಮಹಾರಾಜರು ಸಮರ್ಥರ ಅಪ್ಪಣೆಯನ್ನು ಪಡೆದುಕೊಂಡು ಪನ್ಹಾಳೆಯ ಕಡೆಗೆ ಹೊರಟು ಹೋದರು.

ವ್ಯಂಕೋಜಿರಾಜರ ಆಮಂತ್ರಣ:—ಶಕೆ ೧೬೦೧ನೇದ್ದರಲ್ಲಿ ತಂಜಾವರದ ವ್ಯಂಕೋಜಿರಾಜರ ಕಡೆಯಿಂದ ಅವರೊಬ್ಬ ಕಾರಕೂನನು ಸಮರ್ಥರಕಡೆಗೆ ಒಂದು ಬಿನ್ನಹ ಪತ್ರವನ್ನು ತೆಗೆದುಕೊಂಡು ಬಂದನು. ಅದರಲ್ಲಿ ವ್ಯಂಕೋಜಿರಾಜರು ಸಮರ್ಥರಿಗೆ ದಯಮಾಡಿ ತಮ್ಮ ರಾಜಧಾನಿಗೆ ಬಂದು ದರ್ಶನ ಲಾಭವನ್ನು ಕೊಡಬೇಕೆಂದು ವಿನಂತಿಯನ್ನು ಮಾಡಿದ್ದರು. ಆ ಪತ್ರವನ್ನು ಸಮರ್ಥರು ಓದಿ ತಮ್ಮ ಬಳಿಯಲ್ಲಿ ಹಾಗೇ ಇಟ್ಟುಕೊಂಡು ಅದನ್ನು ತಂದಿದ್ದ ಕಾರಕೂನನನ್ನು ಸನ್ಮಾನಮಾಡಿ ಇಳಿಸಿಕೊಂಡರು. ಮುಂದೆ ಒಂದೆರಡು ದಿವಸಗಳಲ್ಲಿ ಶಿವಾಜಿಮಹಾರಾಜರು ಸಮರ್ಥರ ದರ್ಶನಕ್ಕಾಗಿ ಬಂದರು. ಆಗ ಸಮರ್ಥರು ತಮ್ಮ

ಗೆ ವ್ಯಂಕೋಜಿರಾಜರ ಕಡೆಯಿಂದ ಬಂದಂಥ ಬಿನ್ನಹ ಪತ್ರವನ್ನು ಮಹಾರಾಜರ ಕೈಯಲ್ಲಿ ಕೊಟ್ಟರು. ಅವರು ಅದನ್ನು ಓದಿಕೊಂಡು ಸಮರ್ಥರಿಗೆ "ಒಳ್ಳೇದು ತಾವು ಅಲ್ಲಿಗೆ ಹೋಗುತ್ತಿದ್ದ ಪಕ್ಷದಲ್ಲಿ ದಾರಿಯೊಳಗೆ ತಮ್ಮ ಅಜ್ಞೆಯ ಪ್ರಕಾರ ಯಾವತ್ತು ವ್ಯವಸ್ಥೆಯನ್ನಿಡಿಸುವೆನು" ಎಂದು ಹೇಳಿದರು. ಆಮೇಲೆ ಸಮರ್ಥರು ತಾವು ತಂಜಾವರಕ್ಕೆ ಹೋಗಬೇಕೆಂದು ನಿಶ್ಚಯ ಮಾಡಿದರು. ಆದ್ದರಿಂದ ಮಹಾರಾಜರು ಮಾರ್ಗದಲ್ಲಿ ಅವರಿಗೆ ಬೇಕಾಗುವ ಯಾವತ್ತು ಅನುಕೂಲವನ್ನು ಮಾಡಿಕೊಟ್ಟರು. ಈ ಮೇರೆಗೆ ಸಮರ್ಥರು ಅಲ್ಲಲ್ಲಿ ಇಳಿದುಕೊಳ್ಳುತ್ತ ಮಹಾರಗುಂಡಕ್ಕೆ ಹೋಗಿ ಮುಟ್ಟಿದರು. ಈ ವರ್ತಮಾನವು ತಿಳಿದ ಕೂಡಲೇ ವ್ಯಂಕೋಜಿರಾಜರು ಸಮರ್ಥರನ್ನು ಎದುರುಗೊಂಡು ತಂಜಾವರಕ್ಕೆ ಬಹಳ ಸಮಾರಂಭದಿಂದ ಕರೆದುಕೊಂಡು ಹೋದರು. ಅಲ್ಲಿ ಹೋದ ತರುವಾಯ ಸಮರ್ಥರು ಭಿಕ್ಕಾಜಿಬುವಾನ ಮಠದಲ್ಲಿ ಇಳಿದರು. ಭಿಕ್ಕಾಜಿ ಬುವಾನಿಗೂ ಮೌನೀಬುವಾನಿಗೂ ಸಮರ್ಥರ ದರ್ಶನದಿಂದ ಅತ್ಯಾನಂದವಾಯಿತು. ಸಮರ್ಥರು ಇಳಿದಲ್ಲಿಯೇ ನಿತ್ಯದಲ್ಲಿ ವ್ಯಂಕೋಜಿರಾಜರು ಬಂದು ಅವರ ದರ್ಶನ ತೆಗೆದುಕೊಂಡು ಭಕ್ತಿಪೂರ್ವಕವಾಗಿ ಅವರ ಸೇವೆಯನ್ನು ಮಾಡುತ್ತಲಿದ್ದರು. ಪ್ರತಿದಿನವು ಈ ಮಠದಲ್ಲಿ ಸಮರ್ಥರ ಸಭೆಯು ಕೂಡುತ್ತಿತ್ತು. ಒಂದು ದಿವಸ ಸಮರ್ಥರು ಸಿಂಹಾಸನದಮೇಲೆ ಕುಳಿತಿದ್ದರು. ರಾಜರೂ ಕಾರಭಾರಿಗಳೂ ಅವರಿಗೆ ಚೌರಿಗಳನ್ನೂ ಸವಿಲುಗರಿಗಳನ್ನೂ ಬೀಸುತ್ತ ನಿಂತಿದ್ದರು. ಆಗ ಸಮರ್ಥರು ತಂಜಾವರದ ಕಾರಭಾರಿಗೆ "ಇಲ್ಲಿ ಶಿಲಾಮೂರ್ತಿಗಳನ್ನು ಮಾಡುವಂಥ ಕಲಾಕುಶಲಜ್ಞರು ಇರುತ್ತಾರೆಂದು ಕೇಳುತ್ತೇವೆ. ಆದ್ದರಿಂದ ಯಾವನಾದರೊಬ್ಬ ನಿಪುಣ ಕಾರಾಗೀರನನ್ನು ಕರೆಕಳುಹಿಸಬೇಕು. ನಮಗೆ ಆತನ ಕೈಯಿಂದ ಶ್ರೀರಘುಪತಿಯ ಮೂರ್ತಿಯನ್ನು ಮಾಡಿಸತಕ್ಕದ್ದದೆ" ಎಂದು ಹೇಳಿದರು. ಅದಕ್ಕೆ ಆ ಕಾರಭಾರಿಯು—"ಸ್ವಾಮೀ! ಇಲ್ಲಿ ಒಬ್ಬನೇ ಮಾತ್ರ ಬಹಳ ಹೆಸರಾದ ಕಾರಾಗೀರನು ಇರುತ್ತಾನೆ. ಆದರೆ ದುರ್ದೈವದಿಂದ ಈಚೆಗೆ ಅವನ ಎರಡೂ ಕಣ್ಣುಗಳು ಹೋಗಿರುತ್ತವೆ" ಎಂದು ಉತ್ತರ ಕೊಟ್ಟನು. ಅದನ್ನು ಕೇಳಿ ಸಮರ್ಥರು "ಚಿಂತಿಲ್ಲ; ಅವನನ್ನು ನಮ್ಮ ತನಕ ಕರೆಯಿಸಿರಿ. ಅವನನ್ನು ಕೇಳೋಣ" ಎಂದು ಅಪ್ಪಣೆ ಮಾಡಿದರು. ಅದರಂತೆ ವ್ಯಂಕೋಜಿರಾಜರು ಅವನನ್ನು ಕರೆಯಿಸಿದರು. ಆಗ ಅವನು ಸಮರ್ಥರಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ ಅವರ ಮುಂದೆ ಕೈಜೋಡಿಸಿಕೊಂಡು ನಿಂತನು. ಅವನನ್ನು ಸಮರ್ಥರು ನೋಡಿ—"ಏನಪ್ಪಾ ವಿಶ್ವಕರ್ಮಾ! ನೀನು ಉತ್ತಮವಾದ ಶಿಲಾಮೂರ್ತಿಗಳನ್ನು ಮಾಡುತ್ತೀಯಂತೆ. ಹೌದೋ?" ಎಂದು ವಿಚಾರಿಸಿದರು. ಅದಕ್ಕೆ ಅವನು "ಸ್ವಾಮಿಮಹಾರಾಜರೇ! ಅದು ನಿಜವು"

ಎಂದನು. ಆಗ ಸಮರ್ಥರು—"ಹಾಗಾದರೆ ನೀನು ನಮಗೆ ಶ್ರೀರಘುಪತಿಯ ಮೂರ್ತಿಯನ್ನು ಮಾಡಿಕೊಡುವಿಯಾ!" ಎಂದು ಕೇಳಿದರು. ಈ ಶಬ್ದಗಳು ಅವನ ಕಿವಿಗೆ ಬಿದ್ದ ಕೂಡಲೇ ಅವನ ಕಣ್ಣೀರುಗಳು ಟಪಟಪನೆ ನೆಲಕ್ಕೆ ಸುರಿಯು ಹತ್ತಿದವು. ಇದನ್ನು ಸಮರ್ಥರು ನೋಡಿ "ಅಪ್ಪಾ! ನೀನು ಯಾಕೆ ಅಳಹತ್ತಿದಿ?" ಎಂದು ಪ್ರಶ್ನೆ ಮಾಡಿದರು. ಅದಕ್ಕೆ ಅವನು "ಸ್ವಾಮಿಾ! ಏನು ಹೇಳಲಿ? ತಮ್ಮಂಥ ಶ್ರೇಷ್ಠರು ನನಗೆ ಸೇವೆಯನ್ನು ಹೇಳಿದಿರಿ. ಆದರೆ ಅದನ್ನು ಮಾಡುವಂಥ ಸಾಮರ್ಥ್ಯವನ್ನು ಪರಮೇಶ್ವರನು ನನ್ನಲ್ಲಿ ಇಡಲಿಲ್ಲವಲ್ಲಾ ಎಂದು ದುಃಖಪಡುತ್ತೇನೆ" ಎಂಬದಾಗಿ ಉತ್ತರ ಕೊಟ್ಟನು. ಆಗ ಸಮರ್ಥರು ಅವನಿಗೆ "ಯಾಕೆ? ನಿನಗೇನು ಕಡಿಮೆಯಾಗಿರುತ್ತದೆ?" ಎಂದು ವಿಚಾರಿಸಿದರು. ಅದಕ್ಕೆ ಅವನು "ಸ್ವಾಮಿಾ? ನನ್ನ ಎರಡೂ ಕಣ್ಣುಗಳು ಹೋಗಿರುತ್ತವೆ" ಎಂದನು. ಅದನ್ನು ಕೇಳಿ ಸಮರ್ಥರು "ನಿನ್ನ ಕಣ್ಣುಗಳು ನೆಟ್ಟಗಾದರೆ ನೀನು ಮಾಡುವಿಯಾ?" ಎಂದು ತಿರಿಗಿ ಅವನಿಗೆ ಪ್ರಶ್ನೆ ಮಾಡಿದರು. ಆಗ ಅವನು "ಸ್ವಾಮಿಾ? ನಾನಿನ್ನೇನು ಹೇಳಲಿ? ನನ್ನ ಭಾಗ್ಯವೇ ಉದಯಕ್ಕೆ ಬಂತೆಂದು ತಿಳಿಯುವೆನು" ಎಂದು ಉತ್ತರ ಕೊಟ್ಟನು. ಆಮೇಲೆ ಸಮರ್ಥರು ಅವನನ್ನು ತಮ್ಮ ಸಮಿಾಪಕ್ಕೆ ಕರೆದು ಅವನ ಕಣ್ಣುಗಳಮೇಲೆ ತಮ್ಮ ರುದ್ರಾಕ್ಷಿಯ ಮಾಲೆಯನ್ನು ಆಡಿಸಿ ಅವನ ಕಣ್ಣುಗಳನ್ನು ಮೊದಲಿದ್ದಂತೆ ನೆಟ್ಟಗೆ ಮಾಡಿದರು. ಆಗ ಅವನು ಆನಂದಭರಿತನಾಗಿ ಸಮರ್ಥರ ಕಾಲುಗಳಮೇಲೆ ಉರುಳಾಡಹತ್ತಿದನು. ಅದನ್ನು ನೋಡಿ ಸಮರ್ಥರು ಅವನನ್ನು ಮೇಲಕ್ಕೆಬ್ಬಿಸಿ ಅವನನ್ನು ಸಮಾಧಾನ ಮಾಡಿದರು. ಆಗ ಅವನು ಸಮರ್ಥರಿಗೆ "ನಾನು ತಮಗೆ ಬೇಕಾದ ಮೂರ್ತಿಗಳನ್ನು ಮಾಡಿಕೊಡುತ್ತೇನೆ. ಆದರೆ ತಾವು ಅವುಗಳ ಚಿತ್ರವನ್ನು ಕಾಗದದಮೇಲೆ ತೆಗೆಯಿಸಿಕೊಡಬೇಕು" ಎಂದು ವಿನಂತಿ ಮಾಡಿದನು. ಅದರಂತೆ ಅವರು "ರಾಮ, ಲಕ್ಷ್ಮಣ, ಸೀತಾ, ಮಾರುತಿ" ಈ ಮೇರೆಗೆ ನಾಲ್ವರ ಮೂರ್ತಿಗಳನ್ನು ಒತ್ತಟ್ಟಿಗೆ ಕಾಗದದಮೇಲೆ ಸುಂದರವಾಗಿ ತೆಗೆಯಿಸಿ ಕೊಟ್ಟರು. ಅದನ್ನು ಅವನು ಬೇಗನೆ ಮಾಡಿಕೊಡುತ್ತೇನೆಂದು ಒಪ್ಪಿಕೊಂಡು ಮುಂದಕ್ಕೆ ಹೋಗಿ "ಸ್ವಾಮಿಾ! ನನಗೆ ಒಂದೇ ಬೇಡಿಕೊಳ್ಳತಕ್ಕದ್ದದೆ. ಅದನ್ನು ತಾವು ಅನುಗ್ರಹಿಸಬೇಕು" ಎಂದು ವಿನಂತಿ ಮಾಡಿಕೊಂಡನು. ಅದಕ್ಕೆ ಸಮರ್ಥರು "ಒಳ್ಳೇದು ಬೇಕಾದ್ದು ಬೇಡಿಕೋ. ಆನಂದದಿಂದ ಕೊಡುತ್ತೇವೆ" ಎಂದು ಹೇಳಿದರು. ಆಮೇಲೆ ಆಕಾರಾಗೀರನು—"ಸ್ವಾಮಿಾ! ತಾವು ನನಗೆ ನಿಯಮಿಸಿ ಕೊಟ್ಟ ಕೆಲಸವು ಮುಗಿದ ಬಳಿಕ ನಾನು ಮುಂಚಿನಂತೆ ಅಂಧನಾಗಬೇಕೆಂದು ವರವನ್ನು ಕೊಡಬೇಕು" ಎಂದು ಬೇಡಿಕೊಂಡನು. ಅದನ್ನು ಕೇಳಿ ಸಮರ್ಥರು ಬಹಳ ಹಳಹಳಿ

ಸಿ ಅವನ ಧೈರ್ಯಕ್ಕೆ ಬಹಳ ಆಶ್ಚರ್ಯ ಪಟ್ಟರು. ಆಗ ಅವನು "ಸ್ವಾಮೀ! ತಾವು ದಯಮಾಡಿ ನನ್ನ ಗೋಸ್ಕರ ಹಳಹಳಿಸಬಾರದು. ಈ ನನ್ನ ಕಣ್ಣುಗಳು ತಮ್ಮಂಥ ಈಶ್ವರೀ ಮೂರ್ತಿಗಳ ಪಾದದರ್ಶನವನ್ನು ಹೊಂದಿದ ತರುವಾಯ ಜಗತ್ತಿನಲ್ಲಿಯು ಅನ್ಯ ಯಾವ ವಸ್ತುವನ್ನೂ ನೋಡುವಂಥ ಪ್ರಸಂಗವು ಉಳಿಯಬಾರದು." ಎಂದು ಹೇಳಿಕೊಂಡನು. ಸಮರ್ಥರು ಅವನ ಮನಃಪೂರ್ವಕವಾದ ನಿಶ್ಚಯವನ್ನು ನೋಡಿ ಅವನಿಗೆ "ಒಳ್ಳೇದು. ನಿನ್ನ ಮನಸ್ಸಿನಂತೇ ಆಗುವದು" ಎಂದು ಆಶೀರ್ವಾದವನ್ನು ಕೊಟ್ಟರು. ಆಮೇಲೆ ಅವನು ಕೆಲವು ದಿವಸಗಳಲ್ಲಿ ಅಪ್ರತಿಮವಾದ ಶಿಲಾಮೂರ್ತಿಗಳನ್ನು ತಯಾರ ಮಾಡಿ ಸಮರ್ಥರ ಪಾದಾರವಿಂದಕ್ಕೆ ಅರ್ಪಿಸಿದನು. ಸಮರ್ಥರು ಸುಮಾರು ಒಂದು ತಿಂಗಳದತನಕ ತಂಜಾವರದಲ್ಲಿದ್ದು ಚಾಫಳಕ್ಕೆ ಮರಳಿ ಬಂದರು.

**ಡೊಂಬಗಾಂವಿಯ ಮಠವು:**—ಸಮರ್ಥರು, ಶಿವಾಜಿ ಮಹಾರಾಜರು ತಮಗೆ ಸನದು ಹಾಕಿಕೊಟ್ಟಂಥ ಇನ್ನೂ ಕೆಲವು ಸ್ಥಳಗಳಲ್ಲಿ ಮಠಸ್ಥಾಪನೆ ಮಾಡುವದನ್ನು ಹಾಗೇ ಉಳಿಸಿದ್ದರು. ಆದ್ದರಿಂದ ಒಂದಾನೊಂದು ದಿವಸ ಕಲ್ಯಾಣಸ್ವಾಮಿಗೆ "ನೀನು ಡೊಂಬಗಾಂವಿಗೆ ಹೋಗಿ ಅಲ್ಲಿ ಮಠಸ್ಥಾಪನೆ ಮಾಡಿಕೊಂಡು ಇರು" ಎಂದು ಅಪ್ಪಣೆ ಮಾಡಿದರು. ಕಲ್ಯಾಣಸ್ವಾಮಿಯು ಸಮರ್ಥರನ್ನು ಅಗಲಿ ಒಂದು ಅರಗಳಿಗೆ ಸಹ ಇರುತ್ತಿದ್ದಿಲ್ಲ. ಆದ್ದರಿಂದ ಸಮರ್ಥರ ಈ ಅಪ್ಪಣೆಯನ್ನು ಕೇಳಿ ಅವನು ಬಹಳ ಅಳಹತ್ತಿದನು. ಆಗ ಸಮರ್ಥರು ಅವನಿಗೆ—"ಕಲ್ಯಾಣಾ! ಶ್ರೀ ರಘುಪತಿಯು ಅಪೇಕ್ಷೆಯಂತೆ ನೀನು ನಡೆಯಬೇಕು. ಅಜ್ಞಾನಿಯಂತೆ ಅಳಬಾರದು" ಎಂದು ಅವನಿಗೆ ಸಮಾಧಾನ ಮಾಡಿ ಕಳುಹಿಸಿದರು. ಅದರಂತೆ ಕಲ್ಯಾಣಸ್ವಾಮಿಯು ಅಲ್ಲಿಗೆ ಹೋಗಿ ಮಠಸ್ಥಾಪನೆಯನ್ನು ಮಾಡಿಕೊಂಡು ಇರುತ್ತಿದ್ದನು. ಆಮೇಲೆ ಒಂದು ವರ್ಷದ ತರುವಾಯ ಸಮರ್ಥರ ದರ್ಶನಕ್ಕೆ ಬಂದು ಅವರ ಅಪ್ಪಣೆಯನ್ನು ಪಡೆದುಕೊಂಡು ಪ್ರತಿವರ್ಷ ಕೆಲಕೆಲವು ದಿವಸ ಅವರ ಹತ್ತರ ಬಂದು ಇರುತ್ತಿದ್ದನು.

**ಶಿವಾಜಿ ಮಹಾರಾಜರಿಗೆ ಕೊಟ್ಟ ಕಡೇ ನಿರೋಪವು:**—ಶಿವಾಜಿ ಮಹಾರಾಜರು ವಾಡಿಕೆಯಂತೆ ಸಮರ್ಥರ ದರ್ಶನಕ್ಕಾಗಿ ಶಕೆ ೧೬೦೧ ನೇ ಮಾಘ ಶುದ್ಧ ಪೌರ್ಣಿಮೆಗೆ ಬಂದವರು ಒಂದು ತಿಂಗಳದ ತನಕ ಅವರ ಸನ್ನಿಧಿಯಲ್ಲಿಯೇ ಇದ್ದರು. ಈ ಸಾರೆ ಶಿವಾಜಿ ಮಹಾರಾಜರು ಬಂದಾಗ್ಗೆ ಅವರ ಮುಖಭಾವಗಳೂ ಭಾಷಣವೂ ಭಕ್ತಿಯೂ ಅತ್ಯಂತ ಚಮತ್ಕಾರಿಕವಾಗಿದ್ದವು. ಅವರು ಒಂದು ಸಮಯದಲ್ಲಿ ಸಮರ್ಥರೊಡನೆ ಪಾರಮಾರ್ಥಿಕ ವಿಷಯವನ್ನು ಕುರಿತು ಪ್ರಶ್ನೆಗಳನ್ನು ಮಾಡುತ್ತ ಕುಳಿತಿರಲು ಅವರಿಗೆ ಸಮರ್ಥರು ಪ್ರಸಾದಾತ್ಮಕ ಉತ್ತರ ಕೊಟ್ಟರು. ಅವು

ಗಳನ್ನು ಕೇಳಿ ಶಿವಾಜಿ ಮಹಾರಾಜರು ಬಹಳ ತಲ್ಲೀನರಾಗಿಹೋದರು. ಅವರ ದೇಹವು ಮಾತ್ರ ಇಲ್ಲಿತ್ತು ಕಾಣಿಸುತ್ತಿದ್ದಾಗ್ಯೂ ಅವರ ಆತ್ಮವು ಬ್ರಹ್ಮಸಾನ್ನಿಧ್ಯಕ್ಕೆ ಹೋಗಿತ್ತು. ಹೀಗೆ ಕೆಲವು ಹೊತ್ತಿನ ತನಕ ಆಗಿ ಮಹಾರಾಜರು ಬ್ರಹ್ಮಸಾನ್ನಿಧ್ಯದಿಂದ ಮರಳಿ ಬಂದ ತರುವಾಯ ಸಮರ್ಥರಿಗೆ—"ಸ್ವಾಮೀ! ನನಗೆ ಇದೇ ಪ್ರಕಾರ ನಿರಂತರವಾಗಿ ಬ್ರಹ್ಮಾನಂದವು ದೊರಕುವಂತೆ ಆಶೀರ್ವಾದವನ್ನು ಕೊಡಬೇಕು" ಎಂದು ಬೇಡಿಕೊಂಡರು. ಆಗ ಸಮರ್ಥರು "ನಿಮ್ಮ ಮನಸ್ಸಿನಂತೆಯೇ ಆಗುವದು" ಎಂದು ಮಹಾರಾಜರಿಗೆ ಆಶೀರ್ವಾದವನ್ನು ಕೊಟ್ಟು ಅವರಿಗೆ ಸ್ವಲ್ಪ ಹೊತ್ತು ವ್ಯವಹಾರಿಕ ಉಪದೇಶವನ್ನು ಮಾಡಿ "ನೀನು ಈ ಕಾಲದಲ್ಲಿ ಸಾಕ್ಷಾತ್ ಜನಕರಾಜನಂತೆ ಇರುತ್ತೀ" ಎಂದು ಹೇಳಿದರು. ಆಮೇಲೆ ಅವರವರೊಳಗೆ ಕೆಲವು ಹೊತ್ತು ಭಾಷಣವು ನಡೆಯಿತು. ಆ ದಿವಸ ಉಭಯತರಲ್ಲಿ ಕಂಡುಬಂದ ಪರಸ್ಪರ ಪ್ರೇಮವು ಅವರ್ಣನೀಯವಿತ್ತು. ಪರಸ್ಪರರ ಭಾಷಣವು ಮುಗಿದ ಬಳಿಕ ಆ ಮಹಾರಾಜರು ಸಮರ್ಥರನ್ನು ಆಪಾದ ಮಸ್ತಕದವರೆಗೆ ನೋಡಿದರು. ಇದನ್ನು ಕಂಡು ಸಮರ್ಥರು ಮಹಾರಾಜರಿಗೆ—"ಶಿವರಾಯನೇ! ಈ ಹೊತ್ತು ನಿನ್ನ ಸ್ಥಿತಿಯು ಹೀಗ್ಯಾಕೆ ಆಗಿರುತ್ತದೆ?" ಎಂದು ವಿಚಾರಿಸಿದರು. ಅದನ್ನು ಕೇಳಿ ಮಹಾರಾಜರು ಕುತ್ತಿಗೆಯು ಶಿರ ಉಬ್ಬಿಸಿ ಬಹಳ ದುಃಖ ಮಾಡಿ ಅಳಹತ್ತಿದರು. ಆಗ ಸಮರ್ಥರು ಅವರನ್ನು ತಮ್ಮ ಎದೆಗೆ ಅವಚಿಕೊಂಡು "ಅಪ್ಪಾ! ನೀನು ಈ ಹೊತ್ತಿನ ತನಕ ಮಾಡಿದ ಸಾಧನದ ಸಾರ್ಥಕವು ಇದೇ ಪ್ರಕಾರವೋ?" ಎಂದು ಪ್ರಶ್ನೆ ಮಾಡಿದರು. ಅದಕ್ಕೆ ಮಹಾರಾಜರು "ಸ್ವಾಮೀ! ಈ ಪ್ರಶ್ನೆಗೆ ನನ್ನಿಂದ ಉತ್ತರ ಕೊಡೋಣಾಗದು" ಎಂದು ಹೇಳಿದರು. ಆಗ ಸಮರ್ಥರು ಅವರಿಗೆ "ಮಮತೆಯನ್ನು ತ್ಯಜಿಸಿ ಸಾಧನ ಮಾಡಬೇಕು" ಎಂದು ಉಪದೇಶಿಸಿದರು. ಅದಕ್ಕೆ ಮಹಾರಾಜರು "ಮಹದಾಜ್ಞೆ" ಎಂದು ಸದ್ಗದಿತ ಅಂತಃಕರಣದಿಂದ ನುಡಿದು ಸಮರ್ಥರಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ಅವರ ಕಡೇ ನಿರೋಪವನ್ನು ತೆಗೆದುಕೊಂಡು ರಾಯಗಡಕ್ಕೆ ಹೊರಟುಬಂದರು.

ಗುರುಶಿಷ್ಯರ ಪ್ರಶ್ನೋತ್ತರಗಳು:—ಶಿವಾಜಿ ಮಹಾರಾಜರು ಸಮರ್ಥರ ಅಪ್ಪಣೆಯನ್ನು ಪಡೆದುಕೊಂಡು ರಾಯಗಡಕ್ಕೆ ಹೊರಟುಬಂದ ತರುವಾಯ ಸಮರ್ಥರ ಶಿಷ್ಯರಲ್ಲಿ ಅನೇಕರು ಮಹಾರಾಜರ ಮುಖಲಕ್ಷಣಗಳ ಮೇಲಿಂದಲೂ ಭಾಷಣದ ಪದ್ಧತಿಯ ಮೇಲಿಂದಲೂ ಅವರ ವಿಲಕ್ಷಣವಾದ ಭಕ್ತಿರಸದ ಮೇಲಿಂದಲೂ ಮಹಾರಾಜರು ಮುಕ್ತಿಮಾರ್ಗಕ್ಕೆ ಪೂರ್ಣವಾಗಿ ಹೊಂದಿಕೊಂಡರೆಂದು ತಮ್ಮತಮ್ಮೊಳಗೆ ಗುಜಗುಜು ಮಾತಾಡಹತ್ತಿದರು. ಆದರೆ ಅವರಲ್ಲಿ ಮುಖ್ಯನಾದ ಉದ್ಧವ ಗೋಸಾವಿಯು ಒಂದು ದಿವಸ ಸಮರ್ಥರ ಮುಂದೆ ಮಹಾರಾಜರ ಪ್ರಸ್ತಾಪವ

ನ್ನು ತೆಗೆದು “ಸ್ವಾಮಿಾ! ಈ ಸಾರೆ ಮಹಾರಾಜರು ಬಹಳ ದಿವಸಗಳ ತನಕ ತಮ್ಮ ಸನ್ನಿಧಿಯನ್ನು ಬಿಟ್ಟು ಹೋಗಲಿಲ್ಲ. ಅವರೊಡನೆ ನೀವು ಅನೇಕ ಸಾರೆ ಏಕಾಂತದಲ್ಲಿ ಭಾಷಣ ಮಾಡಿದಿರಿ. ಅದರಲ್ಲಿಯು ಏನಿಕೇ ವಿಷಯದ ತಾತ್ಪರ್ಯವು ನನಗೆ ಗೊತ್ತಾಯಿತು. ಆದ್ದರಿಂದ ಮಹಾರಾಜರಿಗೆ ಇನ್ನು ಅವಧಿಯು ಎಷ್ಟು ಉಳಿದಿರುವದು!” ಎಂದು ವಿನಯದಿಂದ ಪ್ರಶ್ನೆ ಮಾಡಿದನು. ಅದಕ್ಕೆ ಸಮರ್ಥರು “ಉದ್ಧವಾ! ನೀನು ಬಹಳ ಪುಣ್ಯಶಾಲಿಯಿರುತ್ತೀ ಎಂಬದರಲ್ಲಿ ಸಂಶಯವಿಲ್ಲ. ಹಳೇ ಗಿಡದ ಬೇರುಗಳು ಒಣಗಲಿಕ್ಕೆ ಹತ್ತಿದ ಕೂಡಲೆ ಅದರ ಅಂತ್ಯವು ಸಮಿಾಪಿಸಿತೆಂದು ತಿಳಿಯಬೇಕು” ಎಂದು ಹೇಳಿದರು. ಆಗ ಉದ್ಧವ ಗೋಸಾವಿಯು “ಸ್ವಾಮಿಾ! ಶಿವಾಜಿ ಮಹಾರಾಜರ ಕೈಯಿಂದ ಮ್ಲೇಂಛರ ಹಾವಳಿಯು ಸಂಪೂರ್ಣ ಲಯವಾಗಬೇಕೆಂದು ಈಶ್ವರನ ಸಂಕಲ್ಪವಿತ್ತು. ಆದರೆ ಇನ್ನೂ ಆ ಸಂಕಲ್ಪವು ಮಾತ್ರ ಪೂರ್ಣವಾಗಲಿಲ್ಲ. ಆದ್ದರಿಂದ ಇನ್ನು ಮುಂದೇನು ಗತಿ?” ಎಂದು ಸಮರ್ಥರಿಗೆ ಪ್ರಶ್ನೆ ಮಾಡಿದನು. ಅದಕ್ಕೆ ಸಮರ್ಥರು “ಈಶ್ವರೀ ಸಂಕಲ್ಪದ ಬಗ್ಗೆ ನಿನಗೆ ಸಂಶಯವ್ಯಾತಕ್ಕೆ? ಸಂಕಲ್ಪವನ್ನು ಯೋಚಿಸಿದವನಿಗೆ ಅದನ್ನು ಪೂರ್ಣ ಮಾಡುವ ಚಿಂತೆಯು ಇದ್ದೇ ಇರುತ್ತದೆ” ಎಂದು ಉತ್ತರ ಕೊಟ್ಟರು. ಅದನ್ನು ಕೇಳಿ ಉದ್ಧವನು “ಸ್ವಾಮಿಾ! ಹಾಗಾದರೆ ಮಹಾರಾಜರಿಗೆ ಇನ್ನೆಷ್ಟು ಅವಧಿಯು ಉಳಿದಿರುತ್ತದೆ?” ಎಂದು ಪುನಃ ಪ್ರಶ್ನೆ ಮಾಡಿದನು. ಅದಕ್ಕೆ ಸಮರ್ಥರು “ಈ ಹೊತ್ತು ತಿಥಿಯಾವದು?” ಎಂದು ವಿಚಾರಿಸಿದರು. ಆಗ ಉದ್ಧವನು “ಅಷ್ಟಮಿ” ಎಂದು ಹೇಳಿದನು. ಆಮೇಲೆ ಸಮರ್ಥರು ಸ್ವಲ್ಪ ವಿಚಾರ ಮಾಡಿ “ಈ ಹೊತ್ತಿನಿಂದ ಏಳನೇ ದಿವಸಕ್ಕೆ ಶಿವರಾಯನು ಪರೀಕ್ಷಿತರಾಯನಂತೆ ಸ್ವರ್ಗಾರೋಹಣ ಮಾಡುವನು” ಎಂದು ಉದ್ಧವನಿಗೆ ಉತ್ತರವನ್ನು ಕೊಟ್ಟರು.

**ಶಿವಾಜಿ ಮಹಾರಾಜರ ಸ್ವರ್ಗಾರೋಹಣ:**—ಮೇಲೆ ಹೇಳಿದ ಯಾವತ್ತು ಸಂಗತಿಯ ಮೇಲಿಂದ ಶಿವಾಜಿ ಮಹಾರಾಜರಿಗೆ ತಮ್ಮ ಅಂತ್ಯವು ಸಮಿಾಪಿಸಿತೆಂಬುವದು ತಿಳಿದಿತ್ತೆಂದು ಬೇರೆ ಹೇಳುವ ಕಾರಣವಿಲ್ಲ. ಅದ್ದರಿಂದ ಅವರು ದುರ್ವ್ಯಸನಿಯೂ ದುರ್ಮಾರ್ಗಿಯೂ ಆದ ತಮ್ಮ ಹಿರೇ ಮಗ ಸಂಭಾಜಿಗೆ ಪಾಪಪತ್ಯ ಮಾಡಿ ತಮ್ಮ ಚಿಕ್ಕ ಮಗನಾದ ರಾಜಾರಾಮನಿಗೆ ತಮ್ಮ ಪಟ್ಟದ ಮೇಲೆ ಕೂಡ್ರಿಸಿದರು. ಹಾಗೂ ತಮ್ಮ ಹಿರೇ ಮಗನಾದ ಸಂಭಾಜಿಯು ಸುಧಾರಿಸಿದರೆ ಅವನಿಗೆ ರಾಜ್ಯಕಾರಭಾರವನ್ನು ಕೊಡಬೇಕೆಂದು ಗೊತ್ತು ಮಾಡಿದರು. ಈ ಪ್ರಕಾರ ಅವರು ತಮ್ಮ ಆರ್ಯ್ಯಕಟದ ವ್ಯವಸ್ಥೆಯನ್ನು ಮಾಡಿ ಸ್ವರ್ಗಾರೋಹಣದ ಸಿದ್ಧತೆಯನ್ನು ನಡಿಸಿ ಅವರು ದಿನಾಲು ಪ್ರಾತಃಸ್ನಾನ, ನಾಮಸ್ಮರಣ, ರುದ್ರಾಕ್ಷಧಾರಣ, ಪುರಾಣಶ್ರವಣ ಮೊದಲಾದ ನು. ತೀರಿಸಿಕೊಂಡು ಭೋಜನ ಮಾಡಿ ಪುನಃ ಸೂರ್ಯಾಸ್ತವಾಗುವ

ವರೆಗೆ ಕೀರ್ತನವನ್ನು ನಡಿಸಿದ್ದರು. ಹಾಗೂ ರಾತ್ರಿ ಸಹ ಕೀರ್ತನವನ್ನು ಮಾಡಿ ತದೇಕ ಧ್ಯಾನದಲ್ಲಿ ನಿಮಗ್ನರಾಗಿರುತ್ತಿದ್ದರು. ಈ ಪ್ರಕಾರ ಅವರು ನಿತ್ಯದಲ್ಲಿ ಆಚರಣ ಮಾಡುತ್ತ ತಮ್ಮ ಪ್ರಯಾಣದ ದಿವಸ ಬರಲಾಗಿ ೧೦೦ ಆಕಳುಗಳನ್ನೂ ಲಕ್ಷಾವಧಿ ರುಪಾಯಿಗಳನ್ನೂ ಭೂಮಿಗಳನ್ನೂ ದಾನಮಾಡಿ ದರ್ಭಾಸನವನ್ನು ಹಾಕಿಕೊಂಡು ಪ್ರಾಯೋಪವೇಶನ ಮಾಡುತ್ತ ಕುಳಿತು ಶಿವನಾಮ ಭಜನೆಯನ್ನು ಮಾಡಿ ಶಿವನಾಮೋಚ್ಚರಣದಿಂದ ಶಕೆ ೧೬೦೨ ನೇ ಚೈತ್ರ ಶುದ್ಧ ಪೌರ್ಣಿಮೆಯ ದಿವಸ ಪ್ರಾಣೋತ್ಕ್ರಮಣ ಮಾಡಿದರು !! ಈ ರೀತಿಯಿಂದ ಮಹಾರಾಷ್ಟ್ರ ದೇಶದ ಪ್ರತಾಪಶಾಲಿಯಾದ ಮತ್ತು ತೇಜಃಪುಂಜನಾದ ದಿನಮಣಿಯು ಅಸ್ತನಾದನು. ಇದರಿಂದ ಎಲ್ಲಿನೋಡಿದಲ್ಲಿ ಹಾಹಾಕಾರವು ಹುಟ್ಟಿಹೋಯಿತು. ಈ ವರ್ತಮಾನವು ಸಜ್ಜನಗಡದಲ್ಲಿ ಸಮರ್ಥರು ಕುಳಿತಾಗ್ಗೆ ತಿಳಿದ ಕೂಡಲೆ ಅವರು ದುಃಖದಿಂದ ತಾವು ಕುಳಿತ ಸ್ಥಳವನ್ನು ಬಿಟ್ಟು ಕೋಣೆಯೊಳಗೆ ಹೊರಟುಹೋದರು; ಇದರಿಂದ ಸಮರ್ಥರ ಯಾವತ್ತು ಶಿಷ್ಯರಿಗೆ ಸಹ ಪರಮಾವಧಿ ವ್ಯಸನವುಂಟಾಯಿತು. ಸಮರ್ಥರ ಶಿಷ್ಯಳಾದ ಅಕ್ಕಾ ಎಂಬವಳು " ಸಮರ್ಥರಿಗೆ ಮಾಯೆಯು ಎಂದೂ ತಟ್ಟುವದಿಲ್ಲ. ಹೀಗಿದ್ದು ಅವರಿಗೆ ಸಹ ಶಿವರಾಯನ ಮರಣವಾರ್ತೆಯನ್ನು ಕೇಳಿ ಬಹಳ ವ್ಯಸನವಾಯಿತು " ಎಂದು ನುಡಿದಳು. ಅದನ್ನು ಕೇಳಿ ಉದ್ಧವಗೋಸಾವಿಯು " ಅಕ್ಕಾ ! ಇದರಲ್ಲಿ ಆಶ್ಚರ್ಯವೇನು ? ಸಮರ್ಥರ ಅವತಾರವೇ ಶಿವಾಜಿ ಮಹಾರಾಜರಗೋಸ್ಕರ ಇತ್ತು. ಇನ್ನು ಬೇಗನೆ ಸಮರ್ಥರ ಅವತಾರವಾದರೂ ಸಮಾಪ್ತಿಯಾಗುವದು " ಎಂಬ ಉದ್ಗಾರವನ್ನು ಹೊರಗೆಡವಿದನು. ಈ ಮೇರೆಗೆ ಶಿವಾಜಿ ಮಹಾರಾಜರ ಮರಣದಿಂದ ಯಾವತ್ತು ಕಡೆಗೆ ದುಃಖವು ತುಂಬಿಹೋಯಿತು.

**ಶಿವಾಜಿ ಮಹಾರಾಜರ ಮರಣದ ತರುವಾಯ ಸಮರ್ಥರ ಸ್ಥಿತಿಯು—** ಶಿವಾಜಿ ಮಹಾರಾಜರು ಮರಣಪಟ್ಟ ತರುವಾಯ ಸಮರ್ಥರು ಹೊರಗೆ ತಿರುಗಾಡುವದನ್ನು ಬಿಟ್ಟುಬಿಟ್ಟರು. ಅವರು ಯಾವಾಗಲು ಮಠದಲ್ಲಿಯೇ ಇರುತ್ತಿದ್ದರು. ಇಷ್ಟೇ ಅಲ್ಲ, ಅವರು ತಮ್ಮ ಕೋಣೆಯನ್ನು ಬಿಟ್ಟು ಹೊರಬೀಳುವದು ಬಹಳ ಅಪರೂಪವಾಯಿತು. ಚಾಫಳದಲ್ಲಿ ಆಗುವ ರಾಮನವಮಿಯ ಉತ್ಸವಕ್ಕೆ ಅವರು ತಪ್ಪದೆ ಪ್ರತಿವರ್ಷ ಹೋಗತಕ್ಕವರು ಶಕೆ ೧೬೦೩ನೇ ಉತ್ಸವಕ್ಕೆ ಹೋಗಲಿಲ್ಲ. ಆ ವರ್ಷ ಉತ್ಸವ ನಡೆದ ಕಾಲಕ್ಕೆ ಶಾಹಪುರಕರ ಮತ್ತು ಶಿರೋಳಕರ ಇವರ ಮಾನಮರ್ಯಾದೆಗಳ ಸಮ್ಬಂಧವಾಗಿ ವಾದವಿವಾದವು ನಡೆಯಿತು. ಅದನು ತೀರಿಸುವದಕ್ಕೆ ದಿವಾಕರಭಟ್ಟನು ಅವರಿಬ್ಬರನ್ನು ಸಮರ್ಥರ ಕಡೆಗೆ ಸಜ್ಜನಗಡಕ್ಕೆ ಕರೆಕೊಂಡು ಬಂದನು. ಆಗ್ಗೆ ಸಮರ್ಥರು ಅವರ ಜಗಳವನ್ನು ಶಾಂತಮಾಡಿ

ಅಂತಾಜಿ ಗೋಪಾಳ ವಾಕನೀಸ ಎಂಬವನ ಕಡೆಯಿಂದ ಯಾದಿಯನ್ನು ಬರೆಯಿಸಿ ಮಠದಲ್ಲಿ ಇಟ್ಟಿರುತ್ತಾರೆ. ಅದು ಈಗಲೂ ಇರುವದು. ಈ ಯಾದಿಯನ್ನು ಬರೆಯಿಸುವ ಕೆಲಸವು ತೀರಿದ ತರುವಾಯ ಸಂಭಾಜಿ ಮಹಾರಾಜರ ಕಡೆಯಿಂದ ಬಂದಂಥ ಜನರು ಸಮರ್ಥರಿಗೆ "ತಾವು ದಯಮಾಡಿ ಸಂಭಾಜಿ ಮಹಾರಾಜರ ರಾಜ್ಯಾಭಿಷೇಕಕ್ಕೆ ಬರಬೇಕು" ಎಂದು ವಿನಂತಿಮಾಡಿಕೊಂಡರು. ಅದಕ್ಕೆ ಸಮರ್ಥರು "ಒಳ್ಳೇದು ಯಾರನ್ನಾದರೂ ಕಳಿಸಿಕೊಡುವೆವು" ಎಂದು ಹೇಳಿದರು.

**ಸಂಭಾಜಿ ಮಹಾರಾಜರು**—ಸಂಭಾಜಿ ಮಹಾರಾಜರ ರಾಜ್ಯಾಭಿಷೇಕವು ಮುಗಿದ ನಂತರ ಅವರು ಸಮರ್ಥರ ದರ್ಶನಕ್ಕಾಗಿ ಸಜ್ಜನಗಡಕ್ಕೆ ಬಂದರು. ಆಗ ಸಮರ್ಥರು ಅವರಿಗೆ ದರ್ಶನವನ್ನು ಕೊಟ್ಟು "ಶಿವರಾಯನು ನಡೆದಂತೆ ನೀನೂ ನಡೆದುಕೊಂಡರೆ ನಿನ್ನ ಕಲ್ಯಾಣವಾದೀತು" ಎಂದು ಸ್ವಲ್ಪ ಉಪದೇಶಮಾಡಿದರು. ಅದಕ್ಕೆ ಸಂಭಾಜಿ ಮಹಾರಾಜರು "ತಮ್ಮ ಆಜ್ಞೆಯ ಪ್ರಕಾರ ನಡೆಯುತ್ತೇನೆ" ಎಂದು ನುಡಿದರು. ಆ ಮೇಲೆ ಅವರು ಅಲ್ಲಿಂದ ಎದ್ದುಹೋಗುವಾಗ್ಗೆ ಮಠದ ಯಾವತ್ತು ಭಾಗದಲ್ಲಿ ಅಡ್ಡಾಡಿ ನೋಡಿಕೊಂಡು ಅದು ಜೀರ್ಣವಾಗಿರುತ್ತದೆಂದು ಕಂಡು ಅದನ್ನು ನೂತನವಾಗಿ ಕಟ್ಟಿಸುವದಕ್ಕೆ ತಮ್ಮ ಕಾರಭಾರಿಗೆ ಅಪ್ಪಣೆಯನ್ನು ಮಾಡಿದರು ಅದರಂತೆ ಸಂಭಾಜಿಮಹಾರಾಜರ ಕಾರಭಾರಿಯು ಆ ಮಠವನ್ನು ಹೊಸದಾಗಿ ಕಟ್ಟಿಸಿಕೊಟ್ಟನು. ಮಠವನ್ನು ಕಟ್ಟಿಸುವ ಕೆಲಸವು ಮುಗಿಯುವ ವರೆಗೆ ಸಮರ್ಥರು ಮಠದ ಹೊರಗಿನ ಕೊಟ್ಟಿಗೆಯಲ್ಲಿದ್ದರು. ಮಠವು ಪೂರ್ಣವಾಗಿ ತಯಾರಾದ ಮೇಲೆ ಸಮರ್ಥರು ಮಠವೊಳಗೆ ಹೋಗಿ ಇರಲಿಕ್ಕೆ ಹತ್ತಿ ಇನ್ನು ಮೇಲೆ ಮಠದ ಹೊರಗೆ ಕಾಲಿಡಲಿಕ್ಕಿಲ್ಲವೆಂದು ಹೇಳಿದರು. ಅವರು ಅಂದಿನಿಂದ ಬಹುಶಃ ತಮ್ಮ ಕೋಣೆಯಲ್ಲಿ ಅಥವಾ ದಕ್ಷಿಣಭಾಗದ ಹುಸಿಯಲ್ಲಿ ಕೂಡ್ರುಹತ್ತಿದರು. ಮುಂದೆ ಕೆಲವು ದಿವಸಗಳ ತರುವಾಯ ಸಂಭಾಜಿ ಮಹಾರಾಜರು ಸಮರ್ಥರ ದರ್ಶನದಗೋಸ್ಕರ ಸಜ್ಜನಗಡಕ್ಕೆ ಬರಬೇಕೆಂದು ಇಚ್ಛೈಸಿ ಸಾತಾರೆಗೆ ಬಂದು ಅಲ್ಲಿಯೇ ಮುಕ್ಕಾಮು ಮಾಡಿ ಅಲ್ಲಿಂದ ಸಮರ್ಥರ ಕಡೆಗೆ ತಾವು ದರ್ಶನಕ್ಕೆ ಬರುತ್ತೇವೆಂದು ಹೇಳಿ ಕಳುಹಿಸಿದರು. ಆದರೆ ಸಂಭಾಜಿ ಮಹಾರಾಜರು ಮಾಡಿದಂಥ ಅನ್ಯಾಯದ ಮತ್ತು ಬಲಾತ್ಕಾರದ ಏನಿಕೇ ಕೃತ್ಯಗಳು ಅವರ ಕಿವಿಗೆ ಬರಹತ್ತಿದ್ದವು. ಆದ್ದರಿಂದ ಸಮರ್ಥರು "ನಮ್ಮ ದೇಹಕ್ಕೆ ಸಮಾಧಾನವಿಲ್ಲ. ನೀವು ದರ್ಶನಕ್ಕೆ ಬರಬೇಡಿರಿ" ಎಂದು ತಿರುಗಿ ನಿರೋಪವನ್ನು ಹೇಳಿ ಕಳುಹಿಸಿದರು. ಆ ಮೇಲೆ ಸಂಭಾಜಿ ಮಹಾರಾಜರು ಸಾತಾರೆಯಿಂದ ಮರಳಿ ರಾಯಗಡಕ್ಕೆ ಹೊರಟು ಹೋದರು. ಅಲ್ಲಿಂದ ಹೊರಟು ಹೋದವರೇ ಸಂಭಾಜಿ ಮಹಾರಾಜರು ಬಾಳಾಜಿ ಆಬಾಜಿ ಚಿಟಣೀಸ, ಶಾಮಜಿ ಆಬಜಿ ಬೋರೇಲ್ಕ, ವಿಠೋಜಿ ಪುರ್ಜಂದ ಮತ್ತು ಇನ್ನೊಬ್ಬ ಈ ಪ್ರಕಾರ ನಾಲ್ಕು

ಜನರನ್ನು ಆನೆಯ ಕಾಲಿನಿಂದ ತುಳಿಸಿ ಕೊಂದರು! ಅನಾಜಿದತ್ತ ಎಂಬವನನ್ನು ಸುಣ್ಣದಭಟ್ಟಿಯಲ್ಲಿ ಹಾಕಿ ಸಂಗಮೇಶ್ವರದೊಳಗೆ ಸುಡಿಸಿದರು! ಈ ಪ್ರಕಾರ ಸಂಭಾಜಿ ಮಹಾರಾಜರು ದುರ್ಜನರ ಸಂಗತಿಯಿಂದ ಬಹಳ ಅನಾಚಾರವನ್ನು ಮಾಡಹತ್ತಿದರು. ಇದನ್ನು ಕೇಳಿ ಸಮರ್ಥರು ಬಹಳ ಹಳಹಳಿಸಿದರು. ಸಮರ್ಥರ ದುಃಖವನ್ನು ನಿವಾರಣಮಾಡುವದಕ್ಕಾಗಿ ಅವರಿಗೆ ಅವರ ಹತ್ತರ ಕುಳಿತಿದ್ದ ಜನರು "ತಾವು ಮಹಾರಾಜರನ್ನು ಕರೆಯಿಸಿ ಸಿಟ್ಟುಮಾಡಿ ಉಪದೇಶಮಾಡಬೇಕು. ಈಗ ಹೋದಂಥ ಐದು ಜನರು ಬಹಳ ಅಮೌಲ್ಯ ಜನರಿದ್ದರು. ಅವರನ್ನು ಕೊಲ್ಲಿಸಿದ್ದರಿಂದ ಸ್ವರಾಜ್ಯಲಕ್ಷ್ಮಿಯನ್ನೇ ಕೊಲ್ಲಿಸಿದಂತೆ ಆಯಿತು" ಎಂದು ಹೇಳಿದರು. ಅದಕ್ಕೆ ಸಮರ್ಥರು—"ನನ್ನ ಉಪದೇಶವು ಅಲ್ಲಿ ವಿಶೇಷ ಉಪಯೋಗಬೀಳುವ ಸಂಭವವಿಲ್ಲ. ಆದದ್ದು ಆಗಲಿ. ಆಗುವದೆಲ್ಲ ನೆಟ್ಟಗೇ ಎಂದು ತಿಳಿಯುತ್ತ ಹೋದರಾಯಿತು. ಶ್ರೀರಘುಪತಿಯ ಇಚ್ಛೆಯು ಹೀಗೇ ಆಗಬೇಕೆಂದು ಇತ್ತು. ಅದಕ್ಕೆ ಯಾರೇನುಮಾಡುವದು?" ಎಂದು ಪುನಃ ಆ ಜನರಿಗೆ ಖೇದದಿಂದಲೇ ಉತ್ತರಕೊಟ್ಟರು. ಆದರೂ ಆ ಜನರು ಸಮರ್ಥರಿಗೆ ಬಹಳ ಆಗ್ರಹಮಾಡಿದ್ದರಿಂದ ಅವರು ಸಂಭಾಜಿ ಮಹಾರಾಜರ ಕಡೆಗೆ ಒಂದು ಉಪದೇಶಪರ ಪತ್ರವನ್ನು ಪದ್ಯರೂಪದಿಂದ ಬರೆದು ಕಳುಹಿಸಿದರು. ಇದು ಶಕೆ ೧೬೦೭ ರಲ್ಲಿ ಸಂಭವಿಸಿತು. ಈ ಪತ್ರವು ಸಂಭಾಜೀ ಮಹಾರಾಜರಿಗೆ ಮುಟ್ಟಿದ ನಂತರ ಅವರು ಅದರಂತೆ ತಾವು ನಡೆಯುತ್ತೇವೆಂದು ಒಪ್ಪಿಕೊಂಡು ಅದರಂತೆ ಸಮರ್ಥರ ಕಡೆಗೆ ಉತ್ತರವನ್ನು ಕಳುಹಿಸಿದರು. ಸಂಭಾಜಿ ಮಹಾರಾಜರು ರಾಜಶೌರ್ಯಾದಿಗುಣಗಳಿಂದ ಸಂಪನ್ನರಾದಾಗ್ಯೂ ದುಷ್ಟ ಜನರ ಸ್ನೇಹದಿಂದ ಕೆಟ್ಟುಹೋದರು. ಸಮರ್ಥರ ಉಪದೇಶವು "ಡಬ್ಬುಗೊಡದಮೇಲೆ ನೀರು ಸುರವಿದಂತೆ" ವ್ಯರ್ಥವಾಯಿತು. ಇದನ್ನು ಮೊದಲೇ ಸಮರ್ಥರು ಜ್ಞಾನದೃಷ್ಟಿಯಿಂದ ತಿಳಿದುನೋಡಿ ಮಹಾರಾಜರ ರಾಜ್ಯಾಭಿಷೇಕಕ್ಕೆ ಸ್ವತಃ ಹೋಗಲಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು.

ಶ್ರೀಸಮರ್ಥರ ಕಡೇಭೇಟಿಯು—ಶಕೆ ೧೬೦೭ ನೇ ಸಂವತ್ಸರದೊಳಗೆ ಚಾಫಳದ ಮಠದಲ್ಲಿ ಆದ ರಾಮನವಮಿಯ ಉತ್ಸವಕ್ಕೆ ಸಮರ್ಥರು ಸ್ವತಃ ಹೋಗಿದ್ದರು. ಆಗ ಹನುಮಾನ ಜಯಂತಿಯು ಮುಗಿದ ನಂತರ ಮಠದ ಕಾರಭಾರಿಯು ಸಮರ್ಥರ ಮುಂದೆ—ಶಿವಾಜಿ ಮಹಾರಾಜರು ಶ್ರೀರಘುಪತಿಯ ದೇವಾಲಯವನ್ನು ಕಟ್ಟಿಸುವದಕ್ಕೂ ಅದರ ಮುಂದೆ ಎರಡು ದೀಪಮಾಲೆಯ ಕಂಭಗಳನ್ನು ನಿಲ್ಲಿಸುವದಕ್ಕೂ ಅಪ್ಪಣೆಮಾಡಿ ಅವುಗಳ ವ್ಯಯದಗೋಸ್ಕರ ಹಲವು ದಾಗೀನೆಗಳನ್ನೂ ಸಾಮಾನುಗಳನ್ನೂ ನನ್ನ ಕಡೆಗೊಪ್ಪಿಸಿರುತ್ತಾರೆ. ಆದ್ದರಿಂದ ತಮ್ಮ ಅಪ್ಪಣೆಯಾದರೆ ನಾನು ಶ್ರೀರಘುಪತಿಯ ದೇವಾಲಯ ಕಟ್ಟಿಸುವ ಕೆಲಸವನ್ನು ತೀವ್ರದಲ್ಲಿ ಆರಂಭಮಾ

ಡುವೆನು" ಎಂದು ಹೇಳಿದನು. ಅದನ್ನು ಸಮರ್ಥರು ಕೇಳಿ "ಒಳ್ಳೇದು" ಎಂದರು. ಆಗ ಕಾರಭಾರಿಯು ಆ ಡಾಗೀನೆಗಳ ಬೆಲೆಯು ಎಷ್ಟಾಗಬಹುದೆಂದು ಒಂದು ಯಾದಿಯನ್ನು ಸಮರ್ಥರ ಸಮಕ್ಷ ಮಾಡಬೇಕೆಂದು ಆಲೋಚಿಸಿ ಆ ಎಲ್ಲ ಡಾಗೀನೆಗಳನ್ನೂ ಸಾಮಾನುಗಳನ್ನೂ ಸಮರ್ಥರ ಮುಂದೆ ತಂದಿಟ್ಟನು. ಆಗ ಸಮರ್ಥರು ಭಿಕ್ಷುಕ ಬ್ರಾಹ್ಮಣರನ್ನು ಕರೆದು ಒಬ್ಬೊಬ್ಬರಿಗೆ ಒಂದೊಂದು ಡಾಗೀನೆಯನ್ನು ಅಥವಾ ಸಾಮಾನವನ್ನು ದಾನಕೊಡಲಿಕ್ಕೆ ಆರಂಭಿಸಿದರು! ಇದನ್ನು ಕಂಡು ಅಲ್ಲಿ ನೆರೆದಿದ್ದ ಅವರ ಯಾವತ್ತು ಶಿಷ್ಯ ಮಂಡಳಿಗೆ ಬಹಳ ಆಶ್ಚರ್ಯವುಂಟಾಯಿತು. ಆಗ ಅವರಿಗೆ ಸಮರ್ಥರಿಗೆ ಎದುರುತ್ತರ ಕೊಡಲಿಕ್ಕೆ ಒಮ್ಮೆಲೇ ಧೈರ್ಯಸಾಲದೆ ಸುಮ್ಮನೆ ನಿಂತುಕೊಂಡು ತುಸುಹೊತ್ತು ವಿಚಾರಮಾಡಿ ಅತಿ ಧೈರ್ಯದಿಂದ ಮುಂಸೊರೆದು—"ಸ್ವಾಮೀ! ದೇವಾಲಯವನ್ನು ಕಟ್ಟಿಸುವ ವಿನಿಯೋಗಕ್ಕಾಗಿ ಮಹಾರಾಜರು ಕೊಟ್ಟಂಥ ವಸ್ತುಗಳನ್ನು ಬೇರೇ ಕೆಲಸಕ್ಕೆ ಉಪಯೋಗಿಸಿದರೆ ದೇವಾಲಯ ಕಟ್ಟಿಸುವ ಕೆಲಸವು ಹ್ಯಾಗೆ ನಡಿಯಬೇಕು? ಈ ಬಗ್ಗೆ ತಮಗೆ ಯುಕ್ತ ಕಂಡ ಅಪ್ಪಣೆಯನ್ನು ಮಾಡಬೇಕು" ಎಂದು ವಿನಂತಿ ಮಾಡಿಕೊಂಡರು. ಇದನ್ನು ಕೇಳಿ ಸಮರ್ಥರು ಒಮ್ಮೆಲೇ ಸಂತಾಪಗೊಂಡು ತಮ್ಮ ಮುಂದೆ ಇಟ್ಟಿದ್ದ ಸಾಮಾನುಗಳಲ್ಲಿ ದೃಷ್ಟಿಗೆ ಬಿದ್ದಂಥ ಒಂದು ಕತ್ತಿಯನ್ನು ಕೈಯಲ್ಲಿ ತೆಗೆದುಕೊಂಡು ಆ ಎಲ್ಲರ ಮೈಮೇಲೆ ಹೋದರು. ಆಗ ಕಾರಭಾರಿ ಮೊದಲಾದ ಯಾವತ್ತು ಜನರು ತಮ್ಮ ಜೀವ ಉಳಿಸಿಕೊಳ್ಳುವದಕ್ಕಾಗಿ ಅಲ್ಲಿಂದ ಓಡಿ ಹೋದರು! ನಂತರ ಸಮರ್ಥರು ತಮ್ಮ ಕೈಯೊಳಗಿನ ಕತ್ತಿಯನ್ನು ಕೆಳಗಿಟ್ಟು ತಮ್ಮ ಚರ್ಮಾಸನದ ಮೇಲೆ ಕುಳಿತುಕೊಂಡರು. ಆಗ ಸಮರ್ಥರ ಮುದ್ರೆಯನ್ನು ನೋಡಿ ಯಾವತ್ತರು "ಇನ್ನು ಸಮರ್ಥರ ಕೋಪವನ್ನು ಹ್ಯಾಗೆ ಶಾಂತಮಾಡಬೇಕು?" ಎಂದು ಬಹಳ ಚಿಂತೆಯಲ್ಲಿ ಬಿದ್ದರು. ಕಡೆಗೆ ಉದ್ಧವಗೋಸಾವಿಯೂ ಅಕ್ಕಾ ಎಂಬುವಳೂ ಅವರಿಗೆ ಶಿರಸಾಷ್ಟಾಂಗ ನಮಸ್ಕಾರವನ್ನು ಮಾಡಿ "ಸ್ವಾಮಿ ಮಹಾರಾಜರೇ! ಈಗಂಟಿಲ್ಲ ದೇವಾಲಯದ ಕೆಲಸಕ್ಕೆ ಉಪಯೋಗವಾಗುವದು ಸರಿಯಾದದ್ದು" ಎಂದು ವಿನಂತಿಯನ್ನು ಮಾಡಿಕೊಂಡರು. ಆಗ ಸಮರ್ಥರು ಶಾಂತರಾಗಿ "ಈ ಗಂಟಿಲ್ಲ ಲಕ್ಷ್ಯದಲ್ಲಿ ಮೊದಲೇ ಖರ್ಚು ಬಿದ್ದದೆ. ದೇವಾಲಯವನ್ನು ಕಟ್ಟಿಸಲಿಕ್ಕೆ ಅಜ್ಞೆಯನ್ನು ಪಡೆದುಕೊಂಡವರು ಅದನ್ನು ಕಟ್ಟಿಸೇ ಕಟ್ಟಿಸುವರು. ಅವರ ಕಡೆಗೆ ಶ್ರೀರಘುಪತಿಯ ಬಾಕಿಯು ಬಹಳ ಉಳಿದಿರುತ್ತದೆ. ಇನ್ನು ನೀವು ಈ ಉಳಿದ ಗಂಟನ್ನು ಒಳಗೊಯ್ದು ಇಟ್ಟುಕೊಳ್ಳಿರಿ" ಎಂದು ಅವರಿಗೆ ಉತ್ತರಕೊಟ್ಟು ತಾವು ದೇವರ ಒಳಮನೆಯಲ್ಲಿ ಹೋಗಿ ಅದರ ಯಾವತ್ತು ಬಾಗಿಲುಗಳನ್ನು ಇಕ್ಕಿಕೊಂಡು ಏಕಾಂತದಲ್ಲಿ ಧ್ಯಾನಸ್ಥರಾಗಿ ಕುಳಿತು ಶ್ರೀರಘುಪತಿಗೆ "ಭಕ್ತಮಂಡಳಿಯು ಈ ಹೊತ್ತಿನ ತನಕ ನಿನ್ನ ಸೇವೆಯನ್ನು

ಮಾಡಿದರು. ಇನ್ನು ಮುಂದೆಯಾದರೂ ಅವರು ಮಾಡುವರು. ಆದ್ದರಿಂದ ಯಾವಾಗಲು ಅವರ ಕಲ್ಯಾಣವನ್ನು ಮಾಡು. ನನ್ನ ಸಾಂಪ್ರದಾಯದ ಅಭಿಮಾನವು ನಿನಗೆ ಉಂಟೇ ಉಂಟು. ಆದ್ದರಿಂದ ನಿನಗೆ ನಾನು ಈ ಬಗ್ಗೆ ಪ್ರಾರ್ಥನೆಯನ್ನು ಮಾಡುವ ಕಾರಣವಿದ್ದಿಲ್ಲ. ಆದರೂ ನನ್ನ ವಿನಂತಿಯನ್ನು ನಿನಗೆ ಶ್ರುತಪಡಿಸಿರುತ್ತೇನೆ" ಎಂದು ಪ್ರಾರ್ಥನೆಯನ್ನು ಮಾಡಿದರು. ಈ ಪ್ರಾರ್ಥನೆಯನ್ನು ಮಾಡುವಾಗ ಸಮರ್ಥರು ಒಳಗೆ ಒಬ್ಬರೇ ಕೂತಿದ್ದರು. ಒಳಗೆ ಯಾರೂ ಇದ್ದಿಲ್ಲ. ಹೀಗಿದ್ದು ಯಾವತ್ತು ದೇವಾಲಯದಲ್ಲಿ ಕಾರ್ತೀಕ ಹಚ್ಚಿದಂತೆ ಆಗಿ ದಿವ್ಯ ಪ್ರಕಾಶವು ಬಿತ್ತು. ಈ ದಿವ್ಯ ಪ್ರಕಾಶವು ನಾಲ್ಕೂಕಡೆಗೆ ಪಸರಿಸಿತು. ಇಂಥ ಸ್ಥಿತಿಯಲ್ಲಿ ಸಮರ್ಥರು ನಾಲು ಘಂಟೇ ಕಾಲಪರಿಯಂತರ ಒಳಗೆ ಕುಳಿತು ನಂತರ ಆನಂದಮುದ್ರೆಯಿಂದ ಸಭಾಮಂಟಪಕ್ಕೆ ಹೋಗಿ ಶ್ರೀರಘುಪತಿಗೆ ಸಾಷ್ಟಾಂಗ ನಮಸ್ಕಾರಮಾಡಿ ಶ್ರೀಮಾರುತಿಯ ಅಪ್ಪಣೆಯನ್ನು ಪಡೆದುಕೊಂಡು ವಿಮಾನದಲ್ಲಿ ಆರೂಢರಾಗಿ ಚೈತ್ರ ವದ್ಯ ತ್ರಯೋದಶಿಯ ದಿವಸ ಸಜ್ಜನಗಡಕ್ಕೆ ಹೊರಟುಹೋದರು.

ಕಡೆಯ ವೃತ್ತಾಂತವು:—ಶಕೆ ೧೬೦೩ನೇ ಮಾರ್ಗಶಿರ ಮಾಸದಲ್ಲಿ ಕಲ್ಯಾಣಸ್ವಾಮಿಯು ಡೊಂಬಗಾಂವಿಯಿಂದ ಸಮರ್ಥರ ದರ್ಶನಕ್ಕೆ ಬಂದನು. ಆದೇ ಸಮಯಕ್ಕೆ ದಾಸಬೋಧ ಗ್ರಂಥದ ೨೦ನೇದಶಕವು ಮುಗಿಯಿತು. ಸಮರ್ಥರು ಕಲ್ಯಾಣನ ಕಡೆಯಿಂದ ದಾಸಬೋಧದ ಮೂಲಪ್ರತಿಯನ್ನು ಒರೆಯಿಸಿ ತಾವೇ ತಮ್ಮ ಅಕ್ಷರದಿಂದ ತಿದ್ದಿದರು. ಕೆಲವು ದಿವಸದ ತರುವಾಯ ಕಲ್ಯಾಣಸ್ವಾಮಿಯು ಡೊಂಬಗಾಂವಕ್ಕೆ ಹೊರಟು ಹೋದನು. ಆಗಿನಿಂದ ಸಮರ್ಥರು ಅನ್ನವನ್ನೇ ವರ್ಜ ಮಾಡಿದರು. ಬರೇ ಹಾಲು ಕುಡಿದು ಉದ್ಧವ ಗೋಸಾವಿಯು ಅಥವಾ ಅಕ್ಕಾ ಈಕೆಯು ತಂದು ಕೊಟ್ಟಂಥ ತಾಂಬೂಲ ಪಟ್ಟಿಯನ್ನು ತಿಂದು ಸುಮ್ಮನೇ ಕೂಡ್ರುತಿದ್ದರು. ಒಮ್ಮೊಮ್ಮೆ ತಾವೇ ತಮ್ಮ ಕೈಯಿಂದ ತಾಂಬೂಲದ ಪಟ್ಟಿಯನ್ನು ಮಾಡಿಕೊಳ್ಳುತ್ತಿದ್ದರು. ತಾವು ಕುಳಿತಿದ್ದ ಕೋಣೆಯಲ್ಲಿ ಉದ್ಧವ ಗೋಸಾವಿ ಅಥವಾ ಅಕ್ಕಾ ಇವರಿಬ್ಬರ ಹೊರತು ಯಾರೂ ಬರಬಾರದೆಂದು ಅಪ್ಪಣೆಯನ್ನು ಮಾಡಿದ್ದರು. ದಿನ ದಿನಕ್ಕೆ ಅವರ ಪ್ರಕೃತಿಯು ಬಹಳ ಅಶಕ್ತವಾಗ ಹತ್ತಿತು. ಇದನ್ನು ಉದ್ಧವನೂ ಅಕ್ಕಾ ಈಕೆಯೂ ನೋಡಿ "ಸ್ವಾಮಿ! ತಮ್ಮ ಬೇನೆಯು ಗುಣವಾಗುವದಕ್ಕಾಗಿ ಬ್ರಾಹ್ಮಣರನ್ನು ಅನುಷ್ಠಾನಕ್ಕೆ ಹಚ್ಚುತ್ತೇವೆ. ಹಾಗೂ ಹೆಸರಾದ ವೈದ್ಯರನ್ನು ಕರೆಯಿಸಿ ತಮಗೆ ಔಷಧ ಕೊಡಿಸುತ್ತೇವೆ. ಈ ಬಗ್ಗೆ ತಾವು ನಮಗೆ ಅಪ್ಪಣೆಯನ್ನು ಕೊಡಬೇಕು" ಎಂದು ಬೇಡಿಕೊಂಡರು. ಆಗ ಸಮರ್ಥರು ನಗುತ್ತ—'ಇಷ್ಟು ದಿವಸ ಜನರಿಗೆ ಜ್ಞಾನೋಪದೇಶವನ್ನು ಮಾಡಿ ನಾವೇ ನಮ್ಮ ದೇಹದ ಮೇಲೆ ಮಮತೆಯನ್ನು ಮಾಡತಕ್ಕದ್ದೇನು? ದೇಹಕ್ಕೆ ಏನಾಗತಕ್ಕದ್ದು ಆಗೇ ಆಗುವ

ದು. ಆದ್ದರಿಂದ ವೈದ್ಯರನ್ನು ಕರೆಯಿಸುವ ಅಥವಾ ಬ್ರಾಹ್ಮಣರಿಂದ ಅನುಷ್ಠಾನ ಮಾಡಿಸುವ ಉಸಾಬರಿಗೆ ನೀವು ಸರ್ವಥಾ ಬೀಳಬೇಡಿರಿ' ಎಂದು ಅಪ್ಪಣೆಯನ್ನು ಮಾಡಿದರು. ಅವರು ಆ ಮಾರ್ಗವನ್ನೇ ಬಿಟ್ಟುಕೊಟ್ಟರು. ಅದೇ ಸಮಯಕ್ಕೆ ಸಮರ್ಥರ ದರ್ಶನಕ್ಕಾಗಿ ಪಂಢರಪುರದಿಂದ ಒಬ್ಬ ಹರಿದಾಸನು ಬಂದಿದ್ದನು. ಆದ್ದರಿಂದ ಉದ್ಧವಗೋಸಾವಿಯು ಮಠದಲ್ಲಿ ಅವರ ಕೀರ್ತನವನ್ನು ಮಾಡಿಸಿದನು. ಆ ಕಾಲಕ್ಕೆ ಸಮರ್ಥರು ಕೋಣೆಯನ್ನು ಬಿಟ್ಟು ಹೊರಗೆ ಬಂದು ಕುಳಿತಿದ್ದರು. ಆಗ್ಗೆ ಅವರ ಮುಖ ಕಮಲವು ಅತಿ ತೇಜಃಪುಂಜವಾಗಿಯೂ ಶರೀರ ಕಾಂತಿಯು ದಿವ್ಯವಾಗಿಯೂ ಕಂಡಿತು. ಅದನ್ನು ಜಿಜೋಜಿ ಕಾಟಕರ ಹವಾಲದಾರ ಮೊದಲಾದವರು ನೋಡಿ ತಮ್ಮ ತಮ್ಮೊಳಗೆ "ಸಮರ್ಥರ ಮೋರೆಯ ಮೇಲಿಂದ ನೋಡಿದರೆ ಇವರಲ್ಲಿ ರೋಗದ ಚಿನ್ಹವು ಒಂದೂ ಇಲ್ಲ. ಶರೀರವಂತೂ ದಿವ್ಯವಾಗಿರುತ್ತವೆ. ಬಹುಶಃ ಇವರು ಕೋಣೆಯಲ್ಲಿ ಕುಳಿತು ಏನಾದರೂ ಯೋಗಸಾಧನ ಮಾಡುತ್ತಿರಬಹುದು'' ಎಂದು ಮಾತಾಡಿದರು. ಈ ಕೀರ್ತನವು ಮುಗಿದನಂತರ ಆ ಹರಿದಾಸನನ್ನು ಉದ್ಧವಗೋಸಾವಿಯು ನಾಲ್ಕು ದಿವಸ ಮಠದಲ್ಲಿ ಇಟ್ಟುಕೊಂಡು ಅವನಿಗೆ ಚನ್ನಾಗಿ ಆದರಸತ್ಕಾರ ಮಾಡಿ ಕಳುಹಿಸಿ ಕೊಟ್ಟನು.

ಸಮರ್ಥರು ದೇಹವನ್ನಿಟ್ಟದ್ದು:—ಸಮರ್ಥರ ಪ್ರಕೃತಿಯು ದಿನೇ ದಿನೇ ಬಹಳ ಕೆಡಹತ್ತಿ ಅವರು ಹಾಸಿಗೆಯನ್ನು ಹಿಡಿದರು. ಆಗ ಅವರ ಶಿಷ್ಯರೆಲ್ಲರು "ಸ್ವಾಮಿನ್! ತಮಗೆ ಇಲ್ಲಿಯ ಹವೆಯು ತಡೆಯುವಂತೆ ಕಾಣುವದಿಲ್ಲ. ರೋಗಿಗಳು ಪರ್ವತ ವಾಸ ಮಾಡುವದು ನೆಟ್ಟಗಲ್ಲ. ಆದ್ದರಿಂದ ತಾವು ದಯಮಾಡಿ ಇನ್ನು ಚಾಫಳಕ್ಕೆ ನಡೆಯಬೇಕು" ಎಂದು ಸಮರ್ಥರಿಗೆ ವಿನಂತಿ ಮಾಡಿಕೊಂಡರು. ಆಗಸಮರ್ಥರು ದಾಸಬೋಧದೊಳಗಿನ ೧೦ನೇ ಸಮಾಸದ ೨೦ನೇ ಶ್ಲೋಕವನ್ನು ಅಂದು ''ಸಾಧುದೇಹಕ್ಕೆ ದುಃಖವುಂಟಾಗುವದು ಅಥವಾ ಶ್ವಾನಾದಿಗಳು ಸಾಧುದೇಹವನ್ನು ಭಕ್ಷಿಸುವದು ಜನರಿಗೆ ಯೋಗ್ಯವಾಗಿ ತೋರದೆ ಇದ್ದ ಪಕ್ಷದಲ್ಲಿ ಅದಕ್ಕೆ ಅವರ ಮಂದ ಬುದ್ಧಿಯೇ ಕಾರಣ"ವೆಂಬ ಭಾವವನ್ನು ತಿಳುಹಿಸಿ ತಮ್ಮ ಮುಂದೆ ಸ್ಥಾನಾಂತರದ ವಿಷಯವನ್ನು ಯಾರೂ ತಿರುಗಿ ತೆಗೆಯಬಾರದೆಂದು ಅಪ್ಪಣೆಯನ್ನು ಮಾಡಿದರು. ಈ ರೀತಿಯಿಂದ ಸಮರ್ಥರ ಪ್ರಕೃತಿಯು ದಿನೇ ದಿನೇ ಅಶಕ್ತವಾಗ ಹತ್ತಿದ ಬಳಿಕ ಅವರ ಯಾವತ್ತು ಶಿಷ್ಯರು ಒಂದು ದಿವಸ ಅವರಿಗೆ "ತಮ್ಮ ಪ್ರಕೃತಿಯಂತೂ ಬಹಳ ಕ್ಷೀಣವಾಯಿತು. ಆದ್ದರಿಂದ ತಾವು ತಮ್ಮ ತರುವಾಯ ಉಪಾಸನ ನಡಿಸುವ ಮುಖ್ಯ ಅಧಿಕಾರವು ಯಾರದೆಂಬದನ್ನು ನಿಯಮಿಸಿಕೊಟ್ಟರೆ ನಾವು ಅವರ ಅಪ್ಪಣೆಯ ಪ್ರಕಾರ ಯಾವತ್ತು ಸೇವೆಯನ್ನು ಮಾಡುವೆವು'' ಎಂದು ಹೇಳಿದರು. ಆಗ ಸಮರ್ಥರು—''ಸಾಧುಗಳ ಹತ್ತರ ಸಂ

ಪತ್ತು ಇರುವದು ಇಷ್ಟೇ ಇದೆ. ಯಾರಿಗೆ ಅಧಿಕಾರ ಕೊಟ್ಟರೂ ಅದರಿಂದ ಬರುವ ಭಾಗ್ಯವೇನು!" ಎಂದು ಉತ್ತರ ಕೊಟ್ಟರು. ಆದರೆ ಅವರ ಶಿಷ್ಯರು ತಿರುಗಿ "ಶ್ರೀ ರಘುಪತಿಗೆ ಇರುವ ಸಂಪತ್ತೇ ಮಠದ ಸಂಪತ್ತು. ಅವನ ಸೇವೆಯನ್ನು ವ್ಯವಸ್ಥಿತವಾಗಿ ಮಾಡುವ ಸ್ವತಂತ್ರವೇ ಅಧಿಕಾರವು. ಆದ್ದರಿಂದ ತಾವು ನಮ್ಮಲ್ಲಿ ಯಾರನ್ನಾದರೂ ಹಿರಿಯರಾಗಿ ನಿಯಮಿಸಿ ಅವರಿಗೆ ಅಧಿಕಾರ ಕೊಡಬೇಕು" ಎಂದು ಬೇಡಿಕೊಂಡರು. ಆಗ ಸಮರ್ಥರು ಅಕ್ಕಾ ಈಕೆಯ ಕಡೆಗೆ ಬೊಟ್ಟು ಮಾಡಿ "ಅಕ್ಕನೇ ಯಾವತ್ತು ಅಧಿಕಾರವನ್ನು ನಡಿಸಬೇಕು" ಎಂದು ಹೇಳಿದರು. ಅದನ್ನು ಕೇಳಿ ಅಕ್ಕಾ ಈಕೆಯು—"ಸ್ವಾಮಿ! ಅಧಿಕಾರವು ಈ ಸ್ತ್ರೀ ದೇಹಕ್ಕೆ ಹ್ಯಾಗೆ ಬರುವದು?" ಎಂದು ಕೇಳಿದಳು. ಆಗ ಸಮರ್ಥರು "ಹಾಗಾದರೆ ಉದ್ಧವಗೋಸಾವಿಯೇ ಈ ಅಧಿಕಾರವನ್ನು ನಡಿಸಲಿ" ಎಂದು ಹೇಳಿದರು. ಅದನ್ನು ಕೇಳಿ ಉದ್ಧವಗೋಸಾವಿಯು ಕೈಜೋಡಿಸಿ "ಸ್ವಾಮಿ! ಯೋಗ್ಯಾಯೋಗ್ಯತೆಯನ್ನು ತಾವೇ ಬಲ್ಲವರು. ಅಂದ ಮೇಲೆ ನಾನು ತಮಗೆ ವಿಶೇಷವಾಗಿ ಹೇಳುವ ಕಾರಣವಿಲ್ಲ. ತಮ್ಮ ಆಜ್ಞೆಯಂತೆ ಅಧಿಕಾರವನ್ನು ಹೊಂದುವವರಿಗೆ ನಾನು ಶಿರಬೊಗ್ಗಿ ಸೇವೆಯನ್ನು ಮಾಡುತ್ತೇನೆ" ಎಂದು ಉತ್ತರ ಕೊಟ್ಟನು. ಅದನ್ನು ಸಮರ್ಥರು ಕೇಳಿ "ಒಳ್ಳೇದು, ನಿಮ್ಮ ಮನೋದಯವು ನನಗೆ ಗೊತ್ತಾಯಿತು. ಶ್ರೇಷ್ಠರ ಮಕ್ಕಳನ್ನು ಕರಿಸಿಕೊಂಡು ಅವರಿಗೆ ಅಧಿಕಾರವನ್ನು ಕೊಡೋಣ" ಎಂದು ಹೇಳಿ ಶ್ರೇಷ್ಠರ ಮಕ್ಕಳನ್ನು ಜಾಂಬೆಯಿಂದ ಕರೆಯಿಸಲಿಕ್ಕೆ ದಿವಾಕರಭಟ್ಟನಿಗೆ ಅಪ್ಪಣೆಯನ್ನು ಮಾಡಿದರು. ಅದರಂತೆ ದಿವಾಕರಭಟ್ಟನು ಮಠದಿಂದ ಒಬ್ಬ ಗೋಸಾವಿಯನ್ನು ಜಾಂಬೇ ಗ್ರಾಮಕ್ಕೆ ಕಳುಹಿಸಿದನು. ಆ ಮೇಲೆ ಕೆಲವು ದಿವಸಗಳು ಹೋಗಲಾಗಿ ಸಮರ್ಥರು ಒಂದೆರಡು ಸಾರೆ ದಿವಾಕರಭಟ್ಟನಿಗೆ "ಹುಡುಗರು ಇನ್ನೂ ಯಾಕೆ ಬಂದಿರಲಿಕ್ಕಿಲ್ಲ?" ಎಂದು ವಿಚಾರಿಸಿದರು. ಅದಕ್ಕೆ ದಿವಾಕರಭಟ್ಟನು "ಆ ಪ್ರಾಂತದ ಕಡೆಗೆ ಪುಂಡಗಾರಿಕೆಯು ಬಹಳವಿರುತ್ತದೆ. ರಾತ್ರಿಯಲ್ಲಿ ಮಾರ್ಗ ನಡೆಯುವಂತೆ ಇಲ್ಲ. ಆದ್ದರಿಂದ ಅವರಿಗೆ ಇಲ್ಲಿಗೆ ಬಂದು ಮುಟ್ಟಲಿಕ್ಕೆ ಸ್ವಲ್ಪ ವಿಲಂಬವಾಗಿರಬಹುದು" ಎಂದು ಉತ್ತರವನ್ನು ಕೊಟ್ಟರು. ಅದನ್ನು ಕೇಳಿ "ಒಳ್ಳೇದು, ಶ್ರೀ ರಘುಪತಿಯ ಮನಸ್ಸು ಬಂದಂತೆ ಆಗಲಿ" ಎಂದು ಉದ್ಗಾರವನ್ನು ಹೊರಡಿಸಿದರು. ಇಷ್ಟರಲ್ಲಿ ತಂಜಾವರದ ವೆಂಕೋಜಿ ರಾಜರು ರಾಮ—ಸೀತಾ—ಲಕ್ಷ್ಮಣ—ಮಾರುತಿ ಈ ನಾಲ್ವರ ಶಿಲಾಮೂರ್ತಿಗಳನ್ನು ಶಿಲ್ಪಿಯ ಕಡೆಯಿಂದ ಸಿದ್ಧ ಮಾಡಿಸಿ ತಮ್ಮೊಬ್ಬ ಕಾರಕೂನನ ಸಂಗಡ ಸಮರ್ಥರಿಗೆ ಮಾಘ ವದ್ಯ ಪಂಚಮಿಯ ದಿವಸ ಕಳಿಸಿಕೊಟ್ಟರು. ಈ ಆನಂದ ಮೂರ್ತಿಗಳನ್ನು ಸಮರ್ಥರು ನೋಡಿ ಬಹಳ ಆನಂದ ಪಟ್ಟು, ಅವುಗಳ ಕಣ್ಣುಗಳಲ್ಲಿ ಮೇಣ ತುಂಬಿದ್ದನ್ನು ಸ್ವಹಸ್ತದಿಂದ ತೆಗೆ

ದು, ನಖಶಿಖಾಂತವಾಗಿ ಇನ್ನೊಮ್ಮೆ ಅವಲೋಕಿಸಿದ್ದು, ಅದೇ ದಿವಸ ಸುಮುಹೂರ್ತವಿದ್ದುದರಿಂದ ಅವುಗಳ ಪ್ರಾಣ ಪ್ರತಿಷ್ಠೆಯನ್ನು ಮಾಡಿ ತಾವು ಕುಳಿತುಕೊಳ್ಳುವ ಕೋಣೆಯ ಜಗಲಿಯ ಮೇಲೆ ಅವುಗಳ ಸ್ಥಾಪನೆಯನ್ನು ಮಾಡಿದರು. ಆ ಮೇಲೆ ಸಮರ್ಥರು ಪೂಜಾ—ಅರ್ಚಾ—ಧ್ಯಾನಗಳನ್ನು ಮಾಡಿ ಮುಗಿಸಿ ಶ್ರೀರಾಮಚಂದ್ರ ದೇವರಿಗೆ—"ಎಲೋ ಶ್ರೀ ರಘುಪತಿಯೇ! ಉತ್ಸವದ ಕಾಲಕ್ಕೆ ನಿನ್ನನ್ನು ಚಾಫಳಕ್ಕೆ ಒಯ್ದು ಸಿಂಹಾಸನಾರೂಢವಾಗಿ ಮಾಡಬೇಕೆಂದು ಸಂಕಲ್ಪವನ್ನು ಮಾಡಿದ್ದೆನು. ಆದರೆ ಅದು ಹಾಗೆಯೇ ಉಳಿಯಿತು. ಆದ್ದರಿಂದ ನನಗೆ ಕ್ಷಮೆ ಮಾಡು" ಎಂದು ಪ್ರಾರ್ಥನೆಯನ್ನು ಮಾಡಿದರು. ಆ ಮೇಲೆ ಬ್ರಾಹ್ಮಣ ಭೋಜನವಾಯಿತು. ತರುವಾಯ ಸಮರ್ಥರು ತಂಜಾವರದಿಂದ ಶ್ರೀ ಮೂರ್ತಿಗಳನ್ನು ತೆಗೆದುಕೊಂಡು ಬಂದಿದ್ದ ಕಾರಕೂನನನ್ನು ಕೋಣೆಯ ಒಳಗೆ ಕರೆಯಿಸಿ ಅವನಿಗೆ ಸನ್ಮಾನ ಮಾಡಿ ಕಳುಹಿಸಿ ಕೊಟ್ಟರು. ಹಾಹಾ ಅನ್ನುವಷ್ಟರಲ್ಲಿ ಮಾಘ ವದ್ಯ ಅಷ್ಟಮಿಯು ಬಂತು. ಸಮರ್ಥರು ದೇಹವನ್ನು ಬಿಡುವ ದಿವಸವು ಹಣಕಿಹಾಕಹತ್ತಿತು. ಆಗ ಸಮರ್ಥರು ತಮ್ಮ ಕಾಲವು ಸಮೀಪಿಸಿರುತ್ತದೆಂಬದು ತಮ್ಮ ಶಿಷ್ಯರಿಗೆ ಗೊತ್ತಾಗಿರುತ್ತದೋ ಅಥವಾ ಇಲ್ಲವೋ ಎಂಬದನ್ನು ಪರೀಕ್ಷಿಸುವದಕ್ಕಾಗಿ ಎಲ್ಲರನ್ನು ಕರೆದು ಕೂಡ್ರಿಸಿಕೊಂಡು "ರಘುಕುಲತಿಲಕನು ಬರುವ ವೇಳೆಯು ಸಮೀಪ ಬಂದದ್ದರಿಂದ ಭಜನಮಾಡಿ ಉತ್ಸವವನ್ನು ಸಾಂಗಮಾಡಬೇಕು" ಎಂಬದಾಗಿ ಒಂದು ಶ್ಲೋಕಾರ್ಧವನ್ನು ಹೇಳಿದರು. ಇದನ್ನು ಕೇಳಿದ ಕೂಡಲೆ ಉದ್ಧವ ಗೋಸಾವಿಯು "ಪ್ರತಿದಿನವು ನವಮಿಯೆಂದು ತಿಳಿದು ಬಹಳ ಜಾಗ್ರತೆಯಿಂದ ಕಾರ್ಯಸಿದ್ಧಿ ಮಾಡತಕ್ಕದ್ದು" ಎಂದು ಆದರ ಉತ್ತರಾರ್ಧ ಶ್ಲೋಕವನ್ನು ಅಂದನು ಅದನ್ನು ಕೇಳಿ ಸಮರ್ಥರು ಪ್ರಸನ್ನಹೃದಯರಾಗಿ ಉದ್ಧವ ಗೋಸಾವಿಯ ಚತುರತನವನ್ನು ಶ್ಲಾಘಿಸಿ ಅವನಿಗೆ ಭಜನಮಾಡಲಿಕ್ಕೆ ಅಪ್ಪಣೆಯನ್ನು ಮಾಡಿದರು ಆಗ ಅವನು ರಾತ್ರಿಯೆಲ್ಲ ಭಜನದ ಸೂರೆಮಾಡಿದನು. ಭಜನದಕಾಲಕ್ಕೆ ಎಲ್ಲ ಶಿಷ್ಯರು ಕೂಡಿದ್ದರು. ಭಜನದಲ್ಲಿ ರಾತ್ರಿಯು ಹೊರಟುಹೋಗಿ ಬೆಳಗಾದ ಮೇಲೆ ನವಮಿಯು ಬಂತು. ಆಗ ಸಮರ್ಥರು ಪಲಂಗದ ಕೆಳಗೆ ದಿಗಂಬರ ಧ್ಯಾನನಿಷ್ಠರಾಗಿ ಪಾದಗಳಲ್ಲಿ ಪಾದುಕಗಳನ್ನು ಹಾಕಿಕೊಂಡು ಕುಳಿತರು. ಆ ಸಮಯದಲ್ಲಿ ಮಠಕ್ಕೆ ಬಂದಿದ್ದ ಒಬ್ಬ ಗೃಹಸ್ಥನು ಅವರ ದರ್ಶನಕ್ಕೆ ಬಂದು ಅವರ ಮುಂದೆ ತಾನು ತನ್ನ ಸಂಗಡ ತಂದಿದ್ದ ದ್ರಾಕ್ಷಿ ಮತ್ತು ಕಲ್ಲು ಸಕ್ಕರೆಗಳ ಪುಡಿಕೆಯನ್ನಿಟ್ಟು "ಸ್ವಾಮೀ! ತಾವು ಈಗ ಎಷ್ಟೋ ದಿವಸಗಳಿಂದ ಅನ್ನವರ್ಜ ಮಾಡಿರುತ್ತೀರಿ. ಈಚೆಗೆ ಹಾಲು ಸಹ ಕುಡಿದಿರುವದಿಲ್ಲ. ಈಗ ಎಂಟು ದಿವಸ ಉಪೋಷಣೆಯನ್ನು ನಡಿಸಿರುತ್ತೀರಿ. ಆದ್ದರಿಂದ ಇದನ್ನಷ್ಟು ಬಾಯಲ್ಲಿ ಹಾಕಿಕೊಂಡು ಸ್ವಲ್ಪ ನೀರು ಕುಡಿದರೆ ದೇಹಕ್ಕೆ ಸಮಾಧಾನ

ವಾಗುವದು” ಎಂದು ಅವರಿಗೆ ಬಹಳ ಹೇಳಿಕೊಂಡನು. ಅದನ್ನು ಕೇಳಿ ಸಮರ್ಥರು ಅಕ್ಕಾ ಇವಳ ಕಡೆಗೆ ನೋಡಿದರು. ಆಗ ಅಕ್ಕಾ ಇವಳು ಒಂದು ಬಟ್ಟಲ ತುಂಬ ನೀರು ತರಲಾಗಿ ಅವರು ಸ್ವಲ್ಪ ಕಲ್ಲುಸಕ್ಕರಿಯನ್ನು ಬಾಯಲ್ಲಿ ಹಾಕಿಕೊಂಡು ತುಸು ನೀರು ಕುಡಿದರು. ಆ ಮೇಲೆ ಎಲ್ಲರಿಗೆ ಹೊರಗೆ ಹೋಗಲಿಕ್ಕೆ ಅಪ್ಪಣೆಯನ್ನು ಮಾಡಿದರು. ಆದರೆ ಉದ್ಧವ ಗೋಸಾವಿ ಮತ್ತು ಅಕ್ಕಾ ಇವರಿಬ್ಬರೇ ಮಾತ್ರ ಕೋಣೆಯಲ್ಲಿ ಅವರ ಮುಂದೆ ನಿಂತುಕೊಂಡು ಅವರಿಗೆ “ಇನ್ನು ಮೇಲೆ ಪಲಂಗದ ಮೇಲೆ ಕುಳಿತುಕೊಳ್ಳಿರಿ” ಎಂದು ವಿನಂತಿಮಾಡಿದರು. ಆಗ ಸಮರ್ಥರು “ಹಾಗಾದರೆ ನನ್ನನ್ನು ಎತ್ತಿ ಪಲಂಗದ ಮೇಲೆ ಕೂಡ್ರಿಸರಿ” ಎಂದು ಹೇಳಿದರು. ಅದನ್ನು ಕೇಳಿ ಉದ್ಧವ ಗೋಸಾವಿಯು ಅವರನ್ನು ಎತ್ತಿ ಪಲಂಗದ ಮೇಲೆ ಕೂಡ್ರಿಸಬೇಕೆಂದು ಹೋದನು. ಆಗ ಅವನ ಕಡೆಯಿಂದ ಎತ್ತುವದು ಅಸಾಧ್ಯವಾಯಿತು. ಅಕ್ಕಾ ಈಕೆಯೂ ಬಂದಳು. ಇಬ್ಬರೂ ಕೂಡಿ ಅವರನ್ನು ಎತ್ತಬೇಕೆಂದು ಯತ್ನಿಸಿದರು. ಇಬ್ಬರಿಗೂ ಸಹ ಅಸಾಧ್ಯವಾಯಿತು. ಆಗ ಅವರು ಹೊರಗೆ ಇದ್ದಂಥ ಜನರನ್ನು ಕರೆದರು. ಹತ್ತುಮಂದಿ ಕೂಡಿ ಪ್ರಯತ್ನಮಾಡಿದಾಗ್ಯೂ ಸಮರ್ಥರನ್ನು ಎತ್ತುವದಾಗಲಿಲ್ಲ. ಆಗ ಉದ್ಧವಗೋಸಾವಿಯೂ ಅಕ್ಕಾ ಈಕೆಯೂ ಸಮರ್ಥರಿಗೆ-“ಸ್ವಾಮಿ! ನಿಮ್ಮನ್ನು ಇಲ್ಲಿಂದ ಎತ್ತಲಿಕ್ಕಾಗುವದಿಲ್ಲ” ಎಂದು ಹೇಳಿದರು. ಆಗ ಸಮರ್ಥರು ಅವರೆಲ್ಲರಿಗೆ ಒಂದು ಮುಗ್ಗಲಿಗೆ ಸರಿಸಿ ತಾವು ವಾಯುವನ್ನು ಆಕರ್ಷಣಮಾಡಿಕೊಳ್ಳಲಿಕ್ಕೆ ಹತ್ತಿದರು. ಇದನ್ನು ನೋಡಿ ಉದ್ಧವ ಗೋಸಾವಿಯೂ ಅಕ್ಕಾ ಈಕೆಯೂ ಬಿಕ್ಕಿ ಬಿಕ್ಕಿ ಅಳಹತ್ತಿದರು. ಅದಕ್ಕೆ ಸಮರ್ಥರು ಅವರಿಗೆ “ಇಷ್ಟು ದಿವಸ ನಮ್ಮ ಸಹವಾಸದಲ್ಲಿದ್ದು ನಮ್ಮ ಸಾರ್ಥಕಮಾಡಲಿಕ್ಕೆ ಅಳುವ ಸಾಧನವನ್ನು ಮಾತ್ರ ಕಲಿತಿರಾ!” ಎಂದು ಕೇಳಿದರು. ಆಗ ಅಕ್ಕಾ ಈಕೆಯು— “ಸ್ವಾಮಿ, ಹಾಗಲ್ಲ. ನಮ್ಮ ಸಗುಣ ಮೂರ್ತಿಯು ಹೊರಟು ಹೋಗುತ್ತಲಿರುವದರಿಂದ ಇನ್ನು ಮೇಲೆ ನಾವು ಯಾರ ಭಜನಮಾಡಬೇಕು, ಯಾರೊಡನೆ ಮಾತಾಡಬೇಕು, ಯಾರ ಮುಂದೆ ನಮ್ಮ ಸುಖದುಃಖ ಹೇಳಬೇಕು, ಯಾರ ಕಡೆಯಿಂದ ಸತ್ಯಾಸತ್ಯ ನ್ಯಾಯಾನ್ಯಾಯ ಮತ್ತು ಧರ್ಮಾಧರ್ಮಗಳನ್ನು ತಿಳಿದುಕೊಳ್ಳಬೇಕು ಎಂಬ ವಿಚಾರಗಳು ನಮ್ಮ ಮನಸ್ಸಿನಲ್ಲಿ ಬಂದ ಮೂಲಕ ನಮಗೆ ವ್ಯಸನವಾಗಿರುತ್ತದೆ” ಎಂದು ಉತ್ತರಕೊಟ್ಟಳು. ಅದಕ್ಕೆ ಸಮರ್ಥರು “ನನ್ನ ಪಶ್ಚಾತ್ ಯಾರಿಗಾದರೂ ನನ್ನ ಕೂಡ ಸಂಭಾಷಣ ಮಾಡಿ ನನ್ನ ಉಪದೇಶವನ್ನು ಕೇಳಿಕೊಳ್ಳುವದಿದ್ದಲ್ಲಿ ಅವರು ನಾನು ರಚಿಸಿದ ದಾಸಬೋಧವನ್ನು ಓದಬೇಕು. ಅಂದರೆ ಅದರಿಂದ ನಾನು ಪ್ರತ್ಯಕ್ಷ ಮಾತಾಡಿದ ಲಾಭವು ದೊರಕುವದು. ಅದ್ದರಿಂದ ಇನ್ನು ಮೇಲೆ ಯಾರೂ ದುಃಖಪಡಬಾರದು” ಎಂದು ಹೇಳಿ ಹನ್ನೊಂದು ಸಾರೆ “ಹರಹರ”

ಎಂಬ ನಮೋಚ್ಚಾರ ಮಾಡಿ ಕಡೆಗೆ "ರಾಮ" ನಾಮವನ್ನು ಉಚ್ಚರಿಸಿದ ಕೂಡಲೆ ಅವರಮುಖದ ತೇಜಸ್ಸೆಲ್ಲ ಹೊರಟು ಹೋಗಿ ರಘುಪತಿಯ ಮುಖದಲ್ಲಿ ಏಕೀಕರಣವಾಯಿತು! ಆಗ ಭಜನವು ಒಂದೇ ಸವನೆ ಬಹಳ ಹೊತ್ತು ನಡೆಯಿತು. ಆ ಹೊತ್ತು ಶಕೆ ೧೬೦೩ ನೇ ಸಂವತ್ಸರದ ಮಾಘ ವದ್ಯ ನವಮಿಯು ಇತ್ತು. ಸಮರ್ಥರ ಮೇಲೆ ಆಸೇತುಹಿಮಾಚಲದ ವರೆಗೆ ಯಾವತ್ತು ಜನರ ಭಕ್ತಿ ಇತ್ತು. ಆದ್ದರಿಂದ ಅವರೆಲ್ಲರಿಗೂ ಸಮರ್ಥರು ದೇಹವನ್ನು ಬಿಟ್ಟ ವಾರ್ತೆಯನ್ನು ಕೇಳಿ ಪರಮಾವಧಿ ದುಃಖವಾಯಿತು. ಅಂದಬಳಿಕ ರಾತ್ರಿ ಹಗಲು ಸಮರ್ಥರ ನಿಕಟ ಸಾನ್ನಿಧ್ಯದಲ್ಲಿದ್ದ ಶಿಷ್ಯರಿಗೆ ಸಮರ್ಥರು ದೇಹವನ್ನು ಬಿಟ್ಟದ್ದರಿಂದ ಆಕಾಶವು ಅವರ ಮೇಲೆ ಕಡಕೊಂಡು ಬಿದ್ದಂತೆ ಆಯಿತೆಂಬದರಲ್ಲಿ ಆಶ್ಚರ್ಯವೇನು? ಎಲ್ಲರಿಗೂ ಹಾಹಾ ಹೋಯಿತು. ಎಲ್ಲರೂ ದುಃಖ ಸಮುದ್ರದಲ್ಲಿ ಮುಳುಗಿದರು. ಆದಾಗ್ಯೂ ಎಲ್ಲರೂ ದುಃಖವನ್ನು ಬಿಗಿಯಾಗಿ ಹಿಡಿದು ಮುಂದಿನ ಸಿದ್ಧತೆಯನ್ನು ಮಾಡಿ ಮಠದ ಉತ್ತರಭಾಗದಲ್ಲಿದ್ದ ತಗ್ಗಿನಲ್ಲಿ ತುಲಸೀಕಾಷ್ಠಗಳನ್ನೂ ಬಿಲ್ವಕಾಷ್ಠಗಳನ್ನೂ ಹಾಕಿ ಆ ಸ್ಥಳದಲ್ಲಿ ಸಮರ್ಥರ ದಹನಮಾಡಿದರು. ಉದ್ಧವ ಗೋಸಾವಿಯು ಪುತ್ರವಿಧಿಯನ್ನು ಮಾಡಿದನು. ಸಂಭಾಜಿ ಮಹಾರಾಜರು ಸಮರ್ಥರ ಸಮಾಧಿಯನ್ನು ಶ್ರೀರಘುಪತಿಯ ದೇವಾಲಯದಲ್ಲಿ ಕಟ್ಟಿಸಿ ಉತ್ಸವವನ್ನು ಆರಂಭಿಸಿದರು. ಹಾಗೂ ಸಮರ್ಥರ ಅಸ್ಥಿಗಳನ್ನು ಚಾಫಳದ ಮಠದೊಳಗಿನ ವೃಂದಾವನದಲ್ಲಿ ಹಾಕಿಟ್ಟರು. ಶ್ರೀಸಮರ್ಥ ಮಹಾರಾಜರ ಪುಣ್ಯ ಚರಿತ್ರವನ್ನು ಬರೆಯಲಿಕ್ಕೆ ಸಂಭಾಜಿ ಮಹಾರಾಜರು ಅಪ್ಪಣೆಯನ್ನು ಮಾಡಿದ್ದರಿಂದ ಭಿಕ್ಷ್ಯಾಜಿಬುವಾ ಎಂಬವರು ಶಕೆ ೧೬೦೪ ರಲ್ಲಿ ಮೂಲ ಚರಿತ್ರವನ್ನು ಬರೆದು ಸಿದ್ಧಮಾಡಿದರು.

ಸಂಪೂರ್ಣವು.